# ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕ - ಹುಬ್ಬಳ್ಳಿ.

೧೧ - ೭ - ೪೯

★

ಬೆಲೆ ಎರಡಾಣೆ



ರಾಜಕುಮಾರಿ ಅಮೃತಕುವರ

Karmaveer KANNADA ILLUSTRATED WEEKLY

ಸಂಪುಟ ೨೧ — ಸಂಚಿಕೆ ೧೩

# ಕರ್ಮವೀರ

ಸೋಮವಾರ — ಆಷಾಢ ಬ. ೧

ತಾರೀಕು ೧೧—೭—೧೯೪೯


## ಮುಖಪತ್ರದಲ್ಲಿ

ಇಂದಿನ ಮುಖಪತ್ರದಲ್ಲಿ ಕಾಣಿತ ಮೂರ್ತಿ ಭಾರತ ಸರಕಾರದ ಆರೋಗ್ಯಮಂತ್ರಿಗಳಾದ ಅಮೃತಕುಮಾರಿಯವರದು. ಇವರು ಮೊನ್ನೆ ಮೊನ್ನೆ ತಮ್ಮ ವಿದೇಶ ಪ್ರವಾಸದಲ್ಲಿ ರೋಮಿಗೆ ತೆರಳಿ ಅಲ್ಲಿಯ ಕ್ರಿಶ್ಚಿಯನ್ ಜಗದ್ಗುರು ಪೋಪರವರನ್ನೂ ಕ್ವಿರಿನೇಲ್ ಅರಮನೆಯ ಅಧ್ಯಕ್ಷ ಸೇಂಜರ್ ಲೀಗಿ ಇನೌದಿಯವರನ್ನೂ ಭೆಟ್ಟಿಯಾಗಿಬಂದರು.

ರೋಮಿನಲ್ಲಿ ನಡೆದ ಸಂ. ರಾ. ಸಂಘದ ಆರೋಗ್ಯ ಪರಿಷತ್ತನ್ನು ಮುಗಿಸಿಕೊಂಡು ರಾಜಕುಮಾರಿಯವರು ಲಂಡನ್ನಿಗೆ ತೆರಳಿ ಅನಂತರ ಭಾರತಕ್ಕೆ ಹಿಂದಿರುಗುವರು. ಇಟಲಿಯಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತಾಡುತ್ತ ಇಟಲಿ ಮತ್ತು ಭಾರತಗಳಲ್ಲಿ ಸಾಂಸ್ಕೃತಿಕ ಸಂಬಂಧ ಬೆಳೆಯಬೇಕೆಂಬ ಆಶೆಯನ್ನು ಇವರು ವ್ಯಕ್ತಮಾಡಿದರು.

ಇವರು ಗಾಂಧಿಯವರ ಪ್ರಿಯಶಿಷ್ಯೆಯಾಗಿದ್ದಾರೆಂಬುದೂ ಸ್ತ್ರೀಯರಿಗೆ ಪುರುಷರಿಗೆ ಕೊಡಲಾಗುವ ಎಲ್ಲ ನೌಕರಿಗಳ ಸ್ಥಳಗಳನ್ನೂ ತೆರೆದಿಡಬೇಕೆಂದು ಸರಕಾರದ ಮೂಲಕ ಹಾಗೆ ಮಾಡಿಸಿದ ಮುತ್ಸದ್ದಿಯೆಂದೂ ಹೆಸರಾಗಿದ್ದಾರೆ.

ಹಿಂದುಸ್ತಾನದಲ್ಲಿಯ ಕುಷ್ಟ. ರೋಗ ಕ್ಷಯ ರೋಗಗಳ ನಿವಾರಣೆಗೆ ಜಾಗತಿಕ ವೈದ್ಯಕೀಯ ನೆರವನ್ನು ಪಡೆಯಲು ತುಂಬ ಶ್ರಮಿಸಿ ಕೆಲಮಟ್ಟಿಗೆ ರಾಜಕುಮಾರಿಯವರು ಕೃತಕೃತ್ಯರಾಗಿದ್ದಾರೆ. ಇವರ ಪ್ರಯತ್ನದಿಂದಲೇ ಜಾಗತಿಕ ವೈದ್ಯಕೀಯ ತಜ್ಞರ ಸಮಿತಿಯೊಂದು ಬಂಗಾಲಕ್ಕೆ ಪರಿಶೀಲನೆಗಾಗಿ ಬರಲು ನಿರ್ಧರಿಸಿದೆ. ಭಾರತದ ಸ್ತ್ರೀಯರ ಕೆಲ ಅಪಾಯಕರವಾದ ರೋಗಗಳ ಚಿಕಿತ್ಸೆಯ ಬಗ್ಗೆ ವ್ಯವಸ್ಥೆಮಾಡಲು ನಮ್ಮ ಈ ಆರೋಗ್ಯ ಮಂತ್ರಿಗಳು ಪ್ರಯತ್ನಿಸುತ್ತಿರುವುದೂ ಗೊತ್ತಾಗಿದೆ. ಕ್ರಿಶ್ಚಿಯನ್ನರಾದ ಇವರು ಈಗ ಸುಮಾರು ೫೦ ವರ್ಷ ವಯಸ್ಸಿಗೆ ಬಂದು ಮುಟ್ಟಿದ ಬ್ರಹ್ಮಚಾರಿಣಿಯರೂ ಉತ್ಸಾಹಪೂರ್ಣ ಮುತ್ಸದ್ದಿಗಳೂ ಆಗಿ ದೇಶಸೇವೆಯ ನಾನಾ ಕ್ಷೇತ್ರಗಳಲ್ಲಿ ಧುಮುಕಿ ಕೆಲಸ ಮಾಡುತ್ತಿದ್ದಾರೆ.


## ಕರ್ಮವೀರ

**ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ**

ಸಂಸ್ಥಾಪಕರು :

**ಶ್ರೀ. ರಂ. ರಾ. ದಿವಾಕರ**

ಸಂಪಾದಕರು :

**ಶ್ರೀ. ಹ. ರಾ. ಪುರೋಹಿತ**

**ಹೊಸ ವರ್ಗಣಿ ವಿವರಗಳು :**

| | |
|---|---|
| ೧ ವರ್ಷಕ್ಕೆ | ರೂ. ೬—೧೨—೦ |
| ೬ ತಿಂಗಳಿಗೆ | ರೂ. ೩—೮—೦ |
| ೩ ,, | ರೂ. ೨—೦—೦ |

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

**ಸೂಚನೆ :** ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

**ಚಂದಾದಾರರು :** ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

— **ವ್ಯವಸ್ಥಾಪಕ,**
" ಕರ್ಮವೀರ " ಹುಬ್ಬಳ್ಳಿ.


# ಕಮ್ಯುನಿಸ್ಟ ಗಂಡಾಂತರ

ಶಾಸನಭಂಗ ಮಾಡುವವರಿಗೆ ಶಾಸನದ ರಕ್ಷಣೆ ಕೊಡಬೇಕೆ ಎಂಬ ಪ್ರಶ್ನೆ ಇಂದು ಜಗತ್ತಿನ ಅನೇಕ ರಾಷ್ಟ್ರಗಳನ್ನೆದುರಿಸಿರುವಂತೆ ಭಾರತವನ್ನೂ ಎದುರಿಸಿದೆ. ರಾಜಕೀಯ ಔದಾರ್ಯ, ಪ್ರಜಾತಂತ್ರಾತ್ಮಕ ಸಂಪ್ರದಾಯ ಇವುಗಳನ್ನು ನಿಷ್ಠೆಯಿಂದ ಪಾಲಿಸುವಲ್ಲಿ ಹೆಸರಾಂತ ಬ್ರಿಟನ್ನಿನಲ್ಲಿ ಕೂಡ ಇಂದು ಸ್ಪಷ್ಟವಾಗಿ ರಾಷ್ಟ್ರದ್ರೋಹಕ್ಕೆ ನಿಂತ ಕಮ್ಯುನಿಷ್ಟರನ್ನು ಅನಿರ್ಬಂಧವಾಗಿ ಉಪದ್ರವವೀಯಗೊಡಬೇಕೆ ಎಂಬ ಸಮಸ್ಯೆಯನ್ನು ಸರಕಾರ ಬಿಡಿಸಬೇಕಾಗಿದೆ. ಈಚೆಗೆ ಮುಖ್ಯಮಂತ್ರಿ ಆಟ್ಲೆಯವರು ಕಮ್ಯುನಿಷ್ಟರ ಮೇಲೆ ಹೊರಿಸಿದ ಉಗ್ರ ಆರೋಪಗಳನ್ನು ನೋಡಿದರೆ ಅಲ್ಲಿ ಕಮ್ಯುನಿಸ್ಟ ಚಟುವಟಿಕೆಗೆ ಮಿತಿ ಹಾಕುವ ವಿಚಾರ ನಡೆದಿದೆಯೆಂದು ತೋರುತ್ತದೆ. ಜಪಾನದ ಮಿಲಿಟರಿ ಗವರ್ನರರಾದ ಜನರಲ್ ಮೆಕಾರ್ಥರರೂ ಪ್ರಜಾತಂತ್ರವನ್ನು ಮುರಿಯಬಯಸುವವರಿಗೆ ಪ್ರಜಾತಂತ್ರವೇ ರಕ್ಷಣೆ ಕೊಡಬೇಕೆ? ಎಂಬ ಸಂಶಯವೆತ್ತಿದ್ದರು. ಕಮ್ಯುನಿಷ್ಟರು ವಾಕ್‌ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯಗಳನ್ನೂ ನ್ಯಾಯಸ್ಥಾನದ ನಿಷ್ಪಕ್ಷಪಾತವನ್ನೂ ತಮ್ಮ ರಕ್ಷಣೆಗಾಗಿ ಉಪಯೋಗಿಸಿಕೊಂಡು ಅವುಗಳ ಬಲದಿಂದಲೇ ಪ್ರಜಾತಂತ್ರಾತ್ಮಕ ಸರಕಾರಗಳನ್ನು ಹಿಂಸಾಚಾರದಿಂದ ಉರುಳಿಸಿ ಸರ್ವಾಧಿಕಾರವನ್ನು ಸ್ಥಾಪಿಸಲು ಹವಣಿಸುತ್ತಾರೆ. ಮೇಲಿನ ಸ್ವಾತಂತ್ರ್ಯಗಳಿಲ್ಲದ ಫ್ಯಾಸಿಸ್ಟ ರಾಜ್ಯಗಳಲ್ಲಿ ಕಮ್ಯುನಿಷ್ಟರ ಆಟವೇನೂ ನಡೆಯದಿರುವದಕ್ಕೆ ಫ್ರಾಂಕೊ ಸ್ಪೇನೇ ಸಾಕ್ಷಿ. ರಶಿಯದಲ್ಲಿ ಕೂಡ ಅಕ್ಟೋಬರ ಕ್ರಾಂತಿ ಯಶಸ್ವಿಯಾದುದು ಝಾರನ ನಿರಂಕುಶತೆಯ ವಿರುದ್ಧವಾಗಿ ಅಲ್ಲ; ಕೆರೆನ್‌ಸ್ಕಿಯ ಹೆಚ್ಚು ಕಡಿಮೆ ಪ್ರಜಾತಂತ್ರಾತ್ಮಕ ಸರಕಾರವನ್ನೆ ಕಮ್ಯುನಿಷ್ಟರು ಉರುಳಿಸಿ ಸರ್ವಾಧಿಕಾರವನ್ನು ಸ್ಥಾಪಿಸಿದರು.

ಮತಗಟ್ಟೆಗಳಿಗಿಂತ ಬಾಂಬುಗಳನ್ನೆ ಹೆಚ್ಚಾಗಿ ನಚ್ಚಿದ ಕಮ್ಯುನಿಷ್ಟರ ಗಂಡಾಂತರ ಭಾರತದ ಅನೇಕ ಭಾಗಗಳಲ್ಲಿ ಉಗ್ರಸ್ವರೂಪದಲ್ಲಿ ತಲೆಯೆತ್ತಿದೆ. ನಮ್ಮ ಗಡಿಪ್ರಾಂತವಾದ ಬಂಗಾಲದಲ್ಲಿ ಅವರ ಚಟುವಟಿಕೆಗಳ ದಿಗ್ದರ್ಶನವನ್ನು ಕಳೆದ ವಾರ ನಾವು ಸೂಕ್ಷ್ಮವಾಗಿ ಮಾಡಿದ್ದೇವೆ. ಆಯಕಟ್ಟಿನ ದೃಷ್ಟಿಯಿಂದಲೂ ಇತರ ಕಾರಣಗಳಿಂದಲೂ ಬಂಗಾಲದ ಮೇಲೆ ನಮ್ಮ ಕಣ್ಣು ವಿಶೇಷವಾಗಿ ನಟ್ಟಿರಬೇಕು. ಬಂಗಾಲದಲ್ಲಿ ಕಮ್ಯುನಿಸ್ಟ ಪಕ್ಷ ಶಾಸನಬಾಹಿರವೆಂದು ಸಾರಲ್ಪಟ್ಟಿದ್ದರೂ ಅವರ ವಿರುದ್ಧ ಸಫಲವಾದ ಕ್ರಮಗಳನ್ನು ಕೈಕೊಳ್ಳಲು ಪ್ರಾಂತಿಕ ಸರಕಾರ ಅಸಮರ್ಥವಾಗಿದೆ. ಉಳಿದ ಅನೇಕ ಪ್ರಾಂತಗಳಲ್ಲಿ, ಮುಖ್ಯವಾಗಿ ಮದ್ರಾಸಿನ ಪಶ್ಚಿಮ ಮತ್ತು ಉತ್ತರ ದಕ್ಷಿಣ ಜಿಲ್ಲೆಗಳಲ್ಲಿ ಕಮ್ಯುನಿಸ್ಟ ಹಿಂಸಾಚಾರ ಮತ್ತು ಹಿಂಸಾಪ್ರಚೋದನೆ, ಬಂಗಾಲದಷ್ಟು ತೀಕ್ಷ್ಣವಾಗಿ ಅಲ್ಲದಿದ್ದರೂ ಸಾಕಷ್ಟು ಚಿಂತಾಜನಕವಾಗಿದೆ. ಮುಂಬಯಿಯಲ್ಲಿ ಅಹಮದನಗರ, ಹೈದರಾಬಾದಿನಲ್ಲಿ ತೆಲಂಗಣ ಜಿಲ್ಲೆಗಳೂ ಕಮ್ಯುನಿಸ್ಟಪೀಡೆಗೊಳಗಾಗಿವೆ. ಸ್ವಾತಂತ್ರ್ಯೋತ್ತರದ ದಿನಗಳಲ್ಲಿ ಜನರಿಗೆ ಅನಿವಾರ್ಯವಾಗಿ ಉಂಟಾದ ಕಷ್ಟಗಳನ್ನು ಉಪಯೋಗಿಸಿಕೊಂಡು ಕಮ್ಯುನಿಷ್ಟರೂ ಉಪಟಳ ಎಬ್ಬಿಸುತಿದ್ದಾರೆ.

ಭಾರತವನ್ನೆಲ್ಲ ಹೆಚ್ಚುಕಡಿಮೆ ಪ್ರಮಾಣದಲ್ಲಿ ವ್ಯಾಪಿಸಿದ ಈ ಕಮ್ಯುನಿಸ್ಟ ಉಪಟಳವನ್ನು ತಡೆಯಲು ಕೇಂದ್ರ ಸರಕಾರದ ನೇತೃತ್ವದಲ್ಲಿ ತೀಕ್ಷ್ಣ ಉಪಾಯಗಳನ್ನು ಕೈಕೊಳ್ಳುವದು ಅವಶ್ಯವಾಗಿದೆ. ಕಮ್ಯುನಿಸ್ಟ ಪಕ್ಷವನ್ನು ಶಾಸನಬಾಹಿರವೆಂದು ಸಾರದೆಯೆ ತೀಕ್ಷ್ಣವಾದ ಪೋಲೀಸು ಕ್ರಮಗಳಿಂದ ಕಮ್ಯುನಿಸ್ಟ ಹಿಂಸಾಚಾರಗಳನ್ನು ತಡೆಯುವದು ಸಾಧ್ಯವೆಂದು ಮುಂಬಯಿ ಮಧ್ಯಪ್ರಾಂತಗಳ ಅನುಭವದಿಂದ ತಿಳಿಯುತ್ತದೆ. ಆದರೆ ಪ್ರಾಂತಿಕ ಸ್ವಾಯತ್ತತೆಯಲ್ಲಿರುವ ಗುಳಿಗುಂಪುಗಳನ್ನು ಉಪಯೋಗಿಸಿಕೊಂಡು ಕಮ್ಯುನಿಷ್ಟರು ತಲೆ ತಪ್ಪಿಸಿಕೊಳ್ಳಲು ಸಮರ್ಥರಾಗಿದ್ದಾರೆ. ಈ ಗುಳಿಗುಂಪುಗಳನ್ನು ಮುಚ್ಚುವಲ್ಲಿ ಕೇಂದ್ರದ ನೆರವು ಅಗತ್ಯ. ಬಂಗಾಲದಲ್ಲಂತೂ ಕೇಂದ್ರವು ಉಗ್ರ ಉಪಾಯಗಳನ್ನು ಕೈಕೊಳ್ಳದಿದ್ದರೆ ಪರಿಸ್ಥಿತಿ ಕೈಮೀರಿ ಹೋಗುವ ಸಂಭವವಿದೆ.

ಆದರೆ ಕೆಲವರು ಸಾಧಿಸುವಂತೆ ದಂಡೋಪಾಯವೊಂದೇ ಕಮ್ಯುನಿಷ್ಟರನ್ನು ಹತ್ತಿಕ್ಕಲು ಸಾಲದು. ಕಮ್ಯುನಿಷ್ಟರು ಜನತೆಯ ಅಜ್ಞಾನ, ಸಂತೋಷಗಳ ಬಲದಿಂದಲೇ ಬೆಳೆಯುವರೆಂಬದನ್ನು ನಾವು ಮರೆಯಕೂಡದು. ಆಳುವ ಪಕ್ಷದಲ್ಲಿ-ಅರ್ಥಾತ್ ಕಾಂಗ್ರೆಸ್ಸಿನಲ್ಲಿ—ಎಲ್ಲೆಲ್ಲಿ-ಒಡಕು, ನೀತಿಪಾತ ಮೊದಲಾದ ದುರ್ಗುಣಗಳವೆಯೋ ಅಲ್ಲಿಯೇ ಕಮ್ಯುನಿಷ್ಟರ ಪ್ರಸ್ಥ ಹೆಚ್ಚಾಗಿ ಬೆಳೆದುದನ್ನು ನಾವು ಕಾಣುತ್ತೇವೆ. ಕಮ್ಯುನಿಷ್ಟರ ಹಿಂಸಾಕೃತಿಗಳಿಗೆ ಉತ್ತೇಜನ ಕೊಟ್ಟರೆ ಸ್ವಾತಂತ್ರ್ಯಕ್ಕೂ ಶಾಂತಜೀವನಕ್ಕೂ ಗಂಡಾಂತರವಿದೆಯೆಂಬುದನ್ನು ಜನರಿಗೆ ಬೋಧಿಸಲು ಕಾಂಗ್ರೆಸ್ಸಿಗರು ಮನಸುಮಾಡಬೇಕು. ಕಾಂಗ್ರೆಸ್ಸಿನೊಳಗಿನ ಗೃಹಚ್ಛಿದ್ರಗಳನ್ನು ಕಳೆದು ಆಡಳಿತ ಸರಾಗವಾಗಿ ನಡೆಯುವಂತೆ ಮಾಡಬೇಕು. ಕಮ್ಯುನಿಷ್ಟ ಪಕ್ಷದ ಸದಸ್ಯರು ಇಂದಿಗಾದರೂ ದೇಶದಲ್ಲಿ ಅತಿಕಡಿಮೆ ಇದ್ದಾರೆ. ಅಸಂತುಷ್ಟವಾದ ಯಾವ ಪಕ್ಷಕ್ಕೂ ಸೇರದ ಜನತೆಯನ್ನು ತಮ್ಮ ದುರುದ್ದೇಶದ ಸಾಧನವಾಗಿ ಮಾಡಿಕೊಂಡಿದ್ದರಿಂದಲೇ ಕಮ್ಯುನಿಷ್ಟರ ಬಲ ಇಷ್ಟು ಭಯಾನಕವಾಗಿ ಕಾಣುತ್ತದೆ. ಕಾಂಗ್ರೆಸ್ಸು ಮತ್ತು ಇತರ ಶಾಂತಿಮಾರ್ಗದಿಂದ ಪ್ರಗತಿ ಸಾಧಿಸಬಯಸುವ ಪಕ್ಷಗಳು ಜನತೆಯನ್ನು ವಿವೇಕದ ಮೇರೆಗಳೊಳಗೆ ಇರಿಸಲು ಪ್ರಯತ್ನಿಸಿ ಅತ್ತ ಸರಕಾರದ ದಂಡಶಕ್ತಿ ಕಮ್ಯುನಿಷ್ಟರ ಮೇಲೆರಗಿದರೆ ಮಾತ್ರ ದೇಶದ್ರೋಹಿ ಶಕ್ತಿಗಳು ಮಣಿಯಬಹುದು.

× × ×

ಕಾಶ್ಮೀರ ಸಮಸ್ಯೆಯ ಕೆಲ ಅಂಶಗಳನ್ನು ಬಿಡಿಸುವ ಸಲುವಾಗಿ ಯುಕ್ತರಾಷ್ಟ್ರ ಸಂಘದ ಕಾಶ್ಮೀರ ಸಮಿತಿ ಹೊಸತೊಂದು ಪ್ರಯತ್ನ ಹೂಡಿದೆ. ಬಹುಶಃ ಕರಾಚಿಯಲ್ಲಿ, ಬೇಗನೆ ಹಿಂದುಸ್ತಾನ ಪಾಕಿಸ್ತಾನಗಳ ಸೈನ್ಯ ಪ್ರತಿನಿಧಿಗಳ ಪರಿಷತ್ತು ಕೂಡಿಸಲು ಅದು ಆಮಂತ್ರಣಗಳನ್ನು ಕಳಿಸಿದೆ. ತಾತ್ಪೂರ್ತಿಕ ಶಾಂತಿಯ ಗಡಿಗಳನ್ನು ನಿರ್ಧರಿಸುವದೇ ಈ ಪರಿಷತ್ತಿನ ಉದ್ದೇಶವಾಗಿದ್ದು ಉಭಯ ಸರಕಾರಗಳೂ ಪೂರ್ಣಾಧಿಕಾರವನ್ನಿತ್ತು ಪ್ರತಿನಿಧಿಗಳನ್ನು ಕಳಿಸಬೇಕೆಂದು ಅಪೇಕ್ಷಿಸಲಾಗಿದೆ. ಕಾಶ್ಮೀರದಲ್ಲಿ ಯುದ್ಧ ನಿಲ್ಲಿಸಿದಾಗ ನಿರ್ಧರಿಸಲ್ಪಟ್ಟ ಗಡಿಗಳನ್ನು ಪಾಕಿಸ್ತಾನ ಅತಿಕ್ರಮಿಸಿದೆಯೆಂಬ ಆರೋಪ ಕಾಶ್ಮೀರ ಸಮಿತಿಯ ಮುಂದೆ ಆಗಾಗ್ಗೆ ಮಂಡಿಸಲ್ಪಟ್ಟಿತ್ತು. ಈಗ ಉಭಯ ಸಮ್ಮತವಾದ ಗಡಿಗಳನ್ನು ನಿರ್ಧರಿಸಿ ಮುಂದೆ ಅವುಗಳ ಅತಿಕ್ರಮಣವಾಗದಂತೆ ಸಮಿತಿಯ ನಿರೀಕ್ಷಕರು ನೋಡಿಕೊಳ್ಳುವರು. ಪರಿಷತ್ತು ಈ ತಿಂಗಳ ಮಧ್ಯದಲ್ಲಿ ಸೇರಬಹುದಾದರೂ ಭಾರತ ಸರಕಾರ ಅಲ್ಲಿ ಯಾವ ನಿಲುಮೆಯನ್ನು ತೆಗೆದುಕೊಳ್ಳುವದೋ ಗೊತ್ತಿಲ್ಲ. ಯುದ್ಧ ವಿರಾಮದಿಂದ ಪಾಕಿಸ್ತಾನ [illegible] ಸಂಶಯಕ್ಕೆ ಎಡೆಗೊಡುವದಾಗಿದೆ. ಆಜಾದ ಕಾಶ್ಮೀರ ದಲಗಳನ್ನು ವಿಸರ್ಜಿಸಲು ಅದೇಕೆ ಆಕ್ಷೇಪವೆತ್ತಬೇಕು? ಅವುಗಳನ್ನು ವಿಸರ್ಜಿಸಬೇಕೆಂಬುದು ಭಾರತದ ಅಭಿಪ್ರಾಯ ಮಾತ್ರವಲ್ಲ, ಕಾಶ್ಮೀರ ಸಮಿತಿಯ ಸರ್ವಾನುಮತದ ಅಭಿಪ್ರಾಯವೂ ಆಗಿದೆ. ಅಲ್ಲದೆ ಕಾಶ್ಮೀರದ ತನ್ನ ವಶದಲ್ಲಿರುವ ಪ್ರದೇಶಗಳಲ್ಲಿ ಸೈನ್ಯ ಸಂಗ್ರಹವನ್ನೂ ಪಂಜಾಬ ಗಡಿಯಲ್ಲಿ ವಿಮಾನ ನಿರೋಧಕ ವ್ಯವಸ್ಥೆಯನ್ನೂ ಇತರ ಸಾಮರಿಕ ಸನ್ನಾಹಗಳನ್ನೂ ಏಕೆ ನಡೆಸುತ್ತಿದೆ? ಅದು ಕಾಶ್ಮೀರ ಸಮಿತಿ ಕೇಳಿದ ಸ್ಪಷ್ಟೀಕರಣಗಳಿಗೆ ಉತ್ತರಗಳನ್ನು ಲಿಖಿತ ಮೂಲಕ ಕೊಡಲೇಕೆ ಹಿಂಜರಿಯುತ್ತಿದೆ? ಇವೆಲ್ಲ ಕಾರಣಗಳಿಂದ ಭಾರತ ಸರಕಾರ ತನ್ನ ವಶದಲ್ಲಿರುವ ಕಾಶ್ಮೀರದ ಗಡಿಗಳ ರಕ್ಷಣೆಯ ಭಾರವನ್ನು ಕಾಶ್ಮೀರ ಸಮಿತಿಯ ನಿರೀಕ್ಷಕರ ಮೇಲೆ ಬಿಡುವದು ಅಪಾಯದ ಸಂಗತಿ. ಈ ವರೆಗೆ ನಿರೀಕ್ಷಕರು ಗಡಿಯಲ್ಲಿ ಪಾಕಿಸ್ತಾನಿಗಳು ನಡೆಸಿದ ಅತಿಕ್ರಮಣವನ್ನು ತಡೆಯಲು ಸಮರ್ಥರಾಗಿಲ್ಲ. ಮುಂದಾದರೂ ಅತಿಕ್ರಮಣವಾದರೆ ಕೂಡಲೆ ಪ್ರತೀಕಾರ ಕ್ರಮಗಳನ್ನು ಕೈಕೊಳ್ಳಲು ಭಾರತ ಸೈನ್ಯಕ್ಕೆ ಹಕ್ಕಿರಬೇಕು. ಆ ಮೇಲೆಯೆ ಸಮಿತಿಗೆ ವರದಿ ಮಾಡಬೇಕು. ಇಲ್ಲದಿದ್ದರೆ ಪರ್ಲ್ ಬಂದರದ ಪುನರಾವರ್ತನೆ ಕಾಶ್ಮೀರ ಗಡಿಯಲ್ಲಾಗಬಹುದೆಂಬ ಭಯ ಹೊಸದಿಲ್ಲಿಯಲ್ಲಿ ಸಹಜವಾಗಿ ವ್ಯಕ್ತಗೊಳಿಸಲ್ಪಡುತ್ತಿದೆ.

× × ×

ದಕ್ಷಿಣ ಆಫ್ರಿಕೆಯ ೨॥ ಲಕ್ಷ ಭಾರತೀಯರನ್ನು ಅಲ್ಲಿಂದ ಹೊರದೂಡುವ ನಾಚಿಕೆಗೇಡಿ ಪ್ರಯತ್ನವನ್ನು ಅಲ್ಲಿಯ ಬಿಳಿಯರ ಸರಕಾರ ಮುಂದೊತ್ತಲಿದೆಯೆಂದು ಸ್ಪಷ್ಟವಾಗಿದೆ. ಯುಕ್ತರಾಷ್ಟ್ರ ಸಂಘದಲ್ಲಿ ಭಾರತ ಪಾಕಿಸ್ತಾನ ದಕ್ಷಿಣ ಆಫ್ರಿಕಾ ಸಂಯುಕ್ತ ಪರಿಷತ್ತಿನಲ್ಲಿ ಈ ಸಮಸ್ಯೆ ಬಗೆಹರಿಸಬೇಕೆಂದು ಆದ ಗೊತ್ತುವಳಿಯನ್ನು ಮಾಲನ್ ಸರಕಾರ ಕಸದಾರ್ಥ ಮಾಡಿದೆ. ಅಲ್ಲಿನ ಒಳನಾಡ ಮಂತ್ರಿ ಡಾ. ಟಿ. ಇ. ಡೊಂಗ್ಸರು ಅಸಂಖ್ಯ ಪ್ರಜಾರಾಶಿಯನ್ನೊಳಗೊಂಡ ಭಾರತಕ್ಕೆ ಈ ೨॥ ಲಕ್ಷ ಜನರನ್ನು ಹಿಂದೆ ಕರೆಸಿಕೊಂಡು ನೆಲೆಗೊಳಿಸುವದು ಅಸಾಧ್ಯವಲ್ಲೆಂದು ಹೇಳುತ್ತಾರೆ. ಕಳೆದ ಶತಮಾನದಲ್ಲಿ ದಕ್ಷಿಣ ಆಫ್ರಿಕೆಯ ಅಭಿವೃದ್ಧಿಗಾಗಿ ಅನೇಕ ವಚನಗಳನ್ನಿತ್ತು ಭಾರತೀಯರನ್ನು ಕರೆಸಿಕೊಂಡು ಅವರಿಂದ ಆರ್ಥಿಕ ಲಾಭವನ್ನು ಸಂಪಾದಿಸಿದ ಬಿಳಿಯರು ಈಗ ಆ ಉಪಕಾರಿಗಳ ಉತ್ತರಾಧಿಕಾರಿಗಳಿಗೆ ಸರಿಯಾದ ಪ್ರತ್ಯುಪಕಾರ ಮಾಡಿದ್ದಾರೆ! ದ. ಆಫ್ರಿಕೆಯ ಉನ್ನತಿಗೆ ಭಾರತೀಯರಿಂದಾದ ನೆರವನ್ನು ಯಾರೂ ಅಲ್ಲಗಳೆಯುವದಿಲ್ಲ. ಈಗ ಅಲ್ಲಿರುವ ಭಾರತೀಯರಲ್ಲಿ ಅಧಿಕಾಂಶ ಜನರು ಅಲ್ಲಿಯೇ ಹುಟ್ಟಿ ಬೆಳೆದು ಅಲ್ಲಿನ ನಾಗಂಕರೇ ಆಗಿದ್ದಾರೆ. ತನ್ನ ಪ್ರಜೆಗಳನ್ನೆ ತಾನು ಹೊರಗಟ್ಟಲು ಪ್ರಯತ್ನಿಸುವ ದ. ಆಫ್ರಿಕೆ ಅನ್ಯದೇಶಗಳಲ್ಲಿ ಅವರಿಗೆ ಸ್ಥಾನವುಂಟೇ ಇಲ್ಲವೇ ಎಂದು ವಿಚಾರಿಸಬೇಕಾಗಿಲ್ಲ; ವರ್ಣಮದ, ಸ್ವಾರ್ಥಗಳಿಂದ ಪ್ರೇರಿತವಾದ ತನ್ನೀ ನೀತಿಯಿಂದ ತನ್ನ ಜಂಬದ ಯುರೋಪಿಯನ್ ಸಂಸ್ಕೃತಿನಾಗರಿಕತೆಗಳ ಅಧಃಪತನದ ದೋಷಾರೋಪಣವಾಗದಿರದೇ ಎಂದು ಚಿಂತಿಸಿದರೆ ಸಾಕು.

× × ×

ಮಂತ್ರಿ ಸ್ಥಾನಗಳ ಬಗ್ಗೆ ಜಗಳ ಕಾಯುವದು ಸಂಸ್ಥಾನ ಒಕ್ಕೂಟಗಳ ಸಾಮಾನ್ಯ ಗುಣವಾಗಿಬಿಟ್ಟಿದೆಯೆಂದು ತೋರುತ್ತದೆ. ರಾಜಸ್ಥಾನ ಒಕ್ಕೂಟ ಕಾಂಗ್ರೆಸ್ಸಿನ ಅಧ್ಯಕ್ಷ ಜಯನಾರಾಯಣ ವ್ಯಾಸರು ಒಕ್ಕೂಟ ಮುಖ್ಯಮಂತ್ರಿ ಪಂ. ಹರಿಹರನಾಥ ಶಾಸ್ತ್ರಿಗಳ ಮೇಲೆ ರಾಜೀನಾಮೆ ಕೊಡಲು ನೋಟೀಸು ಜಾರಿ ಮಾಡಿ ತಮ್ಮ ಬಣ ಛಲವನ್ನು ಮೆರೆಸಿದರೆಂದು ಅತ್ತ ಸುದ್ದಿ ಬಂದಾಗ ಇತ್ತ ಇದೇ ಹುಟ್ಟಿದ ತಿರುವಾಂಕೂರು-ಕೊಚ್ಚಿ ಒಕ್ಕೂಟದ ಮಂತ್ರಿಮಂಡಲದ ಸದಸ್ಯರ ಆಯ್ಕೆಯ ಬಗ್ಗೆ ಒಂದು ಚಿಕ್ಕ ರಾದ್ಧಾಂತವಾಗಿ ತಿರುವಾಂಕೂರು ಕಾಂಗ್ರೆಸಿನ ಮೂವರು ಪ್ರಭಾವಿ ಸದಸ್ಯರು ರಾಜೀನಾಮೆಯಿತ್ತು ಕಳವಳವೆಬ್ಬಿಸಿದರು. ಮೊದಲು ಸೂಚಿಸಲ್ಪಟ್ಟ ಮಂತ್ರಿಗಳಲ್ಲೊಬ್ಬರಾದ ಡಾ. ಈ. ಕೆ. ಮಾಧವನ್ನರು "ಕಾಂಗ್ರೆಸ್‌ಪಕ್ಷದ ಸಮಗ್ರತೆಯನ್ನು ಕಾಯ್ದುಕೊಳ್ಳುವ ಸಲುವಾಗಿ" ರಾಜೀನಾಮೆಯಿತ್ತರು. ಒಬ್ಬ ಮಹಿಳೆಯನ್ನೊಳಗೊಂಡು ಮೂವರು ಮಂತ್ರಿಮಂಡಲದಲ್ಲಿ ಸೇರಿದನಂತರ ಈ ಬಿಕ್ಕಟ್ಟು ಬಗೆಹರಿದಂತೆ ತೋರುತ್ತದೆ. ಅದೆಷ್ಟು ಶಾಶ್ವತವಾಗಿ ಉಳಿಯುವದೋ ಕಾಲನೇ ನಿರ್ಣಯಿಸಬೇಕು.

# ಸ್ಟಾಲಿನ್ನರೊಡನೆ ಲಿಯಾಕತರ ಸಂದರ್ಶನ

## ಪಾಕಿಸ್ತಾನಿಗಳ ನೀಚೋಹಂಬುದ್ಧಿ— ಮುಸ್ಲಿಂ ಲೀಗಿನ ಅಸಂತೃಪ್ತಿ—ಮೂಡಿಯವರ ಮೇಲೆ ಆರೋಪ--ಸ್ವಾತಂತ್ರ್ಯಪ್ರದರ್ಶನಕ್ಕಾಗಿ ಸ್ಟಾಲಿನ್ನರೊಡನೆ ಭೆಟ್ಟಿ

ಮಾಸ್ಕೋವಿಗೆ ಭೆಟ್ಟಿ ಕೊಡಲು ಬಂದ ಸ್ಟಾಲಿನ್ನರ ಆಮಂತ್ರಣವನ್ನು ಶ್ರೀ. ಲಿಯಾಕತ್ ಅಲಿಖಾನರು ಸ್ವೀಕರಿಸಿದ್ದು ಪಾಕಿಸ್ತಾನದ ಹೊಸ ಧೋರಣವಾದ ಸ್ವಾತಂತ್ರ್ಯ ಪ್ರದರ್ಶನಕ್ಕಾಗಿಯೇ. ಲಂಡನ್ನಿನಲ್ಲಾದ ಕಾಮನ್‌ವೆಲ್ತ್ ಮುಖ್ಯಮಂತ್ರಿ ಸಮ್ಮೇಲನದಲ್ಲಿ ತನ್ನನ್ನು ಬ್ರಿಟನ್ ನಡೆಸಿಕೊಂಡ ಬಗೆ ಪಾಕಿಸ್ತಾನದ ಅತೃಪ್ತಿಗೆ, ಗೊಣಗಾಟಕ್ಕೆ ಕಾರಣವಾಗಿದೆ. ಪಾಕಿಸ್ತಾನವನ್ನು ಅಲಕ್ಷಿಸಿ ಭಾರತಕ್ಕೇಕೆ ಬ್ರಿಟನ್ನು ಹೆಚ್ಚಿನ ಪುರಸ್ಕಾರ ಕೊಡಬೇಕು? ಇಲ್ಲಿಯ ವರೆಗೆ ಸದಾ ರಾಜಭಕ್ತಿಯಿಂದ ನಡೆದುಕೊಳ್ಳುತ್ತ ಬಂದ ತಾವು ಇನ್ನು ಮುಂದೆಯೂ ರಾಜಭಕ್ತಿಯಿಂದ ನಡೆದುಕೊಳ್ಳಬೇಕು; ಹಾಗಲ್ಲವೆ ರಾಜನ ಅಧಿಕಾರವನ್ನು ಮನ್ನಿಸಲೊಪ್ಪದ ಭಾರತ ಮಾಡಿದ್ದೆಲ್ಲ ಮಾಫಿಯಾಗಬೇಕು— ಇದಾವ ನ್ಯಾಯ? ಎಂಬುದು ಪಾಕಿಸ್ತಾನದ ಅಳಲು. ಆದರ ದೆಸೆಯಿಂದ ಹಳೆಯ ಗಾಯಗಳಾದ ಸೀಮಾ ನಿರ್ಣಯದಲ್ಲಾದ ಅತೃಪ್ತಿ ಮುಂತಾದವು ಈಗ ಪುನಃ ಚಿಗಿತು ಹೆಬ್ಬುಣ್ಣುಗಳಾಗ ತೊಡಗಿವೆ— ಎಂದು ವಾರ್ತಾ ಪ್ರೇಕ್ಷಕರು ಅಭಿಪ್ರಾಯಪಡುತ್ತಾರೆ.

ಭಾರತಕ್ಕಿಂತ ತಾನು ಕೀಳು ಎಂಬ ನೀಚೋಹಂಬುದ್ಧಿ ಪಾಕಿಸ್ತಾನದ ತಲೆಗೆ ಅಂಟಿಕೊಂಡಿದೆ. ಈ ಹಿರಿಯಕ್ಕನೆದುರು ತಾನು ಮಲಮಗಳಂತೆ ಬ್ರಿಟನ್ನಿನ ತಿರಸ್ಕಾರಕ್ಕೆ ಗುರಿಯಾಗಿರುವೆನೆಂದು ಅದರ ತಿಳುವಳಿಕೆ. ಆದುದರಿಂದ ತರ್ಕಶುದ್ಧತೆಯಿಲ್ಲದಿದ್ದರೂ ಸುಮ್ಮ ಸುಮ್ಮನೆ ತನ್ನ ದೈನ್ಯಾವಸ್ಥೆಗಾಗಿ ಬ್ರಿಟನ್ನನ್ನು ಅದು ದೂರುತ್ತದೆ.

### ಬ್ರಿಟನ್ನಿನ ಮೇಲೆ ದೂರು

ಪಾಕಿಸ್ತಾನ ರಿಜಿಮೆಂಟಿನ ಅಧೀಸರರ ಕೂಟದ ಮನೆಯಲ್ಲಿ ಇಂಥ ಉದ್ಗಾರ ಕೇಳಿತು: "ಸ್ವಾತಂತ್ರ್ಯಸ್ವೀಕಾರಕ್ಕೆ ನಾವು ಸಿದ್ಧರಿಲ್ಲದಾಗ ನೀವು ನಮ್ಮ ಮೇಲೆ ದೇಶ ವಿಭಜನೆಯನ್ನು ಒತ್ತಾಯದಿಂದ ಹೇರಿದಿರಿ; ಅದು ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕಾಗಿದ್ದ ತಮ್ಮ ಹೊಣೆಯಂತೆ ನೀವು ವರ್ತಿಸಲಿಲ್ಲ. ಭಾರತಕ್ಕೆ ಅನುಕೂಲವಾಗಬೇಕೆಂದು ಬುದ್ಧಿಪೂರ್ವಕವಾಗಿಯೇ ಗಡಿಗಳನ್ನು ನಿರ್ದಿಷ್ಟಗೊಳಿಸಲಾಯಿತು. ಎರಡೂ ದೇಶಗಳ ಸಂಯುಕ್ತ ಸಂಪತ್ತಿನಲ್ಲಿ ನಮಗೆ ಸರಿಯಾದ ಪಾಲು—ಅದರಲ್ಲೂ ಯುದ್ಧೋಪಕರಣಗಳಲ್ಲಿ ಸಿಗುವಂತೆ ನೀವು ನೋಡಿಕೊಳ್ಳಲಿಲ್ಲ. ಈಗ ನೀವು ನಮ್ಮನ್ನು ತಿರಸ್ಕರಿಸಿ ಹಿಂದುಸ್ತಾನವನ್ನು ಒಲಿಸಿಕೊಳ್ಳುತ್ತಿದ್ದೀರಿ" ಇದೇ ದೂರು ಎಲ್ಲ ವರ್ಗಗಳಿಂದಲೂ ಬರುತ್ತದೆ. ಇದನ್ನೇ ಉರ್ದು ಪತ್ರಿಕೆಗಳ ಅಂಕಣಗಳ ತುಂಬ ತುಂಬಿಸಿ ಪ್ರಕಟಿಸಲಾಗುತ್ತದೆ. ಖಾಸಗಿ ಬ್ರಿಟಿಶರಿಗೆ ಆದರಪೂರ್ಣ ಸತ್ಕಾರ ದೊರೆಯುತ್ತಿದ್ದರೂ ಬ್ರಿಟಿಶ್ ಸರಕಾರ ಮಾತ್ರ ಪಾಕಿಸ್ತಾನದಲ್ಲಿ ಈಗ ಎಲ್ಲೆಲ್ಲೂ ಅಪ್ರಿಯವಾಗಿದೆ. ಈ ಅಪ್ರಿಯತೆಯಲ್ಲಿ ಮುಖ್ಯಾಲು ಪಾಲು ಲಾರ್ಡ್ ಮೌಂಟ್‌ಬ್ಯಾಟನ್ನರ ಮೇಲೆಯೇ ಇದೆ.

ಈಗ ಪಾಕಿಸ್ತಾನದ ಆಡಳಿತೆಯಲ್ಲಿ ಬ್ರಿಟಿಶ್ ನೌಕರರನ್ನೂ ಶಿಪಾಯಿಗಳನ್ನೂ ಕೆಲಸದಲ್ಲಿ ಉಳಿಸಿಕೊಳ್ಳುವುದರ ವಿರುದ್ಧವಾಗಿ ಹೋರಟ ಚಳವಳಿಯಲ್ಲಿ ಈ ಅಪ್ರಿಯತೆ ಪ್ರಕಾಶನ ಪಡೆದಿದೆ. ಅವರ ಸಂಖ್ಯೆ ಅಸಂಖ್ಯ; ಅವರೆಲ್ಲರನ್ನೂ ತೆಗೆದ ಹಾಕಿದರೆ ಅವರ ಸ್ಥಾನದಲ್ಲಿ ನಿಯಮಿಸಲು ಹೊಸದೊಂದು ರಾಜ್ಯಭಾರ ಯಂತ್ರವನ್ನೇ ಸಿದ್ಧಪಡಿಸಬೇಕಾದೀತು. ಸಂಪೂರ್ಣ ಸಜ್ಜಿತ ನೌಕರಶಾಹಿಯನ್ನು ಸ್ವೀಕರಿಸಿದ ಭಾರತಕ್ಕೆ ಕೆಲವೇ ಕೆಳ ತರಗತಿಯ ತಾಂತ್ರಿಕರನ್ನುಳಿದು ಮಿಕ್ಕೆಲ್ಲ ಬ್ರಿಟಿಶರನ್ನೂ ತೆಗೆದುಹಾಕಲು ಸಾಧ್ಯವಾಯಿತು. ಬದುಕಿ ಉಳಿದ ಒಂದೇ ಒಂದು ರಾಜಕೀಯ ಪಕ್ಷವೆನಿಸಿದ ಮುಸ್ಲಿಂಲೀಗೇ ಆಂಗ್ಲದ್ವೇಷದ ಮುಖ್ಯ ಆಕರ. ಸದ್ಯಃ ಅದರ ಈ ದ್ವೇಷಾಸ್ತ್ರಕ್ಕೆ ಪಶ್ಚಿಮ ಪಂಜಾಬಿನ ಗವರ್ನರರಾದ ಸರ್ ಫ್ರಾನ್ಸಿಸ್ ಮೂಡಿಯವರು ಪ್ರಥಮ ಬೇಟೆಯಾಗಿದ್ದಾರೆ. ಕಳೆದ ವರ್ಷ ಪಾಕಿಸ್ತಾನ ಕೇಳಿಕೊಂಡದ್ದರಿಂದ ಸರ್ ಫ್ರಾನ್ಸಿಸ್ ಮೂಡಿಯವರು ತಮ್ಮ ಕೆಲಸದಲ್ಲಿ ಉಳಿಯಲು ಒಪ್ಪಿದರು.

### ಲೀಗಿಗೆ ಲಿಯಾಖತರು ಕೊಟ್ಟ ಪೆಟ್ಟು

ಪಶ್ಚಿಮ ಪಂಜಾಬಿನಲ್ಲಿ ಹೊಸ ಪ್ರಾಂತಿಕ ಆಡಳಿತೆ ನೆಲೆಗೊಂಡಾಗ ಕೆಲ ಮಂತ್ರಿಗಳು ಅಸಮರ್ಥರೂ ಭ್ರಷ್ಟಾಚಾರಪರಾಯಣರೂ ಎಂಬುದು ಗೊತ್ತಾಯಿತು. ಆದ್ದರಿಂದ ಪಾಕಿಸ್ತಾನದ ಕೇಂದ್ರ ಸರಕಾರ ಅವರನ್ನು ಮನೆಗೆ ಕಳಿಸಿ ಮೂಡಿಯವರ ಕೈಯಲ್ಲಿ ಎಲ್ಲ ಅಧಿಕಾರವನ್ನು ಒಪ್ಪಿಸಿಬಿಟ್ಟಿತು.

ಕೆಲಸ ಕಳೆದುಕೊಂಡ ಈ ಮಂತ್ರೀಶ್ವರರು ಲೀಗಿಗೆ ಬೆನ್ನುಹಚ್ಚಿ ಪುನಃ ಅಧಿಕಾರ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಇದನ್ನು ಸಾಧಿಸಲು ಮಹಾತ್ವಾಕಾಂಕ್ಷಿಗಳೂ ಸಮರ್ಥರೂ ಉಗ್ರ ಕಾರ್ಯ ಧುರಂಧರರೂ ಆದ ಶ್ರೀ ಅಲ್ತಾಫ್ ಹುಸೇನರ ನೇತೃತ್ವದಲ್ಲಿ ಒಂದು ಪತ್ರಿಕಾ ಸಮೂಹವು ಪಾಕಿಸ್ತಾನದಲ್ಲಿರುವ ಬ್ರಿಟಿಶ್ ಅಧಿಕಾರಿಗಳನ್ನು ಮನೆಗೆ ಕಳಿಸಿ ಆ ಸ್ಥಳಗಳನ್ನೆಲ್ಲ ಪಾಕಿಸ್ತಾನಿಗಳಿಗೆ ಕಾದಿರಿಸಬೇಕೆಂದು ಪ್ರಚಾರ ನಡೆಸಿದೆ. ಪಶ್ಚಿಮ ಪಂಜಾಬಿನ ಮುಸ್ಲಿಂಲೀಗ್ ಶಾಖೆಯು ಸರ್ ಫ್ರಾನ್ಸಿಸ್ ಮೂಡಿಯವರ ಆಳಿಕೆ ಸರ್ವಾಧಿಕಾರಿತ್ವದ್ದೆಂದೂ ಅವರನ್ನು ನಿವೃತ್ತಿ ಮಾಡಬೇಕೆಂದೂ ಗೊತ್ತುವಳಿಯನ್ನು ಸ್ವೀಕರಿಸಿದೆ. ಹೊಸ ಅಧಿರಾಜ್ಯದ ಏಳ್ಗೆಗೆ ಬ್ರಿಟನ್ನು ನೆರವಾಗಬಲ್ಲುದೆಂಬುದನ್ನು ಆಡಳಿತೆಗಾರರಾದ ಮೂಡಿಯವರ ನಿಷ್ಪಕ್ಷಪಾತ, ದಕ್ಷತೆ ಮತ್ತು ಅನುಭವಗಳು ನಿದರ್ಶಿಸುತ್ತವೆ. ಎಂದು ಹೇಳಿ ಮುಖ್ಯಮಂತ್ರಿ ಲಿಯಾಕತರು ಮುಸ್ಲಿಂ ಲೀಗಿನ ಪ್ರಚಾರಕ್ಕೆ ಬಲವಾದ ಏಟನ್ನು ಕೊಟ್ಟಿದ್ದಾರೆ.

ಕಾಮನ್‌ವೆಲ್ತ್ ರಾಷ್ಟ್ರಗಳ ಮುಖ್ಯಮಂತ್ರಿಗಳಲ್ಲಿ ಸ್ಟಾಲಿನ್ನರ ಭೆಟ್ಟಿ ತೆಗೆದುಕೊಳ್ಳಲು ಹೋಗುವ ಆದ್ಯ ಮುಖ್ಯಮಂತ್ರಿಗಳೆಂದರೆ ಪಾಕಿಸ್ತಾನದ ಲಿಯಾಕತರೇ. ಆದುದರಿಂದ ಅವರ ಭೆಟ್ಟಿ ಸ್ಟಾಲಿನ್ನರ ವಿರೋಧಿಗಳ ಕಾಲನ್ನು ಕೆಲಮಟ್ಟಿಗೆ ಅದೃಢಗೊಳಿಸಬಹುದು. ಇದರಿಂದ "ಬ್ರಿಟನ್ನಿಗೆ ಮಿತ್ರರಾಗಿಲ್ಲವೆಂಬೊಂದೇ ಕಾರಣದಿಂದ ಯಾವುದಾದರೊಂದು ರಾಷ್ಟ್ರದೊಡನೆ ಸ್ನೇಹ ಬೆಳೆಸಲು ಪಾಕಿಸ್ತಾನ ಹಿಂದೆಗೆಯಬಾರದು" ಎಂಬ ಮುಸ್ಲಿಂ ಲೀಗಿನ ಬೇಡಿಕೆಯನ್ನು ಲಿಯಾಕತರು ಅರ್ಧದಷ್ಟಾದರೂ ಪೂರಯಿಸಿದಂತಾಗುವದು.

ಲಿಯಾಕತರ ಈ ನಿರ್ಧಾರವನ್ನು ಪ್ರಶಂಸಿಸುತ್ತ ಪಾಕಿಸ್ತಾನದ ಪತ್ರಿಕೆಗಳಲ್ಲಿ ಪ್ರಭಾವ ಬೀರಬಲ್ಲ ಕೆಲವರು, "ಇದರಿಂದ ಸಾಮ್ರಾಜ್ಯದ್ವೇಷವನ್ನೂ ಆಂಗ್ಲೋ-ಅಮೇರಿಕನ್ ಗುಂಪಿನ ಸ್ವತಂತ್ರ ರೀತಿಯನ್ನೂ ಏಕಕಾಲದಲ್ಲಿ ಪ್ರದರ್ಶಿಸಿದಂತಾಯಿತು" ಎನ್ನುತ್ತಾರೆ.

ಅಷ್ಟು ಪೂರ್ವಗ್ರಹಪೀಡಿತರಲ್ಲದ ಮಿಕ್ಕವರು ರಶಿಯದ ಪ್ರಭಾವವಲಯದಲ್ಲಿ ಪಾಕಿಸ್ತಾನ ಸೇರುವ ಭಯವಿಲ್ಲ ಎನ್ನುತ್ತಿದ್ದಾರೆ. ಬ್ರಿಟನ್ನಿನ ಕಲ್ಪಿತ ಅಲಕ್ಷ್ಯ ಭಾವದಿಂದ ವ್ಯಥಿತವಾಗಿದ್ದರೂ ಪಾಕಿಸ್ತಾನವು ಪಾಶ್ಚಾತ್ಯ ಪ್ರಭುತ್ವಗಳೊಡನೆ ಸಂಬಂಧ ಬೆಳೆಸಿಕೊಂಡೇ ಉಳಿಯುವುದಂತೆ!

### ರಶಿಯದ ಸಂಬಂಧದಿಂದ ಲಾಭವುಂಟೆ?

ಪಾಕಿಸ್ತಾನಕ್ಕೂ ಸೋವಿಯಟ್ ಸರಕಾರದ ಬಲಿಷ್ಠ ಸೇನೆಗಳಿಗೂ ನಡುವೆ ಹಿಂದುಳಿದ, ರಕ್ಷಣಾ ವ್ಯವಸ್ಥೆಯಿಲ್ಲದ ಅಫ್ಘಾನಿಸ್ತಾನ ಮಾತ್ರ ಇದೆ. ಮಧ್ಯ ಏಶಿಯದಲ್ಲೇನಾದರೂ ಆಕ್ರಮಕ ಧೋರಣವನ್ನು ರಶಿಯ ತಳೆದರೆ ೭ ಕೋಟಿ ಪ್ರಜೆಗಳಿಂದ ತುಂಬಿಕೊಂಡಿದ್ದರೂ ಗಡಿಯಲ್ಲಿ ಹಿಂದುಳಿದ ಶೂರ ಕಾದಾಡಿಗಳು ೨೦—೩೦ ಲಕ್ಷ ಇದ್ದರೂ ಪಾಕಿಸ್ತಾನವನ್ನು ಅದು ಹೊಟ್ಟನ್ನುಗಾಳಿ ಹಾರಿಸಿದಂತೆ ನಿಮಿಷಾರ್ಧದಲ್ಲಿ ಹಾರಿಸಿ ನುಣ್ಣಗೆ ಮಾಡಿ ಬಿಟ್ಟೀತು!

ಒಂದುವೇಳೆ ಪಾಕಿಸ್ತಾನ ಬದುಕಿ ಉಳಿದರೆ ಕೇವಲ ರಶಿಯದ ಅನುಗ್ರಹವಾಗಿ ಮಾತ್ರ. ಮಾಸ್ಕೋವಿಗೆ ಅಧೀನರಾದರೆ ಅವರ ಆರಾಧ್ಯ ರಾಷ್ಟ್ರವೀರ ಜಿನ್ನಾ ಅಷ್ಟು ಜಿಗುಟುತನದಿಂದ ದುಡಿದು ಸಂಪಾದಿಸಿದ ಸ್ವಾತಂತ್ರ್ಯವು ಕ್ಷಣಾರ್ಧದಲ್ಲಿ ಬಿಸಿಲುಗುದುರೆಯಂತೆ ಮಾಯವಾಗಿಹೋದೀತು.

ಬ್ರಿಟಿಶ್ ಮತ್ತು ಪಾಕಿಸ್ತಾನದ ಜನಗಳಲ್ಲಿ ಇರುವ ಒಂದು ಸಹಾನುಭೂತಿಸಂಬಂಧವೆಂದರೆ ಗಡಿನಾಡಿನ ಉದಾತ್ತಹೃದಯದ ಪಠಾನರಿಗೂ ಬ್ರಿಟನ್ನಿನವರಿಗೂ ಸರ್ವಸಾಧಾರಣವಾಗಿರುವ ಅಬಾಧಿತ ವರ್ತನೆ ಮತ್ತು ಸ್ವಾತಂತ್ರ್ಯಪ್ರೇಮ. ಇದನ್ನು ಬ್ರಿಟನ್ನಿಂದಿಗೂ ಅಪಹರಿಸುವ ಹೆದರಿಕೆ ಹಾಕುವುದಿಲ್ಲವೆಂಬುದು ಲಿಯಾಕತರಿಗೆ ಗೊತ್ತಿದೆ. ಆದರೆ ರಶಿಯವೂ ಹಾಗೇ ನಡೆದುಕೊಳ್ಳುವುದೆಂಬ ಬಗ್ಗೆ ಅವರಿಗೆ ಇಷ್ಟು ಖಾತ್ರಿಯಿಲ್ಲ. ಆದುದರಿಂದ ಸ್ಟಾಲಿನ್ನರೊಡನೆ ಕುಳಿತು ರಾಜಭೋಜನ ಹೊಡೆಯಲು ಹೋಗುವುದರ ಪೂರ್ವದಲ್ಲಿಯೇ ಲಿಯಾಕತರು ತಮ್ಮ ಗಂಟಲಿನಲ್ಲಿ ಒಂದು ಉದ್ದವಾದ ಚಮಚವನ್ನು ಇಟ್ಟುಕೊಳ್ಳದೆ ಎಂದೂ ಪಯಣಮಾಡಲಾರರು— ಪೂರ್ವಾಪರ ವಿಚಾರ ಮಾಡದೆ, ಲಾಭಾ ಲಾಭವನ್ನೆಣಿಸದೆ ಅವರೆಂದೂ ಸ್ಟಾಲಿನ್ನರೊಡನೆ ಏನಾದರೂ ಕರಾರುಗಳನ್ನು ಮಾಡಿಕೊಂಡು ಬರಲಾರರು.

---

ಜುಲೈ ೧೮ ಕ್ಕೆ ಸ್ಟರ್ಲಿಂಗ್ ಪ್ರದೇಶಗಳಿಗೂ ಜಪಾನಿಗೂ ಒಂದು ಹೊಸ ವ್ಯಾಪಾರೀ ಒಪ್ಪಂದವಾಗಲಿದೆ.

## ತುಂಡು ಸುದ್ದಿಗಳು

ಕಲಬುರ್ಗಿಯಲ್ಲಿ ತಾ, ೨೪ ಕ್ಕೆ ನಡೆದ ದುರ್ಘಟನೆಯ ಬಗ್ಗೆ ಉರ್ದು ಪತ್ರಿಕೆಗಳಲ್ಲಿ ಬಂದ ಸುದ್ದಿಗಳು ಅತಿರಂಜಿತವಾಗಿವೆಯೆಂದು ಕಲಬುರ್ಗಿ ಜಿಲ್ಹಾ ಕಾಂಗ್ರೆಸ್ ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ. ಮುಸಲ್ಮಾನ ಓಣಿಯಲ್ಲಿ ಹಾದು ಹೋಗುತ್ತಿದ್ದ ಮೂವರು ಹಿಂದು ಹುಡುಗರ ಮೇಲೆ ಮುಸ್ಲಿಂ ಪುಂಡರು ದಾಳಿ ಮಾಡಿದ್ದರಿಂದ ಅವರಲ್ಲೊಬ್ಬನು ಆಸ್ಪತ್ರೆಯಲ್ಲಿ ತತ್ಕ್ಷಣ ಮಡಿದನೆಂದೂ ಪರಿಣಾಮವಾಗಿ ಊರಲ್ಲೆದ್ದ ಕ್ಷೋಭೆಯನ್ನು ಕಾಂಗ್ರೆಸ್ಸಿಗರು ಶಾಂತಗೊಳಿಸಿದರೆಂದೂ ಒಂದು ಕಡೆ ಮಾತ್ರ ಚಿಕ್ಕ ಘರ್ಷಣೆ ನಡೆಯಿತೆಂದೂ ಅವರು ಯಥಾರ್ಥವನ್ನು ತಿಳಿಸಿದ್ದಾರೆ.

ಹಿಂದುಸ್ತಾನ ಪಾಕಿಸ್ತಾನಗಳಿಗಾಗಿ ಸಂಯುಕ್ತರಾಷ್ಟ್ರ ಸಂಘವು ನಿಯಮಿಸಿದ ಕಾಶ್ಮೀರ ಸಮಿತಿಯು ಮಿಲಿಟರಿ ಪರಿಷತ್ತೊಂದಕ್ಕಾಗಿ ಹಿಂದುಸ್ತಾನ ಪಾಕಿಸ್ತಾನಗಳಿಗೆ ಆಮಂತ್ರಣವಿತ್ತಿದೆಯೆಂದೂ ಈ ಪರಿಷತ್ತು ಬಹುಶಃ ಕಾಶ್ಮೀರದಲ್ಲಿ ನಡೆಯಬಹುದೆಂದೂ ಸ್ಥಳನಿರ್ದೇಶವನ್ನು ಸಮಿತಿ ಹಿಂದಿನಿಂದ ಮಾಡುವುದೆಂದೂ ತಿಳಿದು ಬರುತ್ತದೆ.

ಭಾರತ ಸರಕಾರದ ವಿದ್ಯುತ್ ಮತ್ತು ಗಣಿ ಮಂತ್ರಿಗಳಾದ ಶ್ರೀ ಎನ್. ವಿ. ಗಾಡಗೀಳರು ತುಂಗಭದ್ರಾ ಅಣೆಕಟ್ಟಿನ ಸಂದರ್ಶನ ನಡೆಸಿ ಹೊಸಪೇಟೆಗೂ ಹೈದರಾಬಾದ ಸಂಸ್ಥಾನದ ಮುನಿರಾಬಾದಿಗೂ ಭೆಟ್ಟಿಯಿತ್ತು ಬೆಂಗಳೂರಿಗೆ ಹೋದರು.

"ಟೋಕಿಯೋ ಗುಲಾಬಿ" ಎಂದು ಹೆಸರಾದ ಜಪಾನೀ ಅಮೇರಿಕನ್ನಳಾದ ಐವಾ ತೋಗ್ವಿ ಡಿ. ಅಕ್ವಿನೋ ಎಂಬ ಆಕಾಶವಾಣಿ ಭಾಷಣಕಾರ್ತಿಯನ್ನು ವಂಚನಾರೋಪದ ಮೇಲೆ ಸಾನ್ ಫ್ರಾನ್ಸಿಸ್ಕೋವಿನಲ್ಲಿ ವಿಚಾರಣೆಗೆ ಗುರಿಪಡಿಸಲಾಗಿದೆ.

# ಕೈದಿಯು ಮರಳಿದಾಗ

ಕನ್ನಡಿಸಿದವರು:— ಗಜಾನನ ಶರ್ಮಾ, ಕಲ್ಲಾಳ, ಕಾಶೀ ವಿದ್ಯಾಪೀಠ

೧೯೪೫ ರ ಸಮಯ.

ಫ್ರೆಂಚ ಕೈದಿಗಳಿಂದ ತುಂಬಿದ ರೈಲು ಗಾಡಿಯು ಹಿಂತಿರುಗುತ್ತಿದೆ. ಪ್ರಾಯಶಃ ಎಲ್ಲರೂ ಜಳಲಿ ಬೆಂಡಾಗಿದ್ದಾರೆ. ಆಗರೂ ಅವರಲ್ಲಿ ಒಂದು ಹೊಸ ಹುರುಪಿದೆ- ಐದು ವರ್ಷಗಳ ನಂತರ ಒಮ್ಮೆ ತಮ್ಮ ದೇಶ, ಮನೆ, ಪರಿವಾರ ಎಲ್ಲವನ್ನೂ ನೋಡಬಹುದಲ್ಲ ಎಂದು.

ಅವರಲ್ಲಿ ಅಧಿಕಾಂಶ ಕೈದಿಗಳ ಮನಸ್ಸಿನಲ್ಲಿ ಹೆಂಗಸಿನದೊ, ಹೆಂಡತಿಯದೊ ಅಥವಾ ಪ್ರೇಯಸಿಯದೊ ಯಾರದೋ ಚಿತ್ರ ಮೂಡಿ ಮಾಯವಾಗುತ್ತಿದೆ. ಪ್ರತಿಯೊಬ್ಬನೂ ಅವಳ ಬಗ್ಗೆ ಯೋಚಿಸುತ್ತಿದ್ದಾನೆ- ಪ್ರೇಮದಿಂದ, ಆಶೆಯಿಂದ ಅಥವಾ ಒಮ್ಮೊಮ್ಮೆ ಚಿಂತೆಯಿಂದ- ತಾನು ಅವಳನ್ನು ಮೊದಲಿನಂತೆಯೇ ಕಾಣಬಹುದೇ ?- ಅಷ್ಟೇ ವಿಶ್ವಾಸಿಕಳಾಗಿ? ಈ ದೀರ್ಘಾವಧಿಯ ಏಕಾಂತವಾಸವನ್ನು ಅವಳು ಹೇಗೆ ಕಳೆದಿರಬಹುದು? ಅವಳೊಡನೆ ಹಳೆಯ ಸಂಸಾರವನ್ನು ಹೊಸದಾಗಿ ಹೂಡಬಹುದೋ ?

ರೈಲು ಡಬ್ಬಿಯೊಂದರ ತುದಿಯಲ್ಲಿ ತೆಳ್ಳಗಿನ ಮನುಷ್ಯನೊಬ್ಬ ಕುಳಿತಿದ್ದಾನೆ. ಅವನ ಭಾವಸಾಂಕಿತ ಮುಖಚರ್ಯೆ, ಪಿಳಕಿಸುತ್ತಿರುವ ಕಣ್ಣುಗಳು ಅವನು ಫ್ರಾನ್ಸದವನಿಗಿಂತ ಸ್ಪೇನದ ನಿವಾಸಿಯಾಗಿರಬಹುದೆಂಬ ಭ್ರಮೆಯನ್ನುಂಟು ಮಾಡುತ್ತದೆ. ಅವನ ಹೆಸರು ರೆನಾಲ್ಡ ಲೇಮರನೆಂದು. ಅವನು ವೀರಗೋಡ ಶಹರದ ನಿವಾಸಿ. ನಾನು ಅವನನ್ನು ಶಾವುಡಾ ಎಂದು ಕರೆಯುವೆ.

ಗಾಡಿಯು ಹೊರಟು ಬಿಟ್ಟದೆ. ರಾತ್ರಿಯ ಸಮಯ. ಅವನು ತನ್ನ ಪಕ್ಕದಲ್ಲಿ ಕುಳಿತ ಇನ್ನೊಬ್ಬ ಪ್ರಯಾಣಿಕನೊಡನೆ ಮಾತನಾಡತೊಡಗುತ್ತಾನೆ:-

"ನಿನಗೆ ಮದುವೆಯಾಗಿದೆಯೇ, ಸಟರ್ನಿನ್?"

"ಯಾಕೆ? ನನ್ನ ಮದುವೆಯಾಗಿ ಬಿಟ್ಟಿದೆ— ಯುದ್ಧಕ್ಕೆ ಎರಡು ವರ್ಷ ಪೂರ್ವದಲ್ಲಿಯೇ. ಅವಳ ಹೆಸರು ಮಾರ್ಥಾ ಅವಳನ್ನು ನೋಡಬಯಸುವೆಯೇನು? "

ನಗುಮುಖ, ಪುಷ್ಟವಾದ ದೇಹಯಷ್ಟಿ, ಮುಖದ ಮೇಲೆ ಕಲೆಗಳು — ಇವನೇ ಸಟರ್ನಿನ್! ಅವನು ತನ್ನ ಕಿಸೆಯೊಳಗಿಂದ ಒಂದು ಹಳೆಯ ಮೆತ್ತಗಿನ ಪಾಕೀಟೊಂದನ್ನು ಎತ್ತಿಕೊಂಡ ಮತ್ತು ಅದರೊಳಗಿಂದ ಹರಿದ ಚಿತ್ರವೊಂದನ್ನು ಹೆಮ್ಮೆಯಿಂದ ಹೊರತೆಗೆದ.

"ಬಹು ಸುಂದರ! ಮರಳಿ ಬಂದದ್ದಕ್ಕಾಗಿ ನಿನಗೆ ದುಃಖವಿಲ್ಲವೇ? ಲೇಮರ ಕೇಳಿದ.

"ದುಃಖ? ನಾನಂತೂ ಎಷ್ಟೋ ಬಾರಿ ಮೃತ್ಯುಮುಖದಿಂದ ಮರಳಿ ಬಂದಿದ್ದೇನೆ. ಅಂದ ಮೇಲೆ ಇನ್ನೆಲ್ಲಿಯ ದುಃಖ?

"ಅವಳು ಸುಂದರಳೆಂದು, ಒಬ್ಬಳೇ ಇದ್ದಾಳೆಂದು, ಪುರುಷರು ಬಹಳ......"

"ನಿನ್ನ ಮಾತಿಗೆ ನಗು ಬರುತ್ತದೆ," ಸಟರ್ನಿನ್ ಮಧ್ಯದಲ್ಲಿಯೇ ಬಾಯಿಹಾಕಿದ, "ಮಾರ್ಥಾಳಿಗೆ ಬೇರೆ ತನ್ನವರು ಇರಲೇ ಇಲ್ಲ. ನಾವು ಒಬ್ಬರಿಂದೊಬ್ಬರು ಬಹು ಸುಖಿಯಾಗಿದ್ದೆವು. ಮತ್ತು ಹಿಂದಿನ ಐದು ವರ್ಷಗಳಲ್ಲಿ ಅವಳು ನನಗೆ ಬರೆದ ಪತ್ರವನ್ನು ನೋಡಿದೆಯೆಂದರೆ...."

"ಅದೇ ಪತ್ರ! ಆದರಿಂದೇನಾದೀತು? ನನಗೂ ಎಷ್ಟೋ ಪತ್ರಗಳನ್ನು ನನ್ನವಳು ಬರೆದಿದ್ದಾಳೆ. ಆದರೂ ನಾನು ದುಃಖಿಯಾಗಿದ್ದೇನೆ."

"ನಿನಗೆ ನಿನ್ನ ಹೆಂಡತಿಯಲ್ಲಿ ವಿಶ್ವಾಸವಿಲ್ಲವೇ?" ಸಟರ್ನಿನ್ ಪ್ರಶ್ನಿಸಿದ.

"ಹೌದು, ನನಗಂತೂ ಬೇರೆಯವರಿಗಿಂತ ಹೆಚ್ಚಾಗಿ ಹಾಗನಿಸುತ್ತದೆ. ನೋಡು, ಆರು ವರ್ಷಗಳ ಹಿಂದೆ ನಾವು ವಿವಾಹಿತರಾದೆವು. ಅಂದಿನಿಂದ ಇಂದಿನವರೆಗೂ ನಮ್ಮಿಬ್ಬರಲ್ಲಿ ಯಾವದೇ ವೈಮನಸ್ಯಯುಂಟಾಗುವ ಕಾರಣ ಸಿಕ್ಕಲಿಲ್ಲ."

"ಹಾಗಿದ್ದರೂ ನೀನು ...?"

"ಇದು ಅವರವರ ಸ್ವಭಾವದ ವಿಷಯ. ನನಗಂತೂ ಹಾಗೆಯೇ ತೋರುತ್ತದೆ! ತಮ್ಮ ಭಾಗ್ಯದಲ್ಲಿಯೇ ವಿಶ್ವಾಸವಿರುವ ವ್ಯಕ್ತಿಗಳಲ್ಲಿ ನಾನೊಬ್ಬ. ಯಾವಾಗಲೂ ಹೆಲೆನಳು ನನಗಂತೂ ಬಹಳ ಸುಂದರಳೂ, ಚತುರಳೂ ಎಂದೆನಿಸಿದ್ದಾಳೆ; ಅವಳುವಿದುಷಿ ಹುಡುಗಿಯು ಹೌದು. ಎಲ್ಲ ಕೆಲಸವನ್ನೂ ಅವಳು ಮಾಡಬಲ್ಲಳು. ಬಟ್ಟೆಯನ್ನು ಕೈಯಲ್ಲಿ ಹಿಡಿದರೆ ತನ್ನಿಂದ ತಾನೆ ಉಡುಪು ಆಗುವಷ್ಟು ಜಾಣೆ. ಕೃಷಿಕನ ಗುಡಿಸಲನ್ನು ಸ್ವರ್ಗವನ್ನಾಗಿ ಮಾಡುತ್ತಾಳೆ. ಆದಕ್ಕಾಗಿಯೇ ನನಗೆ ಹೀಗೆನಿಸುತ್ತದೆ— ಯುದ್ಧದ ಸಮಯದಲ್ಲಿ ನಮ್ಮ ಮನೆಗೆ ಬಂದ ಅನೇಕ ಶರಣಾರ್ಥಿಗಳಲ್ಲಿ ಯಾವನಾದರೂ ನಿಶ್ಚಯವಾಗಿಯೂ ನನಗಿಂತ ಸುಂದರನಾಗಿರಬಹುದು. ಹಳ್ಳಿಯ ಅತಿ ಸುಂದರಿಯ ಮೇಲೆ ಅವನ ಕಣ್ಣು ಬಿದ್ದಿರಲೇಬೇಕು."

ಆದರೆ ಇದರಿಂದೇನು! ಅವಳು ನಿನ್ನನ್ನು ಪ್ರೀತಿಸುತ್ತಿದ್ದಳೆಂದ ಮೇಲೆ...."

"ನಿಶ್ಚಯವಾಗಿಯೂ; ಆದರೆ ಐದು ವರ್ಷಗಳ ವರೆಗೆ ಒಬ್ಬಂಟಿಗಳಾಗಿರುವದು ಎಷ್ಟು ಕಷ್ಟದಾಯಕವೆಂದು ನೀನು ತಿಳಿಯಲಾರೆಯಾ? ಅವಳ ಮನೆ ಸಾರ್ಡೋಲೆಯಲ್ಲಿರಲಿಲ್ಲ. ಅಲ್ಲಿ ನನ್ನ ಮನೆಯಿದೆ. ಅಲ್ಲಿ ಅವಳವರು ಯಾರೂ ಇಲ್ಲ. ಕಾರಣ ಆಕರ್ಷಣ ನಿಶ್ಚಯವಾಗಿಯೂ ಪ್ರಬಲವಾಗಿರಬಹುದು."

"ಇಲ್ಲ, ಇಲ್ಲ! ನೀನು ತಪ್ಪೆಣಿಸುತ್ತಿರುವೆ," ಸಟರ್ನಿನ್ ಹೇಳತೊಡಗಿದ: "ಅಂಥದೇನೋ ಒದಗಿತೆಂದೇ ತಿಳಿ. ಅದನ್ನು ಅವಳು ಮರೆತುಬಿಟ್ಟಿದ್ದರೆ ಕೆಡಕೇನು ? ಈಗ ಎಲ್ಲವೂ ನಿನ್ನದೇ! ನನಗೆ ಯಾರಾದರೂ ಮಾರ್ಥಾಳ ವಿಷಯವಾಗಿ "ಮಾರ್ಥಾ......" ಎಂದು ಹೇಳಿದರೆ ಆಗ ನಾನೇನು ಉತ್ತರ ಕೊಡುವೆನೆಂದು ಗೊತ್ತೇ?- "ಸಾಕು ಮಾಡು ನಾನೊಂದಕ್ಷರವನ್ನೂ ಕೇಳಬಯಸುವದಿಲ್ಲ. ಅವಳು ನನ್ನ ಹೆಂಡತಿ. ಯುದ್ಧದ ಸಮಯವಾಗಿತ್ತು. ಒಬ್ಬಂಟಿಗಳಾಗಿದ್ದಳು. ಈಗಂತೂ ಶಾಂತಿಯೇ ಶಾಂತಿಯಿದೆ. ಒಬ್ಬರನ್ನೊಬ್ಬರು ಎಲ್ಲಿಂದ ಅಗಲಿದ್ದೆವೋ ಅಲ್ಲಿಂದಲೇ ಕೂಡಿಕೊಳ್ಳುವೆವು."

"ಆದರೆ ನಾನು ಹಾಗಲ್ಲ. ಮರಳಿದ ಮೇಲೆ ಈ ವಿಷಯದಲ್ಲಿ ನಾನು ಏನಾದರೂ ಗಡಬಡೆಯಾಗಿದೆಯೆಂದು ಕೇಳಿದರೆ...."

"ಏನು ಮಾಡುವೆ? ಕೊಂದು ಬಿಡುವೆಯೇನು ಅವಳನ್ನು?"

"ಇಲ್ಲ ಹಾಗೇನು ಮಾಡುವದಿಲ್ಲ. ಅವಳ ಮೇಲೆ ದೋಷಾರೋಪಣೆ ಕೂಡ ಮಾಡುವದಿಲ್ಲ. ನಾನೇ ಬೇರೆ ಎಲ್ಲಿಯಾದರೂ ಹೊರಟು ಹೋಗುತ್ತೇನೆ- ಹೆಸರು ಬದಲಾಯಿಸಿಕೊಂಡು. ನಾನೂ ಅವಳಿಗೆ ನನ್ನ ಮನೆ, ನನ್ನ ಸಂಪತ್ತು. ಎಲ್ಲವನ್ನೂ ಬಿಟ್ಟು ಹೋಗುತ್ತೇನೆ. ನನಗೇನೂ ಬೇಡ. ಆಮೇಲೆ ಹೊಸದಾಗಿ ಸಂಸಾರ ಹೂಡುವೆ. ಇದು ಮೂರ್ಖತನವಾಗಬಹುದು. ಆದರೆ ನನಗೆ ಇದೇ ಇಷ್ಟ. ದೊರೆತರೆ ಸರ್ವಸ್ವವೂ, ಇಲ್ಲವಾದರೆ ಏನೂ ಬೇಡ."

ಎಂಜಿನ್ನು ಸೀಟಿ ಕೊಟ್ಟಿತು. ಗಾಡಿಯ ಗಾಲಿಗಳ ಘರ್ಷಣ ಧ್ವನಿಯು ತೀವ್ರವಾಗುತ್ತಲಿತ್ತು. ಎಲ್ಲರೂ ಶಾಂತರಾಗಿದ್ದರು.

× × ×

ಸಾರ್ಡೋಲೆಯ ಮೇಯರನಿಗೆ ರೆನಾಲ್ಡ ಲೇಮರನು ಇಪ್ಪತ್ತನೆಯ ತಾರೀಕಿಗೆ ಮರಳುವನೆಂಬ ಸಮಾಚಾರ ಸಿಕ್ಕಾಗ ಸಮಯಕ್ಕೆ ಪೂರ್ವವೇ ರೆನಾಲ್ಡನ ಹೆಂಡತಿಗೆ ಸ್ವತಃ ಈ ಸುದ್ದಿ ತಿಳಿಸಲು ನಿಶ್ಚಯಿಸಿದ. ಈ ಸಮಯದಲ್ಲಿ ಹೆಲೆನಳು ತನ್ನ ಹೂದೋಟದಲ್ಲಿ ಕೆಲಸ ಮಾಡುತ್ತಿದ್ದಳು.

"ಮೇಡಮ್ ಲೇಮರ್! ನಿನ್ನ ಗಂಡನು ಮರಳುತ್ತಿರುವನೆಂಬ ಸುದ್ದಿ ಕೊಡಲು ನನಗೆ ತುಂಬಾ ಸಂತೋಷವೆನಿಸುತ್ತದೆ. ನೀನು ವಿಜೃಂಭಣೆಯಿಂದ ಅವನನ್ನು ಸ್ವಾಗತಿಸುವೆಯೆಂಬ ಭರವಸೆ ನನಗಿದೆ, ನಮ್ಮಂತೆಯೇ ನೀನಾದರೂ ನಿಶ್ಚಯವೂ ಸರಿಯಾಗಿ ಊಟ ಸಹ ಮಾಡುವದಿಲ್ಲ. ಆದರೆ ಇಂಥ ಸಮಯದಲ್ಲಿ..."

"ತಾವು ಹೇಳುವದು ಸರಿ. ಇಪ್ಪತ್ತನೆಯ ತಾರೀಖು ಎಂದಿರಲ್ಲವೇ ? ಅವರು ಯಾವ ಸಮಯಕ್ಕೆ ಇಲ್ಲಿಗೆ ತಲುಪಬಹುದು?"

"ಸಂಜೆಯ ಆರು ಘಂಟೆಗೆ ಬರುವ ಗಾಡಿಯಿಂದ."

"ಅವರ ಬಗ್ಗೆ ಎಲ್ಲ ವ್ಯವಸ್ಥೆಯನ್ನು ಉಚಿತವಾಗಿ ಮಾಡುವೆನೆಂಬ ಭರವಸೆ ತಮಗೆ ಕೊಡುತ್ತೇನೆ. ನಾನೂ ತಮಗೆ ಕೃತಜ್ಞಳಾಗಿದ್ದೇನೆ."

ಇಪ್ಪತ್ತನೆಯ ತಾರೀಖಿನ ದಿನ ಆರು ಘಂಟೆಗೇ ಹೆಲೆನಳು ಎಚ್ಚೆತ್ತಳು. ರಾತ್ರಿ ಅವಳಿಗೆ ನಿದ್ದೆಯು ಬರಲಿಲ್ಲ. ಒಂದು ದಿನ ಮುಂಚೆಯೇ ಅವಳು ಮನೆಯೆಲ್ಲವನ್ನೂ ಉಡುಗಿ ಸ್ವಚ್ಛ ಪಡಿಸಿದ್ದಳು. ಹಂಚುಗಳ ಮೇಲೆ ಬಿದ್ದ ಧೂಳನ್ನು ಗುಡಿಸಿ ತೆಗೆದಿದ್ದಳು. ಕಿಟಕಿಗೆ ಹಾಕಿದ ಪರದೆಗೆ ಹೊಸ "ರಿಬ್ಬನ್" ಹಾಕಿದಳು. ಏಕಾಂತ ಸಮಯದಲ್ಲಿ ಎಂದೂ ಧರಿಸದ ರೇಶ್ಮೆಯ ವಸ್ತ್ರ ಮತ್ತು "ಅಂಡರವೇರ್" ಹೊರತೆಗೆದಳು. ತಾನು ಯಾವ ಉಡುಪು ಹಾಕಿಕೊಳ್ಳಬೇಕು? ಬಿಳಿಯ ರೇಷ್ಮೆಯ ಉಡುಪು- ಅದನ್ನೇ ಅವಳು ಹೆಚ್ಚಾಗಿ ಪ್ರೀತಿಸುತ್ತಿದ್ದನು. ಅದನ್ನು ತೊಡತೊಡಗಿದಾಗ ಸೊಂಟದ ಹತ್ತರ ಸಡಿಲಾದದ್ದು ಕಂಡು ಅವಳಿಗೆ ಬಹಳೇ ದುಃಖವಾಯಿತು. ಈ ಐದು ವರ್ಷಗಳಲ್ಲಿ ತಾನೆಷ್ಟು ಸೊರಗಿ ಹೋಗಿದ್ದೇನೆ! ಇಲ್ಲ, ನನ್ನ ಕೈಯಿಂದ ತಯಾರಿಸಿದ ಕರಿಯಬಟ್ಟೆಗಳನ್ನೇ ಧರಿಸುವೆ. ಅದಕ್ಕೆ ಸುಂದರವಾದ "ಕಾಲರು" ಹಾಗು "ಪಟ್ಟಿ" ಇದೆ. ನಂತರ ಅದರು ವ್ಯವಸ್ಥಿತವಾಗಿ ಕೂದಲುಬಾಚಿಕೊಂಡು ಮರು ದಿನದ ವರೆಗೆ ಅತ್ತಿತ್ತ ಹರಡಬಾರದೆಂದು ಜಾಲಿ ಕಟ್ಟಿಕೊಂಡಳು.

ಅಡಿಗೆ ಮಾಡುವದಕ್ಕಿಂತ ಮುಂಚೆ ಅವಳು ತನ್ನ ಗಂಡನಿಗೆ ಇಷ್ಟವಿದ್ದ ವಸ್ತುಗಳೆಲ್ಲವನ್ನೂ ಜ್ಞಾಪಿಸಿಕೊಂಡಳು. ಆದರೆ ೧೯೪೫ ರ ಫ್ರಾನ್ಸದಲ್ಲಿ ಇವೆಲ್ಲವೂ ಒಟ್ಟಿಗೆ ದೊರೆಯುವದು ದುರ್ಲಭವಾಗಿತ್ತು. ಸುಯೋಗದಿಂದ ಅವಳಿಗೆ ಸ್ವತಃ ಸಾಕಿದ ಕೋಳಿಯ ಮೊಟ್ಟೆಗಳು ಸಿಕ್ಕಿದವು. ಹೆಲೆನಳಷ್ಟು ಉತ್ತಮವಾಗಿ 'ಆಮಲೆಟ' ಮಾಡಲು ಯಾರಿಗೂ ಬರುವದೇ ಇಲ್ಲವೆಂದು ಅವಳ ಗಂಡ ಹೇಳುತ್ತಿದ್ದ. ಅವನಿಗೆ ಹುರಿದ ಮಾಂಸ, ಬೇಯಿಸಿದ ಬಟಾಟೆಗಳು ಬಹಳ ಇಷ್ಟವಾಗಿದ್ದವು. ಆದರೆ ಹುರಿದ ಮಾಂಸ ಸಿಕ್ಕಲಿಲ್ಲ. ತನ್ನ ಸಾಕಿದ ಕೋಳಿಯನ್ನೇ ಒಂದು ದಿನ ಮುಂಚೆ ಕೊಂದಿಟ್ಟಿದ್ದಳು. ಅವನಿಗೆ ಚಾಕಲೇಟು ಬಹಳ ಪ್ರಿಯವಾದುದು. ಆದರೆ ಇಲ್ಲಿ ಅದೆಲ್ಲಿ ಸಿಕ್ಕೀತು? ಅವಳ ಸ್ನೇಹಿತನೊಬ್ಬನು ಅವನಿಗೆ ಚಾಕಲೇಟು ಸಿಗುವ ಹತ್ತಿರದ ಶಹರದ ಪತ್ತೆ ಕೊಟ್ಟಿದ್ದ. ಅವಳು ಯೋಚಿಸಿದಳು. ತಾನು ಎಂಟು ಘಂಟೆಗೆ ಹೊರಟರೆ ಒಂಭತ್ತು ಘಂಟೆಯೊಳಗೆ ಹಿಂತಿರುಗಬಲ್ಲೆ. ಹೋಗುವದಕ್ಕೆ ಮುಂಚೆಯೇ ಎಲ್ಲವನ್ನೂ ಅಳವಡಿಸಿಟ್ಟರೆ ಹಿಂತಿರುಗಿದ ಮೇಲೆ ಅಡಿಗೆ ಮಾಡುವದೊಂದೇ ಉಳಿಯುವದು.

ಅವಳು ಸಂತುಷ್ಟಳಾಗಿದ್ದಳು. ಉತ್ಸಾಹ ಹೊರಚಿಮ್ಮುತ್ತಿತ್ತು. ಇಷ್ಟು ಸುಂದರವಾದ ದಿನ, ಗುಡ್ಡದಡಿಯಲ್ಲಿ ಸೂರ್ಯನ ಕಿರಣಗಳು ಇದಕ್ಕೆ ಮುಂಚೆ ಎಂದೂ ಕಂಡಿರಲಿಲ್ಲ. ಹಾಡುತ್ತ ಅವಳು ಮೇಜನ್ನು ಶೃಂಗರಿಸತೊಡಗಿದಳು. ಇಬ್ಬರೂ ಇದ್ದಾಗ ಉಪಯೋಗಿಸುತ್ತಿದ ಮೇಜುವಸ್ತ್ರ, ಚಿತ್ರ, ಪ್ಲೇಟು, ಸೆರೆಯ ಬಾಟಲಿ, ಮತ್ತು ಕೆಲವು ಹೂವುಗಳು. ಇವನ್ನು ನೋಡಿ ಅವಳ ಮುಖದ ಮೇಲೆ ಮಂದಹಾಸ ಮಿರುಗುತ್ತಿತ್ತು. ಅವನು ಮೇಜಿನ ಮೇಲೆ ಯಾವಾಗಲೂ ಹೂವುಗಳನ್ನು ಬಯಸುತ್ತಿದ್ದ. ಮೇಜಿನ ಮೇಲೆ ನಿನ್ನಂತೆ ಇನ್ನಾರೂ ಇಷ್ಟು ಸುಂದರವಾಗಿ ಹೂವುಗಳನ್ನಿಡಲಾರರು" ಎಂದು ಹೇಳುತ್ತಿದ್ದ.

ಹೆಲೆನಳು ಮೂರು ಬಣ್ಣದ ಹೂವುಗಳಿಂದ ಹೂವಿನ ಕುಂಡವನ್ನು ತಯಾರಿಸಿದಳು. ಮನೆಯಿಂದ ಹೊರಡುವದಕ್ಕೆಮುಂಚೆ ಅವಳು ತನ್ನ "ಸಾಯಕಲ್ಲು" ಹಿಡಿದುಕೊಂಡು ತೆರೆದ ಕಿಟಕಿಯೊಳಗಿಂದ ಚಿಕ್ಕದಾದ ಶೃಂಗರಿಸಿದ ಆ ಕೋಣೆಯೊಳಗೆ ಇಣಿಕಿದಳು. ಹೌದು ಎಲ್ಲವೂ ಉಚಿತಸ್ಥಾನದಲ್ಲಿ ಅಲಂಕೃತವಾಗಿದ್ದವು. ಇಷ್ಟು ಕಷ್ಟ ಸಹಿಸಿದ ಮೇಲೆ ಲೇಮರನೂ ತನ್ನ ಮನೆ ಹಾಗೂ ಪತ್ನಿಯಲ್ಲಿ ಬಹಳ ಕಡಿಮೆ ಪರಿವರ್ತನೆಯಾದದ್ದು ನೋಡಿ ನಿಶ್ಚಯವಾಗಿಯೂ ಅಶ್ಚರ್ಯಚಕಿತನಾಗುವನು! ಕಿಟಕಿಯಿಂದಲೇ ಅವಳು ರೂಮಿನ ಒಳಗಿದ್ದ ದೊಡ್ಡ ಕನ್ನಡಿಯಲ್ಲಿ ಮುಖನೋಡಿಕೊಂಡಳು" ಸ್ವಲ್ಪ ಸೊರಗಿದ್ದರೂ— ಸುಂದರವಾದ ರೂಪ! ತುಂಬಿದ ಯೌವನ! ಅವಳಿಗಾದ ಆನಂದ ಹಿಡಿಸಲಳವಲ್ಲ.

ಅವನ ಆ ಚಿಕ್ಕ ಮನೆ ಹಳ್ಳಿಯ ಒಂದು ತುದಿಗಿತ್ತು. ಒಂದು ಘಂಟೆಯ ನಂತರ ಕೇವಲ ಪಕ್ಕದವಳು ಮಾತ್ರ ಸೊರಗಿದ ಸೈನಿಕ ಹೊಕ್ಕಾಗ ಹೂದೋಟದಲ್ಲಿ ಹೋಗುತ್ತಿರುವದನ್ನು ಕಂಡಳು. ಸೈನಿಕನ ಕಣ್ಣುಗಳು, [illegible] ಹೊಳೆಯುತ್ತಿದ್ದವು. ಅವನು ಒಂದು ಕ್ಷಣ ಅಲ್ಲಿಯೇ ನಿಂತ. ಅಲ್ಲಿನ [illegible] [illegible] ಸಂತೋಷದಿಂದ [illegible] ಸೌಂದರ್ಯಕ್ಕೆ ಮರುಳಾಗಿ, [illegible] [illegible] [illegible] [illegible] ಆನಂದ [illegible] ಸಂತಸ ಧ್ವನಿಗೆ ಕರೆದ-

"ಹೆಲೆನ್!"

ಉತ್ತರವೇ ಇಲ್ಲ.

"ಹೆಲೆನ್!....ಹೆಲೆನ್!!"

ನಿಶ್ಶಬ್ದತೆಗೆ ಹೆದರಿ ಅವನು ಇನ್ನೂ ಹತ್ತಿರಕ್ಕೆ ಬಂದ- ಕಿಟಕಿಯೊಳಗೆ ಇಣಿಕಿದ. ಶೃಂಗರಿಸಿದ ಮೇಜು! ಇಬ್ಬರು ಕೂಡುವ [illegible] ಹೂವು ಹಾಗೂ ಸೆರೆ!

ಅವನಿಗೆ ಸಹಿಸಲಾರದ ಧಕ್ಕೆ ತಗುಲಿತು. ಗೋಡೆಗೆ ಬಾಚಿ ಹಿಂತು "ಅಯ್ಯೋ ದೇವರೆ, ಅವಳು ಒಬ್ಬಳೇ ಇಲ್ಲ!" ಅವನು ತಿಳಿದ. ಸ್ವಲ್ಪಹೊತ್ತಿನ ಮೇಲೆ ಹೆಲೆನಳು ಹಿಂತಿರುಗಿದಳು. ನೆರೆಯವಳು ಅವಳನು ಕರೆದು ಹೇಳಿದಳು "ನಾನು ನಿನ್ನ ಲೇಮರನನ್ನು ನೋಡಿದೆ. ಅವನು ರಸ್ತೆಯಲ್ಲಿ ಓಡಿಹೋಗುತ್ತಿದ್ದ. ನಾನು ಅವನನ್ನು ಕರೆದೆ. ಅವನು ಕೇಳಲೇ ಇಲ್ಲ."

"ಅವನು ಓಡಿ ಹೋಗುತ್ತಿದ್ದ? ಎಲ್ಲಿ! ಯಾವಕಡೆಗೆ ??"

ಅವಳು ಮೇಯರನ ಮನೆಯ ಕಡೆಗೆ ಓಡಿದಳು. ಆದರೆ ಮೇಯರನಿಗೆ ಏನೂ ಗೊತ್ತಿರಲಿಲ್ಲ.

"ಮೇಯರ! ನನಗೆ ಹೆದರಿಕೆಯಾಗುತ್ತದೆ" ಲೇಮರನು ಈರ್ಷಾಳು ಹಾಗೂ ಭಾವುಕನು. ಮೇಜು ಅವನಿಗಾಗಿಯೇ ಶೃಂಗರಿಸಿದ್ದೆಂಬುದನ್ನು ಅವನು ಯೋಚಿಸಿರಲಿಕ್ಕಿಲ್ಲ. ಮೇಯರ ನಾವು ಅವನನ್ನು ಈಗಲೇ ಹುಡುಕಬೇಕು. ಅವನು ವಾಪಸು ಬರದಿರಬಹುದು. ಅವನಲ್ಲಿ ನನಗೆ ಬಹಳ ಪ್ರೇಮವಿದೆ.

ಮೇಯರನು ಥೀವಿಯರ್ಸ್ ಸ್ಟೇಶನ್ನಿಗೆ ಸೇವಕರನ್ನು ಕಳಿಸಿದ. ಪೋಲೀಸರಿಗೆ ಸುದ್ದಿ ಕೊಟ್ಟ; ಆದರೆ ಲೇಮರನು ನಾಪತ್ತೆಯಾಗಿದ್ದ.

ಹೆಲೆನಳು ರಾತ್ರಿಯಲ್ಲಾ ಮೇಜಿನ ಬಳಿಯಲ್ಲೇ ಕುಳಿತ್ತಿದ್ದಳು. ಹೂವುಗಳು ಒಂದೊಂದಾಗಿ ಬಾಡುತ್ತಿದ್ದವು.

ದಿನಗಳೆಯಿತು, ವಾರಕಳೆಯಿತು, ತಿಂಗಳೂ ಸಂದಿತು.

ಆ ದುಃಖದ ದಿನ ಒದಗಿ ಈಗ ಮೂರು ವರ್ಷಗಳಾದವು. ಅವಳಿಗೆ ತನ್ನ ಗಂಡನ ಸುದ್ದಿಯೇ ಸಿಗಲಿಲ್ಲ. ನಾನು ಈ ಕಥೆಯನ್ನು ಅವನು ಓದಲಿ ಮತ್ತು ಹಿಂತಿರುಗಲಿ ಎಂದೇ ಬರೆದಿದ್ದೇನೆ.

"ಮೂಲ ಎಂ ಡ್ರೆ ಮೋರಿಸ್"

# ಆಹಾರ ಸ್ವಾವಲಂಬನೆಗಾಗಿ ರಾಜಾಜಿಯ ಕರೆ

## ಕಾಂಗ್ರೆಸ್ಸಿನ ಆತ್ಮನಿರೀಕ್ಷಣೆ— ಆಹಾರಾಭಿವೃದ್ಧಿಗೆ ವಿಶೇಷಾಧಿಕಾರಿಯ ನೇಮಕ

### ರಾಜಾಜಿಯ ಕರೆ

ಮುಖ್ಯಮಂತ್ರಿ ಪಂ. ಜವಾಹರಲಾಲರು ಆಹಾರ ಸಮಸ್ಯೆಯನ್ನೆದುರಿಸಲು ರಾಷ್ಟ್ರ ಟೊಂಕ ಕಟ್ಟಬೇಕೆಂದು ಕರೆಕೊಟ್ಟು ಒಂದೇ ವಾರದಲ್ಲಿ ಗವರ್ನರ ಜನರಲ್ಲರಾದ ಸಿ. ರಾಜಗೋಪಾಲಾಚಾರ್ಯರು ರಾಷ್ಟ್ರಕ್ಕೆ ಆಕಾಶವಾಣಿಯಲ್ಲಿ ಅದೇ ಬಗೆಯ ಮತ್ತೊಂದು ಕರೆ ಕೊಟ್ಟಿದ್ದಾರೆ. ನಮ್ಮ ದೇಶಕ್ಕೆ ಬೇಕಾಗುವ ಆಹಾರವನ್ನು ದೇಶದಲ್ಲೇ ಬೆಳೆಯಬೇಕು. ಇಲ್ಲದಿದ್ದರೆ ಕ್ಷಾಮದೇವತೆಗೂ ಅರಾಜಕತೆಗೂ ಆಮಂತ್ರಣ ಕೊಟ್ಟಂತಾಗುವದೆಂದು ಅವರು ಎಚ್ಚರಿಸಿದರು. ಅವರು ಅಂಕೆ ಸಂಖ್ಯೆಗಳ ಗೊಡವೆಗೆ ಹೋಗಲಿಲ್ಲ. ನಾವು ಹೊರಗಿನಿಂದ ತರಿಸುವ ಆಹಾರದ ಬೆಲೆಗೆ ಸರಿದೂಗುವಷ್ಟು ಸರಕುಗಳನ್ನು ಸಿದ್ಧಗೊಳಿಸಲು ಸಮರ್ಥರಲ್ಲ. ಆದ್ದರಿಂದ ನಮ್ಮ ಆಯಾತ ನಿರ್ಯಾತಗಳನ್ನು ಸರಿದೂಗಿಸಬೇಕಾದರೆ ಬೇಕಾದಷ್ಟು ಆಹಾರವನ್ನು ಬೆಳೆಸಿಕೊಳ್ಳಲೇಬೇಕು. ನೀರಾವರಿ ಯೋಜನೆಗಳು ಫಲಿತಕ್ಕೆ ಬರಬೇಕಾದರೆ ಕೆಲ ಕಾಲಬೇಕು. ಆ ವರೆಗೆ ನಾವು ಸುಮ್ಮನಿರುವಂತಿಲ್ಲ. ಪ್ರತಿಯೊಬ್ಬ ಭಾರತೀಯನೂ ಆಹಾರ ಉತ್ಪಾದನೆ ಹೆಚ್ಚಿಸಲು ನೆರವಾಗಬೇಕು. ಅಕ್ಕಿಯ ಉಪಯೋಗ ದೇಶದಲ್ಲಿ ಹೆಚ್ಚಾಗಿದೆ ಅದರ ಕೊರತೆ ಹೆಚ್ಚಾಗಿರುವದರಿಂದ ಅದರ ಬದಲಿಗೆ ರಾಗಿ ಜೋಳ ಮೊದಲಾದವುಗಳನ್ನು ಸ್ವಲ್ಪ ಬಳಸಿ ಅಕ್ಕಿಯನ್ನು ಉಳಿಸಬೇಕೆಂದು ಅವರು ಒತ್ತಿ ಹೇಳಿದರು. ಇದೇ ಇಂದಿನ ದೇಶಸೇವಾ ಕಾರ್ಯ, ಆಹಾರ ಸಮಸ್ಯೆಯನ್ನು ಬಿಡಿಸುವಲ್ಲಿ ಜನತೆಯ ಸಹಕಾರ ಅತ್ಯವಶ್ಯವಾಗಿದೆ. ಸರಕಾರವೇ ತನ್ನ ಅಧಿಕಾರಿಗಳ ಮೂಲಕ ದೇಶವನ್ನೆಲ್ಲ ವ್ಯಾಪಿಸಿ ಈ ಕಾರ್ಯವನ್ನು ಸಾಧಿಸುವದು ಅಸಾಧ್ಯವೆಂದು ಹೇಳಿ ಅವರು ಕಾಂಗ್ರೆಸ್ಸಿಗರಿಗೆ ಈ ಸೇವಾಪಥದಲ್ಲಿ ಧುಮುಕಲು ಕೇಳಿಕೊಂಡರು. ಸರಕಾರದ ನೆರವಿಲ್ಲದೆ, ಅದರ ವಿರೋಧವಿದ್ದರೂ ಕೂಡ, ಕಾಂಗ್ರೆಸ್ಸಿಗರು ಹಿಂದೆ ಚರಕ, ಖಾದಿಗಳ ಪ್ರಚಾರವನ್ನು ಸಫಲವಾಗಿ ಮಾಡಿದ ಉದಾಹರಣೆಯನ್ನು ಎತ್ತಿ ತೋರಿಸಿ ಆಹಾರಕ್ಕಾಗಿ ಜನತೆಯಲ್ಲಿ ಆಂದೋಲನ ನಡೆಸಿದರೆ ಕಾಂಗ್ರೆಸ್ಸಿನ ಇಷ್ಟಾರ್ಥಸಿದ್ಧಿಯಾಗುವದೆಂದು ರಾಜಾಜಿಯವರು ಸೂಚಿಸಿದ್ದಾರೆ.

### ಕೇಂದ್ರ ಆಹಾರಾಧಿಕಾರಿಯ ನೇಮಕ

ಈ ನಡುವೆ ಸರಕಾರ ಆಹಾರ ಬಿಕ್ಕಟ್ಟನ್ನು ಎದುರಿಸುವ ಗಂಭೀರ ಉಪಕ್ರಮಗಳನ್ನು ಕೈಕೊಳ್ಳಲು ತಡವಾಗಿಯಾದರೂ— ಸಿದ್ಧವಾಗುವ ಲಕ್ಷಣಗಳು ತೋರಿಬರುತ್ತಿವೆ. ಸರಕಾರಿ ಭೋಜನ ಸಮಾರಂಭಗಳಲ್ಲಾಗುವ ದುಂದುಗಾರಿಕೆಯನ್ನು "ಹರಿಜನ" ದಂಥ ಜವಾಬ್ದಾರ ಪತ್ರಿಕೆಗಳು ಕೂಡ ಟೀಕಿಸಿದ್ದು ಅದರ ಕಡೆಗೂ ನಮ್ಮ ಶಾಸಕರ ದೃಷ್ಟಿ ತಿರುಗಿದಂತಿದೆ. ಗವರ್ನರ ಜನರಲ್ ರಾಜಾಜಿಯವರು ತಮ್ಮ ಆಕಾಶವಾಣಿ ಪ್ರಾರಂಭದಲ್ಲಿ ತಮ್ಮ ಮೇಲೆ ಬಂದ ಇಂಥ ಒಂದು ಅಪವಾದಕ್ಕೆ ಉತ್ತರ ಕೊಟ್ಟದ್ದು ಜನಾಭಿಪ್ರಾಯಕ್ಕೆ ಸರಕಾರ ಕೊಡಹತ್ತಿದ ಮಹತ್ವಕ್ಕೆ ಸಾಕ್ಷಿಯಾಗಿದೆ. ಕೆಲ ದಿನಗಳ ಹಿಂದೆ ಸಿಮ್ಲೆಯಲ್ಲಿ ತಾವು ಏರ್ಪಡಿಸಿದ ಸತ್ಕಾರ ಕೂಟವೊಂದರಲ್ಲಿ ೧೦೦೦ ಮೇಲ್ಪಟ್ಟ ಜನರಿಗೆ ಆತಿಥ್ಯ ಮಾಡಿದುದಾಗಿ ಬಂದ ದೂರನ್ನು ಉಲ್ಲೇಖಿಸಿ ಗವರ್ನರ ಜನರಲ್ಲರು ತಮ್ಮ ಆ ಸತ್ಕಾರ ಸಮಾರಂಭದಲ್ಲಿ ಸೀತಾಕ್ಕೆ ಒಳಪಟ್ಟ ಯಾವ ಧಾನ್ಯವನ್ನೂ ಉಪಯೋಗಿಸಿರಲಿಲ್ಲವೆಂದು ವಿವರಿಸಿದರು. ತಮ್ಮ ಸ್ವಾಭಾವಿಕ ಮೊನೆಗಾರಿಕೆಯಿಂದ ಅವರು ತಮ್ಮ ಕೂಟ ಒಂದು ಧೂರ್ತತನದ ಕಣ್ಕಟ್ಟಾಗಿತ್ತೆಂದು ವರ್ಣಿಸಿದರು. ಅವೆಂತೇ ಇಂಥ ಸರಕಾರಿ [illegible] ಗಳಲ್ಲಿ ನಡೆಯುವ [illegible] ಸೂಚಿಸುತ್ತದೆ [illegible] ಗವರ್ನರ ಜನರಲ್ ಅಕ್ಕಿಯುಪಯೋಗ ಕೂಡ ತಮ್ಮ ಸಮಾರಂಭಗಳಲ್ಲಿ [illegible] ಹೆಚ್ಚು ತತ್ಪರತೆಗೆ ಚಿತ್ರ ಕೊಡುವ ಪಡಿಕ್ಕೊಂಡು ಶಾರಿ ಪಥಿಗರ್ದರ್ಶನ ಮಾಡಿದ್ದಾರೆ.

ಸರಕಾರದವರು ಆಹಾರ ಉತ್ಪಾದನೆಯನ್ನು ಕುರಿತು ಪ್ರತ್ಯಕ್ಷ ಪ್ರಯತ್ನಗಳನ್ನು ಮಾಡಲು ಪ್ರತ್ಯೇಕ ಅಧಿಕಾರಸಂಪನ್ನ ಅಧಿಕಾರಿಯನ್ನು ನೇಮಿಸಿದ್ದು ಈ ದಿಸೆಯಲ್ಲಿ ಸ್ಪಷ್ಟವಾದ ಕ್ರಮವಾಗಿದೆ. ಮಧ್ಯಪ್ರಾಂತದ ಆಹಾರ ಮತ್ತು ಕಂದಾಯ ಮಂತ್ರಿಗಳಾದ ಶ್ರೀ ಆರ್. ಕೆ. ಪಾಟೀಲರಿಗೆ ಆಹಾರ ಕಮಿಶನರ ಹುದ್ದೆ ಕೊಡಲಾಗಿದೆ. ಶ್ರೀ ಪಾಟೀಲರು ಕೇವಲ ರಾಜಕೀಯ ಮುಂದಾಳಾಗಿರದೆ ದೀರ್ಘಕಾಲದ ಆಡಳಿತೆಯ ಅನುಭವವುಳ್ಳವರೆಂದು ಪ್ರಸಿದ್ಧವಾಗಿದೆ. ಅವರು ಹಿಂದೆ ಆಯ್. ಸಿ. ಎಸ್. ಅಧಿಕಾರಿಗಳಾಗಿದ್ದು ೧೯೩೩ ರಲ್ಲಿ ಹುದ್ದೆಗೆ ರಾಜೀನಾಮೆಯಿತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಗಳಾದರು ಕಾಂಗ್ರೆಸ್ ಮಂತ್ರಿಮಂಡಲದ ಉತ್ತಮ ಆಡಳಿತೆಗಾರರೆಂಬ ಕೀರ್ತಿ ಅವರಿಗುಂಟು. ಉಳಿದೆಲ್ಲ ಪ್ರಾಂತಗಳು ಆಹಾರ ಸೀದಾ ಪದ್ಧತಿಗೆ ಶರಣು ಹೋಗಿದ್ದರೂ ಮಧ್ಯಪ್ರಾಂತವೊಂದೇ ಆಹಾರದ ಪೇಟೆಯನ್ನು ತೆರೆದಿಡುವ ಧೈರ್ಯ ಮಾಡಿದೆಯೆಂದು ಇಲ್ಲಿ ಉಲ್ಲೇಖಿಸಬಹುದು. ಲಾರ್ಡ ಬಾಯ್ಡ್ ಓರರ ಸೂಚನೆಯಂತೆ ನಿರ್ಮಿಸಲ್ಪಟ್ಟ ಈ ಹುದ್ದೆಯಿಂದ ಆಹಾರ ಮತ್ತು ಕೃಷಿಶಾಖೆಗಳಲ್ಲಿ ಇನ್ನು ಮೇಲಾದರೂ ಸಹಕಾರವುಂಟಾಗಬಹುದೆಂದು ಆಶಿಸಲಾಗಿದೆ. ಶ್ರೀ ಪಾಟೀಲರಿಗೆ ಮಂತ್ರಿ ಸಮಾನವಾದ ಅಧಿಕಾರವಿತ್ತು ಅವರ ಕೈಗಳನ್ನು ಬಲಗೊಳಿಸಲಾಗಿದೆ. ಕೇಂದ್ರ ಸರಕಾರ ಸ್ವತಃ ಆಹಾರ ಕಮೀಶನರರನ್ನು ನೇಮಿಸಿದ್ದಲ್ಲದೆ ಪ್ರಾಂತಗಳಿಗೂ ಅಂಥ ಹುದ್ದೆಗಳನ್ನು ನಿರ್ಮಿಸಲು ಆಜ್ಞಾಪಿಸಿದೆ. ಹೀಗೆ ಆರು ತಿಂಗಳಿಂದ ಸಭೆ-ಪರಿಷತ್ತು-ಅಂಕೆಸಂಖ್ಯೆಗಳ ಸಂಗ್ರಹ-ಯೋಜನೆಗಳ ರೂಪದಲ್ಲಿದ್ದ ಆಹಾರ ಸ್ವಾವಲಂಬನ ಪ್ರಯತ್ನ ಈಗ ನಿಜವಾಗಿ ಆಚರಣೆಗೆ ಬರುವಂತೆ ಕಾಣುತ್ತದೆ.

### ಎಚ್ಚೆತ್ತ ಕಾಂಗ್ರೆಸ್ಸು

ಅಧಿಕಾರದ "ಮಹಾಭೋಜನ"ವನ್ನುಂಡು ಹೆಬ್ಬಾವಿನಂತೆ ಆಲಸ್ಯದಿಂದ ಒರಗಿದ್ದ ಕಾಂಗ್ರೆಸ್ಸಿಗೆ ಕಲಕತ್ತೆಯ ಚುನಾವಣೆಯ ಸೋಲು ನಿಜವಾಗಿ ತಿವಿದು ಎಚ್ಚರವುಂಟುಮಾಡಿದೆ. ಪಕ್ಷದ ಆಡಳಿತೆಯನ್ನು ಭದ್ರಪಡಿಸುವದಿಷ್ಟೇ ಅಲ್ಲದೆ ಜನತೆಯ ಆದರವನ್ನೂ ಪುನಃ ಸಂಪಾದಿಸುವ ತವಕ ಈಗ ಪ್ರಮುಖ ಕಾಂಗ್ರೆಸ್ಸಿಗರಲ್ಲಿ ಕಾಣಬರುತ್ತಿದೆ. ಕಾಂಗ್ರೆಸ್ಸನ್ನು ಪುನಃ ಸಂಘಟಿಸಲಾಗದಿದ್ದರೆ ಅದನ್ನು ವಿಸರ್ಜಿಸಿ ಬಿಡಬೇಕೆಂಬುದು ಪಂ. ಜವಾಹರರ ನೊಂದ ನುಡಿಯೇ ಹೊರತು ಕಾಂಗ್ರೆಸ್ಸನ್ನು ಸಮಾಧಿಕಾಣಿಸುವ ಇಚ್ಛೆ ಕಾಂಗ್ರೆಸ್ ಪ್ರಮುಖರಿಗೆ ಇಲ್ಲ ಬದಲಾಗಿ ಮೊನ್ನೆ ಯುಕ್ತಪ್ರಾಂತ ಮುಖ್ಯಮಂತ್ರಿ ಶ್ರೀ ಗೋವಿಂದ ವಲ್ಲಭ ಪಂತರು ಪ್ರಾಂತಿಕ ಅಭ್ಯಾಸ ಶಿಬಿರವಲ್ಲಿ ನುಡಿದಂತೆ, ಕಾಂಗ್ರೆಸ್ಸು ವಿಸರ್ಜಿಸಲ್ಪಟ್ಟರೆ ಅದರ ಸ್ಥಾನದಲ್ಲಿ ಅಧಿಕಾರವನ್ನು ತೂಗಿಸಿಕೊಂಡು ಹೋಗಬಲ್ಲ ಪಕ್ಷವಾವುದೂ ಭಾರತದಲ್ಲಿ ಇನ್ನೂ ರೂಪುಗೊಂಡಿಲ್ಲವೆಂದು ಒತ್ತಿ ಹೇಳಲಾಗುತಿದೆ. ಆದರೆ ಕಾಂಗ್ರೆಸ್ಸಿನಲ್ಲಿ ಜನರಿಗೆ ಅಸಂತೋಷಕ್ಕೆ ಕಾರಣವಾಗುವ ಎಷ್ಟೋ ದುರ್ಗುಣಗಳಿವೆಯೆಂದೂ ಅನೇಕ ಕಾಂಗ್ರೆಸ್ಸಿಗರು ಮಂತ್ರಿಗಳೊಡನೆ ತಮಗಿರುವ ಆಪ್ತತ್ವದ ದುರುಪಯೋಗ ಮಾಡಿಕೊಂಡು ಸ್ವಾರ್ಥ ಸಾಧನೆ ಮಾಡುತ್ತಿರುವದು ನಿಜವೆಂದೂ ಬಹಿರಂಗವಾಗಿ ಒಪ್ಪಿಕೊಳ್ಳಲಾಗುತಿದೆ. ಕೇಂದ್ರ ಸಂಪರ್ಕ ಮಂತ್ರಿ ರಫಿ ಅಹಮದ ಕಿಡವಾಯಿಯವರು ಮೇಲ್ಕಂಡ ಅಭ್ಯಾಸ ಶಿಬಿರದಲ್ಲಿ ಇದನ್ನು ಪ್ರಾಂಜಲವಾಗಿ ಅಂಗೀಕರಿಸಿ ಇಂಥವರನ್ನು ಹೊರಹಾಕಿ ಕಾಂಗ್ರೆಸ್ಸನ್ನು ಪರಿಶುದ್ಧಗೊಳಿಸಬೇಕೆಂದು ಸೂಚಿಸಿದರು. ಮೋಪಸನಲಾಲ ಸಕ್ಸೇನಾರೂ ಇವೇ ಮಾತುಗಳನ್ನು ಹೇಳಿದ್ದಾರೆ ಇಂದಿನ ಸ್ಥಿತಿಯಲ್ಲಿ ಕಾಂಗ್ರೆಸ್ಸನ್ನು ಶುದ್ಧಗೊಳಿಸುವ ಈ ಸೂಚನೆಗಳು ಆಚರಣೆಗಿಳಿದಾಗ ಎಷ್ಟು ಫಲಕಾರಿಯಾಗುವವೋ ಹೇಳಲಾಗಲ್ಲ ಕಾಂಗ್ರೆಸ್ಸಿನ ಶುದ್ಧೀಕರಣ ಯಾವ ದ ರೀತಿಯಲ್ಲಿ ಪ್ರಾರಂಭವಾಗುವದೆಂಬುದು ಮುಂದಿನ ಕಾಂಗ್ರೆಸ್ ಕಾರ್ಯಸಮಿತಿಯಲ್ಲಿ ಚರ್ಚೆಗೆ ಬರಲಿರುವ ಕಾಂಗ್ರೆಸ್ ಪುನರ್ಘಟನೆಯ ಮೇಲಿನ ನಿರ್ಣಯಗಳಿಂದ ವಿದಿತವಾಗಬಹುದು

### ಕಲಕತ್ತೆಗೆ ನೆಹರು

ಕಲಕತ್ತೆಯ ಸೋಲನ್ನು ಪ್ರಮುಖರು ಅಸಡ್ಡೆ ಮಾಡಿ ಬಿಡುವದಿಲ್ಲವೆಂಬುದು ಖಂಡಿತವಾಗಿದೆ. ತಮ್ಮ ಅವಿರತ ಕಾರ್ಯಭಾರದ ಮಧ್ಯದಲ್ಲೂ ನಾಳೆ ತಾ. ೧೨ಕ್ಕೆ ಪಂ. ಜವಾಹರಲಾಲರು ಕಲಕತ್ತೆಗೆ ಹೋಗುವದೇ ಇದಕ್ಕೆ ಸಾಕ್ಷಿ. ಬಂಗಾಲ ಕಾಂಗ್ರೆಸ್ಸು ಎಂದಿನಂತೆ ಇಂದಾದರೂ ವೈಯಕ್ತಿಕ ಅಸೂಯೆ ಮಹತ್ವಾಕಾಂಕ್ಷೆಗಳ ಬೇಡರ ಬಲೆಯೇ ಆಗಿದೆ. ಸರದಾರ ಪಟೇಲರಾಗಲಿ ಡಾ. ಪಟ್ಟಾಭಿಯವರಾಗಲಿ ಸುಭಾಷಬಾಬುಗಳ ಪ್ರಕರಣದ ಹುಳಿನೆನಪಿನ ಕಾರಣದಿಂದ ಬಂಗಾಲಿಗಳನ್ನು ಮಾತಾಡಿಸಲು ತಕ್ಕವರೆನಿಸಿಲ್ಲ. ಪಂ. ಜವಾಹರರ ಪ್ರತಿಷ್ಠೆಯೂ ಅಲ್ಲಿ ಕೆಲಮಟ್ಟಿಗೆ ಕುಗ್ಗಿದ್ದರೂನಮ್ಮ ಪ್ರಮುಖರಲ್ಲಿ ಅವರೊಬ್ಬರೇ ಈ ಪ್ರಶ್ನೆಯನ್ನು ತಡವಬಲ್ಲವರಾಗಿದ್ದಾರೆ. ಶರತ್ ಬಾಬುಗಳ ವಿಜಯವೊಂದೇ ಆಗಲಿ ಕಲಕತ್ತೆಯ ಮಧ್ಯಮ ವರ್ಗದವರು ತಮ್ಮ ನಿಸ್ಸರ ಕಡೆ ದಿನೇ ದಿನೇ ಒಲೆಯುತಿರುವದರಿಂದುಂಟಾದ ಭೀಕರ ಅವ್ಯವಸ್ಥೆಗಳು ಮಾತ್ರವೇ ಆಗಲಿ ಕಾಂಗ್ರೆಸ್ ವರಿಷ್ಠರನ್ನು ಬೆದರಿಸಿಲ್ಲ. ಡಾ. ಬಿಧನಚಂದ್ರರಾಯರ ಸರಕಾರಕ್ಕೂ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸುರೇಶ ಮೋಹನ ಘೋಷರಿಗೂ ಇರುವ ವೈಷಮ್ಯ ಬಹಿರಂಗ ಆಹ್ವಾನಗಳ ವರೆಗೂ ಮುಟ್ಟಿದೆ. ಅರೆ-ಕಾಂಗ್ರೆಸ್ಸಿಗ ನಲಿನೀರಂಜನ ಸರಕಾರರ ಕೈಗೆ ತಾತ್ಕಾಲಿಕವಾಗಿ ಅಧಿಕಾರ ಸೂತ್ರವೊಪ್ಪಿಸಿ ಸ್ವಿಝರ್ಲಂಡಿಗೆ ಹೋದ ಡಾ. ರಾಯರ ಅಸ್ವಸ್ಥತೆ ಕೇವಲ ದೈಹಿಕವಾಗಿರದೆ ರಾಜಕೀಯವೂ ಆಗಿರಬಹುದೆಂದು ಸಂದೇಹವಿದೆ. ಈಗ ಸ್ವಿಝರ್ಲಂಡಿನಲ್ಲಿರುವ ವಿಜಯೀ ಶರತ್‌ಬೋಸರು (ಕೆಲವರು ಹೇಳುವಂತೆ ತಮ್ಮ "ಅದೃಶ್ಯ" ತಮ್ಮ ಸುಭಾಷರೊಡನೆ) ಮರಳಿ ಬಂಗಾಲ ಶಾಸನ ಸಭೆಯಲ್ಲಿ ಕುಳಿತಾಗ ಎಷ್ಟೆಷ್ಟು ಜನರು ಅವರೊಡನೆ ವಿರೋಧಿ ಪಕ್ಷದಲ್ಲಿ ಕೂಡುವರೋ ಯಾರಿಗೆ ಗೊತ್ತು? ಪಂ. ನೆಹರೂ ಅವರೂ ಅವರಿಗಿಂತ ಮುಂದೆ ಹೋದ ಕೇಂದ್ರ ಸರಕಾರದ ಪ್ರತೋದ ಸತ್ಯನಾರಾಯಣ ಸಿಂಹರೂ ಬಂಗಾಲ ಕಾಂಗ್ರೆಸ್ಸಿನ ವಿವಿಧ ಪಂಗಡಗಳನ್ನು ಕಂಡು ಮಾತಾಡಿಸಿ ಯಾವುದಾದರೊಂದು ತೀರ್ಮಾನಕ್ಕೆ ಬರುವರೆಂದು ನಂಬಲಾಗಿದೆ.

### ಸಾರ್ವತ್ರಿಕ ಚುನಾವಣೆಯ ಮಾತು

ಕೆಲ ಪ್ರಾಂತಗಳಲ್ಲಿ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಬಿದ್ದ ಹಿಂದೇಟಿನ ಪರಿಣಾಮ ಇನ್ನೊಂದು ಬಗೆಯಲ್ಲಿಯೂ ಪ್ರಕಟವಾಗಿದೆ. ಕಾಂಗ್ರೆಸ್ ಪ್ರಮುಖರು ಜನರ ಮೇಲಿರುವ ತಮ್ಮ ಪ್ರಭಾವವನ್ನು ಪುನಃ ಅಳೆಯಲು ಆತುರರಾಗಿದ್ದಾರೆಂದು ಕಳೆದ ವಾರ ದಿಲ್ಲಿಯಿಂದ "ಬಲ್ಲವರ" ಅಭಿಪ್ರಾಯ ಹೊರಬಿತ್ತು. ಹೊಸ ರಾಷ್ಟ್ರ ಘಟನೆ ನಾಳೆ ಅಕ್ಟೋಬರದೊಳಗೇ ಸಿದ್ಧವಾಗುವದೇನೋ ನಿಜ. ಆದರೆ ೧೭ ಕೋಟಿ ಮತದಾರರನ್ನೊಳಗೊಂಡ ಮಹಾಚುನಾವಣೆಯು ಸಿದ್ಧತೆ ೧೯೫೦ರ ಅಂತ್ಯದೊಳಗೆ ಮುಗಿಯುವದು ಅಸಾಧ್ಯ. ಆದರೆ ಅಷ್ಟರೊಳಗೇ ಒಮ್ಮೆ ಶಕ್ತಿ ಪರೀಕ್ಷೆಗೆ ಪರಿಷ್ಕಾರ ಲವಲವಿಕೆಯಿದೆ. ಮೇಲಾಗಿ ಸದ್ಯದಲ್ಲಿ ಪಾರ್ಲಿಮೆಂಟಾಗಿಯೂ ಶಾಸನಾಧಿಕಾರವನ್ನು ನಡೆಸುತಿರುವ ಘಟನಾಸಮಿತಿ ತನ್ನ ಘಟನಾ ನಿರ್ಮಾಣದ ಮುಖ್ಯ ಕಾರ್ಯ ಮುಗಿದ ನಂತರವೂ ಅಧಿಕಾರದಲ್ಲಿ ಉಳಿಯುವದು ಅಷ್ಟು ಸಮಂಜಸವಲ್ಲ. ಅಲ್ಲದೆ, ಅದರಲ್ಲಿರುವ ಅನೇಕ ಸದಸ್ಯರು (೧೦೦ಕ್ಕೂ ಹೆಚ್ಚು) ಪ್ರಾಂತಿಕ ಶಾಸನಸಭೆಗಳಲ್ಲಿಯೂ ಮಂತ್ರಿಮಂಡಲಗಳಲ್ಲಿಯೂ ಇರುವ ಕಾರಣ ಕೇಂದ್ರದ ಶಾಸನ ಕಾರ್ಯದಲ್ಲಿ ಅವರು ಸರಿಯಾಗಿ ಹೊಣೆಯನ್ನು ನಿರ್ವಹಿಸಲಸಮರ್ಥರೂ ಅನರ್ಹರೂ ಆಗಿದ್ದಾರೆ. ಅದು ಕಾರಣ ಘಟನಾ ಸಮಿತಿಯನ್ನು ವಿಸರ್ಜಿಸಿ ೧೯೩೫ ರ ಕಾಯದೆಯನ್ವಯ ಪ್ರಾಂತಗಳ ಶಾಸನ ಸಭೆಗಳಿಗೆ ಹಳೆ ಮತದಾರ ಪಟ್ಟಿಗಳನ್ನನುಸರಿಸಿ ಆದರೂ ಸಂಯುಕ್ತಮತದಾನದಿಂದ ಚುನಾವಣೆಗಳನ್ನು ನಡೆಸಬೇಕೆಂದೂ ಆ ಹೊಸ ಶಾಸನ ಸಭೆಗಳು ಕೇಂದ್ರದ ಮಧ್ಯಕಾಲೀನ ಪಾರ್ಲಿಮೆಂಟನ್ನು ಆರಿಸಬೇಕೆಂದೂ ಸೂಚಿಸಲಾಗಿತ್ತು. ಇದು ೧೯೫೦ ರ ಆರಂಭದಲ್ಲೇ ನಡೆಯಬೇಕಾಗಿತ್ತು. ಈ ಮಧ್ಯಕಾಲೀನ ಪಾರ್ಲಿಮೆಂಟು ಹೊಸ ಘಟನೆಯನ್ವಯ ಪ್ರೌಢ ಸಂಯುಕ್ತಮತದಾನದಿಂದ ಚುನಾವಣೆಗಳಾಗುವ ವರೆಗೂ ಅಧಿಕಾರದಲ್ಲಿರುವದೆಂದು ಭಾವಿಸಲಾಗಿತ್ತು. ಆದರೆ ಈ ಕಾರ್ಯಕ್ರಮಕ್ಕೆ ಕಾಯದೆಯ ಹಾಗು ಇತರ ವ್ಯಾವಹಾರಿಕ ಅಡಚಣೆಗಳು ಬಹಳವಾಗಿರುವದರಿಂದ ೧೯೫೦ ರ ಕೊನೆಯ ವರೆಗೂ ಹೊಸಚುನಾವಣೆ ಸಾಧ್ಯವಿಲ್ಲೆಂದು ತಿಳಿಯುತ್ತದೆ. ಹಳೆಯ ಮತದಾರ ಯಾದಿಗಳು ಈಗ ಸಂಪೂರ್ಣ ನಿಷ್ಪ್ರಯೋಜಕವಾಗಿವೆ. ಇನ್ನು ಈ ಬಗೆಯ ಮಿತ ಮತದಾನದ ಚುನಾವಣೆಗಳಿಗೆ ಸಾಮ್ಯವಾದಿಗಳು ಆಕ್ಷೇಪವೆತ್ತಬಹುದು. ಆದ್ದರಿಂದ ಘಟನೆ ಸ್ವೀಕೃತವಾದೊಡನೆ ಈಗಿನ ಪಾರ್ಲಮೆಂಟಿನ ೩೦೦ ಮೇಲ್ಪಟ್ಟ ಸದಸ್ಯರಲ್ಲಿ ಪ್ರಾಂತಿಕ ಶಾಸನ ಸಭಾಸದರೂ ಮಂತ್ರಿಗಳೂ ಆದವರು ರಾಜೀನಾಮೆಕೊಟ್ಟು ಅವರ ಸ್ಥಾನದಲ್ಲಿ ಹೊಸ ಸದಸ್ಯರನ್ನು ಪ್ರಾಂತಿಕ ಶಾಸನ ಸಭೆಗಳು ಆರಿಸುವಂತೆ ಮಾಡಿ ಅದೇ ಮಧ್ಯಕಾಲದ ಪಾರ್ಲಿಮೆಂಟಾಗುವದು ಮಾತ್ರ ಸದ್ಯಕ್ಕೆ ವ್ಯವಹಾರ್ಯವಾದ ಉಪಾಯವೆಂದು ಹೇಳಲಾಗಿದೆ.

# ನಿಮ್ಮ ಹೆಬ್ಬೆರಳಲ್ಲಿ ನಿಮ್ಮ ಮೆದುಳಿನ ಗುಟ್ಟು!

## ಬುದ್ಧಿಶಕ್ತಿಯನ್ನಳೆಯುವ ಹೊಸ ಸಾಧನ— ಗಾಂಧೀಜಿಯ ಬುದ್ಧಿಶಕ್ತಿ ೪೭೭ ಅಂಶ, ಚರ್ಚಿಲ್ ೪೪೦, ಪಂ. ಜವಾಹರಲಾಲ ೫೨೦ ಅಂಶಗಳು— ಸರ್ ಸಿ. ವಿ. ರಾಮನ್ನರದು ಅದ್ಭುತ-೬೬೦ ಅಂಶ

ಪ್ರತಿಯೊಂದು ವಸ್ತುವಿಗೂ ಆಕರ್ಷಣ ಶಕ್ತಿಯುಂಟೆಂದು ಭೌತಶಾಸ್ತ್ರಜ್ಞರು ಹೇಳುತ್ತಾರೆ. ಈ ಪರಸ್ಪರಾಕರ್ಷಣದಿಂದಲೇ ಈ ದೃಶ್ಯ ಜಗತ್ತು ಶೂನ್ಯದಲ್ಲಿ ನಿಯಮಾನುಸಾರವಾಗಿ ಸಾಗುತ್ತದೆ. ಆದರೆ ಈಚೆಗೆ ಒಂದು ನೂರು ವರ್ಷಗಳಿಂದ ನಡೆದ ಸಂಶೋಧನೆಗಳು ಒಂದು ಹೊಸ ವಸ್ತುಸ್ವಭಾವವನ್ನು ಬೆಳಕಿಗೆ ತಂದಿವೆ. ಅದೆಂದರೆ, ಪ್ರತಿಯೊಂದು ವಸ್ತುವೂ ಶಕ್ತಿಯನ್ನು ಅಥವಾ ಪ್ರಕಾಶವನ್ನು ಚಿಮ್ಮಿಸುತ್ತದೆ ಅಥವಾ ತನ್ನ ಸುತ್ತಲೂ ಪಸರಿಸುತ್ತದೆ. ಗುಡ್ಡ ಬೆಟ್ಟಗಳು, ಗಿಡ ಮರಗಳು ಎಲ್ಲವೂ ಶಕ್ತಿಪ್ರಸರಣ ಮಾಡುತ್ತಲೇ ಇರುತ್ತವೆ. ಸೃಷ್ಟಿಯ ಅತ್ಯುನ್ನತ ಚಮತ್ಕಾರವಾದ ಬುದ್ಧಿ ಅಥವಾ ಮೆದುಳು ಕೂಡ ಪ್ರಸರಣಶಕ್ತಿಯಿಂದೊಡಗೂಡಿರುವದು ವಿಚಿತ್ರವಲ್ಲ.

೧೮೪೮ ರಲ್ಲಿ ವಿಯೆನ್ನದ (ಆಸ್ಟ್ರಿಯಾ) ಪ್ರೊ. ವಾನ್ ರೀಕೆನ್‌ಬಾಕರು ಮಾನವದೇಹದ ವಿವಿಧ ಅಂಗಗಳ ಪ್ರಸರಣವನ್ನು ಅಳೆಯಬಹುದೆಂದು ತಮ್ಮ ಪುಸ್ತಕದಲ್ಲಿ ಸ್ಥಾಪಿಸಿದ ನಂತರ ಹಲವು ದೇಶಗಳಲ್ಲಿ ಈ ಬಗ್ಗೆ ಹಲವು ವೈಜ್ಞಾನಿಕರು ಪ್ರಯೋಗಗಳನ್ನು ನಡೆಸಿದರು. ಇವುಗಳ ಫಲವಾಗಿ ಮೆದುಳಿನ ಪ್ರಸರಣ ಕ್ರಿಯೆಯ ಛಾಯಾಚಿತ್ರವನ್ನು ತೆಗೆಯುವದೂ ಯಂತ್ರಸಹಾಯದಿಂದ ಅದನ್ನು ಬರಿಗಣ್ಣಿಂದ ನೋಡುವದೂ ಸಾಧ್ಯವೆಂದು ಸಿದ್ಧವಾಯಿತು. ಬೋವಿಸನೆಂಬ ಫ್ರೆಂಚ್ ವೈಜ್ಞಾನಿಕನು ೨೫ ವರ್ಷ ಆಯುಷ್ಯವನ್ನು ಸವೆಸಿ ಮಾನವ ದೇಹದ ವಿವಿಧ ಅಂಗಗಳ ಶಕ್ತಿಪ್ರಸರಣವನ್ನು ಅಳೆಯುವ ಒಂದು ಸರಳವಾದ ಯಂತ್ರವನ್ನು ನಿರ್ಮಿಸಿದನು.

### ಹಸ್ತಸಾಮುದ್ರಿಕ

ಪ್ರಾಚೀನ ಸಾಮುದ್ರಿಕ ಶಾಸ್ತ್ರಜ್ಞರು ಮನುಷ್ಯನ ಜೀವಿತದ ಆಗು ಹೋಗುಗಳು ಅವನ ಅಂಗೈಯಲ್ಲಿ ಬರೆಯಲ್ಪಟ್ಟವೆಯೆಂದು ಹೇಳಿದ್ದು ಕೇವಲ ಕಲ್ಪನಾಬಲದಿಂದಲೋ ಅನುಭವಬಲದಿಂದಲೋ ಹೇಳಲಾಸಲ್ಲ. ಆದರೆ ಶರೀರದ ಪ್ರತಿಯೊಂದು ಅಂಗದ ಪ್ರಸರಣವೂ ಮನುಷ್ಯನ ಹಸ್ತದಲ್ಲಿ ಸಂಡುಗೂಡಿವೆಯೆಂದೂ ಅಂಗೈ ಮತ್ತು ಬೆರಳುಗಳ ಕೆಲ ಸ್ಥಾನಗಳ ಪ್ರಸರಣವನ್ನಳೆಯುವ ಮೂಲಕ ವಿಶಿಷ್ಟ ಅಂಗಗಳ ಆರೋಗ್ಯ ಅನಾರೋಗ್ಯಗಳನ್ನು ಊಹಿಸಿಕೊಳ್ಳಬಹುದೆಂದೂ ಬೋವೀಸನು ಕಂಡುಕೊಂಡನು. ಅಂಗಗಳು ಆರೋಗ್ಯವಾಗಿರುವಾಗ ಈ ಅಳತೆಯಾವಾಗಲೂ ಒಂದೇ ಆಗಿರುತಿದ್ದುದೂ ಅವನ ಗೋಚರಕ್ಕೆ ಬಂದಿತ್ತು. ಅನಾರೋಗ್ಯವಾದ ಅಂಗದ ಪ್ರಸರಣವಿಕಾರದ ಅಳತೆಯ ಮೇಲೆ ಅದಕ್ಕಾದ ರೋಗದ ಸ್ವರೂಪವನ್ನು ಕೂಡ ಊಹಿಸುವದು ಸಾಧ್ಯವೆಂದು "ಅಮೃತ ಬಜಾರ ಪತ್ರಿಕೆ"ಯ ಒಂದು ಲೇಖದಲ್ಲಿ ಈ ವಿಷಯದಲ್ಲಿ ತುಂಬ ಅಭ್ಯಾಸ ಮಾಡಿದ ಡಾ. ಅಸ್ಕರ್ ಬ್ರೂನ್ಲರರು ಬರೆಯುತ್ತಾರೆ.

ಬೇರೆ ಬೇರೆ ಪ್ರಕಾಶಗಳ ಪ್ರಸರಣದ ಅಲೆಗಳ ಉದ್ದ ಬೇರೆ ಬೇರೆ ಬಗೆಯಾಗಿರುವದು ಸಾಮಾನ್ಯಜ್ಞಾನದ ಮಾತು. ಹಾಗೆಯೆ ಸ್ವಸ್ಥ ಅಂಗಗಳ ಪ್ರಸರಣದ ಅಲೆಗಳ ಉದ್ದ ಕೆಂಪು ಪ್ರಕಾಶದ ಅಲೆಗಳ ಉದ್ದದ ಪಟ್ಟಿಯನ್ನು ಹೋಲುತ್ತದೆಯೆಂದು ಬ್ರೂನ್ಲರರು ಕಂಡು ಹಿಡಿದರು. ಆದರೆ ಕೈಯ ಹೆಬ್ಬೆರಳಿನ ಪ್ರಸರಣದ ಅಲೆಗಳ ಉದ್ದವೊಂದು ಸಮಸ್ಯೆಯೇ ಆಯಿತವರಿಗೆ. ಅದರ ಪ್ರಸರಣಶಕ್ತಿ ಅತಿಶಯವಾಗಿತ್ತು ಮಾತ್ರವಲ್ಲ, ಒಬ್ಬೊಬ್ಬರ ಹೆಬ್ಬೆರಳ ಶಕ್ತಿಪ್ರಸರಣದ ಅಳತೆ ಒಂದೊಂದು ಬಗೆಯಾಗಿತ್ತು.

ಹೆಬ್ಬೆರಳಿನ ಕೆಲ ಗುರುತುಗಳ ಮೇಲಿಂದ ಮನುಷ್ಯನ ಆತ್ಮದ ಗುಣವನ್ನು ಹೇಳುವದು ಸಾಮುದ್ರಿಕಶಾಸ್ತ್ರ ಬಲ್ಲವರಿಗೆ ಗೊತ್ತಿದ್ದ ಸಂಗತಿ. ಉದಾಹರಣೆಗಾಗಿ, ಹೆಬ್ಬೆರಳ ಮೇಲಿನ ತುಣಕನ್ನು ಒಂದು ರೇಖೆ ಸುತ್ತುವರಿದಿದ್ದರೆ ಅದು ಕೊಲೆಗಡಕನ ಮನೋವೃತ್ತಿಯ ದ್ಯೋತಕವೆಂದು ಹೇಳಲಾಗಿದೆ. ಡಾ. ಬ್ರೂನ್ಲರರು ಇಂಥ ಹಸ್ತ ರೇಖಾಶಾಸ್ತ್ರದ ಯಾವ ತತ್ವವನ್ನೂ ಅನುಸರಿಸದಿದ್ದರೂ ಮತ್ತು ಅವರ ಸಂಶೋಧನೆಗಳಿಗೂ ರೇಖೆಗಳಿಗೂ ಯಾವ ಸಂಬಂಧವೂ ಇಲ್ಲದಿದ್ದರೂ ಕೈಯ ಹೆಬ್ಬೆರಳಿಗೂ ಮನುಷ್ಯನ ಬುದ್ಧಿಗೂ ಇರುವ ಸಂಬಂಧ ಅಕಸ್ಮಾತ್ತಾಗಿ ಅವರಿಗೆ ಗೋಚರಿಸಿತು. "ಮಂದ ಬುದ್ಧಿ"ಯ ಒಬ್ಬಳು ಹುಡುಗಿ ಅವರ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳಿಸಲ್ಪಟ್ಟಾಗ ಅವಳ ಹೆಬ್ಬೆರಳ ಪ್ರಸರಣ ೬೦ ಅಂಶ (ಬಯೋಮೆಟ್ರಿಕ್) ಗಳಿಗಿಂತಲೂ ಕಡಿಮೆಯಿದ್ದುದನ್ನು ಅವರು ಕಂಡರು. ಕುತೂಹಲದಿಂದ ಅವರು ಅವಳ ಬುದ್ಧಿಶಕ್ತಿಯನ್ನು ಊಹಿಸಲೆಂದು ಕೆಲ ಸಾಮಾನ್ಯ ಪ್ರಶ್ನೆಗಳನ್ನು ಕೇಳಿದರು. ಆದರೆ ಅವಳೆಷ್ಟು ದಡ್ಡಳಾಗಿದ್ದಳೆಂದರೆ "ನಿನ್ನ ಬಲಗಾಲ ಹೆಬ್ಬೆರಳು ಯಾವುದು?" ಎಂಬಂಥ ಪ್ರಶ್ನೆಗಳಿಗೆ ಕೂಡ ಅವಳ ಉತ್ತರ ಬರಬೇಕಾದರೆ ೨ ಮಿನಿಟು ೧೮ ಸೆಕುಂದು ಸಮಯ ಹಿಡಿಯಿತು. ಅದರಲ್ಲಿಯೂ ವಿಚಿತ್ರವೆಂದರೆ ಪ್ರತಿಯೊಂದು ಸಾಮಾನ್ಯ ಪ್ರಶ್ನೆಗೂ ಅವಳ ಉತ್ತರ ಬರಬೇಕಾದರೆ ೨ ಮಿನಿಟು ೧೮ ಸೆಕುಂದುಗಳೇ ಹಿಡಿಯುತಿದ್ದವು!

ಮನುಷ್ಯನ ಅನುಭವಗಳೆಲ್ಲವೂ ಜಾಗೃತ ಚಿತ್ತದಿಂದ ಸುಷುಪ್ತಚಿತ್ತಕ್ಕೆ ಹೋಗಿ ಅಲ್ಲಿ ಜ್ಞಾನಭಂಡಾರವಾಗುತ್ತವೆ. ಒಬ್ಬನ ಬುದ್ಧಿಶಕ್ತಿ ಈ ಜ್ಞಾನಭಂಡಾರದಿಂದ ತತ್ಕಾಲಾವಶ್ಯಕ ಅನುಭವವನ್ನು ತಿರುಗಿ ಜಾಗೃತ ಚಿತ್ತಕ್ಕೆ ತರಿಸಿ ಅದನ್ನು ಉಪಯೋಗ ಮಾಡಿಕೊಳ್ಳುವ ವೇಗವನ್ನೇ ಅವಲಂಬಿಸಿದೆಯೆನ್ನಬಹುದು. ಈ ಜಾಗೃತ-ಸುಷುಪ್ತ ಚಿತ್ತಗಳ ನಡುವೆ ಯಾವಾಗಲೂ ಒಂದು ಅಂತರಾಳವಿರುತ್ತದೆ. ಪ್ರಸ್ತುತ ಹುಡುಗಿಯ ಈ ಚಿತ್ತದ್ವಯಗಳ ನಡುವಿನ ಅಂತರಾಳ ಬಹಳವಾಗಿದ್ದುದರಿಂದ ಭಂಡಾರದಿಂದ ಜ್ಞಾನವಿಶೇಷಗಳನ್ನು ಹೊರದೆಗೆಯಲು ಅಷ್ಟು ಹೊತ್ತು ಹಿಡಿಯುತಿತ್ತೆಂದು ಬ್ರೂನ್ಲರರು ನಿಶ್ಚಯಿಸಿದರು. ಮುಂದೆ ಅವರು ಪರೀಕ್ಷಿಸಿದ ಅನೇಕ ಹೆಬ್ಬೆರಳುಗಳಿಂದ ಅವರ ಈ ಊಹೆ ಸರಿಯಾದುದೆಂದು ನಿಷ್ಕರ್ಷೆಯಾಯಿತು.

### ಸಾಮಾನ್ಯ ಮೆದುಳು— ಅಸಾಮಾನ್ಯ ಮೆದುಳು

ಪ್ರತಿಯೊಬ್ಬನೂ ಜಗತ್ತಿನಲ್ಲಿ ಜನ್ಮವೆತ್ತುವಾಗಲೇ ಅವನ ಮೆದುಳಿನ ಶಕ್ತಿ ನಿಶ್ಚಿತವಾಗಿರುತ್ತದೆ. ಅದು ಹೆಬ್ಬೆರಳಿನ ಪ್ರಸರಣ ಪ್ರಮಾಣದಿಂದ ಅಳೆಯಲ್ಪಡಬಹುದು. ಈ ಶಕ್ತಿಯ ಪ್ರಮಾಣದ ಮೇಲೆಯೆ ಅವನ ಭಾವೀ ಯೋಗ್ಯತೆಯ ಪರಮಾವಧಿಯನ್ನು ನಿರ್ಣಯಿಸಬಹುದು. ಇದಲ್ಲದೆ ಅವನ ಮೆದುಳು ರಚನಾತ್ಮಕ ಪ್ರವೃತ್ತಿಯದೋ ವಿಘಾತಕ ವರ್ಗಕ್ಕೆ ಸೇರಿದ್ದೋ ಎಂದು ಕೂಡ ತಿಳಿದುಕೊಳ್ಳಲು ಸಾಧ್ಯವಿದೆ. ಅವನ ಕಲ್ಪನಾವೈಖರಿ, ಬುದ್ಧಿದಾರ್ಢ್ಯಗಳನ್ನೂ ಊಹಿಸಬಹುದು. ಅವನು ದೃಢ ಬುದ್ಧಿಯಿಂದ ಕಾರ್ಯ ಮಾಡುತ್ತ ಹೋಗುವವನೋ ಚಂಚಲ ವೃತ್ತಿಯವನೋ ಪರಪ್ರತ್ಯಯನೇಯಬುದ್ಧಿಯವನೋ ಎಂದು ಕೂಡ ತಿಳಿಯುವದು ಕಠಿನವಲ್ಲ.

ಮೇಲೆ ಹೇಳಿದ ಬುದ್ಧಿಹೀನ ಹುಡುಗಿ ಅತಿಶಯ ದಡ್ಡ ಜಾತಿಗೆ ಸೇರಿದವಳು. ಆದರೆ ಸಾಮಾನ್ಯ ಜನರ ಬುದ್ಧಿಯ ಪ್ರಸರಣದ ಅಂಕೆ ಅತಿ ನೇರಳೆ ಬಣ್ಣದ ಅಲೆಗಳ ಪಟ್ಟಿಯ ಅಳವಿನಲ್ಲಿ ಬರುತ್ತದೆ. ಯುರೋಪಿನಲ್ಲಿ ಸಾವಿರಾರು ಜನರ ಬುದ್ಧಿಶಕ್ತಿಯ ಅಳತೆಯನ್ನು ಮಾಡಿದಾಗ ಡಾ. ಬ್ರೂನ್ಲರರಿಗೆ ನೂರರಲ್ಲಿ ಎಂಭತ್ತರಷ್ಟು ಜನರ ಬುದ್ಧಿಯ ಅಲೆಗಳು ಬಯೊಮೆಟ್ರಿಕ್ ಮಾನದ ೨೪೦ ಅಂಶಗಳನ್ನು ದಾಟಿ ಹೋಗುವದಿಲ್ಲೆಂದು ಖಚಿತವಾಯಿತು. ಈ ಅಳತೆಯೊಳಗಿರುವ ಜನರ ಬುದ್ಧಿ ಅದೃಶ್ಯ ಅಸ್ಪೃಶ್ಯ ವಸ್ತುಗಳ ಅರ್ಥಾತ್ ಇತರ ಇಂದ್ರಿಯಗಳ ಪ್ರತ್ಯಕ್ಷ ಅನುಭವಕ್ಕೆ ಅತೀತವಾಗಿ ಬುದ್ಧಿಮಾತ್ರಕ್ಕೆ ಗೋಚರವಾಗುವ ವಿಷಯಗಳನ್ನು ಗ್ರಹಿಸಲಾರದು. ತತ್ವಗಳು ಇವರ ಗ್ರಹಣ ಶಕ್ತಿಗೆ ನಿಲುಕದ ಸಂಗತಿ. ತಾವು ಸರ್ವಜ್ಞರೆಂದೂ ತಮ್ಮ ಬುದ್ಧಿಗೆ ನಿಲುಕದ್ದೆಲ್ಲ ಭ್ರಮೆ ಅಥವಾ ಅಂಧಶ್ರದ್ಧೆಯಿಂದೂ ತಿಳಿಯುವ ಇವರು ತಮ್ಮ ತಪ್ಪುಗಳೆಲ್ಲಕ್ಕೂ ಅನ್ಯರು ಹೊಣೆಯೆಂದು ಬಗೆಯುವ ಜಾತಿ.

ಇವರಿಗಿಂತ ಮೇಲಿನ ವರ್ಗವನ್ನು ೨೪೦ ರಿಂದ ೩೩೦ ಅಂಶಗಳ ವರೆಗಿನ ಬುದ್ಧಿ ಪ್ರಸರಣವುಳ್ಳವರೆಂದು ಹೇಳಬಹುದು. ಅವರಿಗೆ ವಿಶ್ವವಿದ್ಯಾಲಯ ಶಿಕ್ಷಣಕ್ಕೆ ಯೋಗ್ಯವಾದ ಬುದ್ಧಿಶಕ್ತಿಯಿಲ್ಲದಿರುವದರಿಂದ ಉಚ್ಚ ಶಿಕ್ಷಣಕ್ಕೆ ಅಂಥವರನ್ನು ಕಳಿಸುವದು ನಿರರ್ಥಕ. ಆದರೆ ಜೀವನದ ವಿವಿಧ ಸಾಮಾನ್ಯ ವೃತ್ತಿಗಳಲ್ಲಿ ಅವರು ಯಶಸ್ವಿಗಳಾಗಬಲ್ಲರು. ಕೈಗಾರಿಕೆಗಳನ್ನು ಮಾಡುವವರು, ಅಂಗಡಿ ಕಾರಕೂನರು, ಯಂತ್ರಜ್ಞರು, ಪ್ರಾಥಮಿಕ ಶಾಲಾ ಶಿಕ್ಷಕರು ಇತ್ಯಾದಿ ಜನರು ಈ ವರ್ಗದಲ್ಲಿ ಸೇರುವರು.

### ಅದ್ಭುತ ಬುದ್ಧಿಶಾಲಿಗಳು

ಸಾವಿರಾರು ಜನರ ಬುದ್ಧಿ ಪರಿಶೀಲನೆಯ ನಂತರ ಡಾ. ಬ್ರೂನ್ಲರರು ೪೦೦ ಅಂಶಗಳಿಗಿಂತಲೂ ಹೆಚ್ಚು ಪ್ರಖರವಾದ ಅಲೆಗಳನ್ನು ಪ್ರಸರಿಸುವ ಬುದ್ಧಿಶಕ್ತಿಯುಳ್ಳವರು ನೂರರಲ್ಲಿ ಒಬ್ಬರಿಗಿಂತಲೂ ಕಡಿಮೆ ಇದ್ದಾರೆಂದು ನಿರ್ಧಾರಕ್ಕೆ ಬಂದರು. ಇದು ಅದೃಶ್ಯ ಅತಿ ನೇರಳೆ ಕಿರಣಗಳ ಅಲೆಗಳಿಗೆ ಸಮಾನವಾಗಿದೆ.

೪೦೦ ರ ಹತ್ತಿರ ಹತ್ತಿರ ಅಥವಾ ಅದಕ್ಕಿಂತ ಹೆಚ್ಚು ಬಯೋಮೆಟ್ರಿಕ್ ಅಂಶಗಳ ಬುದ್ಧಿಶಕ್ತಿಯುಳ್ಳವರು ತೀರ ಕಡಿಮೆಯಾಗಿರುವದರಿಂದ ರಾಷ್ಟ್ರ ರಾಷ್ಟ್ರಗಳ ಜನರ ಬುದ್ಧಿಶಕ್ತಿಯನ್ನು ತುಲನಾತ್ಮಕ ಪರಿಶೀಲನೆಗೊಳಪಡಿಸಲು ಸುಲಭ. ಕೆಲ ಜನಾಂಗಗಳೂ ರಾಷ್ಟ್ರಗಳೂ ತಾವು ಇತರ ಜನಾಂಗಗಳಿಗಿಂತ ಬುದ್ಧಿಶಾಲಿಗಳೆಂಬ ಅಹಂಕಾರವನ್ನು ತಳೆಯುವದುಂಟು. ಆದರೆ ಡಾ. ಬ್ರೂನ್ಲರರ ಪರಿಶೀಲನೆಯಲ್ಲಿ ಇದೆಲ್ಲ ಶುದ್ಧ ಭ್ರಮೆಯೆಂದು ಕಂಡು ಬಂತು. ಸಾಮಾನ್ಯವಾಗಿ ಒಂದು ರಾಷ್ಟ್ರ ಅತಿ ಬುದ್ಧಿಶಾಲಿ ಇನ್ನೊಂದು ದಡ್ಡ, ಎಂದು ತಿಳಿಯಲು ಯಾವ ಆಧಾರವೂ ಇಲ್ಲ. ಬುದ್ಧಿಶಕ್ತಿ ಯಾವುದೊಂದು ಜನಾಂಗಕ್ಕೆ, ವರ್ಣಕ್ಕೆ ಅಥವಾ ರಾಷ್ಟ್ರಕ್ಕೆ ಮಾರಿಹೋದ ಸೊತ್ತಲ್ಲ. ಭಾರತದಲ್ಲಿನ ಬುದ್ಧಿಶಾಲಿಗಳು ಅನ್ಯದೇಶಗಳವರಿಗಿಂತ ಕಡಿಮೆಯಿಲ್ಲ. ಯುರೋಪ್ ಅಮೇರಿಕೆಗಳ ಅಂಧಾನುಕರಣ ಮಾಡಹೊರಟವರು ಇದನ್ನು ಮನಗಾಣಬೇಕೆಂದು ಬ್ರೂನ್ಲರರು ಸೂಚಿಸುತ್ತಾರೆ.

### ಭಾರತೀಯರ ಬುದ್ಧಿಯ ಮಟ್ಟ

ಭಾರತೀಯರ ರೂಢಿ ಸಂಪ್ರದಾಯಗಳು ಯುರೋಪಿಯನ್ನರವುಗಳಿಗಿಂತ ಭಿನ್ನವಾಗಿರಬಹುದಾದರೂ ಬುದ್ಧಿಶಕ್ತಿಯಲ್ಲಿ ಭಾರತೀಯರು ಅವರಿಗಿಂತ ಏನೂ ಕೀಳಲ್ಲ. ಯಾವ ಜ್ಞಾನಶಾಖೆಯಲ್ಲಿಯೂ ಭಾರತೀಯರು ಬಿಳಿಯರೊಡನೆ ಸ್ಪರ್ಧಿಸಲು ಸಮರ್ಥರೇ. ಧೀಮಂತರು ಜಗತ್ತಿನ ಎಲ್ಲೆಡೆಗಳಲ್ಲಿಯೂ ಸಮಾನವಾಗಿ ಹಂಚಿಹೋಗಿದ್ದಾರೆ; ಇಲ್ಲಿಯೂ ಪ್ರಮಾಣಕ್ಕೆ ಅನುಸಾರವಾಗಿ ಧೀಮಂತರ ಸಂಖ್ಯೆಯಿದ್ದೇ ಇದೆ. ಜಗತ್ತು ಬರಿ ದೈಹಿಕ ಶ್ರಮಜೀವಿಗಳ ದುಡಿಮೆಯಿಂದ ಮುನ್ನಡೆಯುತ್ತಿರದೆ ಆಯಾ ರಾಷ್ಟ್ರದ ಧೀಮಂತರ ಬುದ್ಧಿಬಲದಿಂದಲೂ ಅಷ್ಟೇ ಪ್ರಗತಿಹೊಂದುತ್ತದೆ.

ಭಾರತೀಯರು ಹಿಂದೆ ಬೀಳುತ್ತಿರುವ ಒಂದೇ ಬುದ್ಧಿ ಶಾಖೆಯೆಂದರೆ ಇಚ್ಛಾಶಕ್ತಿ ಅಥವಾ ನಿಶ್ಚಯಬುದ್ಧಿ. ಪರಕೀಯರ ಆಳಿಕೆಗೆ ದೀರ್ಘ ಕಾಲದಿಂದ ಒಳಗಾಗಿದ್ದುದರಿಂದ ಅವರು ದೃಢ ನಿಶ್ಚಯದಿಂದ ಕಾರ್ಯತತ್ಪರರಾಗುವದು ಕಡಿಮೆ. ಎಲ್ಲ ಆಜ್ಞೆಗಳಿಗೂ ಬಿಳಿಯರ ಮೋರೆ ನೋಡುವದು ಇಲ್ಲಿಯವರಿಗೆ ರೂಢಿಯಾಗಿಹೋಗಿತ್ತು. ತಮ್ಮ ಧ್ಯೇಯಗಳನ್ನು ನಿರ್ಭಯವಾಗಿ ಪ್ರತಿಪಾದಿಸುವ ಧೈರ್ಯವಿದ್ದವರು ದೀರ್ಘಕಾಲದ ಸೆರೆಮನೆಯನ್ನು ಕಾಣಬೇಕಾಗಿತ್ತು. ಅದರಿಂದ ಇಚ್ಛಾಶಕ್ತಿ, ಶಿಕ್ಷಣ, ಆತ್ಮೋದ್ಧಾರದ ಆಸಕ್ತಿ ಇವುಗಳು ಸಾಮಾನ್ಯವಾಗಿ ಭಾರತೀಯರಲ್ಲಿ ಕಡಿಮೆ ಪ್ರಮಾಣದಲ್ಲಿ ಕಾಣಿಸುತ್ತವೆ. ಸರದಾರ ಪಟೇಲರ ದೃಢನಿರ್ಧಾರ, ಸಾಹಸ, ಕಾರ್ಯತತ್ಪರತೆಗಳನ್ನು ಆದರ್ಶವಾಗಿಟ್ಟುಕೊಂಡು ಭಾರತೀಯರು ಮುಂದೆ ಸಾಗಬೇಕೆಂದು ಡಾ. ಬ್ರೂನ್ಲರರು ಸೂಚಿಸಿದ್ದಾರೆ. ಕುಶಾಗ್ರ ಬುದ್ಧಿಯೊಂದೇ ಜೀವನದಲ್ಲಿ ಯಶಸ್ವಿಗೂ ರಾಷ್ಟ್ರದ ಉನ್ನತಿಗೂ ಸಾಲದು. ಜ್ಞಾನವನ್ನು ಸದುಪಯೋಗಕ್ಕೆ ವಿನಿಯೋಗಿಸುವ ಸಾಹಸ, ಇಚ್ಛೆ ಇರಬೇಕು. ಸ್ಥಿರಬುದ್ಧಿಯಿಲ್ಲದವರು ತಮ್ಮ ಅಪಜಯಗಳಿಗೆ ಹೆರವರ ಒಳಸಂಚೇ ಕಾರಣವೆಂದು ಸಮಾಧಾನ ಹಚ್ಚಿಕೊಳ್ಳುತ್ತಾರೆ. ಇದು ಶುದ್ಧ ಆತ್ಮವಂಚನೆ. ಆದರೆ ಬುದ್ಧಿಪ್ರಸರಣವನ್ನು ಅಳೆದರೆ ಮನುಷ್ಯನ ಒಳಗೆ ಹುದುಗಿದ ಶಕ್ತಿಯ ಪರಿಚಯವಾಗುತ್ತದೆ.

### ಬುದ್ಧಿಶಕ್ತಿಯ ಬೇರೆ ಸಾಧನಗಳು

ಫ್ರೆಂಚ ಶಾಸ್ತ್ರಜ್ಞರ ಸಂಶೋಧನೆಗಳಿಂದ ಮನುಷ್ಯನ ಶಕ್ತಿಪ್ರಸರಣವನ್ನು ಉಪ್ಪು ಹೀರಿಕೊಳ್ಳುತ್ತದೆಯೆಂದು ಗೊತ್ತಾಯಿತು. ಹಿಡಿಯಲ್ಲಿ ಉಪ್ಪು ಹಿಡಿದುಕೊಂಡು ಕೆಲ ಕ್ಷಣಗಳ ನಂತರ ಅದನ್ನು ಪರೀಕ್ಷೆಗೊಳಪಡಿಸಿದರೆ ಅದು ಮಾನವನ ಶಕ್ತಿಪ್ರಸರಣವನ್ನು ಸೂಚಿಸುತ್ತದೆ. ಆದರೆ ತಾವು ಮಾಡಿದ ಸಂಶೋಧನೆಗಳಿಂದ ಮನುಷ್ಯನ ಬುದ್ಧಿ ಶಕ್ತಿಯನ್ನು ಅವನು ಬರೆದ ಚಿತ್ರ, ಅಥವಾ ಅವನು ಸ್ವಹಸ್ತದಿಂದ ಬರೆದ ಪತ್ರವೇ ಮೊದಲಾದ ಸಾಧನಗಳಿಂದ ಗೊತ್ತುಹಚ್ಚಬಹುದಾಗಿದೆಯೆಂದು ತಿಳಿದುದಾಗಿ ಡಾ. ಬ್ರೂನ್ಲರರು ಹೇಳುತ್ತಾರೆ. ಮನುಷ್ಯನು ಇಂಥ ತನ್ನ ಉಪಯೋಗಕ್ಕೊಳಗಾದ ವಸ್ತುಗಳಲ್ಲಿ ಹಲ ಶತಕಗಳ ವರೆಗೆ ಬಾಳುವ ಪ್ರಸರಣಶಾಸನವನ್ನು ಬಿಟ್ಟು ಹೋಗುತ್ತಾನೆ. ಅವರು ಇಂಥ ಪ್ರಸರಣವನ್ನು ಅಳೆಯಲು ಒಂದು ಚಿಕ್ಕ ಯಂತ್ರವನ್ನು ಉಪಯೋಗಿಸಿದ್ದಾರೆ.

ದೀರ್ಘಕಾಲದ ಪ್ರಯೋಗದಿಂದ ವಿವಿಧ ಸ್ವಭಾವದ ಬುದ್ಧಿಗಳನ್ನು ಬೇರ್ಪಡಿಸಿ ವರ್ಗೀಕರಿಸಲು ಸಾಧ್ಯವಾಗಿದೆ. ಈ ಬಗೆಯ ಬುದ್ಧಿಮಾಪನದಲ್ಲಿ ತಪ್ಪಾಗಲು ಎಡೆ ಕಡಿಮೆ. ಪ್ರಶ್ನೋತ್ತರಗಳ ಸ್ವರೂಪದಲ್ಲಿ ಬುದ್ಧಿಮಾಪನ ನಡೆಸುವ ಸದ್ಯದ ಸಾಮಾನ್ಯ ಪದ್ಧತಿಯಲ್ಲಿ ಎಷ್ಟೋ ತಪ್ಪು ತಡೆಗಳಾಗುತ್ತವೆ. (ಇಂಥ ಬುದ್ಧಿಮಾಪನದ ಪದ್ಧತಿಯ ಬಗ್ಗೆ 'ಕರ್ಮವೀರ' ದಲ್ಲಿ ಹಲ ಲೇಖಗಳು ಹಿಂದೆ ಬಂದಿವೆ) ಆದರೆ ಈ ಪದ್ಧತಿಯಲ್ಲಿ ಪ್ರಶ್ನೋತ್ತರಗಳಿಲ್ಲದೆ ಕೇವಲ ಭೌತಬುದ್ಧಿಯ ಅಂತರ್ನಿಗೂಢ ಸಾಮರ್ಥ್ಯವನ್ನು ನಿಷ್ಕೃಷ್ಟ ಮಾಪನಕ್ಕೆ ಗುರಿಪಡಿಸಲು ಸಾಧ್ಯವಾಗಿದೆ. ಬುದ್ಧಿಶಕ್ತಿ ಸ್ಮರಣಶಕ್ತಿಯೆಂದು ಎಷ್ಟೋ ವೇಳೆ ಭ್ರಮಿಸುವದುಂಟು. ಆದರೆ ಇಲ್ಲಿ ಆ ಭ್ರಮೆಗೆಡೆಯಿಲ್ಲ.

ಪ್ರತ್ಯಕ್ಷ ಪರೀಕ್ಷೆಯಿಂದಲೂ ಅವರು ಬಿಟ್ಟುಹೋದ ಪತ್ರಮೊದಲಾದ ಕೃತಿಗಳಿಂದಲೂ ಬುದ್ಧಿ ಪ್ರಸರಣವನ್ನಳೆದು ಡಾ. ಬ್ರೂನ್ಲರರು ಮಾಡಿಕೊಂಡ ಟಿಪ್ಪಣಿಗಳಿಂದ ಕೆಲ ಯುರೋಪಿಯನ್ ಮತ್ತು ಭಾರತೀಯ ಪ್ರಮುಖರ ತುಲನಾತ್ಮಕ ಬುದ್ಧಿಶಕ್ತಿಯ ಕಲ್ಪನೆ ಬರಬಹುದು. ಕೆಳಗೆ ಅಂಥ ಪ್ರಮುಖರ ಒಂದು ಯಾದಿಯನ್ನು ಅಯ್ದುಕೊಟ್ಟಿದೆ. ಇಟಲಿಯ ಪ್ರಸಿದ್ಧ ಚಿತ್ರಕಾರನಾದ ಲೆನಾರ್ಡೊ ಡಾ. ವಿನ್ಸಿಯೇ ಅವರು ಅಳೆದ ಬುದ್ಧಿಗಳಲ್ಲಿ ಅಸಾಧಾರಣವಾಗಿದೆ. ಅದನ್ನು ಮೀರಿ ಯಾರೂ ಇಂದಿಗೂ ಹೋಗಿಲ್ಲ.

### ಯುರೋಪಿಯನ್ ಪ್ರಮುಖರು

| | |
|---|---|
| ಲೆನಾರ್ಡೊ ಡಾ. ವಿನ್ಸಿ (ಚಿತ್ರಕಾರ) | ೭೩೩ ಅಂಶ |
| ಜಾರ್ಜಿಯಾನ್ (ಚಿತ್ರಕಾರ) | ೭೦೦ ,, |
| ಚೀರೋ (ಸಾಮುದ್ರಿಕ ಶಾಸ್ತ್ರಿ) | ೬೭೫ ,, |
| ಆಸ್ಟ್ರಿಯದ ಫೆಡ್ರಿಕ್ ಅರಸ | ೬೫೭ ,, |
| ನೆಪೋಲಿಯನ್ | ೫೯೮ ,, |
| ಶೇಕ್ಸಪಿಯರ್ ಕವಿ | ೫೨೫ ,, |
| ಸ್ಟಾಲಿನ್ | ೫೧೮ ,, |
| ಬರ್ನಾರ್ಡ್ ಶಾ | ೫೧೮ ,, |
| ಎಲಿಜಬೆತ್ ರಾಣಿ | ೫೦೪ ,, |
| ರೂಜವೆಲ್ಟ | ೪೯೫ ,, |
| ಮ್ಯಾಡಮ್ ಕ್ಯೂರಿ (ವಿಜ್ಞಾನಿ) | ೪೯೨ ,, |
| ಮುಸೋಲಿನಿ | ೪೮೮ ,, |
| ಲಾಯ್ಡ್ ಜಾರ್ಜ | ೪೪೪ ,, |
| ಚರ್ಚಿಲ್ | ೪೪೪ ,, |
| ಟಾಲ್‌ಸ್ಟಾಯ | ೪೩೨ ,, |

### ಭಾರತೀಯರು

| | |
|---|---|
| ಸರ್ ಸಿ. ವಿ. ರಾಮನ್ (ವಿಜ್ಞಾನಿ) | ೬೬೦ ಅಂಶ |
| ಸ್ವಾಮಿ ವಿವೇಕಾನಂದ | ೫೨೩ ,, |
| ಪಂ. ಜವಾಹರಲಾಲ | ೫೨೦ ,, |
| ಸರ್ ರಾಧಾಕೃಷ್ಣನ್ | ೫೧೨ ,, |
| ರಾಜಾಜಿ | ೪೯೬ ,, |
| ಮಹಾತ್ಮಾ ಗಾಂಧಿ | ೪೭೭ ,, |
| ರವೀಂದ್ರನಾಥ ಠಾಕೂರ | ೪೭೩ ,, |
| ಮಾಲವೀಯ | ೪೫೦ ,, |
| ವಿಜಯಲಕ್ಷ್ಮಿ | ೪೩೫ ,, |
| ಸರ್ ಸಿ. ಸಿ. | ೪೧೮ ,, |
| ಅಬುಲ ಕಲಮ ಅಝಾದ | ೪೦೦ ,, |
| ಝಫರುಲ್ಲಾ ಖಾನ | ೩೯೫ ,, |
| ಕೆ. ಎಂ. ಮುನಶಿ | ೩೬೫ ,, |
| ವಲ್ಲಭಭಾಯಿ ಪಟೇಲ | ೩೫೦ ,, |
| ಫಜಲುಲ್ ಹಕ್ | ೩೫೦ ,, |

## ವಿಚಾರದ್ವಂದ್ವ

ಈ ತಲೆಕಟ್ಟಿನ ಕೆಳಗೆ ಜನಾಭಿಪ್ರಾಯವನ್ನು ವಾರವಾರವೂ ಪ್ರಕಟಿಸಬೇಕೆಂದಿದ್ದೇವೆ. ಕೇವಲ ಸ್ಥಾನಿಕ ದೂರುಗಳನ್ನು ಬೆಳಕಿಗೆ ತರುವದು ಇದರ ಉದ್ದೇಶವಾಗಿರದೆ ಮಹತ್ವದ ವಿಷಯಗಳ ಮೇಲೆ ಚರ್ಚೆ ನಡೆಸಿ ಜನಾಭಿಪ್ರಾಯವನ್ನು ರೂಪಿಸುವದೇ ಗುರಿಯಾಗಿರುವದರಿಂದ ಇಲ್ಲಿ ಬಂದ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

★

### ಭಾರತಕ್ಕೆ ರಾಷ್ಟ್ರೀಯ ಭಾಷೆ ಯಾವುದಿರಬೇಕು ?

ಕನ್ನಡ, ಹಿಂದೀ, ಬಂಗಾಲಿ, ಮರಾಠಿ, ಗುಜರಾಥಿ, ತೆಲುಗು, ತಮಿಳು, ಪಂಜಾಬಿ ಮುಂತಾದ ಹಲವಾರು ಭಾಷೆಗಳು ಭಾರತದಲ್ಲಿ ನಡೆಯುತ್ತವೆ. ಇವುಗಳಲ್ಲಿ ಹಿಂದೀ ಮಾತನಾಡುವ ಜನರ ಸಂಖ್ಯೆಯೇ ಹೆಚ್ಚೆಂದು ಗೊತ್ತಾಗಿದೆ. ಅದುದರಿಂದ ಹಿಂದಿಯೇ ಭಾರತದ ರಾಷ್ಟ್ರಭಾಷೆಯಾಗಬೇಕೆಂದು ಇಂದು ತಿಳಿದವರೆಂದು ಯಾರಿಗೆ ಅನ್ನುತ್ತೇವೋ ಅವರೆಲ್ಲರು ಅನ್ನುತ್ತಾರೆ. ಇಷ್ಟೇ ಅಲ್ಲ; ಆ ರೀತಿಯಾಗಿ ಎಷ್ಟೋ ಕಾಯದೆ ಕಾನೂನುಗಳ ಭಾಷಾಂತರವು ಕೂಡ ಹಿಂದಿಯಲ್ಲಿ ನಡೆದಿದೆ, ನಡೆಯಲಿದೆ.

ಭಾರತಕ್ಕೆ "ಹಿಂದುಸ್ತಾನ" ವೆಂದೂ ಅನ್ನುತ್ತಾರೆ. ಹಿಂದುಸ್ತಾನದ ಭಾಷೆ "ಹಿಂದೀ" ಇದು ಒಪ್ಪುವಂತಹದೆಂದು ತಿಳಿದಿದ್ದಾರೆ. ಹೇಗೆ ಇಂಗ್ಲಂಡದ್ದು ಇಂಗ್ಲೀಷ, ಫ್ರಾನ್ಸದ್ದು ಫ್ರೆಂಚ, ಜರ್ಮನಿಯದು ಜರ್ಮನ್, ಅದೆಯೋ ಹಾಗೆ ಇದು. ಇಂದಿನ "ಬಹುಮತ" ದ ಕಾಲದಲ್ಲಿ ಹೀಗಾಗುವದು ನ್ಯಾಯವೇ.

ರಾಷ್ಟ್ರಭಾಷೆಯಾಗಲಿಕ್ಕೆ ಹಿಂದಿಯರಲ್ಲಿ ಯಾವ ಗುಣಗಳಿವೆ? ಲಲಿತಕಲೆ, ವಿಜ್ಞಾನ ಇವುಗಳಿಗೆ ಬೇಕಾಗುವ ಶಬ್ದಸಂಪತ್ತಿಯಿದೆಯೆ? ಯಾವ ಭಾರತೀಯ ಭಾಷೆಯ ಸಾಹಿತ್ಯಕ್ಕಿಂತಲೂ ಇದರಲ್ಲಿ ಉಚ್ಚತಮ ಸಾಹಿತ್ಯವಿದೆಯೇ? ಏನು ಅಂತರ್‌ರಾಷ್ಟ್ರೀಯವ್ಯವಹಾರದಲ್ಲಿ ಅದರ ಬಳಕೆ ಅದೆಯೇ? ಇಂದು ಪ್ರೌಢ ಭಾಷೆಯಾಗಲು ಸಾಮರ್ಥ್ಯವಿದೆಯೆ ಅದರಲ್ಲಿ? ಏನು ಬಾಯಿಯಲ್ಲಿ ಆಡಲು ರುಚಿಯೆ? ಕೇಳಲು ಇಂಪೆ? ನೋಡಲು ಕೌತುಕವೆ? ಟೆಲಿಗ್ರಾಮು, ಟೇಲಿಪ್ರಿಂಜನಕ್ಕೆ (?) ಅನುಕೂಲವೆ? ಬರೆಯಲು ಸರಳವೆ?

೧೦೦-೧೫೦ ವರ್ಷಗಳಿಂದ ನಮ್ಮ ದೇಶದಲ್ಲಿ 'ಇಂಗ್ಲಿಷ ಭಾಷೆ' ರಾಷ್ಟ್ರಭಾಷೆಯಾಗಿದೆ. ಸರಕಾರಿ ಕಚೇರಿಗಳಲ್ಲಿ ಇಂಗ್ಲೀಷಭಾಷೆ, ಮಾಧ್ಯಮಿಕ, ಉಚ್ಚಶಾಲೆಗಳಲ್ಲಿ ಇಂಗ್ಲೀಷ ಭಾಷೆ, ವ್ಯಾಪಾರೀಸಂಘ ಸಂಸ್ಥೆಗಳ ಮುಖ್ಯ ಕಾಗದಪತ್ರಗಳು ಇಂಗ್ಲೀಷಿನಲ್ಲಿ ನಡೆದಿರುವದರಿಂದ ಪ್ರಾಂತೀಯ ಭಾಷೆಗಳು ಏನೇ ಇರಲಿ ಪ್ರಾಂತಪ್ರಾಂತಗಳ ವ್ಯವಹಾರಗಳು ಸರಿಯಾಗಿ ನಡೆದಿವೆ. ಇಷ್ಟೇ ಅಲ್ಲ; ಅದರಿಂದ ಪರದೇಶಗಳ ವ್ಯವಹಾರಗಳೂ ನಡೆದಿವೆ. ಇಂದು ನಾವು ಬೇರೆ ಬೇರೆ ದೇಶದವರು ಎಂದು ಅನ್ನುವ ಕಲ್ಪನೆ ಹೋಗಿ ಜಗತ್ತೇ ಒಂದು ದೇಶವಾಗಿದೆ. ಆ ದೇಶದಲ್ಲಿ ಹೆಚ್ಚು ಜನರಿಗೆ ಯಾವ ಭಾಷೆ ತಿಳಿಯುತ್ತದೆಯೋ ಆ ಭಾಷೆ ದೇಶದ್ದು; ಅರ್ಥಾತ್ ರಾಷ್ಟ್ರದ್ದು ಇರಬೇಕೆಂದು ಏನು ಕಲ್ಪನೆ ಅದೆಯೋ ಆ ರೀತಿಯಿಂದ ಇಂದು 'ಇಂಗ್ಲೀಷ' ರಾಷ್ಟ್ರಭಾಷೆಯಾಗಬೇಕು. ಭಾರತದಲ್ಲಿ 'ಹಿಂದೀ' ಎಂದರೆ ಎಷ್ಟು ಬೆಚ್ಚಿಬೀಳುವರೋ ಅಷ್ಟು ಬೀಳುವದಿಲ್ಲ. ಪ್ರಾಥಮಿಕ ಶಾಲ್ಕನೇ ಇಯತ್ತೆ ಪಾಸಾದ ಪ್ರತಿಯೊಬ್ಬ ಮಗುವಿಗೆ 'ಇಂಗ್ಲೀಷ' ಎಂದರೆ ಏನೆಂಬದರ ಕಲ್ಪನೆ ಅದೆ. ಇದನ್ನೇ ಇಲ್ಲಿ ಮುಂದುವರಿಸಿದರೆ ಸಾರಸ್ವತ ಭಾಂಡಾರದಿಂದ ತುಂಬಿ ತುಳುಕುತ್ತಿರುವ ಇಂಗ್ಲೀಷ ಭಾಷೆ ವಿಶ್ವದ ಭಾಷೆ ಆದೀತು. ನಮ್ಮೆಲ್ಲರ ದೇಶ ಒಂದೇ, ಭಾಷೆ ಒಂದೇ ಆಗಿ ಈ ವಿಶ್ವಕರ್ತಾರನಿಗೆ ನಾವೆಲ್ಲರು 'ಮಕ್ಕಳು' ಎಂಬ ಅಭಿಧಾನಕ್ಕೆ ತಕ್ಕವರಾಗುತ್ತೇವೆ.

೧೦೦-೧೫೦ ವರ್ಷಗಳಲ್ಲಿ ಇಂಗ್ಲೀಷು ನಮ್ಮ ಭಾರತದಲ್ಲಿ ಎಷ್ಟು ಪ್ರಸಾರವಾಗಿದೆ? ಅದನ್ನು ನೋಡಿದರೆ ಅದು ತಕ್ಕುದಲ್ಲ; ಇಷ್ಟೇ ಅಲ್ಲ; ನಮ್ಮ ಸಂಸ್ಕೃತಿಯು ಕೂಡ ಹಾಳಾಗಿ ಹೋಗುತ್ತದೆ; ಎಂದು ಆಕ್ಷೇಪಿಸುತ್ತಿದ್ದರೆ ಈ ದೀರ್ಘಾವಧಿಯಲ್ಲಿ ಇಂಗ್ಲೀಷ ರಾಜ್ಯದಾಳಿತಕೆಗೆ ಎಷ್ಟು ವಿಘ್ನಗಳನ್ನು ತಂದೊಡ್ಡಿದ್ದೇವೆಂಬದನ್ನು ಜ್ಞಾಪಿಸಿಕೊಳ್ಳಬೇಕು. ಈ ಭಾಷೆಯ ಸಲುವಾಗಿ ಏನು ಸರಕಾರವು ಕಾರ್ಯ ಮಾಡಿದೆಯೋ ಅಷ್ಟೆ. ಜನತೆ ಮನಃಪೂರ್ವಕವಾಗಿ ಏನು ಮಾಡಿದೆ? ಆದರೂ ಇಂದು ಭಾರತದಲ್ಲೆಲ್ಲ ಅದರ ಪ್ರಭಾವವನ್ನು ನಾವು ಕಾಣಬಹುದು. ಇಂದು ಹಿಂದೀ ರಾಷ್ಟ್ರಭಾಷೆ ಮಾಡಿದರೂ ಕೂಡ ಭಾರತದ ಸಾಮಾನ್ಯ ಜನರ ಭಾಷೆ "ಹಿಂದೀ" ಆಗುವದು ಅಷ್ಟರಲ್ಲಿಯೇ ಇದೆ. ಅಲ್ಲಿಯ ವರೆಗೆ ಮುಟ್ಟುವ ಭಾಷೆಯೆಂದರೆ ಅವರ ತಾಯಿ ನುಡಿ. ಪ್ರಾಂತಿಕ ಭಾಷೆ. ಅವರಿಗೆ ಇಂಗ್ಲೀಷಿನಷ್ಟೇ ಹಿಂದೀ. ನಮ್ಮೆಲ್ಲರಲ್ಲಿ ವಿಶ್ವದ ಕಲ್ಪನೆ ಮೂಡುತ್ತಿರುವಾಗ ಒಂದು ದೇಶದ ಸಂಸ್ಕೃತಿ ಅಡ್ಡ ಬರಲಾರದು. ವಿಶ್ವದಲ್ಲಿಯ ಎಲ್ಲರೂ, ನಾವೆಲ್ಲರೂ ಅಣ್ಣತಮ್ಮಂದಿರು, ಭಾಷೆ ಒಂದು, ಸಂಸ್ಕೃತಿ ಒಂದು, ಜನತೆ ಒಂದು ಹೀಗೆಂದು ನಾವು ಇಂದು ಮುನ್ನುಗ್ಗುತ್ತಿರುವಾಗ ಕೇವಲ ಒಂದು ಭಾಷೆಗಾಗಿ ನಾವು ಹಿಂದಕ್ಕೆ ಸರಿಯುದರಿಂದ ಆಗುವ ಪ್ರಯೋಜನವೇನು? ಹಿಂದಕ್ಕೆ ಸರಿಯುವವರು ಹಿಂದುಸ್ಥಾನದವರು ಎಂದು ಆಡಿಕೊಳ್ಳುವ ಮಾತು ಇಂದು ಅಳಿದು ಹೋಗಲಿ.

"ನಮ್ಮ ಸಂಸ್ಕೃತಿಯನ್ನು ಕಾಯ್ದುಕೊಳ್ಳುವದರ ಸಲುವಾಗಿ, 'ಹಿಂದಿ' ಯನ್ನೆ ರಾಷ್ಟ್ರಭಾಷೆಯನ್ನಾಗಿ ಮಾಡುತ್ತೇವೆ" ಎಂದು ಅಂದರೆ ಹಿಂದೀಯಿಂದ ನಮ್ಮ ಸಂಸ್ಕೃತಿಯು ಉಳಿದು ಬೆಳೆಯಲಾರದು. ಒಂದು ವೇಳೆ 'ಸಂಸ್ಕೃತ' ರಾಷ್ಟ್ರಭಾಷೆಯಾದರೆ ಮಾತ್ರ ನಮ್ಮ ಆರ್ಯ ಸಂಸ್ಕೃತಿಯು ಅಚ್ಚಳಿಯದೆ ಉಳಿದು ಬರುವದು.

ನಾವೆಲ್ಲರು ಭಾರತೀಯರು. ಎಂದಿನಿಂದಲೂ ಆಧ್ಯಾತ್ಮವಾದಿಗಳು. ಜಗತ್ತು, ಪರಮಾತ್ಮಾ ಒಂದೇ ಎಂದು ತಿಳಿದವರು ಎಂದ ಬಳಿಕ ಭಾಷೆ ಕೂಡ ಒಂದು ಎಂದು ಇಂದು ನಾವು ಅಂದರೆ ನಮ್ಮ ಭಾರತದ ಪರಂಪರೆಗೆ ಇಷ್ಟವಾಗುವದು. ಮಹಾತ್ಮಾಜೀಯವರ ವಿಶ್ವದ ಕಲ್ಪನೆಯ ಕನಸು ನನಸಾಗುವದು.

– ಭೀಮಶರ್ಮ ನಾಗನೂರ

× × ×

### ವೇದಗಳು

'ಸುಮಾರು ತಿಂಗಳಹಿಂದೆ 'ವೇದಗಳು' ಎಂಬ ಲೇಖದಲ್ಲಿಯ ಕೆಲವೊಂದು ಅಂಶಗಳು ವಿವರಣೀಯವಿರುವವೇ? ಉದಾ:—೧. ಒಂದೊಂದು ವೇದಕ್ಕೆ ಒಂದೊಂದು ಬ್ರಾಹ್ಮಣವಿದೆಯೆನ್ನುವರು ಅವರು. ಆದರೆ ಋಗ್ವೇದಕ್ಕೆ ಐತರೇಯ ಬ್ರಾಹ್ಮಣ, ಕೌಶೀತಕಿ (ಶಾಂಖಾಯನ) ಬ್ರಾಹ್ಮಣಗಳೆಂದು ಬಲ್ಲವರು ಹೇಳುವಂತೆ, ನಿಜವಾವುದೆಂಬುದನ್ನು ಇನ್ನೊಮ್ಮೆ ವಿವರಿಸಬೇಕಾಗಿದೆ.

೨. ಋಗ್ವೇದಕ್ಕೆ ಹತ್ತು ಮಂಡಲಗಳಿವೆಯೆಂದರೆ, ಆ ಹತ್ತನೇ ಮಂಡಲದ ಮೊದಲಲ್ಲಿ ಹೇಳಿರುವಂತೆ, ಅನುವಾಕಗಳು ಮುಗಿದೊಡನೆ ಮತ್ತೆರಡು ಅನುವಾಕಗಳು ಅಚ್ಚಾಗಿವೆ. (ನಿರ್ಣಯಸಾಗರ ಛಾಪಖಾನೆ-ಮುಂಬಯಿ ಪ್ರತಿ). ಇವೆರಡು ಅನುವಾಕಗಳು ಹೆಚ್ಚಿಗಿದ್ದು ಹತ್ತನೇ ಮಂಡಲಕ್ಕೆ ಸೇರಿರುವವುಗಳೋ, ಬೇರೆಡೆಯಿಂದ ಆಯ್ದು ಸಂಗೃಹೀತವಾಗಿ ಆಯೆಡೆಯಲ್ಲಿ ಸಂಕಲಿತವಾದುವೋ? ಎಂಬಿತ್ಯಾದಿ ಸಪ್ರಮಾಣ ವಿವರಣೆಯನ್ನು ತಜ್ಞರು ಪ್ರಕಟಿಸಬೇಕಾಗಿ ವಿನಂತಿ. ಆಯೆರಡು ಮಿಕ್ಕ ಅನುವಾಕಗಳು ಆರಂಭವಾಗುವ ಹಿಂದಣ ಅನುವಾಕದ ಕೊನೆಗೆ ಅಗ್ನಿಸ್ತುತಿಯಿಂದ ಹತ್ತುಮಂಡಲದ ಸಂಪೂರ್ತಿಯು ಮುದ್ರಿಕೆಗೊಂಡಂತೆ ಕಾಣುವುದೆನ್ನುವುದನ್ನು ಇಲ್ಲಿ ಸೂಚಿಸುವೆವು.

೩. ವಾಮನಾವತಾರದ ಅಂದರೆ ಪಂಚಾವತಾರಗಳ ನಂತರ ಋಗ್ವೇದವು ರಚಿತವಾಗಿರಲಿಕ್ಕೆ ಸಾಕೆಂದೂಹಿಸುವಂತೆ ಇಂದ್ರೋಪೇಂದ್ರರ ಸ್ತುತಿರೂಪ ಋಕ್ ಇರಬೇಕೆಂದು ಊಹಿಸುವರಂತೆ! ಆದರೆ, ಈ ತರದ ಅರ್ಥೋಹೆಗಳು ನಿಜವಾಗಿರಲಾರವು, ಹಾಗೂ ವೃತ್ರ (ಅವರಿರದ ಅರ್ಥದಂತೆ) ಇಂದ್ರರ ಕಾಳಗದ ವರ್ಣನೆಯು ಆದಿರಬೇಕೆಂದು ಬಗೆಯಬಹುದೇ?

ಸುರತ್ಕಲ್ ಕೆ. ವೆಂಕಟರಾಮಾಚಾರ್ಯ

#### ಉತ್ತರಗಳು

ಮೇಲಿನ ಪ್ರಶ್ನಗಳಿಗೆ ಈ ವಿಷಯಗಳಲ್ಲಿ ಅಧಿಕಾರವಾಣಿಯಿಂದ ಮಾತಾಡಬಲ್ಲ ಡಾ. ಕೃಷ್ಣಮೂರ್ತಿಯವರಿಂದ ನಾವು ಉತ್ತರ ತರಿಸಿಕೊಂಡದ್ದು ಇಂತಿದೆ:

೧. ಸಾಂಪ್ರದಾಯಿಕವಾಗಿ 'ಮಂತ್ರಬ್ರಾಹ್ಮಣಯೋರ್ವೇದ ನಾಮಧೇಯಮ್' ಎಂದು ಹೇಳುವುದುಂಟು. ಮಂತ್ರ ಸಂಹಿತೆಗಳು ನಾಲ್ಕೇ ಆದರೂ ಬೇರೆ ಬೇರೆ ಶಾಖೆಗಳಲ್ಲಿ ಬೇರೆ ಬೇರೆ ಬ್ರಾಹ್ಮಣಗಳು ಇದ್ದು ಇವುಗಳ ಸಂಖ್ಯೆಯು ಅಪರಿಮಿತವಾಗಿವೆ. ಸಾಮಾನ್ಯವಾಗಿ ಈ ಅನೇಕ ಬ್ರಾಹ್ಮಣಗಳನ್ನು ಒಂದಿಲ್ಲೊಂದು ಪ್ರಸಿದ್ಧ ಸಂಹಿತೆಯ ಕೆಳಗೆ ತರುವುದು ರೂಢಿ. ಯಾವ ಸಂಹಿತೆಗೂ ನಿರ್ದಿಷ್ಟ ಸಂಖ್ಯೆಯ ಬ್ರಾಹ್ಮಣಗಳಿರುವವೆಂಬ ನಿಯಮವಿಲ್ಲ. ಉಪಲಬ್ಧ ಬ್ರಾಹ್ಮಣಗಳ ಸಂಖ್ಯೆಯನ್ನು ಮಾತ್ರ ನಾವು ತಿಳಿಸಬಹುದಾಗಿದೆ, ಅಷ್ಟೆ. ಉದಾಹರಣೆಗೆ, ಋಗ್ವೇದಕ್ಕೆ ಈಗ ಐತರೇಯ ಹಾಗು ಕೌಶೀತಕಿ ಬ್ರಾಹ್ಮಣಗಳು ಉಪಲಬ್ಧವಿವೆ.

೨. ಋಗ್ವೇದದ ಋಕ್ಕುಗಳನ್ನು ಎರಡು ವಿಧವಾಗಿ ವಿಭಾಗ ಮಾಡುವುದು ಸಂಪ್ರದಾಯ:— (೧) ಅಷ್ಟಕ-ಅಧ್ಯಾಯ-ವರ್ಗ; (೨) ಮಂಡಲ-ಅನುವಾಕ-ಸೂಕ್ತ. ಒಟ್ಟು ಋಗ್ವೇದ ಸಂಹಿತೆಯಲ್ಲಿ ಎಂಟು ಅಧ್ಯಾಯಗಳು, ಅಥವಾ ಹತ್ತುಮಂಡಲಗಳಿವೆ. ಒಟ್ಟು ಋಕ್ಕುಗಳ ಸಂಖ್ಯೆ ೧೦೨೮. ಹತ್ತನೆಯ ಮಂಡಲದ ಕೊನೆಯ ಸೂಕ್ತದ ಬಗೆಗೆ ಯಾವ ಸಂದೇಹಕ್ಕೂ ಎಡೆಯೇ ಇಲ್ಲ.

"ಸಂ ಸಮಿದ್ಯುವ ಸೇ ವೃಷನ್ನಗ್ನೇ
ವಿಶ್ವಾನ್ಯರ್ಯ ಆ।
ಇಳಸ್ಪದೇ ಸಮಿಧ್ಯಸೇ ಸ ನೋ
ವಸೂನ್ಯಾಭರ ॥

ಎಂಬ ಋಕ್ಕಿನಿಂದ ಪ್ರಾರಂಭವಾಗುವ ನಾಲ್ಕು ಋಕ್ಕುಗಳೇ ಋಗ್ವೇದ ಸಂಹಿತೆಯ ಕೊನೆಯ ಮಂತ್ರಗಳು. ಈ ಋಕ್ಕುಗಳನ್ನು ೮ ನೆಯ ಅಧ್ಯಾಯ, ೮ ನೆಯ ಅಷ್ಟಕ, ೪೯ ನೆಯ ವರ್ಗವೆಂದಾಗಲಿ ಇಲ್ಲವೆ ೧೦ನೆ ಯ ಮಂಡಲ, ೧೨ ನೆಯ ಅನುವಾಕ, ೧೯೧ ನೆಯ ಸೂಕ್ತವೆಂದಾಗಲಿ ವ್ಯವಹರಿಸಬಹುದು. ಮೊದಲನೆಯ ಮಂಡಲದಲ್ಲಿಯೂ ೧೯೧ ಸೂಕ್ತಗಳೇ ಇರುವುದನ್ನು ನೋಡಿ ಹತ್ತನೆಯ ಮಂಡಲದಲ್ಲಿಯೂ ಅದೇ ಸಂಖ್ಯೆಯ ಸೂಕ್ತಗಳನ್ನು ಸಂಹಿತಾಕಾರರು ಸೇರಿಸಿರಬೇಕೆಂಬುದು ಪಾಶ್ಚಾತ್ಯ ವಿದ್ವಾಂಸರ ಮತ. ಇದು ಸರಿಯೆನಿಸುತ್ತದೆ.

೩. ಅವತಾರಗಳ ಕಲ್ಪನೆಯು ವೈದಿಕ ಸಂಹಿತೆಗಳಲ್ಲಿ ಬರುವುದೇ ಇಲ್ಲ. ಈಚಿನವರು ಪೌರಾಣಿಕ ಕಲ್ಪನೆಗಳಲ್ಲಿ ವೈದಿಕಾಧಾರಗಳನ್ನು ಧಾರಾಳವಾಗಿ ಬಳಸಿಕೊಂಡಿದ್ದಾರೆ. ಸಂಶೋಧಕರು ತಮ್ಮ ತಮ್ಮ ಬುದ್ಧಿಗನುಸಾರವಾಗಿ ವೈದಿಕ ಮಂತ್ರಗಳ ಅಂತರಾರ್ಥಗಳನ್ನು ಹುಡುಕುತ್ತ ಹೊರಡುವರು. ಸತ್ಯವು ದೇವರೊಬ್ಬರಿಗೇ ಗೊತ್ತು.

ಮೈಸೂರು (ಡಾ) ಕೆ. ಕೃಷ್ಣಮೂರ್ತಿ

## ಎಸ್ಕಿಮೊ ಭಾಷೆ — ಸಂಸ್ಕೃತ

(ಲೇ- ಸುಬ್ರಾವ ಕೃಷ್ಣಹೆಗಡೆ, ಮತ್ತು ಕಾನಗೋಡ್, ಶಿರ್ಶಿ)

ಎಸ್ಕಿಮೋ ಭಾಷೆಯೆಂದರೆ ಎಸ್ಕಿಮೋ ಎನ್ನುವ ಜನರಾಡುವ ಭಾಷೆ. ಎಸ್ಕಿಮೋ ಜನರೆಂದರೆ ಉತ್ತರ ಯುರೋಪದ "ಗ್ರೀನ್ ಲ್ಯಾಂಡ್" ಶೀತಕಟಿಬಂಧ ಪ್ರದೇಶದ ಕಾಡು ಜನಾಂಗ. ಇವರಿರುವ ಹಿಮಾಚ್ಛಾದಿತ ಪ್ರದೇಶದಲ್ಲಿ ಊರುಗಳಿಲ್ಲ. ಹಿಮದ ಬೆಂಡೆಗಳ ಒಳಭಾಗವೆ ಎಸ್ಕಿಮೋ ಜನರ ಅರಮನೆ. ಅಲ್ಲಿ ಮಳೆಗಾಲವಿಲ್ಲ· ಕಾರಣ ಬೆಳೆಗಾವಲು ಇಲ್ಲ. ಬೇಸಿಗೆ ಆರು ತಿಂಗಳು ಹಗಲು. ಚಳಿಗಾಲದ ಆರು ತಿಂಗಳು ರಾತ್ರಿ. ಇಷ್ಟು ವಿಚಿತ್ರ ಪ್ರದೇಶದಲ್ಲಿಯ ಅವರ ಆಹಾರವೆಂದರೆ "ವಾಲರಸ" ಮುಂತಾದ ಅಲ್ಲಿಯ ಪ್ರಾಣಿವರ್ಗ. ನಿಸರ್ಗದೇವತೆಯ ಕಾಡುಮಕ್ಕಳಾದ ಎಸ್ಕಿಮೋ ಜೀವನದ ಇಂಥ ವೈಚಿತ್ರ್ಯಕ್ಕಿಂತ ಅವರಭಾಷೆ ಭಾರತೀಯರಾದ ನಮಗೆ ಒಳ್ಳೇ ಆಶ್ಚರ್ಯಜನಕವಾಗಿದೆ. ಎಸ್ಕಿಮೋ ಭಾಷೆಯ ಮರುಭೂಮಿಯಲ್ಲೂ ಸಂಸ್ಕೃತ ಶಬ್ದಗಳೆಂದರೆ ಇನ್ನೂ ಹೆಚ್ಚಿನ ಆಶ್ಚರ್ಯವಲ್ಲವೆ?

ಕೆಲವರು ಈ ವಿಷಯ ಅಸಂಭವವೆಂದು ಅಲ್ಲಗಳೆಯುತ್ತಾರೆ. ಆದರೆ ಮೇಲಿನ ಎರಡೂ ಭಾಷೆಗಳ ಮೂಲಶಬ್ದರೂಪ-ಅಪಭ್ರಂಶಗಳ ಏಕರೂಪತೆ ಮುಂತಾದವುಗಳ ಸೂಕ್ಷ್ಮನಿರೀಕ್ಷೆಯಿಂದ ಈ ಉಭಯಭಾಷಾ ಸಂಬಂಧವನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ಸಂಸ್ಕೃತದ ಪ್ರಾಣಶಬ್ದ. ಇದರ ಮೂಲಧಾತು ಅನ್ ಆಗಿರುವಾಗ ಎಸ್ಕಿಮೋ ಭಾಷೆಯಲ್ಲಿ ಇದೇ ಅರ್ಥವನ್ನು ಅನುಸರಿಸಿಯೇ "ಅನೋರೆ" ಎಂತಾಗುವದು. ಇದರಲ್ಲಿಯೂ "ಅನ್ನೋರೆ" ಅನೇನೇಕ, ಮುಂತಾದ ವಿಕೃತ ಶಬ್ದರೂಪಗಳಾಗಿವೆ. ಸಂಸ್ಕೃತದ "ಅವ" (ಸಹಾಯಾರ್ಥವುಳ್ಳ) ಎಂಬ ಧಾತುರೂಪಕ್ಕೆ ಎಸ್ಕಿಮೋದಲ್ಲಿ ಅವಗ ಎಂತಾಗಿದೆ. ಇದೇ ವಿಕೃತ ಶಬ್ದವೆಂದರೆ "ಅವಗವ."

ಈ ಮೇಲಿನಂತೆ ಎಸ್ಕಿಮೋ ಸಂಸ್ಕೃತ ಭಾಷೆಯ ಅನೇಕ ಶಬ್ದಗಳ, ಬಹುರೀತಿಯಿಂದ ಭಾಷಾಸಾಮೀಪ್ಯವನ್ನು ನಿರ್ದೇಶಿಸುತ್ತಿರುವಾಗ ಅದನ್ನು ಅಲ್ಲಗಳೆಯುವದಾದರೂ ಹೇಗೆ? ಕಾಲನ ಅಗಾಧತೆಯಲ್ಲಿ ಇನ್ನೂ ಅದ್ಭುತ ವೈಚಿತ್ರ್ಯಗಳು ಹುದುಗಿರಬಾರದೇಕೆ? ಈ ದೃಷ್ಟಿಯಿಂದ ಒಪ್ಪಿಕೊಂಡು ಕೆಲಭಾಷಾಶಾಸ್ತ್ರಜ್ಞರು ಎಸ್ಕಿಮೋದಲ್ಲಿ ಐದು ಭಾಷೆಗಳನ್ನಾಗಿ ವಿಂಗಡಿಸಿ (ಗ್ರೀನ್‌ಲ್ಯಾಂಡ್, ಅಪ್ರೆದೊ ಮೆಕೆಂಜೀ, ಅಲಸ್ಕಾ, ಏಶಿಯಾಯಿ, ಈ ಐದು ಎಸ್ಕಿಮೋ ಭಾಷಾ ಪರಿಭೇದಗಳು) ಇವೆಲ್ಲ ಸಂಸ್ಕೃತದ ಮೂಲಾಧಾರದಿಂದ ಜೀವಿಸಿದವೆಂದು ಹೇಳುತ್ತಿರುವದು ಅಸಮಂಜಸವಲ್ಲ.

ಇದರಿಂದ ಸಂಸ್ಕೃತದ ವಿಶ್ವವ್ಯಾಪಕತೆಯು ಧ್ವನಿತವಾಗುತ್ತದೆ. ಪಾಶ್ಚಾತ್ಯ ಭಾಷಾ ವಿಜ್ಞಾನಿ ಶ್ಲೇಗಲ್ಲನಂಥವರು ಸಂಸ್ಕೃತವು ಒಂದು ಕಾಲದಲ್ಲಿ ರಾಷ್ಟ್ರಭಾಷೆಯಲ್ಲ, ವಿಶ್ವಭಾಷೆಯಾಗಿತ್ತೆಂದು ಹೇಳುವ ಮಾತಿನ ಸತ್ಯತೆ ಇದರಿಂದ ಅರ್ಥವಾಗುವದು.

ಭಾರತದ ನಮ್ಮ ಮಟ್ಟಿಗೆ ಸಂಸ್ಕೃತವು ವಿಶಿಷ್ಟ ಆವಶ್ಯಕ ಭಾಷೆ. ವಿಶ್ವವಲಯದ ಒಂದು ತುದಿಯಲ್ಲಿಯ ಎಸ್ಕಿಮೋ ಜನಾಂಗದಲ್ಲಿಯೂ ಇದರ ಪ್ರಭಾವವೆಂದರೆ ಸಾಮಾನ್ಯವೇ? ಮಧ್ಯಏಶಿಯಾದಿಂದ ಯುರೋಪದೆಡೆಗೆ ಹೊರಟ ಆರ್ಯಪೀಳಿಗೆಯೊಂದು ಕಾಲ್ಮಹಿಮೆಯಿಂದ ಎಸ್ಕಿಮೋ ಸ್ಥಿತಿಗಿಳಿದಿದೆಯೇ? ಅಥವಾ ಆರ್ಯರ ಪ್ರಭಾವಗೊಂಡ ಜನಾಂಗವೇ ಪತನದ ಕೊನೆಯಾಗಿ ಹೀಗೆ ಕಾಣಿಸುವದೇ? ಅಂತೂ ಈ ರೀತಿಯ ಘನಿಷ್ಠ ಸಂಬಂಧವಿರಲೇಬೇಕೆಂದು ಸಂಸ್ಕೃತ ಬಿಂಬಿತ ಎಸ್ಕಿಮೋ ಭಾಷೆಯೇ ಅನ್ನುವಂತಿದೆ. ಉಭಯಭಾಷೆಗಳ ಸಂಬಂಧ ತೋರಿಸ್ಸುವ ಸಂಕ್ಷಿಪ್ತಶಬ್ದಪರಿಚಯಬೇಕಾದರೆ ನೋಡೋಣ.

| ಸಂಸ್ಕೃತ— | ಎಸ್ಕಿಮೋ |
|---|---|
| ಅಗ್ನಿ | ಲಾ ಇಂಗ್ನೇಕ, ಇಗ್ನೇಕ, ಎಕ್ನೇಕ |
| ಕರ್ಕಟಿ | ಕಂಕೊಲ, ಕಂಕೋಶ |
| ನಮಃ | ನುಇಯಾ ನುವುಜಾ |
| ಸಿಕತಾ | ಸಿಗ್ನಕ ಸಿತ್ನಗ |
| ಸನೋತಿ | ಸನಪೋಕ ಸನ್ನಪೋಕ |
| ಸಮ್ಯ | ಸಮಿಕ ಸೇಮಿಕ |


ಈ ರೀತಿ ವಿಚಿತ್ರ ವ್ಯಾಪಕಶೀಲ ಸಂಸ್ಕೃತವು ಭಾರತದ ಅಂತರ್ಜೀವವೇ ಆಗಿರುವಾಗ ಇಂದಿನ ಭಾರತವು ಸಂಸ್ಕೃತವನ್ನು ತಕ್ಕರೀತಿಯಿಂದ ಬೆಳೆಸಿ ಬಳಸಿಕೊಳ್ಳುವದು ಅವಶ್ಯ ಕರ್ತವ್ಯ, ಯೋಗ್ಯಭೂಷಣ.

ಸಂಸ್ಕೃತವನ್ನುನಮ್ಮ ಜೀವನಕ್ಕೆ ಹೊಂದಿಸಿಕೊಳ್ಳುವ ಹೊಣೆ, ಅಳವಡಿಸಿಕೊಳ್ಳುವ ಕಾರ್ಯಭಾರ ಮುಂತಾದ ಭವಿಷ್ಯೋತ್ತರವೆಲ್ಲ ಆದರ್ಶ ಜೀವನದ ಬೆಳಕು ಬಯಸುವ ಪ್ರತಿ ಭಾರತೀಯನ ಕೈಯಲ್ಲಿದೆ, ಅವಲಂಬಿಸಿದೆ.

# ಪಾರ್ಲಿಮೆಂಟಿನ ಭವನಗಳು

ಲಿ... ಭವನಗಳು
... ಎರಡು ಸಲ
...ರ್ಲಿಮೆಂಟಿನ
...ದ್ದ ಮೂಲ
... ಗಾಹುತಿಯಾ
... ಹೊಸದಾಗಿ
... ರಲ್ಲಿ ಉದ್ಘಾಟಿ
... ಮೇ ೧೦ ನೇ
...ಗಳು ಕಾಮನ್ಸ್
...ಡಿದವು. ಆಗ
...ತ್ರಣದ ಮೇರೆಗೆ
... ಭವನಕ್ಕೆ ವರ್ಗಾ
... ಸಭೆ ಅರಸನ
...ಾಯಿತು. ಈಗ
... ಶಿಲ್ಪಶಾಸ್ತ್ರಿಯ
... ಹೊಸ ಭವನದ

... ಕಟ್ಟಲ್ಪಡುವ
...ಕ ಪದ್ಧತಿಯನ್ನು
...ವಸ್ಥೆ, ಬೆಳಕು,
... ವಿಷಯಗಳಲ್ಲಿ
...ದೆ. ಎರಡುಕೋಟಿ
...ಖಿರುವ ಈ ಭವನ



ಹೊಸ ಕಾಮನ್ಸ್ ಭವನದ ನಕ್ಷೆ.



ಲಂಡನ್ನಿನ ಬ್ರಿಟಿಶ ಪಾರ್ಲಿಮೆಂಟಿನ ಹಳೆ ಭವನ: ಎಡಕ್ಕೆ ಲಾರ್ಡ್ಸ್ ಭವನ ಮತ್ತು ವಿಕ್ಟೋರಿಯಾ ಗೋಪುರ, ಬಲಕ್ಕೆ ಕಾಮನ್ಸ್ ಭವನ ಮತ್ತು ಗಡಿಯಾರದ ಗೋಪುರ.



ಕಾಮನ್ಸ್ ಸಭೆಯು ಸದ್ಯದ ಭವನ (ಹಳೇ ಲಾರ್ಡ್ಸ್ ಭವನ) ಅಧ್ಯಕ್ಷನ ಆಸನ ಎದುರಿಗೆ ಕಾಣಿಸುತ್ತದೆ.

## ...ರತ

...ಕೀಯ

... ಮಾತ್ರ. ಆದರೆ
...ು, ರೂಜವೆಲ್ಟರ
...ು ಸಮಯದಲ್ಲಿ
...ರು ಮಾಡಿದಂತೆ,
...ಸಿದ್ದಾರೆ. ಅವರು
...ಕ್ಷಿಸಲೂ ಒಲ್ಲರು,
...ಾರ್ಯಗಳಿಗೆ ಸಾಲ
... ಜವಾಹರಲಾಲರ
... ಅಜ್ಞಾತ ಭವಿ
...ಬೇಕಾಗು ಅವರ
... ತೃಪ್ತಿಪಡಿಸಲು
...ಲಕಾರಿಯಾಗಿಲ್ಲ.
...ರಂಭಿಸಿದ್ದಾರೆ.
...ಮೇಳವಿಲ್ಲ.
...ತಿಎಷ್ಟು ಮತ್ತು
...ವಸ್ಥೆ ಅಕ್ಷಮವೂ
...ಲ ಪ್ರದೇಶಗಳಲ್ಲಿ
...ಯನ್ನೂ ಕಳೆದು

...ತೆಕು

...ಗೆ ಅನಿವಾರ್ಯವೇ
...ರತೆ ಜಗದ್ವ್ಯಾಪಿ
...ರಿಗೆ ಅರ್ಥವಾಗು
...ಕ್ಕಿಂತ ಮೊದಲೇ
... ವರ್ಷಗಳಿಂದ
...ತ್ತೆಂದೂ ಒಪ್ಪ
... ಪೂರೈಕೆ ಖಾತೆ
...ಂಬಿಹೋಯಿತು.
...ರೂ ಲಂಚಗುಳಿ
...ಂಗ್ರಾಮದ ಕಾಲ
...ತಿಶಯವಾಗಿತ್ತು.
...ವಳನ್ನೂ ಕಾಂಗ್ರೆ
...ಸಿದ್ದರು-ಅಧಿಕಾರ
...ಾಂತರಗಳು
... ಅದಕ್ಕಾ
...ಗಳಿಗೆ ಸರಳ
...ತ್ರಿಗಳ ಮತ್ತು
...ಳ ಕಾರಕೂನರದ
...ದು ವಿಧಿಸಿದ್ದರು.
...ನ್ನು ಅಧಿಕಾರಕ್ಕೆ
...ತು. ವರ್ಷಾಂತ
...ಫಲ ಬೇಕೆಂದು
... ನೆಯ ಘಟಕ್ಕೆ

## ಮೂಲೆ ಮೂಲೆಗಳಿಂದ

**ಜಾಗತಿಕ ಬ್ಯಾಂಕು** ಭಾರತಕ್ಕೆ ೧೨೫ ರಿಂದ ೧೫೦ ದಶಲಕ್ಷ ಡಾಲರುಗಳ ವರೆಗೆ ಮೊದಲನೆಯ ಕಂತಿನ ಸಾಲವೆಂದು ಕೊಡಲು ಮನಸ್ಸು ಮಾಡಿದ್ದು ಸಂಬಲರ್ಹವಾದ ಕಡೆಯಿಂದ ತಿಳಿದು ಬರುತ್ತದೆ. ಸುಮಾರು ೩-೪ ತಿಂಗಳುಗಳಲ್ಲಿ ಈ ಸೊಬಲಗು ಭಾರತದ ಖರ್ಚಿಗೆ ಸಿಗುವುದು. ಈ ಹಣ ರೈಲು ಮಾರ್ಗದ ಸುಧಾರಣೆ, ಕೆಲ ಒಕ್ಕಲುತನದ ಮತ್ತು ನೀರಾವರಿಯ ಯೋಜನೆ ಮತ್ತು ಎರಡು ಉಕ್ಕಿನ ಕಾರಖಾನೆ ಇವುಗಳನ್ನು ನಡೆಸಲು ವೆಚ್ಚವಾಗುವುದು.

**ಚೀನೀ ಕಮ್ಯುನಿಸ್ಟ್ ಮುಖಂಡ** ಮಯೋತ್ಸೇತಂಗನು ಒಂದು ಹೇಳಿಕೆಯಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಸೋವಿಯಟ್ ರಶಿಯದ ಕಡೆಗೆ ತನ್ನ ಪಕ್ಷ ಹೊಂದಿಕೊಳ್ಳುವುದೆಂದೂ ಅದು ಚೀನದಲ್ಲಿ ಜನತೆಯ ಪ್ರಜಾಸತ್ತಾತ್ಮಕ ಸರ್ವಾಧಿಕಾರಿತ್ವವನ್ನು ಸ್ಥಾಪಿಸಲು ದುಡಿಯುತ್ತಿರುವುದೆಂದೂ ಸ್ಪಷ್ಟವಾಗಿ ಹೇಳಿದನು. ಅಲ್ಲದೆ, ಸಾಮ್ರಾಜ್ಯವಾದ ಮತ್ತು ಸಮತಾವಾದಗಳ ನಡುವೆ ನಿಲ್ಲುವ ಮಧ್ಯಮಾರ್ಗವೆಂಬುದಿಲ್ಲವೇ ಇಲ್ಲವೆಂದೂ ಅಡ್ಡಗೋಡೆಯ ಮೇಲಿನ ದೀಪದಂತಿರುವುದು ವ್ಯರ್ಥವೆಂದೂ ಅವನು ಖಂಡಿತೋಕ್ತಿಯಿಂದ ಅಭಿಪ್ರಾಯಪಟ್ಟನು.

ಚೀನದ ರಾಷ್ಟ್ರೀಯ ಸರಕಾರಕ್ಕೆ ಮಿಲಿಟರಿ ಸಹಾಯವನ್ನೀಯುವ ಲಕ್ಷಾಂತರ ಡಾಲರುಗಳ ಯೋಜನೆಯೊಂದನ್ನು ಒಪ್ಪಿಸಿ ಅಮೇರಿಕನ್ ಸಿನೇಟಿನ ಕೆಲ ಸದಸ್ಯರು ಚೀನದ ಬಗ್ಗೆ ಸರಕಾರವು ವಹಿಸಿದ ಧೋರಣ ತಪ್ಪೆಂದು ಸಾರಿದ್ದಾರೆ.

**ಸಿರಿಯ ಮತ್ತು ಇಸ್ರೇಲುಗಳಲ್ಲಿ** ಸಂ. ರಾ. ಸಂಘದ ಮಧ್ಯಸ್ಥರಾಗಿದ್ದ ಡಾ. ರಾಲ್ಫ್ ಬುಂಚೆಯವರು ತಯಾರಿಸಿದ ಯೋಜನೆಯನ್ನು ತಳಹದಿಯನ್ನಾಗಿಟ್ಟುಕೊಂಡು ಒಡಂಬಡಿಕೆಯ ಕರಡನ್ನು ರಚಿಸಲು ಉಭಯ ರಾಷ್ಟ್ರಗಳ ಪ್ರತಿನಿಧಿಗಳು ಕೂಡಿ ಒಂದು ಸಮಿತಿಯನ್ನು ನೇಮಿಸಿವೆ.

**ಪಾಂಡಿಚೇರಿಯಲ್ಲಿ** ಕೆಲ ಪುಂಡರು ವಿದ್ಯಾರ್ಥಿ ಕಾಂಗ್ರೆಸ್ ಕಚೇರಿಯಲ್ಲಿ ಹೊಕ್ಕು ವಿದ್ಯಾರ್ಥಿ ಕಾರ್ಯಕರ್ತರ ಮೇಲೆ ಕಲ್ಲೆಸೆದು ಆ ಕಟ್ಟಡದ ಮೇಲಿದ್ದ ಹಿಂದೀ ಒಕ್ಕೂಟದ ಧ್ವಜವನ್ನು ಕೆಳಗಿಳಿಸಿದರು. ಯಾರಿಗೂ ಗಾಯವಾಗಿಲ್ಲ.

**ಬ್ರಹ್ಮದಲ್ಲಿರುವ** ಕಾರೆನ್ ಹಸ್ತಗತ ತೌಂಗು ಪಟ್ಟಣದಿಂದ ಭಾರತೀಯರನ್ನು ಸುರಕ್ಷಿತರಾಗಿ ಭಾರತಕ್ಕೆ ಕರೆತರಲು ಭಾರತ ಸರಕಾರವು ೫೦,೦೦೦ ರೂಪಾಯಿಗಳನ್ನು ಕೊಡಲು ನಿರ್ಧರಿಸಿದೆ. ಆ ಪಟ್ಟಣದಲ್ಲಿ ಸುಮಾರು ೫೦೦ ಹಿಂದೀಯರಿದ್ದಾರೆ. ರಂಗೂನಿಗೆ ಅವರನ್ನು ಒಯ್ಯಲು ಅಲ್ಲಿಯ ಭಾರತೀಯ ರಾಯಭಾರಿಗೆ ತಿಳಿಸಲಾಗಿದೆ. ಫೆಬ್ರುವರಿ ಮಾರ್ಚುಗಳಲ್ಲಿ ಇನ್ಸೀನಿಂದ ರಂಗೂನಿಗೆ ೪೦೦೦ ಹಿಂದೀಯರನ್ನು ಪಾರುಮಾಡಲಾಯಿತು. ಒಟ್ಟಿಗೆ ಬ್ರಹ್ಮದಲ್ಲಿರುವ ಭಾರತೀಯರ ಸಂಖ್ಯೆ ೭ ಲಕ್ಷ ಎಂದು ಅಂದಾಜು ಮಾಡಲಾಗಿದೆ. ಅವರಲ್ಲಿ ೩॥ ಲಕ್ಷ ಜನರು ರಂಗೂನಿನಲ್ಲಿದ್ದಾರೆ.

**ಜಪಾನಿನಲ್ಲಿ** ಮಿತ್ರರಾಷ್ಟ್ರಗಳ ಆಕ್ರಮಣ ಪಡೆಗಳ ವರಿಷ್ಠದಂಡನಾಯಕರಾದ ಮೆಕಾರ್ಥರರು ಅಮೇರಿಕದ ಸ್ವಾತಂತ್ರ್ಯದಿನದ ನಿಮಿತ್ತ ಕೊಟ್ಟಹೇಳಿಕೆಯಲ್ಲಿ ಕಮ್ಯುನಿಸ್ಟರ ಚಳವಳಿಗೆ ಕಾಯದೆಯ ರಕ್ಷಣೆ ಕೊಡುವನ್ನು ನಿಲ್ಲಿಸುವ ಕಾಲಬಂದಿದೆಯೆಂದಿದ್ದಾರೆ.

**ಅಮೇರಿಕದ** ಹಣಕಾಸಿನ ಮಂತ್ರಿ ಜಾನ್‌ಸ್ನಿಡರರು ಯುರೋಪಿನ ಅಧಿಕಾರಿಗಳೊಡನೆ ಅರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯ ಬಗ್ಗೆ ಮಾತುಕತೆನಡೆಸಲು ಪ್ಯಾರಿಸ್ಸಿಗೆ ಪ್ರಯಾಣ ಮಾಡಿದರು. ಮಾರ್ಶಲ್ ಯೋಜನೆಯ ಆಡಳಿತಗಾರರಾದ ಪಾಲ್ ಹಾಫ್‌ಮನ್ನರೂ ಒಂದೆರಡು ವಾರಗಳಲ್ಲಿ ಯುರೋಪಿಗೆ ತೆರಳುವರು.

**ಬಲ್ಗೇರಿಯದ** ಮುಖ್ಯ ಮಂತ್ರಿ ಜಾರ್ಜ್ ಡಿಮಿಟ್ರೋವನು ಕೆಲ ತಿಂಗಳು ಕಾಹಿಲೆಯಿಂದ ನರಳಿ ಈಗ ಮೃತನಾದನೆಂದು ರಶಿಯದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ವಿಷಾದದಿಂದ ಹೇಳಿಕೊಟ್ಟಿದೆ.

**ಇಟಲಿಯ** ಕಮ್ಯುನಿಸ್ಟ್ ಮುಖಂಡ ಪಾಮಿರೋ ತೊಗ್ಲಿಯಾಟ್ಟಿಯನ್ನು ಕೊಲ್ಲಲು ಯತ್ನಿಸಿದ ೨೬ ವರ್ಷ ವಯಸ್ಸಿನ ಇಟಾಲಿ...

...ಯಸ್ಸಿಗೆ ೧೩ ವರ್ಷ ೧೦ ತಿಂಗಳ ...
...ಕಾರಾವಾಸವನ್ನು ವಿಧಿಸಲಾಯಿತು.

...ಕೌಂಟಿಸ್ಸ್ ಮುಡೋಸಿಯ... ...
...ಪಾಕ್ಷಾಧ್ಯರಂತೆ ಯುಗೋಸ್ಲೇವಿ...
...ಶಸ್ತ್ರಾಸ್ತ್ರಗಳನ್ನು ಕಳುಹಲು ...
...ವುದರಿಂದ ಪಾಶ್ಚೇ ಕಾರಖಾನೆಗಳಲ್ಲಿ ...
...ತಯಾರಿಸುವುದೆಂದು ಅಲ್ಲಿಯ ಮುಖ್ಯ ...
...ಮಂತ್ರಿ ಹೇಳಿದನು.

ಅಮೇರಿಕದಲ್ಲಿ ಭಾರತದ ರಾಯಭಾರಿ...
...ಹೋಗಿರುವ **ಶ್ರೀಮತಿ ವಿಜಯ...**
**ಪಂಡಿತರು** ಅಲ್ಲಿಯ ವಿದೇಶ ಮಂತ್ರಿ ...
...ಆಚೆಸನ್ನರನ್ನು ಭೆಟ್ಟಿಯಾಗಿ ಕೆಲ ಪ್ರ...
...ಬಗ್ಗೆ ಚರ್ಚೆ ನಡೆಸಿದರೆಂದೂ ಅ... ...
...ಗಾಗಲಿ ಸಾಲಕ್ಕಾಗಲಿ ಸಂಬಂಧಿಸಿದ್ದ...
ತಿಳಿಯುತ್ತದೆ.

**ಲಿಯೋನೆಲ್ ಬ್ರಾಸ್ಸ್** ಎಂಬ ...
...ರವನು ಈಗ ೭೫ ತಿಂಗಳುಗಳ ಹಿಂದೆ ...
...ನಿಂದ ಬೈಸಿಕಲ್ಲಿನ ಮೇಲೆ ಹೊರಟು ...
ಯುಗೋಸ್ಲೇವಿಯ, ಬಲ್ಗೇರಿಯ, ...
ಸಿರಿಯ, ಲೆಬನಾನ್, ಟ್ರಾನ್ಸ್‌ಜೋರ್ಡ...
ಪಾಲಿಸ್ತಾನ, ಇರಾಕ್, ಇರಾನ್, ಅ...
...ಸ್ತಾನಗಳನ್ನು ದಾಟ್ಯು ಖೈಬರ್ ಕಣಿ...
ಮೂಲಕ ಪೇಶಾವರಕ್ಕೆ ಬಂದಿದ್ದಾನೆ.

**ಉತ್ತರ ಕೊರಿಯದ** ಸಂಯುಕ್ತ ...
ಪ್ರಭುತ್ವದ ದೇಶಪ್ರೇಮಿ ಸಂಘವು ...
ಕೊರಿಯದಿಂದ ಸಂ. ರಾ. ಸಂಘದ ಸ...
ಬಿಟ್ಟು ಹೊರಡಬೇಕೆಂದು ಸಾರಿದೆ.

**ಉತ್ತರ ಟೋಕಿಯೋವಿನ** ...
ಪಟ್ಟಣಗಳಲ್ಲಿ ಪೋಲೀಸು ಚಾವಡಿಗಳ...
ಮೇಲೆ ಹಲ್ಲೆಮಾಡಿ ಪಾದ್ರಿಗಳ ಪ್ರಕಾ...
...ನ್ಯಾಸಗಳಲ್ಲಿ ಕಮ್ಯುನಿಸ್ಟರು ಗುಲ್ಲೆಬ್ಬಿಸಿ...

**ಪ್ಯಾರಿಸ್ಸಿನಲ್ಲಿ** ವಿಚಾರವಿನಿಮಯ ...
ಮಾರ್ಶಲ್ ಸಹಾಯ ಪಡೆದ ಯುರೋ...
...ಯನ್ ರಾಷ್ಟ್ರಗಳು ಹೊಸ ...
ಅಂತಯುರೋಪಿಯನ್ ...
ಕೊಡುಕೊಳ್ಳುವಿನ ವ್ಯವಸ್ಥೆಯನ್ನು ...
ಕೊಂಡವೆಂದು ಗೊತ್ತಾಗಿದೆ.

೧೯೪೯ ರ ಜೂನಿನ ಹಿಂದಿನ ಮೂರು ...
...ಳಲ್ಲಿ **ಬ್ರಿಟನ್ನಿನ** ಬಂಗಾರದ ಶೇಖರಣೆ...
೭ ಕೋಟಿಯಿಂದ ೧೦ ಕೋಟಿ ಪೌಂಡ...
ವರೆಗೆ ನಷ್ಟವಾಯಿತೆಂದು ಅಂದಾಜು ...
...ಲಾಗಿದೆ.

ಯುದ್ಧಾನಂತರ **ಜರ್ಮನ್** ಹಡಗ...
ಸಂಚಾರವನ್ನು ಮಿತಿಗೊಳಗಿಡಲಾಗಿ...
ಅಮೇರಿಕದ ಸಂಯುಕ್ತ ಆಯಾತ ನಿಯ...
ಸಂಘದ ವರದಿಯಂತೆ ಅವೀಗ ಸಪ್ತ ...
ಗಳಲ್ಲಿ ಎಲ್ಲಿ ಬೇಕೆಂದರಲ್ಲಿ ಸಂಚರಿಸಬ...
ಗಿದೆಯೆಂದು ತಿಳಿಯುತ್ತದೆ.

**ಬಾಲ್ಕನ್ ಒಪ್ಪಂದದನ್ವಯ** ...
...ನಿಯ, ಹಂಗೇರಿ ಮತ್ತು ಬಲ್ಗೇರಿಯಾ...
ಮಾನವ್ಯ ಹಕ್ಕುಗಳನ್ನು ಹತ್ತಿಕ್ಕಲಾಯಿ...
ಆರೋಪವನ್ನು ವಿಚಾರಿಸಲು ಅ...
ಕೊಡದೆ ಒಪ್ಪಂದವನ್ನು ಭಂಗಿಸಿತೆಂದು...
...ಯದ ಮೇಲೆ ಅಮೇರಿಕ ಪ್ರತಿಭಟನೆ...
ಸಾರಿದೆ.

**ಬ್ರಹ್ಮದ** ಅಕ್ಯಾಬ್ ಜಿಲ್ಲೆಯ ಗಡಿ...
...ರುವ ಅರಕಾನೀಸ್ ದಂಗೆಗಾರರು ...
...ನದಿ ಪಟ್ಟಣಗಳಾದ ಪೊನ್ನಾಗ್ಯುನ್ ...
ಮಿಚಾಂಗ್‌ಗಳನ್ನು ಆಕ್ರಮಿಸಿದ್ದಾರೆ.

ಅಲ್ಲಿಯ ಸಂಯುಕ್ತಪ್ರಾಂತ ...
ಸಂಘದ ಅಧ್ಯಕ್ಷ ಲಾಲಾ ಗೋವಿಂದ ...
...ರನ್ನು ಬ್ರಿಟಿಶ್ ಪೋಲೀಸರು ಸೆರೆಹಿಡಿದ...

**ಲಂಡನ್ನಿಗೆ** ಹೋಗಿರುವ ಭಾರತದ ...
...ಕಾಸಿನ ಮಂತ್ರಿ ಡಾ. ಜಾನ್ ಮತ್ತಾ...
ಸರ್ ಸ್ಟಾಫರ್ಡ್ ಕ್ರಿಪ್ಸ್‌ರೊಡನೆ ...
ಮಾತಾಡಲಿರುವೆವೆಂದು ಹೇಳಿದರು. ...
೧೫ ರ ಹೊತ್ತಿಗೆ ಸ್ಟರ್ಲಿಂಗ್ ಶಿಲ್ಕಿನ ...
...ಕತೆ ಮುಗಿಸಿ ಭಾರತಕ್ಕೆ ಮರಳಲಿದ್ದಾರೆ.

ಚೀನದ ಸರಕಾರದ ... ...
...ಯ ಮೇಲೆ ಮಾತಿನ ... ...
...ಬಾಂಬೆಸೆದರು.

ಸರಕಾರವು ನೌಕರರನ್ನು ... ...
ಧೋರಣವನ್ನು ಕಾನ್ಪರೂಪಕ್ಕೆ ... ...
...ಪ್ರಾರಂಭಿಸಿರುವುದರಿಂದ **ಜಪಾನಿನ** ...
...ಗಿಳ ಪ್ರಪಂಚದಲ್ಲಿ ಅಸಂತೋಷ ...
ಸರಕಾರದ ಈ ಧೋರಣದಿಂದ ...
ಕೆಲಸಗಾರರು ನಿರುದ್ಯೋಗಿಗಳಾಗುವರು...

…ಪರಂಗ

## …ಳ್ಳಿಯಲ್ಲಿ ಪೃಥ್ವೀರಾಜರು

…ವೀರಾಜರೆಂದರೆ ಹೆಸರಾದ ಸಿನೆಮ… ೪-೫ ವರ್ಷಗಳಿಂದ ಅವರು ಪೃಥ್ವೀ …ಟರ್ಸ್ ಎಂಬ ನಾಟಕದ ಕಂಪನಿಯನ್ನು …ತ್ತಿದ್ದಾರೆ. ಈ ಕಂಪನಿಗೆ ಸ್ವಂತ ಕಟ್ಟಡ …ರಿಂದ ಮುಂಬಯಿಯಲ್ಲಿ ನಿತ್ಯವೂ … ಬಾಡಿಗೆ ರಂಗಗಳಲ್ಲಿ ನಾಟಕಗಳನ್ನು …ಸಲಾಗುವುದಂತೆ.

…ವೀರಾಜರು ೧೯೦೬ ರಲ್ಲಿ ಪೇಶಾವರದಲ್ಲಿ …ದರು. ಅವರಿಗೀಗ ೪೩ ವರ್ಷ ವಯಸ್ಸು; …ವೂ ಸುದೃಢವೂ ಆದ ಶರೀರ ಸಂಪತ್ತಿ… ಕೂಡಿದ ಅವರು ನಾಟಕಗಳಲ್ಲಿ …ಣ್ಯಂಗವಾದ ಅಭಿನಯ ಕಲೆಯಲ್ಲಿತಕ್ಕ … ಹೆಸರು ಪಡೆದವರು.



ಪೃಥ್ವಿರಾಜರು

…ಬ್ಬಳ್ಳಿಯ ಮಲ್ಲಿಕಾರ್ಜುನ ಥಿಯೇಟರ್ಸಿ… …ಂಬಯಿಯ "ಪೃಥ್ವೀಥಿಯೇಟರ್ಸಿ"ನ …ರ, ಶಾಕುಂತಲ, ಪಠಾಣ, ಗದ್ದಾರ … ನಾಲ್ಕು ನಾಟಕಗಳನ್ನು ಜೂನ್ ೩೦, … ೧, ೨, ೩ ನೆಯ ದಿನಗಳಲ್ಲಿ ಆಡಲಾ…. ಪ್ರೇಕ್ಷಕರ ಸಂಖ್ಯೆ ಅಗಣಿತವಾಗಿತ್ತು. …ವಾರ' ದಲ್ಲಿ ಅಣ್ಣ ತಮ್ಮಂದಿರು ಮೂರ …ವರ ಕುತಂತ್ರದಿಂದ ಬೇರಾಗಿ ಕಡೆಗೆ …ಕಾಂತದಿಂದ ಒಂದಾಗುವ ಮಧುರ …ವಿದೆ. ಶಾಕುಂತಲದ ಕತೆ ಎಲ್ಲರಿಗೂ …ದ್ದದ್ದೇ. "ಪಠಾಣ" ದಲ್ಲಿ ಹಿಂದು …ಲ್ಮಾನರ ಐಕ್ಯವನ್ನು ಪ್ರಚುರಪಡಿಸುವ …ವಸ್ತುವಿದೆ. "ಗದ್ದಾರಿ" ನಲ್ಲಿ ೧೯೩೦ … ೧೯೪೭ ರ ವರೆಗೆ ನಡೆದ ಭಾರತೀಯ …ತೀಯ ಆಂದೋಲನವನ್ನೂ ಅದರಲ್ಲಿ …ಲ್ಮಾನರು ಹೇಗೆ ಅಜ್ಞಾನದಿಂದ ಕಾಂಗ್ರೆ… ಬಿಟ್ಟು ಲೀಗಿನ ಮೂಲಕ ದೇಶವಿಭ… ಕಾರಣರಾದರೆಂಬುದನ್ನೂ ಚಿತ್ರಿಸಿ …ಮುಸಲ್ಮಾನರು ಇನ್ನಾದರೂ ಒಂದಾ… ಇರಬೇಕೆಂಬ ಭಾವವನ್ನು ಮೂಡಿಸ…ದೆ.

ಪೃಥ್ವೀ ಥಿಯೇಟರ್ಸಿ" ನಲ್ಲಿ ಭಾರತದ …ಪ್ರದೇಶದ ನಟ ನಟಿಯರೂ ಇದ್ದಾರೆ. …ಕೂರಿನವರೊಬ್ಬರು ಅವರಲ್ಲಿ ಕನ್ನಡಿಗರು. …ವೀರಾಜ, ರಾಜಕಪೂರ, ಪ್ರೇಮನಾಥ …ತಾದ ನಟರೂ ಅಜ್ರಾಬೇಗಂ, ಜೋಹ್ರಾ …ಲ್, ಇಂದುಮತಿ ಮುಂತಾದ ನಟಿ… ಮುಖ್ಯರು. ೪೦-೫೦ ಜನ ಕೆಲಸಗಾರ… ಕರೆದುಕೊಂಡು ಊರೂರು ತಿರುಗುವು… ಖರ್ಚು ಸಾವಿರಗಟ್ಟಲೆಯಾಗುವುದೆಂದು …ಟದ ದರಗಳನ್ನು ೧ ರೂ. ೫ ಆ. ಯಿಂದ … ರೂಪಾಯಿಗಳ ವರೆಗೆ ಇಡಲಾಗಿದೆ. ೩. ೪ ಆ. ಟಿಕೇಟಿಗಿಂತ ಕಡಿಮೆದರದ …ಟಿಸಿಗಳಿಗೆ ನಾಟಕಗಳನ್ನು ಚೆನ್ನಾಗಿ …ಡಲು ಸಾಧ್ಯವಾಗಲಿಲ್ಲ.

…ಟಕ ಕಲೆಯ ಅವನತಿಗೆ ಅವರ ನೇತೃ… ಕಾರಣರಾದರೆಂಬುದು ಪೃಥ್ವೀರಾಜರ …ಪ್ರಾಯ. ಸಿನೆಮಗಳಾದರೂ ಇದೇ ರೀತಿ …ಧದ ದುರುಪಯೋಗ ಮಾಡಿಕೊಳ್ಳುತ್ತ…ದರೆ ಅದೇಗತಿಯನ್ನು ಹೊಂದುವವೆಂದೂ …ಧವೊಂದನ್ನೇ ಗುರಿಯಾಗಿಟ್ಟುಕೊಂಡು …ಹನೆಯತ್ತ ಲಕ್ಷ್ಯ ಕೊಡದುದೇ ಕಂಪೆನಿ… ವಿನಾಶಕ್ಕೆ ಹೇತುವೆಂದೂ ಅವರೆಂದರು. …ದಿನ ಸಿನೆಮಗಳ ದುರಭಿರುಚಿಪ್ರಸರಣ… ಎತ್ತಿದಾಗ ಅವರು ಆದಕ್ಕೆ ನಮ್ಮ… ರತಂತ್ರ ದಾರಿದ್ರ್ಯಗಳೇ ಮೂಲ ಕಾರಣ …ಂದೂ ಇನ್ನು ಸ್ವತಂತ್ರ ಹಿಂದುಸ್ಥಾನದಲ್ಲಿ …ಭಿರುಚಿಪ್ರಸರಣವನ್ನು ನಾಟಕನೇತೃ… ಮಾಡಲು ಅವಕಾಶವಿದೆ, ಯತ್ನಸಾಗಿದೆ; ತಾವಾದರೂ ಸಾಮಾನ್ಯಜನರೆಲ್ಲರಿಗೂ ಸಾಧ್ಯವಾಗುವಂತೆ ಸಿನೆಮದಷ್ಟೆ ಕಡಿಮೆ ದರದ ತಿಕೀಟುಗಳನ್ನಿಟ್ಟು ಭಾರತದ ಎಲ್ಲೆಡೆಯಲ್ಲೂ ತಿರುಗುವ ರಂಗವ್ಯವಸ್ಥೆಯನ್ನು ನಿರ್ಮಿಸಿಕೊಳ್ಳುವ ಆಶಯವುಳ್ಳವರಾಗಿರುವೆವೆಂದೂ ಪೃಥ್ವೀರಾಜರು ಉದ್ಗರಿಸಿದರು.

ಪೃಥ್ವೀರಾಜರಂಥ ಉತ್ತಮನಟರು ಮೇಲೆ ಹೇಳಿದಂಥ ಪ್ರಯತ್ನವನ್ನು ನಡೆಸಿದರೆ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ- ಕನ್ನಡದಲ್ಲಾದರೂ ಗರುಡ ಸದಾಶಿವ ರಾಯರು, ಗುಬ್ಬಿವೀರಣ್ಣ ಇವರಂತೆ, ಕನ್ನಡ ಸಿನೆಮಗಳ ಸ್ಪರ್ಧೆ ಸಾಕಷ್ಟಿಲ್ಲದ ಈ ಕಾಲದಲ್ಲಿ ನಟವರರು ಮುಂದೆ ಬಂದರೆ ಕನ್ನಡ ನಾಟಕ ಕಲೆಯು ಪ್ರಗತಿಯಾಗದಿರದು.

- ರಕಗಂಗಾಧರ

# ಚೀನೀಯರ ಸಹನೆ

ಚೀನ ಬಹಳ ಪ್ರಾಚೀನ ದೇಶ. ಅಲ್ಲಿಯ ನಾಗರಿಕತೆ ಅತಿ ಪುರಾತನ ಕಾಲದ್ದು. ಅದು ಇಂದಿನ ವರೆಗೆ 'ಹದಿನಾರು ರಾಜರು ತಲೆ ಕೆಳಗಾದರು, ಆದರು ತಲೆಯೆತ್ತಿ ನಿಂತಿರುವೆ' ಎಂದು ತನ್ನದೇ ಆದ ವಿಶಿಷ್ಟ ರೀತಿಯಿಂದ ಬಾಳಿಕೊಂಡು ಹೋಗಲು ಚೀನಿಯರ ಕುಲ ರೂಢವಾದ ಸಹನ ಶಕ್ತಿಯೇ ಕಾರಣವಂತೆ. 'ಬಂದದ್ದೆಲ್ಲ ಬರಲಿ, ಗೋವಿಂದನ ದಯೆ ಯೆಮಗಿರಲಿ' ಎಂದು ವಿಪತ್ತಿನ ಪ್ರಲಯ ಮಾರುತ ಬೀಸಿದಾಗ ತಲೆವಾಗಿ ಬಳಿಕ ತಲೆ ಯೆತ್ತಿ ಯಥಾಪೂರ್ವ ಶಾಂತಗತಿಯಿಂದ ಮುನ್ನಡೆಯುವುದು ಚೀನೀ ಜನಗಳ ಸಾಮಾನ್ಯ ಗುಣ. ಸಹನೆಯೇ ಶಕ್ತಿ, ಅಸಹನೆ ಅಶಕ್ತಿ ಎಂಬ ಸಿದ್ಧಾಂತ ನಮ್ಮಲ್ಲಿಯೂ ಕೆಲವರ ಪುರಸ್ಕಾರವನ್ನು ಪಡೆದಿದೆ. ಅದಲ್ಲಿ ಸಾರ್ಥಕವಾಗಿದೆ.

### ದುಡಿಮೆಗಾರರ ಸತತೋದ್ಯಮ

ನೀವು ಒಂದು ಚೀನೀ ಬಂದರಕ್ಕೆ ಹೋಗಿರಿ. ಕೂಡಲೆ ಅಲ್ಲಿ ನಿಮ್ಮನ್ನು ಕೂಲಿಕಾರರು ಸುತ್ತುವರಿಯುವರು. ಹಡಗಿನಿಂದ ನೀವು ಇಳಿಯುತ್ತಲೇ ನಿಮ್ಮ ದೋಣಿಯ ಸಂಗಡವೇ ಅವರು ಒಂದು ದೊಣ್ಣೆಯ ಮೇಲೆ ಸಾಮಾನುಗಳನ್ನು ಸಮತೂಕದಲ್ಲಿಟ್ಟು ಹೆಗಲಿಗೇರಿಸಿಕೊಂಡು ಬೆಂಬತ್ತಿ ಬರುವರು. ಸಾಮಾನನ್ನು ನಿಮ್ಮ ವಶಕ್ಕೆತ್ತೊಡನೆಯೇ ಅವರು ತಂತಮ್ಮ ಅಕ್ಕಿ ಬುಟ್ಟಿ, ಕಬ್ಬಿನ ಕಟ್ಟು, ಕಾಗದದ, ಬಟ್ಟೆಯ ಅಥವಾ ತೊಗಲಿನ ಹೊರೆ ಇವುಗಳೊಡನೆ ಕಾಣದಾಗುವರು. ಈ ಕೂಲಿ ಕೆಲಸಗಾರರು ಪ್ರತಿ ದಿನವೂ ೩೦—೪೦ ಮೈಲು ದೂರ ನಡೆಯುತ್ತಿರುತ್ತಾರೆ. ಆರಕ್ಕೆ ಹೆಚ್ಚದು, ಮೂರಕ್ಕೆ ಕಡಿಮೆಯಾಗದು ಎಂಬ ವೇಗದಿಂದ ನಡೆಯುತ್ತ ಹೋಗುವಾಗ ಅವರು ಬಾಯಿಗೆ ಬಂದಂತೆ ಮಾತಾಡುತ್ತ ಸಾಗುವರು. ಮೂರು ಮೈಲಿಗೊಮ್ಮೆ ಅವರ ಪಯಣ ನಿಲ್ಲುವುದು. ಅಲ್ಲೊಂದು ಚಾದಂಗಡಿ. ಆ ಗುಡಿಸಲಿನಲ್ಲಿ ತಂಗಿ ಒಂದೆರಡು ಲೋಟ ಚಾ ಕುಡಿಯುತ್ತಾರೆ ಪಯಣಿಗರು. ಅದೆಂತಹ ಚಾ? ಅದರಲ್ಲಿ ಹಾಲಿಲ್ಲ, ಸಕ್ಕರೆ ಶೂನ್ಯ, ಕೇವಲ ಉಪ್ಪು ಬೆರಸಿದ್ದು— ಬೆವರಿನ ಮೂಲಕ ಹೊರಬಿದ್ದ ಉಪ್ಪನ್ನು ತುಂಬಿಕೊಳ್ಳಲೆಂದು ಹಾಗೆ ಉಪ್ಪು ಚಾ ಕುಡಿಯುವರೋ ಏನೋ! ದಿನಕ್ಕೊಂದು ಬಾರಿ ಅಂಥ ಒಂದು ಅಂಗಡಿಯಲ್ಲಿ ಸ್ವಲ್ಪ ರೆಚ್ಚು ಹೊತ್ತು ಉಳಿದು ಹೊಟ್ಟೆ ತುಂಬುವಷ್ಟು ಅನ್ನವನ್ನು ಬಕಾಯಸ್ವಾಹಾ ಮಾಡಿ ಅವರು ಮುಂದೆ ದಾರಿ ಹಿಡಿಯುವರು. ಒಮ್ಮೆ ಹಾದಿಯಲ್ಲೇ ಸಂಜೆಯಾದರೆ ಹತ್ತಿರದ ಹಾಟಿಲಲ್ಲಿ ಸಿಗುವ ಕ್ಷುದ್ರಾಹಾರ, ಕ್ಷುದ್ರ ವಸತಿ ಸ್ಥಳಗಳಲ್ಲೇ ಮಲಗುವರು. ಈ ದಿನಚರ್ಯೆಗೆ ಬಿಡುವಿಲ್ಲ— ಆಜೀವನವೂ ಹೀಗೇ!

ಹೊಲದಲ್ಲಿ ಕೆಲಸ ಮಾಡುವ ರೈತನ ಕತೆಯಾದರೂ ಬೇರೆಯಲ್ಲ. ಬ್ರಾಹ್ಮೀ ಮುಹೂರ್ತದಲ್ಲೇ ಅವನ ಹೆಂಡತಿ ಸ್ನಾನಕ್ಕೆ ನೀರು ಕಾಯಿಸಿ ಚಾ ತಯಾರಿಸುವಳು. ಅನಂತರ ಅಕ್ಕಿಯ ಗಂಜಿಯು ಊಟ. ಅಷ್ಟು ಹೊತ್ತಿಗೆ ಕೋಳಿ ಕೂಗುವುದು. ರೈತನು ತನ್ನ ನೇಗಿಲು, ಕುಂಟೆ, ಕೂಂಗೆಗಳನ್ನೂ ಎತ್ತು ಕೋಣಗಳನ್ನೂ ತೆಗೆದುಕೊಂಡು ಬೇಸಾಯಕ್ಕೆ ಹೊರಡುವನು. ಸೂರ್ಯ ಮುಳುಗುವ ವರೆಗೆ ದುಡಿದು ದುಡಿದು, ರಾತ್ರಿ ಮನೆಗೆ ಬಂದು ಮಿಂದು ಊಟ ಮಾಡುವನು. ಆ ಈ ಮಾತಾಡಿ ಚಿಕ್ಕಪುಟ್ಟ ಮನೆಗೆಲಸಗಳನ್ನು ಮಾಡಿದ ಬಳಿಕ ಅವನು ಕದವಿಕ್ಕಿಕೊಂಡು ಎಲ್ಲರೊಡನೆ ನಿದ್ದೆ ಹೋಗುವನು— ಇದು ಅವನ ನಿತ್ಯದ ಪರಿಪಾಠ.

ಕೂಲಿ ಕೆಲಸದವರ, ರೈತರ ಮತ್ತು ಇತರರ ಸಹನೆಯೇ ಚೀನದ ಶಕ್ತಿ. ಅಥವಾ ಅದೇನಾದರೂ ಕಾರಣಾಂತರದಿಂದ ಅವರ ದೌರ್ಬಲ್ಯವೆನಿಸುವುದೋ?

### ಜನತೆಯ ಸಾವಧಾನತೆ

೧೯೪೭ ರಲ್ಲಿ ಶಾಂಘಾಯಿಯ ಒಬ್ಬ ಉಪಾಧ್ಯಾಯ ಹೇಳಿದ: "ನಮಗೆ ಕಾಲಾವಕಾಶ ಕೊಡಿರಿ. ವಿದೇಶೀಯರಾದ ನೀವು ಬಹಳ ಗಡಿಬಿಡಿಯವರು. ಈಗ ತಾನೇ ಯುದ್ಧ ಮುಗಿದಿದೆ. ನಮಗೆ ಕಲ್ಪನಾತೀತವಾಗಿ ಅದು ಒಮ್ಮೆಗೇ ಬಹುಬೇಗ ನಿಂತು ಹೋಯಿತು. ನಮಗೆ ಸಮಯ ಕೊಡಿರಿ. ನಮ್ಮಿದಿರು ಅಗಾಧವಾದ ಕಾರ್ಯಭಾರ ಇದೆ. ಈ ನಾಡನ್ನು ನಾವಿನ್ನೂ ಆಳಬೇಕಾಗಿದೆ. ಮುಖ್ಯವಾದುದೆಂದರೆ ನಿಮ್ಮಲ್ಲಿ ಸಹನೆಯಿರಬೇಕು, ನಮ್ಮಲ್ಲಿ ಸತತೋದ್ಯಮವಿರಬೇಕು— ಅಷ್ಟೆ. ಗಡಿಬಿಡಿ ಮಾಡುವುದಾದರೂ ಏಕೆ?"

ಹೇಗೇ ಆಗಲಿ, ಕಡೆಯಲ್ಲಿ ಎಲ್ಲ ನೆಟ್ಟಗಾಗುವದೆಂದು ಚೀನೀಯರಿಗೆ ಗೊತ್ತು. ಆದುದರಿಂದ ಚೀನವು ಸಾವಧಾನವಾಗಿ ಕೇಡನ್ನು ಸಹಿಸುತ್ತದೆ; ಒಮ್ಮೆಲೇ ಅದನ್ನು ಎದುರಿಸಲು ಹೋಗುವುದಿಲ್ಲ. ಯುದ್ಧನಾಯಕರ ಕಾಲದಲ್ಲಿ ಅಲ್ಲಿ ಆಗಾಗ ದರೋಡೆಯ ಹಾವಳಿ ಹೆಚ್ಚಾಯಿತು. ಜನರು ಅದರಿಂದ ಬಹಳ ಕಷ್ಟನಷ್ಟಗಳಿಗೀಡಾದರೂ ಸುಮ್ಮನೆ ಸಹಿಸಿಕೊಂಡಿದ್ದರು. ಅದನ್ನು ಕಂಡ ಒಬ್ಬ ವಿದೇಶಿಯನು, "ಈ ಜನರು ಅತಿರೇಕ ಸಹಿಷ್ಣುಗಳು" ಎಂದು ಉದ್ಗರಿಸಿದನು.

೧೯೩೭ ರಿಂದ ೧೯೪೭ ರವರೆಗೆ ಜಪಾನರ ಆಕ್ರಮಣಕ್ಕೆ ಒಳಗಾಗಿ ಬಾಳಿದ ಚೀನೀಯರ ಸಹನೆ ಅವರ ಸಹಿಷ್ಣುತೆಯ ಪರಮಾವಧಿಯಾಗಿದೆ. ಜಪಾನು ಚೀನದ ಒಂದೊಂದೇ ಚೂರನ್ನು ಸ್ವಾಹಾಕರಿಸಲು ಹವಣಿಸಿತ್ತು. ಆದರೆ ಚೀನೀಯರ ಹೊಂಚೇ ಬೇರೆ. ವಿಸ್ತಾರವಾದ ತಮ್ಮ ನಾಡಿನಲ್ಲಿ ತಮ್ಮ ಸುದೀರ್ಘ ಸಹನೆಯಿಂದ ಶತ್ರುಗಳು ಎಂತಿದ್ದರೂ ಹತಾಶರಾಗಿಯೇ ತೀರುವರೆಂದು ಅವರಿಗೆ ಗೊತ್ತು. ಕೈಯಲ್ಲಾದಷ್ಟು ಪ್ರತಿಭಟಿಸುವುದು, ಬಲಾತ್ಕಾರ ಹೆಚ್ಚಾದಾಗ ವಿಸ್ತಾರವಾದ ತಮ್ಮ ನಾಡಿನ ಮತ್ತೊಂದು ಭಾಗಕ್ಕೆ ಹಿನ್ನಡೆದು ಹೋಗಿ ತಣ್ಣಗೆಕುಳಿತುಕೊಳ್ಳುವುದು, ನೆಪೋಲಿಯನ್ನನನ್ನು ರಶಿಯ ಹಿಂದಟ್ಟಿದಂತೆ ಕಡೆಯದಾಗಿ ಪ್ರಲಯಸೂತ್ರವನ್ನು ಹಿಡಿದು ನೆಲವನ್ನು ಸುಟ್ಟು ಶತ್ರುಗಳಿಗೆ ಆಳಲು ಸುಡುಗಾಡು ಉಳಿಯುವಂತೆ ಮಾಡುವುದು— ಇದೇ ಚೀನೀಯರ ಯುದ್ಧತಂತ್ರ. ಎಷ್ಟೇ ಕಷ್ಟವಾಗಲಿ, ಸಹನೆಯಿಂದ ಸಂಕಟವನ್ನು ಅನುಭವಿಸಿ, ಸಾವನ್ನು ಅಪ್ಪಲು ಕೂಡ ಚೀನೀಯರು ಹಿಂದೆಗೆಯುವವರಲ್ಲ. ಶತ್ರುವಿನ ಕ್ರೌರ್ಯದಿಂದ ಅವರೆಂದೂ ನಿರಾಶರಾಗಿ ಎದೆಗುಂದುವವರಲ್ಲ.

### ಕೇಡಿನ ಅಂತ್ಯಪರಾಜಯ

೧೯೩೭ ರಿಂದ ಇಂದಿನ ವರೆಗೆ ನಡೆಯುತ್ತ ಬಂದಿರುವ ಅಂತರ್ಯುದ್ಧದಿಂದ ದಿನೇ ದಿನೇ ಪ್ರಜೆಗಳ ಅಶನ, ವಸನ, ವಸತಿಗಳ ಪರಿಸ್ಥಿತಿ ಅವರ್ಣನೀಯವಾಗಿ ಕೆಡುತ್ತ ಬಂದಿದೆ. ಆದರೂ ಚೀನೀಯರು ಈ ಅಂತಃಕಲಹದ ಕ್ರೂರ ಪರಿಣಾಮಗಳನ್ನು ಸಹನೆಯಿಂದ ಅನುಭವಿಸುತ್ತ ಬದುಕಿದ್ದಾರೆ. ನರಳಿದವರು ನರಳಿದರು, ಸತ್ತವರು ಸತ್ತರು, ಉಳಿದವರು ಉಳಿದೇ ಉಳಿದರು! ಕೇಡು ತನ್ನ ಕಿಡಿಗೇಡಿತನವನ್ನು ಪ್ರಕಟಿಸುವುದು ಎಷ್ಟು ಸತ್ಯವೋ ಅಂತ್ಯದಲ್ಲಿ ಅದು ವಿನಾಶವಾಗುವುದೂ ಅಷ್ಟೇ ಸತ್ಯ ಎಂಬ ನಂಬಿಗೆಯೇ ಚೀನೀಯರ ಸಹನೆಯ ಗುಟ್ಟು. ಇದು ಅವರ ಹುಸಿನಂಬಿಗೆಯಲ್ಲ; ಸಾವಿರಾರು ವರ್ಷಗಳಿಂದ ಪಡೆದ ಅನುಭವದ ಸಾರ— ಕತ್ತಲಿನ ಸುರಂಗದ ತುದಿಯಲ್ಲಿ ಬೆಳಕಿರುವುದು ನಿಶ್ಚಿತವಲ್ಲವೆ? ಅಂತರ್ಯುದ್ಧ ಮುಗಿದ ಬಳಿಕ ಶಾಂತಿ ಸುವ್ಯವಸ್ಥೆಗಳು ಬಂದೇ ಬರುವುವೆಂಬುದು ಚೀನೀಯರ ದೃಢವಿಶ್ವಾಸ. ಇದನ್ನು ಅಲ್ಲಗಳೆಯಲು ಯಾರಿಗೆ ತಾನೇ ಸಾಧ್ಯ?

ಚೀನರ ನೆರೆನಾಡಾದ ಭಾರತಕ್ಕೂ ಮೇಲಿನ ಮಾತು ಅನ್ವಯಿಸುವುದು ಆಶ್ಚರ್ಯವಲ್ಲ. Men may come and men may go but I goon for ever. ಜನರು ಬರಲಿ, ಜನರು ಹೋಗಲಿ, ನಾನೇನೋ ಹರಿಯುತ್ತಲೇ ಸಾಗುವೆ ಎಂಬ ನದಿಯಂತೆ ಎಷ್ಟು ಜನ ದಾಳಿಗಾರರು, ದಂಗೆಗಾರರು ವಿದೇಶೀಯ ಆಕ್ರಾಮಕರು ನುಗ್ಗಿ ನುಗ್ಗಿ ಶಾಸನ ನಡೆಸಿದರೂ ಕಡೆಗೆ ಹಿಂದುಸ್ಥಾನ ಸ್ವತಂತ್ರವಾಗಿ ತನ್ನ ಸಂಸ್ಕೃತಿ ನಾಗರಿಕತೆಗಳನ್ನು ಉಳಿಸಿಕೊಂಡು ಜಗತ್ತಿನೆದುರು ತಲೆಯೆತ್ತಿ ನಿಲ್ಲಲು ಶಕ್ತವಾಗಲಿಲ್ಲವೆ?

—ಸಮಾಜವಿಜ್ಞಾನಿ

---

ಅನ್ಯರ ದೃಷ್ಟಿಯಲ್ಲಿ ನಾವು

## ಅಗ್ನಿಷ್ಟಿಗೆಯ ಬೆಳಕಿನಲ್ಲಿ…

ಲಂಡನ್ "ನ್ಯೂ ಸ್ಟೇಟ್ಸಮನ್" ಪತ್ರಿಕೆಯ ಒ…

ಭಾರತೀಯರು ಚೀನದಲ್ಲಿ ಕಮ್ಯುನಿಸ್ಟ್ ಸೇನೆಗಳ ವಿಜಯವನ್ನು ಕಣ್ಣಿಟ್ಟು ನೋಡುತಿದ್ದಾರೆ; ಅದಕ್ಕಿಂತಲೂ ಹೆಚ್ಚಾಗಿ ನೆರೆನಾಡಾದ ಬ್ರಹ್ಮದೇಶದ ಮೇಲೆ ಅವರ ಸಚಿಂತ ನೇತ್ರಗಳು ನಟ್ಟಿವೆ. ಭಾರತದ ಪ್ರಜಾತಂತ್ರಾತ್ಮಕ ಗಣರಾಜ್ಯಕ್ಕೂ ಒಂದು ದಿನ ಪರೀಕ್ಷಾಕಾಲ ಪ್ರೊಡಗಿಯೆ ತೀರುವದು. ಭಾರತದ ಆರ್ಥಿಕ ಮತ್ತು ಸಾಮಾಜಿಕ ಸಂಘಟನೆ ಎಷ್ಟು ಬಲಿಷ್ಠವಾಗಿದೆ?

ವಿಭಜನೆಯ ಸಂಗಡ ಬಂದ ಅನರ್ಥಗಳ ನಂತರ ಕಾಂಗ್ರೆಸ್ ಸರಕಾರ ಎರಡು ದೊಡ್ಡ ಕೆಲಸಗಳನ್ನು ಸಾಧಿಸಿದ ಕೀರ್ತಿಗೆ ಭಾಗಿಯಾಗಿದೆ. ಅದು ಹಿಂದೂ ಜಾತ್ಯಂಧರ ಒತ್ತಾಯಕ್ಕೆ ಬಗ್ಗಲಿಲ್ಲ; ತನ್ನ ಹಳೆಯ ಧ್ಯೇಯವಾದ ಲೌಕಿಕ ಗಣರಾಜ್ಯವನ್ನು ಅದು ಸಾಧಿಸಿದೆ; ಮತ್ತು ಭಾರತದಲ್ಲಿ ಉಳಿದ ಎರಡೂವರೆ- ಮೂರು ಕೋಟಿ ಮುಸ್ಲಿಂ ಅಲ್ಪಸಂಖ್ಯರಿಗೆ ಸುರಕ್ಷಿತವಾಗಿ ಬಾಳಲು ಅವಕಾಶ ಮಾಡಿಕೊಟ್ಟಿದೆ; ಇದೊಂದು. ಎರಡನೆಯದಾಗಿ, ಸರದಾರ ಪಟೇಲರು ಸಂಸ್ಥಾನಿಕರ ಸಮಸ್ಯೆಯನ್ನು ಸಾಮಾನ್ಯವಾಗಿ ಭಾರತೀಯ ರಾಜಕಾರಣದ ಅಭ್ಯಾಸಿಗಳು ಭಾವಿಸಿದ್ದಕ್ಕಿಂತ ಹೆಚ್ಚು ಸುಲಭವಾಗಿಯೂ ಪ್ರಗತಿಪರವಾಗಿಯೂ ಬಿಡಿಸಿದ್ದಾರೆ.

### ಬಂಡವಳಗಾರರ ಅಸಹಕಾರ

ಇದು ದೊಡ್ಡ ಸಾಧನೆಯೆ ಸರಿ. ಆದರೆ ಸಮಾಧಾನಪಟ್ಟುಕೊಳ್ಳಬಹುದಾದ ಬೇರೆ ಸಂಗತಿಗಳು ಕಡಿಮೆ. ಭಾರತದ ಪ್ರಾಕೃತಿಕ ಸಂಪತ್ತಿಯ ಪ್ರಯೋಜನ ತೆಗೆದುಕೊಳ್ಳುವ ಅನೇಕ ಯೋಜನೆಗಳು ಇನ್ನೂ ಕಾಗದದಲ್ಲೆ ಇವೆ, ಅಥವಾ ಮಂದಗತಿಯಿಂದ ಸಾಗಿವೆ. ಇವುಗಳಿಗೆ ವಿನಿಯೋಗವಾಗಬೇಕಾಗಿದ್ದ ಹಣ ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಪುನರ್ನಿವೇಶನಕ್ಕೂ ಕಾಶ್ಮೀರದ ಆ ಚಿಕ್ಕ ಯುದ್ಧಕ್ಕೂ ಸೈನ್ಯ, ನೌಕಾಬಲ, ಪೋಲೀಸು ಬಲಗಳ ವಿಸ್ತರಣಕ್ಕೂ ಉಪಯೋಗಿಸಲ್ಪಡಬೇಕಾಯಿತು. ಉಕ್ಕು, ಯಂತ್ರೋಪಕರಣಗಳು, ನೌಕಾನಿರ್ಮಾಣವೇ ಮೊದಲಾದ ಹಲ ಯೋಜನೆಗಳು ಪ್ರಾರಂಭವಾಗಿವೆ. ಆದರೆ ಉದ್ದಿಮೆಗಳ ಉತ್ಪಾದನೆ ಬಯಸಿದಂತೆ ಬೆಳೆಯಲಿಲ್ಲ. ಯಂತ್ರ ಸಾಮಗ್ರಿಗಳನ್ನು ಕೊಳ್ಳಲು ಡಾಲರುಗಳ ಕೊರತೆ ಬಿದ್ದದ್ದು

ಇದರ ಕಾರಣ… ಭಾರತೀಯ… "ನ್ಯೂಡೀಲ್"… ಅಮೇರಿಕನ್… ಅಸಹಕಾರವ… ಶಕ್ತಿ ಮೀರಿ… ಸರಕಾರದ… ಕೊಡುವದೂ… ಸಾಮ್ಯವಾದಿ… ಪ್ರಕೃತಿನ ನಡೆ… ವಿಚಾರ, ಸರ… ಮಾಡಿದ ಪ್ರಂ… ಅತ್ತ ಕೂಲಿಕ… ಬೆಲೆಗಳಿಗೂ… ಧಾನ್ಯ, ಸಕ್ಕ… ಬಟ್ಟೆಯ… ಲಂಚಗುಳಿಯ… ಕಾಂಗ್ರೆಸ್ಸು… ಕೊಳ್ಳುತ್ತಿದೆ.

ಇಂಥ ನಿರ… ಆಗಿತ್ತು… ಯಿಂದು ಅನೇ… ತ್ತಿಲ್ಲ. ಅಧಿಕ… ಆದರ್ಶ ಯ… ದುರ್ಬಲವಾ… ಬೇಕು. ಯ… ಯಲ್ಲಿ ಲಂ… ಸಂಬಳ ಸಾ… ಗಳಾಗಿದ್ದರು… ದಲ್ಲಿ ಕಾಂಗ್ರೆ… ದೊಡ್ಡಗಳಸ… ಸ್ಸಿಗರು ಧೈರ್… ಸ್ವೀಕಾರದೊ… ಗಾಂಧಿಯವ… ಗಿಯೆ ಅವರ… ಜೀವನವನ್ನು… ಶಾಸನ ಸಭ… ಕ್ಕಿಂತಲೂ… ಆದರೆ ಈ… ಬಂದೊಡನೆ… ರಗಳ ತ್ಯಾ…

ಚಿತ್ರ ಪರಿಚಯ…

## ಬ್ರಿ…

ಬ್ರಿಟನ್ನಿನ… ಒಂದೇ ಶತಕ… ವಿಧ್ವಂಸವಾದ… ಬೆಳವಣಿಗೆಯ… ಕಟ್ಟಡ ೧೮೫… ಯಿತು… ರಚಿಸಲ್ಪಟ್ಟ… ಸಲ್ಪಟ್ಟಿತು… ದಿನ ಜರ್ಮನ… ಭವನವನ್ನು… ಲಾರ್ಡ್ಸ್ ಭವ… ಕಾಮನ್ಸ್ ಸಭ… ಯಿಸಲ್ಪಟ್ಟು… ಪೋಷಾಕಿನ… ಸರ್ ಗೈಲ್ಸ್… ಸೂಚನೆಯ… ಏರ್ಪಾಡು ನಡೆ…

ಹೊಸ… ಭವನವಾದರೂ… ಬಿಟ್ಟಿಲ್ಲ… ಉಷ್ಣ, ಗಾ… ಅನೇಕ ಸುಧಾ… ರೂಪಾಯಿ ವ… ೧೯೫೦ ರಲ್ಲಿ ವ…

# ವರ್ಣ ವ್ಯವಸ್ಥೆಯ ಬಗ್ಗೆ ಮಹಾತ್ಮಾಗಾಂಧಿಯವರ ವಿಚಾರಗಳು:

"ಹರಿಜನ" ದಿಂದ

ಈಗೆರಡುಮೂರು ವಾರಗಳಿಂದ 'ಕರ್ಮವೀರ' ದಲ್ಲಿ ವರ್ಣಾಶ್ರಮ ಧರ್ಮದ ಬಗ್ಗೆ ವಾದವಿವಾದಗಳು ಪ್ರಸಿದ್ಧವಾಗಿವೆ. ೧೯೩೩ ರಲ್ಲಿ ಮಹಾತ್ಮಾಗಾಂಧಿಯವರು ಬರೆದಿದ್ದು ಈ ವಾರದ 'ಹರಿಜನ' ದಲ್ಲಿ ಪ್ರಸಿದ್ಧವಾಗಿರುವ ಲೇಖದಲ್ಲಿ ಈ ವಿಷಯದಲ್ಲಿ ರಾಷ್ಟ್ರಪಿತನ ಅಮೂಲ್ಯ ವಿಚಾರಗಳನ್ನು ಕಾಣಬಹುದು.

ಆಶ್ರಮ ಪದ್ಧತಿ ಮುರಿದುಬಿದ್ದಂತೆ ವರ್ಣ ವ್ಯವಸ್ಥೆಯಾದರೂ ಹಾಳಾಗಿಯೆ ಹೋಗಿದೆ. ಮೊಟ್ಟಮೊದಲು ನಾಲ್ಕು ವರ್ಣಗಳು ಅಥವಾ ವರ್ಗಗಳಿದ್ದವು. ಆದರೆ ಈಗ ಅಸಂಖ್ಯ ಪಂಗಡಗಳು ಅಥವಾ ಒಂದೇ ಪಂಗಡವುಳ್ಳದಂತಾಗಿದೆ. ಈಗಿರುವ ಜಾತಿ-ಉಪಜಾತಿಗಳೆಲ್ಲವೂ ವರ್ಣಗಳಾದರೆ ಅದೊಂದು ವರ್ಣಗಳ ಸೈನ್ಯವೇ ಸರಿ. ಅಥವಾ ವರ್ಣಕ್ಕೂ ಜಾತಿಗೂ ಯಾವ ಸಂಬಂಧವೂ ಇಲ್ಲವಾದರೆ ಈಗ ಉಳಿದಿರುವದು ಒಂದೇ ವರ್ಣ—ಅದೇ ಶೂದ್ರವರ್ಣ. ನಾವೀಗ ಯಾರನ್ನೂ ದೂರ ಹೊರಟಿಲ್ಲ; ಬರಿ ಇದ್ದದ್ದನ್ನು ಇದ್ದಂತೆ ಹೇಳುತ್ತಿದ್ದೇವೆ. ಶೂದ್ರರೆಂದರೆ ಪರರ ಸೇವೆ ಮಾಡಿ ಅವರಿಗೆ ಅಧೀನರಾಗಿರುವವರು. ಭಾರತವೊಂದು ಅಧೀನ ರಾಜ್ಯ (ಇದನ್ನು ಗಾಂಧೀಜಿ ೧೯೩೩ ರಲ್ಲಿ ಬರೆದಿದ್ದರು). ಆದುದರಿಂದ ಪ್ರತಿಯೊಬ್ಬ ಭಾರತೀಯನೂ ಶೂದ್ರನೇ. ಕೃಷಕನಿಗೆ ತನ್ನ ಭೂಮಿಯ ಮೇಲೆ ಒಡೆತನವಿಲ್ಲ; ವ್ಯಾಪಾರಿಗೆ ತನ್ನ ಸರಕುಗಳ ಸ್ವಾಮಿತ್ವವಿಲ್ಲ. ಕ್ಷತ್ರಿಯ ಬ್ರಾಹ್ಮಣ ವರ್ಗಗಳಿಗೆ ಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಗುಣಗಳುಳ್ಳ ಒಬ್ಬನೇ ಬ್ರಾಹ್ಮಣನಾಗಲಿ ಕ್ಷತ್ರಿಯನಾಗಲಿ ಇಂದು ದೊರೆಯಲಾರನೆನ್ನಬಹುದು.

## ಉಚ್ಚನೀಚ ಭೇದವಿಲ್ಲ

ವರ್ಣ ಪದ್ಧತಿಯನ್ನು ಮೊದಲು ಪ್ರವರ್ತಿಸಿದಾಗ ಉಚ್ಚ-ನೀಚತೆಯ ವಿಚಾರವೇ ಇದ್ದಿಲ್ಲೆಂದು ನನ್ನೆಣಿಕೆ. ಈ ಜಗತ್ತಿನಲ್ಲಿ ಯಾರು ಉಚ್ಚ, ಯಾರು ನೀಚ? ಅದ್ದರಿಂದ ಯಾರಾದರೂ ತಾನು ಉಚ್ಚವರ್ಗದವನೆಂದು ಬಗೆಯುತ್ತಿದ್ದರೆ ಅವನು ಉಚ್ಚನಲ್ಲ; ನೀಚನೆಂದು ಬಗೆಯುತ್ತಿದ್ದರೆ ಅವನು ಬರಿ ಅಜ್ಞಾನಕ್ಕೆ ಬಲಿಬಿದ್ದವನು. ಅವನಿಗೆ ಅವನ ಒಡೆಯರು ಹಾಗೆ ಕಲಿಸಿದ್ದಾರೆ, ಅಷ್ಟೆ. ಬ್ರಾಹ್ಮಣನೊಬ್ಬನಿಗೆ ಜ್ಞಾನವಿದ್ದರೆ ಸ್ವಾಭಾವಿಕವಾಗಿಯೆ ಜನರು ಅವನನ್ನು ಗೌರವಿಸುತ್ತಾರೆ. ಆದರೆ ಆ ಬ್ರಾಹ್ಮಣನು ತನಗೆ ದೊರೆತ ಗೌರವದಿಂದ ಉಬ್ಬಿಹೋಗಿ ತಾನು ಶ್ರೇಷ್ಠ ವರ್ಗದವನೆಂದು ಭಾವಿಸತೊಡಗಿದರೆ ಒಡನೆ ಅವನ ಬ್ರಾಹ್ಮಣ್ಯವೇ ನಷ್ಟವಾಗಿ ಹೋಗುತ್ತದೆ. ಗುಣಕ್ಕೆ ಯಾವಾಗಲೂ ಪೂಜೆ ದೊರೆತೇ ದೊರೆಯುತ್ತದೆ. ಆದರೆ ಗುಣಿಯಾದವನು ಸ್ವಾಹಂಕಾರದಿಂದ ಕೊಬ್ಬಿದರೆ ಜಗತ್ತಿಗೆ ಅವನ ಗುಣಗಳಿಂದೇನೂ ಪ್ರಯೋಜನವುಳಿಯದು. ಎಲ್ಲ ಬಗೆಯ ಪ್ರಾವೀಣ್ಯವೂ ಒಂದು ಬಗೆಯ ಧರ್ಮನಿಧಿ; ಅದನ್ನು ಸಮಾಜದ ಕಲ್ಯಾಣಕ್ಕಾಗಿಯೆ ಉಪಯೋಗಿಸಬೇಕು. ವ್ಯಕ್ತಿಗೆ ಸ್ವಹಿತಕ್ಕಾಗಿಯೇ ಬಾಳುವ ಹಕ್ಕಿಲ್ಲ. ನಿಜವಾಗಿ ಸ್ವಹಿತೈಕದೃಷ್ಟಿಯಿಂದ ಬಾಳುವದು ಸಾಧ್ಯವೇ ಇಲ್ಲ. ನಾವು ಸಮಾಜ ಹಿತಕ್ಕಾಗಿ ಬಾಳಿದಾಗಲೆ ಪರಿಪೂರ್ಣ ಸ್ವಹಿತವನ್ನು ಸಾಧಿಸಿದಂತಾಗುತ್ತದೆ.

ಪ್ರಾಚೀನ ಕಾಲದ ಸ್ಥಿತಿಗತಿಗಳೇನೇ ಇದ್ದಿರಲಿ, ಇಂದಿನ ದಿನಗಳಲ್ಲಂತೂ ಯಾರೂ ತಾನು ಶ್ರೇಷ್ಠ ವರ್ಗದವನೆಂದುಕೊಂಡು ಜೀವನ ನಡೆಸಲಾರ. ಇಂಥ ಶ್ರೇಷ್ಠಂಮನ್ಯತೆಯನ್ನು ಸಮಾಜ ಸಾಮಾನ್ಯವಾಗಿ, ಕಠಿನ ಪ್ರಸಂಗಗಳಲ್ಲಿ ಹೊರತು, ಸಹಿಸಿಕೊಳ್ಳುವದಿಲ್ಲ. ಜಗತ್ತು ಇಂದು ಪೂರ್ಣ ಪ್ರಜ್ಞವಾಗಿದೆ. ಈ ಪ್ರಜ್ಞೆಯಿಂದ ಕೆಲಮಟ್ಟಿಗೆ ಸ್ವೇಚ್ಛಾಚಾರವೂ ಉಂಟಾಗಿರಬಹುದಾದರೂ ಜನಾಭಿಪ್ರಾಯವಿಂದು ಉಚ್ಚನೀಚತೆಯ ತಾರತಮ್ಯವನ್ನು ಒಪ್ಪಲು ಸಿದ್ಧವಿಲ್ಲ. ಉಚ್ಚನೀಚ ಭೇದಗಳಿಗೆ ನಾಲ್ಕೂ ಸುತ್ತಲೂ ಹೊಡೆತಗಳು ಬೀಳುತ್ತಿವೆ. ಎಲ್ಲರ ಆತ್ಮಗಳೂ ಸಮಾನವೆಂಬ ತಿಳುವಳಿಕೆಗೆ ಮನ್ನಣೆ ದೊರೆಯುತಿದೆ. ನಾವೆಲ್ಲರೂ ಪರಮಾತ್ಮನ ಸೃಷ್ಟಿಯಾಗಿರುವದರಿಂದ ಮೇಲು ಕೀಳಿನ ವಿಚಾರಗಳಿಗೆ ಎಡೆಯೆ ಇಲ್ಲ. ಶ್ರೇಷ್ಠ ಜಾತಿ ಕನಿಷ್ಠ ಜಾತಿಗಳಿಲ್ಲೆಂದು ಹೇಳಿದಾಕ್ಷಣ ನಮ್ಮೆಲ್ಲರ ಯೋಗ್ಯತೆಗಳೂ ಸಮಾನವಾಗಿವೆಯೆಂದಾಗಲಿ ಆಗಿರಬೇಕೆಂದಾಗಲಿ ಅರ್ಥವಲ್ಲ. ಎಲ್ಲರಿಗೂ ಸಮಾನ ಯೋಗ್ಯತೆಗಳಾಗಲಿ ಸಮಾನ ಆಸ್ತಿಗಳಾಗಲಿ ಸಮಾನ ಸಂಧಿಗಳಾಗಲಿ ದೊರೆಯುವದಿಲ್ಲ. ಆದರೂ ಎಲ್ಲರೂ ಭಿನ್ನ ಭಿನ್ನ ಸ್ವಭಾವ ಸಾಮರ್ಥ್ಯ ವಯಸ್ಸುಗಳುಳ್ಳ ಅಣ್ಣ ತಂಗಿಯರಂತೆ ಸಮಾನರು.

ಆದುದರಿಂದ ವರ್ಣ ವ್ಯವಸ್ಥೆ ಆಧ್ಯಾತ್ಮಿಕವಾಗಿದ್ದರೆ ಅದರಲ್ಲಿ ಉಚ್ಚನೀಚ ಭೇದಕ್ಕೆಡೆಯಿಲ್ಲ.

## ಜನ್ಮಮೂಲ ವರ್ಣ

ಹೀಗೆ ನಾಲ್ಕು ವರ್ಣಗಳಿವೆ ಮತ್ತು ಅವು ಜನ್ಮಮೂಲವಾಗಿವೆ. ಒಬ್ಬಾತನು ಬೇರೊಂದು ವೃತ್ತಿಯನ್ನು ಕೈಕೊಂಡರೆ ಅವನ ವರ್ಣ ಬದಲಾಗಬಲ್ಲದು. ಆದರೆ ವರ್ಣಗಳು ಜನ್ಮಮೂಲವಾಗದಿದ್ದರೆ ವರ್ಣ ವ್ಯವಸ್ಥೆಗೆ ಅರ್ಥವೇ ಇಲ್ಲದಾಗುವದು.

ವರ್ಣಪದ್ಧತಿಯೊಂದು ತಾತ್ವಿಕ ಮತ್ತು ಆರ್ಥಿಕ ವ್ಯವಸ್ಥೆ. ಅದು ಜನ್ಮಾಂತರಗಳ ಮತ್ತು ವಂಶಪಾರಂಪರ್ಯದ ವಾಸನೆಗಳನ್ನು ಅಂಗೀಕರಿಸುತ್ತದೆ. ಎಲ್ಲರೂ ಹುಟ್ಟುವಾಗ ಸಮಾನಸಾಮರ್ಥ್ಯದವರಾಗಿಯೂ ಒಂದೇ ಬಗೆಯ ಒಲವಿನವರಾಗಿಯೂ ಇರುವದಿಲ್ಲ. ಪ್ರತಿಯೊಂದು ಮಗುವಿನ ಬುದ್ಧಿಶಕ್ತಿಯನ್ನು ಅಳೆಯಲು ಹೆತ್ತವರಿಂದಲೂ ಸಾಧ್ಯವಿಲ್ಲ, ಸರಕಾರದಿಂದಲೂ ಸಾಧ್ಯವಿಲ್ಲ. ಆದರೆ ಪ್ರತಿಯೊಂದು ಮಗುವೂ ತನ್ನ ಕುಲಕ್ರಮಾಗತವಾದ, ಅವರಣದಿಂದ ಸೂಚಿತವಾದ ಮತ್ತು ಜನ್ಮಾಂತರವಾಸನೆಯಿಂದ ನಿರ್ದಿಷ್ಟವಾದ ವೃತ್ತಿಯಲ್ಲಿ ತರಬೇತಿ ಹೊಂದಿದರೆ ಯಾವ ತೊಂದರೆಯೂ ಇಲ್ಲ. ಆಗ ನಿರರ್ಥಕ ಗುಣಪರೀಕ್ಷೆಯಲ್ಲಿ ಕಾಲಹರಣ ಮಾಡುವ ಪ್ರಮೇಯವುಂಟಾಗದು; ಆತ್ಮವನ್ನು ದುಷ್ಟವಾಗಿ ಮಾಡುವ ಸ್ಪರ್ಧೆಗೆಡೆಯಿಲ್ಲ; ಸಮಾಜದಲ್ಲಿ ಸಂತೃಪ್ತಿ ಸಮಾಧಾನಗಳು ನೆಲೆಗೊಂಡು, ಬದುಕಿಗಾಗಿ ಕಾಳಗ ಹೂಡುವ ಅವಶ್ಯಕತೆ ತಪ್ಪುತ್ತದೆ.

## ವರ್ಣಸಾಂಕರ್ಯ, ಕರ್ಮಸಾಂಕರ್ಯ

ವರ್ಣ ಪದ್ಧತಿಯಲ್ಲಿ ಉಚ್ಚನೀಚ ಭಾವವನ್ನು ನಿರ್ಮಾಣ ಮಾಡುವ ತತ್ವ ಅಡಕವಾಗಿದೆ. ಚಮ್ಮಾರನಿಗಿಂತ ಬಡಗಿ ಶ್ರೇಷ್ಠನೇದಾದರೆ ಮತ್ತು ಡಾಕ್ಟರನೂ ವಕೀಲನೂ ಅವರಿಬ್ಬರಿಗಿಂತಲೂ ಶ್ರೇಷ್ಠರಾದರೆ, ಯಾರೂ ಸ್ವೇಚ್ಛೆಯಿಂದ ಚಮ್ಮಾರನಾಗಲಿ ಬಡಗಿಯಾಗಲಿ ಆಗಬಯಸಲಿಕ್ಕಿಲ್ಲ; ಎಲ್ಲರೂ ಡಾಕ್ಟರರೋ ವಕೀಲರೋ ಆಗಲು ಹೆಣಗುವರು. ಆ ಸ್ಥಿತಿಯಲ್ಲಿ ಅವರು ಹಾಗೆ ಮಾಡುವದೂ ನ್ಯಾಯವೇ, ಹಾಗೆ ಮಾಡಿದರೆ ಅವರು ಪ್ರಶಂಸಾರ್ಹರೇ ಸರಿ. ಅರ್ಥಾತ್ ಆಗ ವರ್ಣ ವ್ಯವಸ್ಥೆ ಕೇಡೆಂದು ಬಗೆದು ಅದನ್ನು ರದ್ದುಗೊಳಿಸಬೇಕಾಗುವದು.

ಆದರೆ ಪ್ರತಿಯೊಬ್ಬನೂ ತನ್ನ ತಂದೆಯ ವೃತ್ತಿಯನ್ನೇ ಅವಲಂಬಿಸಬೇಕೆಂದು ಸೂಚಿಸಲ್ಪಟ್ಟಿದ್ದರೂ ಆ ಸೂಚನೆಯೊಡನೆ ಪ್ರತಿಯೊಂದು ವೃತ್ತಿಯವನೂ ಆ ವೃತ್ತಿಯಿಂದ ತನ್ನ ಜೀವನ ನಿರ್ವಾಹಕ್ಕೆ ಬೇಕಾದಷ್ಟನ್ನೇ ಗಳಿಸಬೇಕೆಂಬ ನಿಯಮವನ್ನೂ ಹಾಕಬೇಕಾಗಿದೆ. ಬಡಗಿ ಚಮ್ಮಾರನಿಗಿಂತ ಹೆಚ್ಚು ಗಳಿಸಿದರೆ ಅಥವಾ ವಕೀಲನೋ ಡಾಕ್ಟರೋ ಅದವನು ಅವರಿಬ್ಬರಿಗಿಂತಲೂ ಹೆಚ್ಚು ಗಳಿಸಿದರೆ, ಆಗ ಪ್ರತಿಯೊಬ್ಬನೂ ವಕೀಲನೋ ಡಾಕ್ಟರನೋ ಆಗಲು ಪ್ರಯತ್ನಿಸುವನು. ಈಗ ನಡೆಯುತ್ತಿರುವದಾದರೂ ಇದೇ. ಅದರಿಂದ ದ್ವೇಷ ಬೆಳೆದಿದೆ, ಮತ್ತು ಡಾಕ್ಟರ ವಕೀಲರ ಸಂಖ್ಯೆಯೂ ಮಿತಿಮೀರಿ ಹೆಚ್ಚಿದೆ. ಸಮಾಜಕ್ಕೆ ಚಮ್ಮಾರನೂ ಬಡಗಿಯೂ ಬೇಕಾಗಿರುವಂತೆ ವಕೀಲನೂ ಡಾಕ್ಟರೂ ಕೂಡ ಬೇಕಾಗಿರಬಹುದು. ಈ ನಾಲ್ಕು ವೃತ್ತಿಗಳನ್ನು ಇಲ್ಲಿ ಉದಾಹರಣೆಗಾಗಿ ಮತ್ತು ತುಲನೆಗಾಗಿ ಮಾತ್ರ ತೆಗೆದುಕೊಳ್ಳಲಾಗಿದೆ. ಸಮಾಜಕ್ಕೆ ಈ ವೃತ್ತಿಯನ್ನು ಅನುಸರಿಸುವವರು ಬೇಕೇ, ಆ ವೃತ್ತಿಯವರು ಬೇಡವೇ ಎಂಬ ಚರ್ಚೆಯಲ್ಲಿ ಕಾಲ ಕಳೆಯುವದು ಅಪ್ರಸ್ತುತ.

## ವಿದ್ಯೆ ದ್ರವ್ಯಾರ್ಜನೆಯ ಸಾಧನವಲ್ಲ

ಅಲ್ಲದೆ, ವಿದ್ಯೆ ಅಥವಾ ಜ್ಞಾನವೆಂಬುದೊಂದು ವ್ಯಾಪಾರದ ಸರಕಲ್ಲ; ಅದನ್ನು ಧನ ಸಂಪಾದನೆಗಾಗಿ ಉಪಯೋಗಿಸಕೂಡದೆಂಬ ತತ್ವವೂ ಈ ವರ್ಣವ್ಯವಸ್ಥೆಯ ಒಂದು ಅಂಗವಾಗಿದೆ. ಆದುದರಿಂದ, ವಕೀಲನೂ ಡಾಕ್ಟರನೂ ಸಮಾಜಕ್ಕೆ ಸೇವೆ ಮಾಡುವದು ಅವಶ್ಯವಾಗಿರುವ ಕಾರಣ, ಅವರು ಅದರ ಮೂಲಕ ಜೀವನನಿರ್ವಾಹಕ್ಕೆ ಬೇಕಾದಷ್ಟನ್ನು ಮಾತ್ರ ಸಂಪಾದಿಸುವದು ಯೋಗ್ಯವಾದೀತು. ಹಿಂದಿನ ಕಾಲದಲ್ಲಿ ನಡೆಯುತ್ತಿದ್ದುದಾದರೂ ಹೀಗೆಯೆ. ಹಳ್ಳಿಯ ವೈದ್ಯನು ಬಡಗಿಗಿಂತ ಹೆಚ್ಚು ಸಂಪಾದಿಸುತ್ತಿದ್ದಿಲ್ಲ, ಬದುಕಿಗೆ ಬೇಕಾದಷ್ಟೆ ದೊರಕಿಸಿಕೊಳ್ಳುತ್ತಿದ್ದನು. ಒಂದೇ ಮಾತಿನಲ್ಲಿ, ಎಲ್ಲ ವೃತ್ತಿ ಕೈಗಾರಿಕೆಗಳಿಗೂ ಒಂದೇ ಬಗೆಯಾದ ವೇತನ ಪ್ರಮಾಣವಿರಬೇಕು, ಅದು ಬರಿ ಜೀವನವೇತನವಿರಬೇಕು. ವರ್ಣಗಳ ಸಂಖ್ಯೆ ಇಷ್ಟೆ ಇರಬೇಕೆಂದು ಶಾಸ್ತ್ರವಿಲ್ಲ; ಮನುಷ್ಯನ ಕರ್ತವ್ಯವನ್ನು ನಿರ್ದೇಶಿಸುತ್ತವೆಯೆಂದೇ ಅವುಗಳಿಗೆ ಬೆಲೆ. ವರ್ಣಗಳಸಂಖ್ಯೆಯನ್ನು ನಾವು ಒಂದೆಂದಾಗಲಿ ಹಲವೆಂದಾಗಲಿ ನಮ್ಮ ಮನಸಿಗೆ ತೋರಿದಂತೆ ಹೇಳಬಹುದು. ಧರ್ಮಶಾಸ್ತ್ರಗಳು ನಾಲ್ಕನ್ನು ಮಾತ್ರ ಉಲ್ಲೇಖಿಸಿವೆ. ಆದರೆ ಎಲ್ಲವಕ್ಕೂ ಸಮಾನವಾದ ಮಾನವನ್ನು ಕೊಟ್ಟ ಮೇಲೆ ಅವು ನಾಲ್ಕಾಗಿದ್ದರೂ ಅಷ್ಟೇ, ಒಂದಾಗಿದ್ದರೂ ಅಷ್ಟೇ.

ಆಶ್ರಮದಲ್ಲಿ ಪುನರುಜ್ಜೀವನಗೊಳಿಸಲು ನಾವು ಪ್ರಯತ್ನಿಸುತ್ತಿರುವ ವರ್ಣಪದ್ಧತಿ ಇದೇ. ಅದರ ಎರಡು ಮುಖ್ಯ ಮೂಲತತ್ವಗಳನ್ನು ನಾನು ಈಗಾಗಲೆ ಉಲ್ಲೇಖಿಸಿದ್ದೇನೆ,— ಅದರಲ್ಲಿ ಉಚ್ಚ ನೀಚ ಭೇದವಿಲ್ಲೆಂಬುದೊಂದು, ಪ್ರತಿಯೊಬ್ಬನಿಗೂ ಜೀವನ ನಿರ್ವಾಹಕ್ಕೆ ಸಾಕಷ್ಟು ವೇತನ ದೊರೆಯಬೇಕು ಮತ್ತು ಆ ಜೀವನವೇತನ ಎಲ್ಲರಿಗೂ ಸಮಾನವಾಗಿರಬೇಕೆಂಬುದು ಇನ್ನೊಂದು. ಇವುಗಳಿಗೆ ಮನ್ನಣೆ ದೊರೆತಷ್ಟು ಮಟ್ಟಿಗೆ ಅವು ಸಮಾಜಕ್ಕೆ ಹಿತಕಾರಿಯಾಗುವವು.

ಇಂಥ ಯೋಜನೆಯನ್ನು ಅಂಗೀಕರಿಸಿದರೆ ಜ್ಞಾನಾರ್ಜನೆಗೆ ಯಾವ ಉತ್ತೇಜನವೂ ದೊರೆಯುವದಿಲ್ಲೆಂದು ಆಕ್ಷೇಪಿಸಬಹುದು. ಆದರೆ ಇಂದು ಜ್ಞಾನಾರ್ಜನೆಯ ಹಿಂದಿರುವ ಉದ್ದೇಶವು ಅದನ್ನು ಕಲುಷಿತಗೊಳಿಸುತ್ತಿದೆ. ಅದು ಕಾರಣ ಉತ್ತೇಜನವಿಲ್ಲದಿದ್ದರೆ ಕ್ಷೇಮವೇ ಆದೀತು! ಸೇವಾಬುದ್ಧಿಯುಳ್ಳವನು ಅವಶ್ಯವಿದ್ದ ಜ್ಞಾನವನ್ನು ಸಂಗ್ರಹಿಸಿಯೇ ತೀರುವನು, ಆತನ ಜ್ಞಾನ ... ಅವಶ್ಯ ಭೂತದಯಾಪರತ್ವಯುಕ್ತವಾಗಿರುವದು. ... ದ್ರವ್ಯಾರ್ಜನೆಯ ... ನೋಡಿದರೆ, ... ಇಂದು ... ಜ್ಞಾನದ ದುರುಪಯೋಗ ... ಯುತ್ತಿದೆ. "ಹೊಸ ವ್ಯವಸ್ಥೆ" ಯಲ್ಲಿ ... ದುರುಪಯೋಗ ಕಡಿಮೆಯಾಗುತ್ತದೆ.

## ಕಟ್-ಸ್ಪರ್ಧೆ

ಆಗಲೂ ನಾವು ಒಳ್ಳೆಯವರಾಗಬೇಕು, ... ನಾವು ಹೆಚ್ಚು ಸೇವೆ ಮಾಡಬೇಕು. ... ಅಹಮಹಮಿಕೆ ಇದ್ದೇ ಇರುವದು ... ಎಲ್ಲರೂ ಸಮಾನವಾದ ಜೀವನ ವೇತನ ... ಯುವ ಕಾರಣ ಅಸಂತೃಪ್ತಿ, ಅಸ್ವಸ್ಥತೆಗಳಿಗೆ ಎಡೆಯಾಗುವದಿಲ್ಲ.

ವರ್ಣಕ್ಕೆ ಈಗ ಕಲ್ಪಿಸಲ್ಪಡುತ್ತಿರುವ ಅರ್ಥ ತಪ್ಪು. ಈ ತಪ್ಪು ಅರ್ಥದ ಸ್ಥಾನದಲ್ಲಿ ಮೇಲೆ ... ರೇಖಿಸಿದ ತತ್ವಗಳು ಸ್ಥಾಪಿಸಲ್ಪಡಬೇಕು ... ಅಸ್ಪೃಶ್ಯತೆ ಹೋಗಬೇಕು. ... ಅಂತರ್ಜಾತೀಯ ವಿವಾಹಗಳಿಗೂ ವರ್ಣಕ್ಕೂ ... ಏನೂ ಸಂಬಂಧವಿಲ್ಲ. ತನಗೆ ಬೇಕಾದ ... ಸಂಗಡ ಉಣ್ಣುವ, ಬೇಕಾದವಳನ್ನು ಮದುವೆ... ಯಾಗುವ ಸ್ವಾತಂತ್ರ್ಯವಿರಬೇಕು. ಸಾಧಾರಣವಾಗಿ ಪ್ರತಿಯೊಬ್ಬನೂ ತನ್ನ ವರ್ಣಕ್ಕೆ ಸೇರಿದ ಹುಡುಗಿಯನ್ನೆ ಮಾಡಿಕೊಳ್ಳುತ್ತಾನೆ. ಆದರೆ ... ಒಬ್ಬನು ಇನ್ನೊಂದು ವರ್ಣದವಳನ್ನು ಮದುವೆಯಾದರೆ ಅದು ಪಾಪವೆಂದು ಭಾವಿಸತಕ್ಕದ್ದಲ್ಲ ... ಯಾರಾದರೊಬ್ಬನ ನಡೆವಳಿ ದಂಡನೀಯವಾಗಿದ್ದರೆ ಆಗ ಅವನಿಗೆ ಸಮಾಜವೇ ಬಹಿಷ್ಕಾರ ಹಾಕುವದಲ್ಲದೆ ಅವನ ವರ್ಣದವರಲ್ಲ. ... ಸಮಾಜದ ರಚನೆ ಇಂದಿಗಿಂತ ಒಳ್ಳೆಯದಾಗುವದು, ಈಗ ಅದನ್ನು ಆವರಿಸಿರುವ ಕಲ್ಮಷವೆಲ್ಲ ... ದಂಥವೂ ತೊಳೆದುಹೋಗುವವು.

---

✽ ಬ್ರಿಟನ್ನಿನ ೩೬೦ ಲಕ್ಷ ಪ್ರಾಯ ಪ್ರಬುದ್ಧ (೧೬ ವರ್ಷ ಮೀರಿದ) ಜನಸಂಖ್ಯೆಯಲ್ಲಿ ೨೧೦ ಲಕ್ಷ ಜನರು ಸಿಗರೇಟು ಅಥವಾ ಹುಕ್ಕಾ ಸೇದುತ್ತಾರೆ. ಗಂಡಸರಲ್ಲಿ ೧೦೦ ಕ್ಕೆ ೮೦ ಜನ ಹೆಂಗಸರಲ್ಲಿ ೧೦೦ ಕ್ಕೆ ೪೦ ಜನ ಧೂಮಪಾನಿಗಳು. ಎಲ್ಲ ವರ್ಗಗಳಲ್ಲಿಯೂ ಈ ವ್ಯಸನ ಸಮಾನ ಪ್ರಮಾಣದಲ್ಲಿ ಹಬ್ಬಿದೆ. ... ಯಾಗದವರು ಅದವರೆಂಬ ಭೇದವೂ ಇಲ್ಲ. ೨೫೦ ಲಕ್ಷ ಜನರು ದಿನಕ್ಕೆ ತಲಾ ೧೫ ಸಿಗರೇಟಿನಂತೆ ಸೇದುತ್ತಾರೆ. ಒಬ್ಬ ಗಾಢ ವ್ಯಸನಿಯು ತಾನು ೪೦ ವರ್ಷಗಳಲ್ಲಿ ಎಂಟೊಂಭತ್ತು ಸಾವಿರ ಔಂಸು ತಂಬಾಕು ಸೇದಿರಬೇಕೆಂದು, ಅದರ ವೆಚ್ಚ ೮೦೦ ಪೌಂಡು (ವರ್ಷಕ್ಕೆ ೨೦ ಪೌಂಡು-೨೬೫ ರೂಪಾಯಿ) ಆಗಿರಬೇಕೆಂದು ಲೆಕ್ಕ ಹಾಕಿದ್ದಾನೆ.

# ಗ್ರಹಗಳ ಮುನ್ನೋಟ

## ಜುಲೈ ೧೧ ರಿಂದ ೧೭ ರ ವರೆಗೆ

**ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ**

### ಮೇಷ

ಪ್ರಕೃತಿಯೂ ಸರಿಯಾಗಿದ್ದರೂ ಮಕ್ಕಳ ಕಡೆಯಿಂದ ನಿಮಗೆ ಮನೋವ್ಯಥೆಯ ಪ್ರಸಂಗವುಂಟಾದೀತು. ಉದ್ಯೋಗದಲ್ಲಿ ಪ್ರತಿಷ್ಠೆ ಅಷ್ಟಕ್ಕಷ್ಟೆ. ಅದರೆ ಲಾಭಮಾತ್ರ ಚೆನ್ನಾಗಿ ಆಗುತ್ತದೆ. ಯಾವುದೋ ಒಂದು ದೊಡ್ಡ ಯೋಜನೆಯ ಸನ್ನಾಹದಲ್ಲಿ ನಿಮ್ಮ ಮನಸ್ಸು ಆಸಕ್ತವಾಗಿರುವದು. ವಾದ ಸ್ಪರ್ಧೆಗಳಲ್ಲಿ ನಿಮಗೆ ಯಶಸ್ಸು ದೊರೆತರೂ ನಿಮ್ಮ ಪಕ್ಷದ ಕೆಲವರ ಮೇಲೆ ನೀವು ಕಣ್ಣಿಡಬೇಕಾಗುವದು. ಹತ್ತಿರದ ಸಂಬಂಧಿಕರಲ್ಲಿ ಒಂದು ಆನಂದ ಪ್ರಸಂಗ. ಪ್ರವಾಸ ಪತ್ರವ್ಯವಹಾರಗಳು ಸಫಲವಾಗುವವು; ಭೆಟ್ಟಿಗೆ ಅನುಕೂಲ ಕಾಲವಿಲ್ಲ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲ ೨ ಚರಣಗಳಿಗೆ ಅಷ್ಟು ಅನಿಷ್ಟವಿಲ್ಲ. ತಾ. ೧೧, ೧೩, ೧೪, ೧೭ ಅನುಕೂಲ.

### ವೃಷಭ

ಮಕ್ಕಳ ಅಯೋಗ್ಯ ವರ್ತನೆಯನ್ನು ಬಿಟ್ಟರೆ ಈ ವಾರ ನಿಮ್ಮ ಗ್ರಹಗತಿ ಚೆನ್ನಾಗಿಯೇ ಇದೆಯೆನ್ನಬೇಕು. ಶತ್ರುಗಳಲ್ಲೊಬ್ಬನ ಮೇಲೆ ನೀವು ಔದಾರ್ಯ ತೋರಿಸಿ ಉಪಕಾರ ಮಾಡುವದರಿಂದ ಅವನು ತೀರ ಹತಪ್ರಭನಾಗಿ ಬಿಡುವನು. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಯಥೇಷ್ಟ ಲಭಿಸುವದು. ನೀವು ಹಿಡಿದ ಕೆಲಸ ಜಯಿಸುವದು. ವಾದ ಸ್ಪರ್ಧೆಗಳಲ್ಲಿ ಶತ್ರು ಸೋಲುವನಾದರೂ ನಿಮಗೇ ಅದರಲ್ಲಿ ಉತ್ಸಾಹ ಕಡಿಮೆಯಾಗಿ ಬಿಡುವದು. ಪ್ರವಾಸ ಸುಖಕರವಾಗದು. ಭೆಟ್ಟಿಯೂ ಪತ್ರವ್ಯವಹಾರವೂ ಚೆನ್ನಾಗಿ ನಡೆಯುವವು. ಕೃತ್ತಿಕೆಯ ಕೊನೆಯ ೩ ಮತ್ತು ರೋಹಿಣಿಯ ಮೊದಲ ೨ ಚರಣಗಳಿಗೆ ಮಾತ್ರ ಅಲ್ಪ ಸ್ವಲ್ಪ ತೊಂದರೆ ಹೆಚ್ಚು. ತಾ. ೧೧, ೧೩, ೧೬, ೧೭ ಅನುಕೂಲ.

### ಮಿಥುನ

ನಿಮ್ಮ ಪ್ರಕೃತಿಗೆ ಚಿಂತೆಯಿಲ್ಲ. ಹೆಂಡತಿ ಮಕ್ಕಳದರ ಬಗ್ಗೆ ಮಾತ್ರ ಸ್ವಲ್ಪ ಎಚ್ಚರವಿರಲಿ. ಸ್ಥಾವರದಲ್ಲಿ ಅನುಕೂಲ ಪ್ರತಿಕೂಲ ಸಂಗತಿಗಳೆರಡೂ ಘಟಿಸಬಹುದು. ಉದ್ಯೋಗದಲ್ಲಿ ಪ್ರತಿಷ್ಠೆ ಚೆನ್ನಾಗಿದ್ದರೂ ಲಾಭಕ್ಕಿಂತ ಹೆಚ್ಚು ವೆಚ್ಚ ಗಂಟು ಬೀಳುವದರಿಂದ ಚಿಂತಾಕ್ರಾಂತರಾಗುವಿರಿ. ವಾದ ಸ್ಪರ್ಧೆಗಳಲ್ಲಿ ಒಪ್ಪಂದವಾಗದಿದ್ದರೆ ಇಬ್ಬರ ಸ್ಥಿತಿಯೂ ಇಪ್ಪಂತೆಯೆ ಇರುವದು. ಪ್ರವಾಸ, ಪತ್ರವ್ಯವಹಾರ ಅನುಕೂಲವಾಗಿದ್ದರೂ ಭೆಟ್ಟಿಯ ಪ್ರಯತ್ನ ಬೇಡ. ಆರ್ದ್ರೆಯ ಕೊನೆಯ ೨ ಮತ್ತು ಪುನರ್ವಸುವಿನ ಮೊದಲ ೨ ಚರಣಗಳಿಗೆ ಪ್ರತಿಕೂಲ ಫಲಗಳ ಬಾಧೆ ತೀವ್ರವಾಗಿರದು. ತಾ. ೧೪, ೧೫, ೧೬ ಅನುಕೂಲ.

### ಕರ್ಕ

ಎಲ್ಲರ ಪ್ರಕೃತಿ ಚೆನ್ನಾಗಿದ್ದರೂ ಗೃಹ ಕಲಹವನ್ನು ಸಮಾಧಾನಗೊಳಿಸದಿದ್ದರೆ ತುಂಬ ಕಷ್ಟಕ್ಕೊಳಗಾಗಬೇಕಾದೀತು. ವ್ಯಾಪಾರದಲ್ಲಿ ಪ್ರತಿಷ್ಠೆ ಚೆನ್ನಾಗಿದ್ದು ಲಾಭವೂ ನಿರೀಕ್ಷೆ ಮೀರಿ ದೊರೆಕುವದಾದರೂ ನಿಷ್ಕಾಬಟ್ಟೆ ಖರ್ಚುಗಳಿಗೆ ಎಡೆಕೊಟ್ಟರೆ ತಲೆಗೆ ಕೈಯಿಟ್ಟುಕೊಂಡು ಕೂಡ್ರುವ ಪ್ರಸಂಗ ಬಾರದಿದ್ದೀತೆ? ವಾದ ಸ್ಪರ್ಧೆಗಳಲ್ಲಿ ಯಥಾಸ್ಥಿತಿ. ನಿಮ್ಮರ ಮಾತಾಡುವ ಪ್ರಸಂಗ ಬರಬಹುದು. ಸ್ಥಾವರದಲ್ಲಿ ಒಂದು ಅನುಕೂಲ ಘಟನೆ. ಪ್ರವಾಸಕ್ಕೂ ಭೆಟ್ಟಿಗೂ ಅನುಕೂಲ ಸಮಯವಿದು. ಪತ್ರವ್ಯವಹಾರದಿಂದ ಕೆಲಸವಾಗುವದು ಸಂಶಯ. ಪುಷ್ಯದ ಕೊನೆಯ ೨ ಮತ್ತು ಅಶ್ಲೇಷೆಯ ಮೊದಲ ೨ ಚರಣಗಳಿಗೆ ವಿಶೇಷ ಅನಿಷ್ಟವಿಲ್ಲ. ತಾ. ೧೧, ೧೩, ೧೬ ಅನುಕೂಲ.

### ಸಿಂಹ

ನಿಮ್ಮ ಪ್ರಕೃತಿ ಸರಿಯಾಗಿದ್ದರೂ ಹೆಂಡತಿಗೆ ಅಲ್ಪಸ್ವಲ್ಪ ಕ್ಲೇಶ. ಮಕ್ಕಳಲ್ಲೊಬ್ಬರ ದೀರ್ಘ ವಿರಹದಿಂದ ಮನಸ್ಸು ವ್ಯಥಿತವಾಗುವದು. ಉದ್ಯೋಗದಲ್ಲಿ ಪ್ರತಿಷ್ಠೆ ಕಡಿಮೆಯಾದರೂ ಲಾಭಕ್ಕೆ ಕೊರತೆಯಿಲ್ಲ. ಕೆಲಸದಲ್ಲಿ ತುಂಬ ದಕ್ಷತೆ ವಹಿಸಬೇಕೆಂದು ನಿಮಗೆ ನಿಮ್ಮ ಸೂಚನೆ. ಪರಿಶ್ಮರ ವಕ್ರದೃಷ್ಟಿ ನಿಮ್ಮ ಮೇಲೆ ತಿರುಗುವ ಸಂಭವವುಂಟು. ಸ್ವಪ್ನಗಳು ಭಯವನ್ನುಂಟುಮಾಡಬಹುದು. ವಾದ ಸ್ಪರ್ಧೆಗಳಲ್ಲಿ ಹೇಳಬೇಕಾದ ಮಾತುಗಳು ಜರಗುವದಿಲ್ಲ. ಮನೆಯೊಳಗೇ ಉದ್ಭವಿಸಬಹುದಾದ ಶತ್ರುಗಳನ್ನು ನೀವು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡುತ್ತಿರಬೇಕು. ಭೆಟ್ಟಿಗೆ ಯೋಗ್ಯ ಫಲ ಸಿಗಲಿಕ್ಕಿಲ್ಲ. ಪತ್ರವ್ಯವಹಾರವೇ ಸದ್ಯಕ್ಕೆ ಲೇಸು. ಪ್ರವಾಸಕ್ಕೆ ಅಡ್ಡಿಯಿಲ್ಲ. ಮಘೆಯ ಕೊನೆಯ ೨ ಮತ್ತು ಪೂರ್ವದ ಮೊದಲ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೪, ೧೫, ೧೭ ಅನುಕೂಲ.

### ಕನ್ಯಾ

ಗಂಡಹೆಂಡಿರ ಜಗಳ ಉಂಡುಮಲಗುವ ತನಕ ಎಂಬ ಗಾದೆ ಸುಳ್ಳಾಗಿ ನಿಮ್ಮ ನಿಮ್ಮೊಳಗಿನ ವಕ್ರತೆಗಳಿಂದ ಮೂರು ನಾಲ್ಕು ದಿನಗಳ ವರೆಗೆ ಮಾತುಕತೆ ಕೂಡ ಇಲ್ಲದಿರುವಷ್ಟು ಪ್ರಸಂಗ ತಂದುಕೊಳ್ಳುವಿರಿ. ಸ್ಥಾವರದಲ್ಲಿ ಸ್ವಲ್ಪ ಸುಧಾರಣೆ. ದಾಯಾದ್ಯರ ಉತ್ಕರ್ಷ. ಉದ್ಯೋಗದಲ್ಲಿ ಪ್ರತಿಷ್ಠೆ, ಲಾಭ ಉತ್ತಮ. ವಾಗಿದ್ದರೂ ಖರ್ಚು ಇಮ್ಮಡಿ. ವಾದ ಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳು ಇದ್ದಲ್ಲೆ ಇರುವವು. ಸ್ತ್ರೀ ಜನರಲ್ಲಿ ಸ್ನೇಹವಾಗುವದು. ಪ್ರವಾಸಾದಿಗಳು ಉತ್ತಮ ಉತ್ತರೆಯ ಕೊನೆಯ ೩ ಮತ್ತು ಹಸ್ತದ ಮೊದಲ ೨ ಚರಣಗಳಿಗೆ ಸ್ವಲ್ಪ ತೊಂದರೆ. ಹೆಚ್ಚು. ತಾ. ೧೧, ೧೩, ೧೬, ೧೭ ಅನುಕೂಲ.

### ತುಲಾ

ನಿಮ್ಮ ಪ್ರಕೃತಿ ಚೆನ್ನಾಗಿದ್ದರೂ ಹೆಂಡತಿಗೆ ಅಲ್ಪಸ್ವಲ್ಪ ಜಡ್ಡಾಗಬಹುದು. ಉದ್ಯೋಗದಲ್ಲಿ ಲಾಭ ಚೆನ್ನಾಗಿರುವದಲ್ಲದೆ ಪ್ರತಿಷ್ಠೆ ಹೆಚ್ಚಿಸುವ ಸಂಗತಿಗಳು ಜರಗುವ ಯೋಗವುಂಟು. ವಾದ ಸ್ಪರ್ಧೆಗಳಲ್ಲಿ ನಿಮಗೆ ಪ್ರತ್ಯಕ್ಷ ವಿಜಯ ದೊರೆಯದಿದ್ದರೂ ಶತ್ರುವಿಗೆ ಹೊರಗಿಂದ ಹೊರಗೇ ಹಾನಿಯಾಗುವದು. ಪ್ರವಾಸಾದಿ ಕಾರ್ಯಗಳು ಉತ್ತಮ. ಸ್ವಾತಿಯ ಕೊನೆಯ ೨ ಮತ್ತು ವಿಶಾಖೆಯ ಮೊದಲ ೨ ಚರಣಗಳಿಗೆ ಹೆಚ್ಚು ಶುಭಕರ. ತಾ. ೧೪, ೧೫, ೧೭ ಅನುಕೂಲ.

### ವೃಶ್ಚಿಕ

ದಂಪತಿಗಳಿಬ್ಬರ ಪ್ರಕೃತಿಯೂ ಚೆನ್ನಾಗಿದ್ದರೂ ಮಕ್ಕಳ ವಿಷಯದಲ್ಲಿ ತೀವ್ರ ಮತಭೇದದಿಂದ ಒಬ್ಬೊಬ್ಬರ ಮುಖ ಒಂದೊಂದು ಕಡೆಗಾಗುವದು. ಪ್ರತಿಷ್ಠೆಯ ಮೇಲೆ ಕಲಂಕ ಬೀಳುವಂಥ ಕೆಲ ಸಂಗತಿಗಳಾಗಬಹುದು. ಧಾರ್ಮಿಕ ಕಾರ್ಯದಲ್ಲಿ ಎಣಿಸದ ವಿಘ್ನಗಳೊದಗುವ ಮೂಲಕ ಮನಸ್ಸಿನಲ್ಲಿ ಬೇಸರ. ವಾದ ಸ್ಪರ್ಧೆಗಳಲ್ಲಿ ನಿಮ್ಮ ಕೈಯೇ ಮೇಲು. ಪ್ರವಾಸ ಹಿತಕರ. ಅದರೆ ಭೆಟ್ಟಿ ಪತ್ರವ್ಯವಹಾರಗಳು ತ್ರಾಸದಾಯಕ. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠದ ಮೊದಲ ೨ ಚರಣಗಳಿಗೆ ಅಷ್ಟು ತೊಂದರೆಯಾಗದು. ತಾ. ೧೧, ೧೩, ೧೬, ೧೭, ಅನುಕೂಲ.

### ಧನು

ಆರೋಗ್ಯ ಚೆನ್ನಾಗಿದ್ದರೂ ಮತಭೇದಗಳಿಂದ ದಾಂಪತ್ಯ ಜೀವನದ ಶ್ರೀ ಕುಂದಬಹುದಾಗಿದೆ. ಆಪ್ತರ, ನೆರೆಹೊರೆಯವರ ಮತ್ತು ಬಹಳ ಕಾಲದಿಂದ ಇರುವ ನೌಕರರ ದೆಸೆಯಿಂದ ನಿಮ್ಮ ಕೆಲಸಕ್ಕೆ ವಿಘ್ನಗಳು; ಅದರೆ ಮನೆತನದ ಗೌರವವನ್ನು ಹೆಚ್ಚಿಸತಕ್ಕ ಒಂದು ಘಟನೆಯಾಗಬಹುದು. ಉದ್ಯೋಗದಲ್ಲಿ ಲಾಭವೂ ಪ್ರತಿಷ್ಠೆಯೂ ಚೆನ್ನಾಗಿರುವದು. ಒಬ್ಬ ಪೂಜ್ಯ ವ್ಯಕ್ತಿಗೆ ಅಪಮಾನವಾಗುವ ಸಂಭವವುಂಟು. ವಾದ ಸ್ಪರ್ಧೆಗಳಲ್ಲಿ ನಿಮಗೆ ಯಶ. ಪ್ರವಾಸಾದಿ ಕಾರ್ಯ ಹಿತಕರ. ಮೂಲದ ಕೊನೆಯ ೨ ಮತ್ತು ಪೂರ್ವಾಷಾಢದ ಮೊದಲ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೧, ೧೩, ೧೪, ೧೫ ಅನುಕೂಲ.

### ಮಕರ

ನಿಮಗೂ ಮಕ್ಕಳಿಗೂ ಹುಸು ಪ್ರಕೃತಿ ಕೆಡುವಂತಿದೆ. ಅದರೆ ಉಳಿದ ಪ್ರಾಪಂಚಿಕ ಸುಖ ಬಯಸಿದಂತೆ. ದಾಯಾದ್ಯರಲ್ಲಿ ಹುಸುವಿರೋಧ. ಸ್ಥಾವರದಲ್ಲಿ ಅನುಕೂಲ ಸಂಧಿಗಳು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳು ತುಂಬ. ಯಾವುದೋ ಒಂದು ಕಾರ್ಯವನ್ನು ಸ್ವತಃ ಮಾಡಿ ತೋರಿಸುವ ಹಟಕ್ಕೆ ಬೀಳುವಿರಿ. ವಾದ ಸ್ಪರ್ಧೆಗಳಲ್ಲಿ ಹೇಳತಕ್ಕದ್ದೇನೂ ಇಲ್ಲ. ಪ್ರವಾಸ ಪತ್ರವ್ಯವಹಾರಗಳು ಫಲಕಾರಿಯಲ್ಲ. ಭೆಟ್ಟಿಯೇ ಲೇಸು. ಉತ್ತರಾಷಾಢದ ಕೊನೆಯ, ಮತ್ತು ಶ್ರವಣದ ಮೊದಲ ೨ ಚರಣಗಳಿಗೆ ಸ್ವಲ್ಪ ಹೆಚ್ಚು ಕಾಟ. ತಾ. ೧೧ ೧೩, ೧೪, ೧೫ ಅನುಕೂಲ.

### ಕುಂಭ

ಪತಿಪತ್ನಿಯರಲ್ಲಿ ತುಂಬ ಮೇಳವಿದ್ದರೂ ಮನೆಯಲ್ಲಿ ಉಳಿದವರ ಕಾಟ ತಪ್ಪಿದ್ದಲ್ಲ; ಪ್ರತಿಯೊಬ್ಬನೂ ಮನಬಂದಂತೆ ವೆಚ್ಚ ಮಾಡುತ್ತ ಹೋಗುವನು. ಕಾಲದ್ದಕ್ಕೆ ಉದ್ಯೋಗದಲ್ಲಿ ಲಾಭವೂ ತೀರ ಕಡಿಮೆಯಾಗುವದಲ್ಲದೆ ಸ್ಥಾವರದಲ್ಲಿ ಒಂದು ಪ್ರತಿಕೂಲ ಘಟನೆಯೂ ಜರಗುವದು. ಮುಟ್ಟಿದ್ದು ಮಸಿಯೆಂಬಂತೆ ನಿಮ್ಮ ಸ್ಥಿತಿ. ವಾದ ಸ್ಪರ್ಧೆಗಳಲ್ಲಿ ನೀವೆಷ್ಟು ಖರ್ಚು ಮಾಡಿದರೂ ಶತ್ರುವಿನ ಉಪದ್ರವ ತಪ್ಪಿದ್ದಲ್ಲ ಪ್ರವಾಸದಲ್ಲಿ ಸುಖವಿಲ್ಲ. ಭೆಟ್ಟಿ ಪತ್ರವ್ಯವಹಾರವೇ ಲೇಸು. ಶತತಾರೆಯ ಕೊನೆಯ ೨ ಮತ್ತು ಪೂರ್ವಾಭಾದ್ರದ ಮೊದಲ ೨ ಚರಣಗಳಿಗೆ ಅಷ್ಟು ಕಷ್ಟವಿಲ್ಲ. ತಾ. ೧೪, ೧೫, ೧೭ ಅನುಕೂಲ.

### ಮೀನ

ಆರೋಗ್ಯ ಭಾಗ್ಯ ಚೆನ್ನಾಗಿದ್ದರೂ ಗಂಡಹೆಂಡಿರು ಒಬ್ಬರ ಮೇಲೊಬ್ಬರು ಆರೋಪ ಹೊರಿಸುತ್ತಾ ವೃಥಾ ವಿರಸವನ್ನೇಕೆ ಮಾಡಿಕೊಳ್ಳುವಿರಿ? ಸ್ಥಾವರದಲ್ಲಿಯೂ ಅನುಕೂಲ ಸಂಗತಿಗಳು. ಸಂತತಿಯ ಉತ್ಕರ್ಷ. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಚೆನ್ನಾಗಿದ್ದರೂ ವೆಚ್ಚವೂ ಅತಿರೇಕವಾಗುವ ಸಂಭವ. ವಾದ ಸ್ಪರ್ಧೆಗಳಲ್ಲಿ ಉತ್ತಮ ಯಶ. ಪ್ರವಾಸಾದಿ ಕಾರ್ಯಗಳು ಹಿತಾವಹ. ಉತ್ತರಾಭಾದ್ರದ ಕೊನೆಯ ೨ ಮತ್ತು ರೇವತಿಯ ಮೊದಲ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೧, ೧೩, ೧೬ ಅನುಕೂಲ.

---

## ಅಗ್ನಿಪರೀಕ್ಷೆಯ ಬೆಳಕಿನಲ್ಲಿ ಭಾರತ

(ಮಧ್ಯ ಪುಟದಿಂದ)

ಅಧಿಕಾರ ಸ್ಥಾನಗಳಿಗೆ ಅವರು ಮುಸುರಿದರು. ಲಂಚ ಹೆಚ್ಚಾಯಿತು. ಕಳ್ಳಪೇಟೆಯಲ್ಲಿ ರಾಶಿ ರಾಶಿ ಹಣ ಸಂಪಾದಿಸಲಾಯಿತು. ಆಹಾರ ನಿಯಂತ್ರಣ, ಸೀದಾ ವ್ಯವಸ್ಥೆಗಳು ಎಷ್ಟೋ ವೇಳೆ ಹಳ್ಳಿ ಪಟ್ಟಣಗಳಲ್ಲಿ ಕಾಂಗ್ರೆಸ್ ಪಕ್ಷದ ಸ್ಥಾನಿಕ ಮುಂದಾಳುಗಳ ಕೈಸೇರಿತು.

### ಶ್ರೀಮಂತರ ಋಣ

ಗಾಂಧಿಯವರ ನೇತೃತ್ವದಲ್ಲಿ ಕಾಂಗ್ರೆಸ್ಸು ಸಾಮೂಹಿಕ ಪಕ್ಷವಾಗಿ ಪ್ರತಿಯೊಬ್ಬ ಭಾರತೀಯನ ವಿಧೇಯತ್ವ ತನಗುಂಟೆಂದು ಹೇಳಿಕೊಳ್ಳುತ್ತಿತ್ತು. ಅದರೆ ಗಾಂಧಿಯವರೇ ಒಪ್ಪಿದಂತೆ ಶ್ರೀಮಂತರ ಕಾಣಿಕೆಗಳನ್ನು ಅದು ಅವಲಂಬಿಸಿತ್ತು. ಅಲ್ಲದೆ ಚುನಾವಣೆಗಳಲ್ಲಿ ತುಂಬ ಹಣ ಸುರಿಯುವ ಪ್ರಸಂಗವಿದ್ದುದು ಇನ್ನೊಂದು ದೌರ್ಬಲ್ಯವಾಗಿತ್ತು. ೧೯೪೬ ರ ಚುನಾವಣೆಯಲ್ಲಿ ಒಬ್ಬ ಹುರಿಯಾಳು ೧ ಲಕ್ಷ ರೂಪಾಯಿಯ ವರೆಗೂ ವೆಚ್ಚಮಾಡುತಿದ್ದುದುಂಟು. ಅದರಿಂದ ಕಾಂಗ್ರೆಸ್ಸಿನ ಮೇಲೆ ಧನಿಕರ ಪ್ರಭಾವ ಬೀಳುವದು ಅನಿವಾರ್ಯವಾಗಿತ್ತು. ಕೆಲ ಪ್ರಾಂತಗಳಲ್ಲಿ ಅದರ ಅಧಿಕಾರಿಗಳು ಟೀಕಿಸುವವರನ್ನು ಹತ್ತಿಕ್ಕಲು ಕೆಲ ಕುಶಲ ಯುಕ್ತಿಗಳನ್ನೇ ರೂಪಿಸಿಕೊಂಡಿದ್ದರು.

ಭಾರತದ ಹಿತಕ್ಕಾಗಿ ಮತ್ತು ಪ್ರಜಾತಂತ್ರ ಸುಗಮವಾಗಿ ನಡೆಯಲು ಕಾಂಗ್ರೆಸ್ಸು ಈಗ ಒಡೆದು ಬೇರೆ ಬೇರಾಗಬೇಕಾದ್ದು ಅವಶ್ಯ. ಸ್ವಾತಂತ್ರ್ಯ ಸಾಧಿಸಿದ ಮೇಲೆ ಅದರ ಕೆಲಸ ಮುಗಿಯಿತು. ದುರ್ದೈವದಿಂದ, ಅದಕ್ಕೆದುರಾದ ಮೊದಲನೆ ವಿರೋಧವೆಂದರೆ ಹಿಂಸಾತ್ಮಕವಾದ ಎರಡು ಪಕ್ಷಗಳಿಂದ- ಕಲಹಪ್ರಿಯ ಹಿಂದು ಧರ್ಮಾಂಧರು (ವಿರುದ್ಧ ಪಕ್ಷದ ಮುಸ್ಲಿಂಲೀಗ್ ಸ್ವಯಂಸೇವಕರೊಡನೆ) ಪಂಜಾಬ ಹತ್ಯಾಕಾಂಡ ಮುಗಿಸಿ ಗಾಂಧಿಯವರನ್ನು ಕೊಂದರು. ಈ ಆಹ್ವಾನವನ್ನು ಎದುರಿಸಿ ಸರದಾರ ಪಟೇಲರು, ಬ್ರಿಟಿಶರು ಸ್ವಾತಂತ್ರ್ಯ ಚಳವಳಿಯನ್ನು ಹತ್ತಿಕ್ಕಲು ಉಪಯೋಗಿಸಿದ ವಿಶೇಷಾಧಿಕಾರಗಳನ್ನು ಪುನರುಜ್ಜೀವಿಸಿ ಅವರನ್ನು ಹತ್ತಿಕ್ಕಿದರು. ಆ ಮೇಲೆ ಕಮ್ಯುನಿಸ್ಟರ ಆಹ್ವಾನ ಬಂತು. ಅವರು ಕಲಕತ್ತೆಯಲ್ಲಿ ಪಾಶವ ದಂಗೆಗಳನ್ನೆಬ್ಬಿಸಿದರು. ರೇಲ್ವೆಗಳನ್ನು ನಿಲ್ಲಿಸುವ ಅವರ ಪ್ರಯತ್ನ ಸಫಲವಾಗಲಿಲ್ಲ. ಪೂರ್ವ ಪಂಜಾಬದಲ್ಲಿ ಅವರೆಬ್ಬಿಸಿದ ದಂಗೆಯನ್ನು ಹತ್ತಿಕ್ಕಲು ಸೈನ್ಯವನ್ನೆ ಉಪಯೋಗಿಸಬೇಕಾಯಿತು. ಯುಕ್ತ ಪ್ರಾಂತದಲ್ಲಿ ಅವರು ಪಂಚಾಯತ ಚುನಾವಣೆ[illegible] ಗೆದ್ದುದಲ್ಲದೆ ಆಂ[illegible] ಹೈದರಾಬಾದದಲ್ಲಿಯೂ ಹಿಂದಿ[illegible] ಸಂಘಟಿಸಿ ಭೂಮಿಯನ್ನು ಮನಬಂ[illegible] ಜಹಗೀರದಾರರನ್ನೂ ಸಾವುಕಾರರನ್ನೂ ಕಾಂಗ್ರೆಸ್ಸಿಗರನ್ನೂ ಕೊಂದರು.

### ನಾಗರಿಕ ಸ್ವಾತಂತ್ರ್ಯಕ್ಕೆ ಗದೆ

ಈ ಹಿಂಸಾಚಾರಿ ಪಕ್ಷಗಳ ಕೃತ್ಯಗಳಿಂದ ಸರಕಾರ ವಿಶೇಷಾಧಿಕಾರಗಳನ್ನುಪಯೋಗಿಸಬೇಕಾಗಿ ಬಂತು. ಅದರಿಂದ ಸಾಮಾನ್ಯ ನಾಗರಿಕ ಸ್ವಾತಂತ್ರ್ಯವೂ ಪತ್ರಿಕಾ ಸ್ವಾತಂತ್ರ್ಯವೂ ಕಡಿಮೆಯಾದವು. ವಿಚಾರಣೆಯಿಲ್ಲದೆ ಬಂಧನದಲ್ಲಿರುವ ಸೆರೆಯಾಳುಗಳ ಸಂಖ್ಯೆ ಗಾಂಧಿಯವರ ಚಳವಳಿಗಳ ಕಾಲದಲ್ಲಿದ್ದುದಕ್ಕಿಂತಲೂ ಎಷ್ಟೋ ಹೆಚ್ಚಾಗಿದೆ. ಕೂಲಿಕಾರರ ಸಂಘದ ಸ್ವಾತಂತ್ರ್ಯಕ್ಕೂ ಕಡಿತ ಬಂತು. ಕಮ್ಯುನಿಸ್ಟರನ್ನೂ ಹಿಂದೂ ಧರ್ಮಾಂಧರನ್ನೂ ಮಾತ್ರವಲ್ಲದೆ ಕಾಂಗ್ರೆಸ ವಿರೋಧಿಗಳಾದ ಸಾಮ್ಯವಾದಿಗಳನ್ನೂ ಕೂಲಿಕಾರಮುಂದಾಳುಗಳನ್ನೂ ಕೂಡ ಯಾವ ಒಳಸಂಚಿನಲ್ಲೂ ಸೇರದಿದ್ದರೂ ಸೆರೆಮನೆಗೆ ಸೇರಿಸಲಾಯಿತು. ಸರದಾರ ಪಟೇಲರು ವಜ್ರಮುಷ್ಟಿಯ ವಜ್ರಹೃದಯದ ಮನುಷ್ಯ. ಅದರೂ ಈ ಅಸಂತೋಷಗಳನ್ನು ಬಲಾತ್ಕಾರದಿಂದ ನಿವಾರಿಸಲು ಸಾಧ್ಯವಿಲ್ಲ.

### ಸಾಮ್ಯವಾದಿಗಳು

ಭಾರತದ ಈಚಿಗಿನ ರಾಜಕೀಯ ಇತಿಹಾಸದಲ್ಲಿ ಸಾಮ್ಯವಾದಿಗಳು ಕಾಂಗ್ರೆಸ್ಸಿನಿಂದ ಬೇರಾದುದೊಂದು ಹಿತಾವಹ ಘಟನೆ. ಮುಂದಿನ ಪ್ರೌಢಮತದಾನದ ಚುನಾವಣೆಗಳಲ್ಲಿ ಅವರು ಪರಿಣಾಮಕಾರಿ ವಿರೋಧಿಪಕ್ಷವಾಗಬಹುದು. ಯುಕ್ತಪ್ರಾಂತದ ನಗರಸಭಾ ಚುನಾವಣೆಗಳಲ್ಲಿ ಅವರು ಅನೇಕ ದೊಡ್ಡ ನಗರಗಳನ್ನು ಜಯಿಸಿದರು. ಗಾಂಧಿಯೊಡನೆ ಅವರ ಮತಭೇದವಿದ್ದರೂ ಕರ್ತವ್ಯಬುದ್ಧಿ, ಸರಳ ಜೀವನಗಳ ವಿಷಯದಲ್ಲಿ ಅವರು ಗಾಂಧಿಯಿಂದ ಎಲ್ಲರಿಗಿಂತ ಹೆಚ್ಚಾಗಿ ಕಲಿತಿದ್ದಾರೆ. ಆಡಳಿತೆಯ ದೊಡ್ಡ ಸಮಸ್ಯೆಗಳನ್ನು ಬಿಡಿಸುವ ರಾಜಕೀಯ ಪ್ರಬುದ್ಧತೆ ಅವರಿಗೆ ಬಂದಿದೆಯೊ ಇಲ್ಲವೊ, ರೈತರನ್ನು ಅವರು ಒಲಿಸಿಕೊಳ್ಳಬಲ್ಲರೋ ಇಲ್ಲವೊ ಎಂಬದು ಭವಿಷ್ಯತ್ತೇ ನಿರ್ಣಯಿಸಬಹುದಾದ ಮಾತು. ಅವರ ರಾಜಕೀಯ ವಿಚಾರಗಳೊಪ್ಪುವ ಪಂ. ಜವಾಹರಲಾಲರು ಆ ಪಕ್ಷದಲ್ಲಿದ್ದಿದ್ದರೆ ಅದರ ಭವಿಷ್ಯ ಉಜ್ವಲವಾಗುತಿತ್ತು. ಅವರ ವೈಯಕ್ತಿಕ ಪ್ರತಿಷ್ಠೆಯೂ ಮೋಹಕತೆಯೂ ಅವರನ್ನು ಜಗತ್ತಿನ ರಾಜಕಾರಣದಲ್ಲಿ ಒಂದು ಮಹಾವ್ಯಕ್ತಿಯಾಗಿ ಮಾಡಿದ್ದರೂ ಅವರ ಹಿಡಿತದಲ್ಲಿಲ್ಲದ ಕಾಂಗ್ರೆಸ್ ರಾಜಕೀಯ ಯಂತ್ರ ಅವರ ಬೆನ್ನಲ್ಲಿರುವಾಗ ಒಂದು ಕಾಲದಲ್ಲಿ ಅವರಿಗೆ ಪ್ರಿಯವಾಗಿದ್ದ ಧ್ಯೇಯಗಳನ್ನು ಸಾಧಿಸಲು ಅವರಿಗೆಲ್ಲಿ ಅವಕಾಶವಿದೆ?

ಭಾರತಕ್ಕೆ ದೊರೆತ ಸ್ವಾತಂತ್ರ್ಯ ಉಳಿಯಬೇಕಾದರೆ ಸಾಮಾಜಿಕ ಪುನರುಜ್ಜೀವನವನ್ನು ಉಳಿದೆಲ್ಲ ವಿಷಯಗಳಿಗಿಂತ ಹೆಚ್ಚೆಂದು ಭಾವಿಸುವ ಮುಂದಾಳುಗಳು ಉಂಟಾಗಬೇಕು. ಕಾಂಗ್ರೆಸಿಗಿರುವ ಗಂಡಾಂತರವೆಂದರೆ, ಅದು ಕಾಲಾಂತರದಲ್ಲಿ ಚೀನದ ಕೌಮಿಂಟಂಗ್ ಪಕ್ಷದಂತೆ ಸರ್ವಾಧಿಕಾರಿ ಪಕ್ಷವಾಗಿ ಪರಿವರ್ತನೆ ಹೊಂದಬಹುದು. ಅದು ಆ ದಾರಿ ಹಿಡಿದರೆ ಇಂದಲ್ಲ ನಾಳೆ ಕಮ್ಯುನಿಸ್ಟರು ನಿರಾಶರಾದ ಜನರನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳಲು ಸಮರ್ಥರಾಗದಿರರು.

ಹರಿಜನ ಲೇಖ

ಅಗ್ರಲೇಖ

# ಸರ್ವೋದಯ ಗೋಷ್ಠಿ

“ಹರಿಜನ”ದಲ್ಲಿ ನಾನು ವಿವರಣೆ ಕೊಡಬೇಕೆಂದು ಶ್ರೀ ಕಾಕಾ ಕಾಲೇಲಕರರು ನನಗೆ ಪತ್ರಕಾರನೊಬ್ಬನಿಂದ ಬಂದ ಈ ಕೆಳಗಿನ ಬರಹವನ್ನು ಒಪ್ಪಿಸಿದ್ದಾರೆ:

“ನಾನು ಒಂದು ಸಲಹೆ ಮಾಡುವುದಿದೆ. ಅದನ್ನು ವಿವೇಚಿಸಿ ನಿಮಗೆ ಒಪ್ಪಿಗೆಯಾದರೆ ಸಂಬಂಧಪಟ್ಟ ವ್ಯಕ್ತಿಗೆ ಅದನ್ನು ತಿಳಿಸಬೇಕು. ರೋಟರಿ ಕ್ಲಬ್ಬಿನಿಂದ ನನಗೊಂದು ಕಲ್ಪನೆ ಹೊಳೆದಿದೆ. ಆ ಕ್ಲಬ್ಬಿನಂತೆ ಸರ್ವೋದಯ ಗೋಷ್ಠಿಯನ್ನು ಭಾರತದಲ್ಲಿ ಪ್ರಾರಂಭಿಸಿ ತನ್ಮೂಲಕ ಮಹಾತ್ಮರು ನಿಷ್ಠೆಯನ್ನು ತೋರಿ ಪ್ರಾಣಾರ್ಪಣ ಮಾಡಿದಂಥ ಧ್ಯೇಯಗಳ ಪ್ರಸರಣ ಮಾಡಲು ನಿಯತಕಾಲಿಕ ಸಭೆಗಳನ್ನು ವ್ಯವಸ್ಥೆಗೊಳಿಸಬೇಕು; ಮತ್ತು ಆ ಸಭೆಗಳಲ್ಲಿ ಉಕ್ತ ಧ್ಯೇಯಗಳ ಬಗ್ಗೆ ಮಾತಾಡಲು ಹೆಸರಾಂತ ವ್ಯಕ್ತಿಗಳನ್ನು ಆಮಂತ್ರಿಸಬೇಕು. ಗೋಷ್ಠಿಗೆ ಜಾತಿ, ಬಣ್ಣ, ಧರ್ಮ, ರಾಷ್ಟ್ರೀಯತ್ವಗಳ ಭೇದವನ್ನು ಗಣಿಸದೆ, ಬರುವವರನ್ನೆಲ್ಲ ಸದಸ್ಯರನ್ನಾಗಿ ತೆಗೆದುಕೊಳ್ಳಬೇಕು; ಇದರ ಗುರಿ “ಮಾನವ ಕುಲದ ಸೇವೆ ಮತ್ತು ಶಾಂತಿ ಅಹಿಂಸಾ ತತ್ವಗಳ ಪ್ರಸರಣ” ಎಂದಿರಬೇಕು. ಮಾಸಿಕ ವಂತಿಗೆ (ಚಂದಾ) ನಾಮಮಾತ್ರ ದ್ದಾಗಿರಬೇಕು–ಒಂದು ಅಥವಾ ಎರಡು ರೂಪಾಯಿಗಳೆನ್ನಿರಿ. ಪ್ರತಿಯೊಂದು ಕೇಂದ್ರದ ಎಲ್ಲ ಮುಖ್ಯಸ್ಥರನ್ನೂ ಅಲ್ಲಿಗೆ ಆಮಂತ್ರಿಸಬೇಕು, ಅದಕ್ಕೆ ಸೇರಲು ಕೇಳಿಕೊಳ್ಳಬೇಕು. ರೋಟರಿ ಕ್ಲಬ್ಬಿಗೂ ಸೂಚಿತವಾದ ಸರ್ವೋದಯ ಗೋಷ್ಠಿಗೂ ಒಂದು ಮುಖ್ಯ ಭೇದವಿದೆ. ಅದೆಂದರೆ, ಮೊದಲನೆಯದರ ಮೂಲಭೂತ ದೃಷ್ಟಿಕೋನ ಪಾಶ್ಚಾತ್ಯವಿದೆ; ಆದರೆ ಎರಡನೆಯದರದು ಇಂದು ಜಗತ್ತಿಗೆ ಮಾರ್ಗದರ್ಶನ ಮಾಡಲು ಬಹಳ ಅಗತ್ಯವಾಗಿರುವ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಗಳ ತಳಹದಿಯ ಮೇಲೆಯೇ ಬೆಳೆದು ಬರುವಂತಾಗಬೇಕು. ಬೆಳೆದು ಬಂದ ಹಾಗೆ, ಜಿಲ್ಲೆಯ ಮತ್ತು ಪ್ರಾಂತದ ಶಾಖೆಗಳು ರೂಪಿತವಾಗಿ ರೋಟರಿ ಕ್ಲಬ್ಬಿನ ಮಾದರಿಯಲ್ಲೇ ಗವರ್ನರರನ್ನು ಅಧ್ಯಕ್ಷರನ್ನಾಗಿ ಚುನಾಯಿಸಬಹುದು. ಸ್ವಲ್ಪ ಕಾಲದಲ್ಲಿಯೇ ಈ ಗೋಷ್ಠಿ ಅಖಿಲ ಭಾರತೀಯವೆನಿಸುವುದು ಮಾತ್ರವಲ್ಲದೆ ಅಂತಾರಾಷ್ಟ್ರೀಯವಾದ ಅಖಿಲ ಜಗದ್ಗೋಷ್ಠಿಯೆನಿಸಿ, ಇಂದಿನ ಸಂಕಟಗ್ರಸ್ತ ಜಗತ್ತಿಗೆ ಸದ್ಯದ ಮಿಕ್ಕ ಯಾವ ಏಕ್ಯೈಕ ಸಂಘಟನೆಗೂ ದುಷ್ಕರವಾದ ಶಾಂತಿಸಾಧನೆಯ ಕಾರ್ಯವನ್ನು ಸಾಧಿಸಬಹುದೆಂದು ನನಗೆನಿಸುತ್ತದೆ.”

ರೋಟರಿ ಕ್ಲಬ್ಬಿನ ಮಾದರಿಯ ಸಂಸ್ಥೆಗೂ ಗಾಂಧೀಯ ಮಾದರಿಯ ಅಥವಾ ಸರ್ವೋದಯದ ಸಂಸ್ಥೆಗೂ ಇರುವ ಅಂತರವನ್ನು ನಾವು ತಿಳಿದುಕೊಳ್ಳಬೇಕು. ಉಪನ್ಯಾಸಗಳು, ವ್ಯಾಸಂಗ, ಚರ್ಚೆ, ಕಥಾಖ್ಯಾನ, ನಾಟಕ, ಗೀತಗಳು, ಗಾಂಧಿಯವರು ಬಳಸಿದ ವಸ್ತುಗಳ ಪ್ರದರ್ಶನ ಮುಂತಾದವುಗಳಿಗೂ ಸ್ಥಾನವಿದೆ; ಆದರೆ, “ಸರ್ವೋದಯ” ಅಥವಾ ಗಾಂಧೀಯ ಕಲ್ಪನೆಯ ಸಾಮಾಜಿಕ ಮತ್ತು ಆರ್ಥಿಕ ಸಮಾಜವನ್ನು ಸ್ಥಾಪಿಸುವುದರಲ್ಲಿ ಅವುಗಳ ಸ್ಥಾನ ಕೇವಲ ಗೌಣ ಎಂಬುದನ್ನು ಅರಿತುಕೊಳ್ಳಬೇಕು. ಅವಕ್ಕೆ ಪ್ರಥಮ ಪುರಸ್ಕಾರ ಸಿಕ್ಕಿದರೆ ನೀವು ನೋಡಲು ಸುಂದರವಾದ ಏನಾದರೊಂದನ್ನು ಸಾಧಿಸಬಹುದು, ಆದರೆ ನೀವು ಸರ್ವೋದಯವನ್ನು ಪ್ರಚುರಪಡಿಸಲಾರಿರಿ. ಸರ್ವೋದಯಗೋಷ್ಠಿ ಅಥವಾ ಮಂಡಲಿಯನ್ನು ಪ್ರಾರಂಭಿಸುವುದು ಈ ಕೆಳಗಿನ ನಿಯಮಗಳನ್ನೊಳಗೊಂಡ ಸಂಯುಕ್ತ ಕಾರ್ಯಕ್ರಮವನ್ನು ಇಟ್ಟುಕೊಂಡರೆ ಮಾತ್ರ ಸಾಧ್ಯ:

(೧) ಸ್ವಹಸ್ತದಿಂದ ಸ್ವಜನರಿಗೆ ಉಪಯುಕ್ತವಾಗುವ ಏನಾದರೊಂದನ್ನು ಉತ್ಪಾದಿಸುವುದು ಕಾರ್ಯದ ಒಂದು ಅಂಗವಾಗಬೇಕು;

(೨) ಸುತ್ತುಮುತ್ತಲಿನ ಆವರಣದ ನಿರ್ಮಲೀಕರಣ ಮತ್ತು ಸ್ವಜನರ ಜೀವನದ ಸುಧಾರಣೆ ಆ ಕಾರ್ಯದ ಮತ್ತೊಂದು ಅಂಗವಾಗಬೇಕು;

(೩) ಆ ಕಾರ್ಯವು ಬಡವರು ಮತ್ತು ನಿರುದ್ಯೋಗಿಗಳೂ ಸ್ವತಃ ಮಾಡುವಂತಿರಬೇಕಲ್ಲದೆ ಆ ಮೇರೆಗೆ ಸ್ವಾಭಿಮಾನದಿಂದ ತಮಗೆ ತಾವೇ ಸಹಾಯ ಮಾಡಿಕೊಳ್ಳುವಂತಿರಬೇಕು;

(೪) ಅದರ ವಂತಿಗೆಯು ಅದರ ಸದಸ್ಯರು ಸ್ವತಃ ಉತ್ಪಾದಿಸಿದ ಯಾವದಾದರೊಂದು ವಸ್ತುವಿನ ರೂಪದಲ್ಲಿರಬೇಕು.

ಹೀಗೆ ಭಾರತದಲ್ಲಿ ಸಂಯುಕ್ತ ಕಾರ್ಯಕ್ರಮಬದ್ಧವಾದ ನೂಲುವ ಮತ್ತು ಕಸಗುಡಿಸುವದರ ಮೂಲಕ ಸರ್ವೋದಯಗೋಷ್ಠಿಯನ್ನು ಪ್ರಾರಂಭಿಸಬಹುದು. ಇವಿಲ್ಲದೆ ಗಾಂಧೀಯ ಧ್ಯೇಯಗಳ ಪ್ರಚಾರಕ್ಕಾಗಿ ಸ್ಥಾಪಿತವಾಗುವ ಸರ್ವೋದಯಗೋಷ್ಠಿಯ ಕಲ್ಪನೆ ನನ್ನ ತಲೆಗೆ ಹೊಳೆಯಲಾರದು.

ಈ ಅಂಗಗಳು ಜನರನ್ನು ಆಕರ್ಷಿಸದಿದ್ದರೆ ಸರ್ವೋದಯಗೋಷ್ಠಿ ಹಾಳಾಗುವುದು ಅಥವಾ ಚರ್ಚೆಗಾಗಿ ಮತ್ತು ವಿನೋದಕ್ಕಾಗಿ ಜರುಗುವ ವೈಲಾಸಿಕ ಸಭೆಗಳಾಗಿ ಮಾರ್ಪಡುವುದು. ಅದರ ಚರ್ಚೆಯ ವ್ಯಾಪ್ತಿ “ಗಾಂಧೀವಾದ” ಕ್ಕಷ್ಟೇ ಪರಿಮಿತವಾಗಿರುವುದರಿಂದ ಅದರ ಕ್ಷೇತ್ರವು ಅವಶ್ಯವಾಗಿ ರೋಟರಿ ಕ್ಲಬ್ಬಿನದಕ್ಕಿಂತ ಸಣ್ಣದಾಗುವುದು; ಮತ್ತು ಆ ಕಾರಣದಿಂದ ಅದು ರೋಟರಿ ಕ್ಲಬ್ಬಿಗೆ ಸರಿಗಟ ಸ್ಪರ್ಧಾಳುವಾಗಿ ನಿಲ್ಲಲಾರದು. ರೋಟರಿ ಕ್ಲಬ್ಬಿನಿಂದ ಸ್ಫೂರ್ತಿಯನ್ನು ಪಡೆಯುವುದಕ್ಕಿಂತ ನವಜೀವನ ಮುದ್ರಣಾಲಯ ಪ್ರಕಟಿಸಿದ ರಿಚರ್ಡ್ ಬಿ. ಗ್ರೆಗ್ಸರ “ಅಹಿಂಸಾ ಶಾಸ್ತ್ರ” ಎಂಬ ಪುಸ್ತಕದಿಂದ ಪಡೆಯಬೇಕೆಂದು ಓದುಗರನ್ನೂ ಪತ್ರಕಾರರನ್ನೂ ಕೇಳಿಕೊಳ್ಳುತ್ತೇನೆ. ರೋಟರಿ ಕ್ಲಬ್ಬು ಸರ್ವೋದಯಕ್ಕೆ ಮಾದರಿ ಹಾಕಿ ಕೊಡಲಾರದು.

ಪತ್ರಕಾರರಿಗೂ ಅವರಂತೆಯೇ ವಿಚಾರ ಮಾಡುವ ಇತರರಿಗೂ “ಭಾರತೀಯ ಸಂಸ್ಕೃತಿ ಮತ್ತು ಪರಂಪರೆಗಳ” ಬಗ್ಗೆ ಇರುವ ದಂಭವೃತ್ತಿಯನ್ನು ಬಿಟ್ಟುಬಿಡಬೇಕೆಂದು ಆಗ್ರಹಪೂರ್ವಕ ಕೇಳಿಕೊಳ್ಳುತ್ತೇನೆ. ಅಲ್ಲದೆ, (ಬಹಳವಾಗಿ) ಪಾಶ್ಚಾತ್ಯ ದೃಷ್ಟಿಕೋನ ಪೌರಸ್ತ್ಯ ದೃಷ್ಟಿಕೋನ ಮುಂತಾದ ಭೇದಗಳನ್ನು ಎಣಿಸುವ ಅಭ್ಯಾಸವೂ ತಪ್ಪು. ನನ್ನ ಮಟ್ಟಿಗೆ ಹೇಳುವುದಾದರೆ ಎಲ್ಲಿ ಪಾಶ್ಚಾತ್ಯತೆ ಮುಗಿಯುತ್ತದೆ, ಎಲ್ಲಿಂದ ಪೌರಸ್ತ್ಯತೆಯ ಉಚ್ಚ ಗುಣಗಳನ್ನು ನಾವು ಕಾಣುವೆವೆಂಬುದು ನನಗರಿಯದು. ಮನುಷ್ಯಕುಲ ಹುಟ್ಟಿಸಿದ ಅತ್ಯುದಾತ್ತ ಮಾನವರಲ್ಲಿ ಒಬ್ಬರಾದ ಮಹಾತ್ಮರನ್ನು ಕೊಲ್ಲಲು ಗೀತೆಯೇ ತನಗೆ ಧೈರ್ಯ ಕೊಟ್ಟಿತೆಂದು ಗಾಂಧಿಯವರನ್ನು ಕೊಲೆ ಮಾಡಿದಾತನು ನಂಬಿರುವಂತೆ ತೋರುತ್ತದೆ. ಪೂರ್ವದ ನಾಡಾದ ನಮ್ಮ ಈ ಮಾದರಿಯ ಸಂಸ್ಕೃತಿಯ ಬಗ್ಗೆ ಹೆಮ್ಮೆಪಡಬೇಕೇ? ಅಥವಾ ಹಿಂದು–ಮುಸಲ್ಮಾನ ಶೀಖ ಕೊಲೆಗಳನ್ನೂ ಮನುಷ್ಯಾಪಹಾರ ಅಗ್ನಿತಾಂಡವಗಳನ್ನು ವೇದ, ಕುರಾಣ ಮತ್ತು ಗುರುಗಳಿಂದ ನಮ್ಮ ಜನರು ಕಲಿತ ಉಚ್ಚ ಸಂಸ್ಕೃತಿ ಎಂದು ನಾವು ತೋರಿಸೋಣವೇ? ಅಥವಾ ನಮ್ಮ ಅಸ್ಪೃಶ್ಯತೆಯ ಮತ್ತು ಮೇಲುಕೀಳು ಜಾತಿಗಳ ಸಂಸ್ಥೆಗಳನ್ನೊ ಇಲ್ಲವೆ ನಮ್ಮ ಪ್ರಾಂತೀಯ, ಪಕ್ಷನಿಷ್ಠ, ಭಾಷಾಬದ್ಧ ಜಗಳಗಳನ್ನೊ ಅಂಥ ಸಂಸ್ಕೃತಿ ಎನ್ನೋಣವೇ? ಇವು ಸಾಂಸ್ಕೃತಿಕ ಪಿತ್ರಾರ್ಜಿತವೆಂದು ಪುನರುದ್ಧಾರಮಾಡಿ ಇವನ್ನು ಅಭಿವೃದ್ಧಿಗೆ ತರಬೇಕೇ? ನಮ್ಮ ಕೃತಕವಾದ ಸ್ವಪ್ರಶಂಸೆ ಇಂಥ ಪರಿಣಾಮಗಳತ್ತ ಅಲ್ಲದೆ ಬೇರೆಕಡೆ ಒಯ್ಯಲಾರದು. ಸರಿಯಾದ ಮಾರ್ಗದಲ್ಲಿ ನಮಗೆ ಪ್ರಗತಿಹೊಂದಬೇಕೆಂದಿದ್ದರೆ ದಂಭವನ್ನು ಬಿಟ್ಟು, ನಮ್ಮ ನಿಗಮಾಗಮಗಳೂ ಕೆಲವ್ಯಕ್ತಿಗಳೂ ಉನ್ನತ ವಿಚಾರದಲ್ಲಿ ಎಷ್ಟು ಎತ್ತರವನ್ನೇ ಏರಿರಲಿ, ನಮ್ಮ ಸಾರ್ವಜನಿಕರ ಜೀವನವು ಜ್ಞಾನದಲ್ಲಿಯೂ ಸಂಸ್ಕೃತಿಯಲ್ಲಿಯೂ ಬಹಳ ಕೆಳಗಿಳಿದು ಹೋಗಿದೆ ಮತ್ತು ಮಿಕ್ಕ ದೇಶದವರಿಗಿಂತ ಬಹಳ ಹಿಂದಿರುವುದು, ಅವರಿಂದ ವಿನಯಪೂರ್ವಕವಾಗಿ ಎಷ್ಟೋ ವಿಷಯಗಳನ್ನು ಕಲಿತುಕೊಳ್ಳಬೇಕು ಎಂಬುದನ್ನು ದೈನ್ಯದಿಂದ ನಾವು ಒಪ್ಪಿಕೊಳ್ಳಬೇಕಾಗಿದೆ. ಇವೆಲ್ಲ ದಂಭಗಳು, ಇವನ್ನು ಬಿಟ್ಟುಬಿಡಬೇಕು.

ಮಾನವ ಕುಲವೆಲ್ಲ ಒಂದೇ. ಇಡೀ ಜಗತ್ತಿನಲ್ಲಿ ಅದು ಎರಡೇ ಎರಡು ಸಾಂಸ್ಕೃತಿಕ ಗುಣಗಳನ್ನು ಬೆಳೆಸಿಕೊಂಡು ಬಂದಿದೆ: ಸೈತಾನೀ ಅಥವಾ ಅಧಿಕಾರ, ಆಡಂಬರ, ವಿರಾಮಗಳ ಮೇಲಿನ ಪ್ರೀತಿ; ಮತ್ತು ಸಾತ್ವಿಕ ಅಥವಾ ಉದಾತ್ತ ಗುಣಗಳು, ಸರಳತೆ ಮತ್ತು ಕಾರ್ಯಮಗ್ನತೆ ಇವುಗಳ ಮೇಲಿನ ಪ್ರೀತಿ. ಪ್ರತಿಯೊಂದು ದೇಶದಲ್ಲೂ ನಮ್ಮಲ್ಲಿಯಂತೆಯೇ ಈಯೆರಡು ಅಂಶಗಳಿದ್ದೇ ಇವೆ. ಗಾಂಧಿಯವರು ಎರಡನೆಯದನ್ನು ಅನುಸರಿಸುವವರ ಪ್ರತಿನಿಧಿಗಳಾಗಿದ್ದರು. ಅವರು ತಮ್ಮ ಮಾದರಿಗಳನ್ನೂ ಗೆಳೆಯರನ್ನೂ ಸಹೋದ್ಯೋಗಿಗಳನ್ನೂ ಜಗತ್ತಿನ ಎಲ್ಲ ಭಾಗಗಳಲ್ಲೂ ಕಂಡರು. ಮೊದಲನೆಯದು ಮಾತ್ರ ಪ್ರಾದೇಶಿಕವೆನಿಸುತ್ತದೆ. ಎರಡನೆಯದಕ್ಕೆ ಪ್ರಾದೇಶಿಕತೆಯಿಲ್ಲ. ನನ್ನ ಕಲ್ಪನೆಯ ಸರ್ವೋದಯಗೋಷ್ಠಿಯು ಯಾವುದಾದರೊಂದು ಪ್ರದೇಶದ ಸಂಸ್ಕೃತಿಯನ್ನು ಬಹಳ ಹೆಚ್ಚಿನದೆಂದು ತಿಳಿಯಲಾರದು.

ವರ್ಧಾ, ಕಿ. ಘ. ಮಶ್ರುವಾಲಾ
೩೦.೬.೪೯

# ಉಪ್ಪು

ಗಾಂಧೀಜಿಯ ಒತ್ತಾಯದ ಮೇರೆಗೆ, ಉಪ್ಪಿನ ಕರವನ್ನು, ಜನಪ್ರಿಯ ಮುಂದಾಳುಗಳ ಕೈಗೆ ಅಧಿಕಾರ ಬಂದೊಡನೆ ರದ್ದುಗೊಳಿಸಲಾಯಿತು. ಉಪ್ಪಿನ ಉತ್ಪಾದನೆಯ ವೆಚ್ಚದೊಡನೆ ಹೋಲಿಸಲಾಗಿ ಕರದ ಪ್ರಮಾಣ ಅತಿಶಯವಾಗಿದ್ದುದರಿಂದ ಅದನ್ನು ರದ್ದುಗೊಳಿಸಿದಾಗ ಉಪ್ಪು ಅಗ್ಗವಾಗಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಈ ನಿರೀಕ್ಷೆ ಸುಳ್ಳಾದುದರಿಂದ ನಿರಾಶೆಯುಂಟಾಗಿ ದೂರುಗಳು ಧಾರಾಕಾರವಾಗಿ ಬರುತ್ತಿವೆ.

ನನಗೆ ದೊರೆತ ವಿವರಗಳನ್ನು ಅಭ್ಯಸಿಸಿದಾಗ ಆಡಳಿತ ವ್ಯವಸ್ಥೆಯಲ್ಲಿ ಕೆಲ ದೋಷಗಳಿದ್ದು ಅವನ್ನು ಸರಿಪಡಿಸಲು ಸಾಕಷ್ಟು ಲಕ್ಷ್ಯ ಕೊಟ್ಟಿಲ್ಲವೆಂದು ತೋರಿತು. ಉಪ್ಪಿನಕರ ಬಹಳ ಭಾರವಾಗಿಯೂ ಅಪ್ರಿಯವಾಗಿಯೂ ಇದ್ದರೂ ಉಪ್ಪು ತುಟ್ಟಿಯಾಗಲು ಅದೊಂದೇ ಕಾರಣವಾಗಿರಲಿಲ್ಲ. ಲೀಲಾವಿನ ಮೂಲಕ ಲೈಸೆನ್ಸ ಕೊಡುವ ಪದ್ಧತಿಯ ಫಲವಾಗಿ ಉಪ್ಪಿನ ವ್ಯಾಪಾರ ಕೆಲವೇ ಜನರ ಗುತ್ತಿಗೆಯಾಗಿಬಿಟ್ಟಿದೆ. ಕರದ ವಸೂಲಿಯನ್ನು ಸುಕರವಾಗಿ ಮಾಡುವದೇ ಇದರ ಉದ್ದೇಶವಾಗಿತ್ತು. ಬಂಗಾಲ, ಬಿಹಾರ, ಯುಕ್ತಪ್ರಾಂತಗಳ ಜಮೀನುದಾರರೂ ಮಧ್ಯಪ್ರಾಂತದ ಮಾಲಗುಜಾರರೂ ಮೊಟ್ಟಮೊದಲು ಭೂಕಂದಾಯವನ್ನು ವಸೂಲುಮಾಡುವ ಗುತ್ತಿಗೆದಾರರಾಗಿದ್ದಂತೆ ಉಪ್ಪನ್ನು ತಯಾರಿಸಿ ಮಾರುವ ಗುತ್ತಿಗೆಯನ್ನು ಕೆಲವರಿಗೆ ಲೈಸನ್ಸ್ ಮೂಲಕ ಕೊಡಲಾಗಿದೆ. ದಿನಬಳಕೆಯ ಒಂದು ಸರಕಿನ ಮಾರಾಟದ ಹಕ್ಕನ್ನು ಒಬ್ಬ ಗುತ್ತಿಗೆದಾರನಿಗೆ–ಗುತ್ತಿಗೆ ಹಿಡಿದಿರುವದು ಒಂದು ಧರ್ಮ ನಿಧಿಯಾಗಿದ್ದರೆ ಕೂಡ– ಕೊಟ್ಟರೆ ಆ ಸರಕು ತುಟ್ಟಿಯಾಗುತ್ತದೆ. ಗುತ್ತಿಗೆದಾರನು ವ್ಯಾಪಾರಿಯಾಗಿದ್ದರಂತೂ ಕೇಳುವದೇ ಬೇಡ. ಕರವನ್ನು ರದ್ದುಗೊಳಿಸಿದಾಗಲೇ ಈ ಲೈಸನ್ಸ್ ಪದ್ಧತಿಯನ್ನೂ ತೆಗೆದುಹಾಕಬೇಕಾಗಿತ್ತು; ಆದರೆ ಇಂದಿಗೂ ಹಾಗೆ ಮಾಡಿದಂತಿಲ್ಲ. ಪರಿಣಾಮವಾಗಿ, ಉಪ್ಪನ್ನು ತಯಾರಿಸುವವನು ಅದನ್ನು ಮಣಕ್ಕೆ ೬ ಆಣೆಯಂತೆ ಮಾರುತಿದ್ದರೆ ಲೈಸೆನ್ಸದಾರ ಅಥವಾ ಇಜಾರದಾರನಿಗೆ ಮಣಕ್ಕೆ ೧ ರೂಪಾಯಿ ಕೊಡಬೇಕಾಗುತ್ತದೆ. ಮಣಕ್ಕೆ ೬ ಆಣೆಯಾದರೆ ಪೌಂಡಿಗೆ ಒಂದು ಪೈಗಿಂತಲೂ ಕಡಿಮೆ ಬೆಲೆಯಾಗುತ್ತದೆ; ಮಣಕ್ಕೆ ಒಂದು ರೂಪಾಯಿಯೆಂದರೆ ೨॥ ಪೈಯಾಗುತ್ತದೆ.

ಇದಲ್ಲದೆ ಈ ಪದ್ಧತಿಯಲ್ಲಿ ಇನ್ನೊಂದು ಕ್ರಮವನ್ನು ಅನುಸರಿಸಲಾಗಿದೆ. ಲೈಸೆನ್ಸದಾರರಿಗೂ ಕರ ವಸೂಲು ಮಾಡಲಿಕ್ಕೂ ಅನುಕೂಲವಾಗಬೇಕೆಂದು ಪ್ರಾದೇಶಿಕ ಪದ್ಧತಿಯನ್ನು ರೂಢಿಗೆ ತರಲಾಗಿದೆ. ಇದರ ಮೂಲಕ ಪ್ರತಿಯೊಬ್ಬ ಲೈಸನ್ಸ್‌ದಾರನಿಗೆ ಅಥವಾ ಲೈಸನ್ಸ್‌ದಾರರ ಗುಂಪಿಗೆ ಇಂಥಿಂಥ ಪ್ರದೇಶವೆಂದು ಗೊತ್ತುಪಡಿಸಲಾಗುತ್ತದೆ. ಇದರಲ್ಲಿ ಸಾರ್ವಜನಿಕರ ಅನುಕೂಲವನ್ನು ನೋಡುವದಿಲ್ಲವಾಗಿ ಇದನ್ನು ಪುನರ್ವಿಮರ್ಶೆಮಾಡುವದು ಅವಶ್ಯ. ಉದಾಹರಣೆಗಾಗಿ ಉತ್ತರ ಗುಜರಾಥದ ಮಹಸೇನಾ ಎಂಬ ಊರು ಖರಘೋಡಾ ಕೇಂದ್ರಕ್ಕೆ ತೀರ ಹತ್ತಿರವಾಗಿದ್ದರೂ ಧ್ರಂಗಧ್ರದಂಥ ದೂರ ಸ್ಥಳದಿಂದ ಉಪ್ಪನ್ನು ಸಾಗಿಸಿಕೊಂಡು ಬರಬೇಕಾಗುವದು. ಈ ಪ್ರಾದೇಶಿಕ ಪದ್ಧತಿಯನ್ನು ಉಳಿಸುವುದು ಇನ್ನು ಅವಶ್ಯವುಂಟೇ ಎಂಬ ಪ್ರಶ್ನೆಯನ್ನು ವಿಚಾರಿಸಬೇಕಾಗಿದೆ. ಸ್ಥಿತಿ, ಅದು [illegible] ಆಗಿದ್ದರೆ, ಅದರ ಕ್ಷೇತ್ರಗಳನ್ನು [illegible] ಕೂಲವಾಗುವಂತೆ ಮಾರ್ಪಡಿಸಬೇಕು.

ಉಪ್ಪು ತುಟ್ಟಿಯಾಗಲು ಇನ್ನೊಂದು [illegible] ವೆಂದರೆ, ಸಾರಿಗೆ ಮತ್ತು ಇತರ [illegible] ಕರವನ್ನು ರದ್ದುಗೊಳಿಸಿದ ಸಂ[illegible] ತಯಾರಾಗುವ ಸ್ಥಳಗಳಲ್ಲಿ ಅದು [illegible] ವಾಯಿತು. ಆದರೆ ಅದನ್ನು ಬೇರೆ ಸ್ಥ[illegible] ಸಾಗಿಸುವಾಗ, ಸಾರಿಗೆ ವೆಚ್ಚ, [illegible] ಲಾಭಾಂಶ, ಚಿಲ್ಲರೆ ವ್ಯಾಪಾರಿಗಳ [illegible] ಇವೆಲ್ಲವೂ ಉಪ್ಪಿನ ಬೆಲೆಗೆ ಸೇರಿದ್ದ[illegible] ಹೆಚ್ಚಿನ ವೆಚ್ಚ ಹಳೆಯ ಕರಕ್ಕಿಂತ [illegible] ಮೆಯಾಗಲಿಲ್ಲ. ಈ ವೆಚ್ಚಗಳು [illegible] ಹದಿನಾಲ್ಕಾಣೆಯಷ್ಟಾಗುವವೆಂದು [illegible] ತ್ತೇನೆ. ಆದುದರಿಂದ ಲೈಸನ್ಸದಾರ[illegible] ಪೈಯ ದರ ಇಲ್ಲಿಗೆ ಬರುವಾಗ ಪೌಂಡಿಗೆ [illegible] ಯಾಗಿ ಬಿಡುತ್ತದೆ.

ಇನ್ನು ರೇಲ್ವೆ ಡಬ್ಬಿಗಳ ಕೊರತೆ ಮ[illegible] ಅದರ ಫಲವಾಗಿ ರೇಲ್ವೆಗಳಲ್ಲುಂಟಾದ [illegible] ಗುಳಿತನಗಳಿಂದ ಉಪ್ಪು ಕೆಲವೊಂದು ಸ್ಥ[illegible] ಸಕಾಲದಲ್ಲಿ ತಲುಪುವದಿಲ್ಲ. ಆದರಿಂದ [illegible] ಕೊರತೆ ಕಳ್ಳಪೇಟೆಗಳಿಗೆ ಎಡೆಯಾಗುತ್ತ[illegible] ರೇಲ್ವೆ ಮತ್ತು ಮೋಟಾರು ಸಾರಿಗೆಯಿಂದ [illegible] ಕುಗಳ ಸಾಗಾಟ ವೇಗದಿಂದಾಗುತ್ತಿದ್ದ[illegible] ಅವು ಬಂಡಿ ಮೊದಲಾದ ಸ್ಥಾನಿಕ ಸಾರಿಗೆಯ ಸಾಧನಗಳನ್ನು ನಿರ್ಮೂಲ ಮಾಡಿ ವ್ಯಾಪಾ[illegible] ಗಳನ್ನೂ ಜನರನ್ನೂ ಬಲಗುಂದಿಸಿವೆ. [illegible] ಹೊರಲುಪಯೋಗಿಸುತಿದ್ದ ಕೆಲ ಪ್ರಾ[illegible] ಗಳಂತೂ ಜಾತಿಗೆ ಜಾತಿಯೇ ಇಲ್ಲದಂತಾಗ[illegible] ತ್ತಿವೆ. ರೇಲ್ವೆ ಮತ್ತು ಮೋಟಾರು ಸಾರಿಗೆ ಇ[illegible] ದಿದ್ದ ಕಾಲದಲ್ಲಿ, ಬಂಡಿಗಳು, ಎತ್ತುಗಳು, ಒಂಟೆಗಳು, ಕುದುರೆಗಳು, ಕತ್ತೆಗಳು, ಹೇಸರಕತ್ತೆಗಳು ಮಾತ್ರವಲ್ಲದೆ ಆನೆಗಳು ಕೂಡ ಸರಕುಗಳ ಸಾಗಾಟಕ್ಕೆ ಉಪಯೋಗಿ[illegible] ಲ್ಪಡುತಿದ್ದವು. ಆಗ ಭಾರತದ ಸರಕುಗಳು ಯುರೋಪಿನ ವರೆಗೂ ಮುಟ್ಟುತಿದ್ದವು. ಆಧುನಿಕ ಸಾರಿಗೆ ಪದ್ಧತಿ ಮುರಿದು ಬಿದ್ದ[illegible] ಎರಡು ಸ್ಥಳಗಳ ನಡುವಣ ಅಂತರ ನೂರ[illegible] ಮೈಲಿಗಿಂತ ಹೆಚ್ಚಿಲ್ಲದಿದ್ದರೂ ಒಂದು ಸ್ಥಳದ[illegible] ಧಾರಾಳ ಇನ್ನೊಂದು ಕಡೆ ಕ್ಷಾಮ[illegible] ವುಂಟಾಗಬಲ್ಲದು. ಇದಕ್ಕೆ ವ್ಯತಿರಿಕ್ತವಾ[illegible] ಸ್ಥಿತಿಯನ್ನೂ ಉಂಟು ಮಾಡಬಹುದು. ಅಂದರೆ ಸಮೃದ್ಧಿಯುಳ್ಳ ಸ್ಥಳಗಳಲ್ಲಿ ಕ್ಷಾಮವನ್ನೂ ದುರ್ಭಿಕ್ಷ ಪ್ರದೇಶದಲ್ಲಿ ಸಮೃದ್ಧಿಯನ್ನೂ ನಿರ್ಮಿಸಲು ಆಧುನಿ[illegible] ಸಾರಿಗೆ ಪದ್ಧತಿಗೆ ಸಾಧ್ಯವಿದೆ. [illegible] ಬೇಡಾದ ಜನರಿಗೆ ತಮ್ಮ ಸ್ವಂತ ಪ್ರದೇಶದ[illegible] ಹಾಲೂ ಮಾವಿನ ಹಣ್ಣೂ ಸಿಗದಿದ್ದರೂ ಅಲ್ಲಿ[illegible] ದಲೇ ಒಯ್ದ ಹಾಲು ಮಾವಿನಹಣ್ಣುಗಳ[illegible] ಮುಂಬಯಿಯಲ್ಲಿಯೂ ಅಹಮದಾಬಾ[illegible] ದಲ್ಲಿಯೂ ಮನೆಬಾಗಿಲಿಗೇ ಬಂದು [illegible] ಬಹುದು. ಅದೇ ಪ್ರಕಾರದ ಮಧ್ಯಪ್ರಾಂತ[illegible] ಉತ್ತಮ ಆಹಾರಧಾನ್ಯಗಳು, ಹಣ್ಣು[illegible] ಲುಗಳು ಇತ್ಯಾದಿಗಳನ್ನು ಮುಂಬಯಿಯಲ್ಲಿ[illegible] ಕೊಳ್ಳಬೇಕಾದ ಪ್ರಸಂಗವೂ ಇದೆ.

ರೇಲ್ವೆ ಮತ್ತು ಮೋಟಾರು ಸಾರಿಗೆಯ[illegible] ಸಂಗಡಲೇ, ಇತರ ಸಾರಿಗೆಯ ಸಾಧನಗಳು[illegible] ಇರುವಂತೆ ಒಂದು ವ್ಯವಸ್ಥೆಯಿರಬೇಕು[illegible] ಇದನ್ನು ಹೇಗೆ ಸಾಧಿಸಬೇಕೆಂಬುದೇ [illegible] ಪ್ರಶ್ನೆ. ಇವೆರಡೂ ಬಗೆಯ ಸಾರಿಗೆಗಳು ಸಮ[illegible] ಬೇಕೆಂಬುದು ಸ್ವಯಂವೇದ್ಯವಾಗಿದೆ. [illegible] ವರೆಗೆ ನಾವೀ ಸಮಸ್ಯೆಯನ್ನು ಬಗೆಹರಿಸು[illegible] ದಿಲ್ಲವೋ ಅಷ್ಟರ ವರೆಗೂ ಸದ್ಯದ ತೊಡಕು[illegible] ಗಳಿಂದ ಪಾರಾಗಲು ಸಾಧ್ಯವಿಲ್ಲ.

ಕಾಂಗ್ರೆಸ್ ಸಮಿತಿಗಳು ಸೇವಾ ಕಾ[illegible] ವನ್ನು ಮಾಡಬಯಸುತ್ತಿದ್ದರೆ ಅವು [illegible] ಸಮಸ್ಯೆಗಳ ಬಗ್ಗೆ ವಿಚಾರಮಾಡಿ, ಅವುಗಳನ್ನು ಬಿಡಿಸುವಲ್ಲಿ ಸರಕಾರಕ್ಕೂ ಜನತೆಗೂ ಸಹಾಯ ಮಾಡಬಲ್ಲವು. ಉಪ್ಪಿನ ವ್ಯಾಪಾರಿಗಳೂ [illegible] ರಲ್ಲಿ ಭಾಗವಹಿಸಬಹುದು; ಏಕೆಂದರೆ ಲೈಸನ್ಸ್ ಪದ್ಧತಿಯಿಂದ ಅವರಿಗೂ ನಷ್ಟವೇ. [illegible] ಭವಶಾಲಿಗಳ ಸಹಾಯದಿಂದ ಈ [illegible] ದೋಷಗಳು ನಿವಾರಿಸಲ್ಪಟ್ಟರೆ, ಆ[illegible] ಉಪ್ಪು ದೇಶದ ಎಲ್ಲ ಭಾಗಗಳಲ್ಲೂ [illegible] ತುಟ್ಟಿ ದಿನಗಳಲ್ಲಿ ಕೂಡ ಪೌಂಡಿಗೆ ಆಧ[illegible] ಯಂತೆ ಒದಗಬಹುದೆಂದು ನಾನು ಅಂದಾಜು ಮಾಡಿದ್ದೇನೆ. ಕೋಳ (ರ[illegible]) [illegible] ಇನ್ನೂ ಕಡಿಮೆಯ ಆಗುವವು. ಈ [illegible] ಯಲ್ಲಿ ಕೂಡ ಸರಕಾರದವರು ನಿರ್ಮಿ[illegible] ದರಗಳ ಮೇಲೆ ಭಾರತದ ಎ[illegible]

——[illegible]ನೆಯ ಪುಟಕ್ಕೆ

# ಸಭಾಕಂಪ

[illegible] ಮಹಾಪಾಪಕ್ಕೆ [illegible]

[illegible] ಐದ ಗೆಳೆಯರೂ ಒಬ್ಬರು [illegible] ರಾತ್ರಿ ಎಲ್ಲ ಹಿಳಿಬಳಿಗೆ ಕಳ್ಳರಂತೆ [illegible] ಒಬ್ಬರೇ ಸ್ಪರ್ಧಿಸಿದ, [illegible] ಅಲ್ಲದೆ, ನನ್ನನ್ನು ತಲೆ ಎತ್ತಿ [illegible] ಹಾಗೆ ಮಾಡಿಬಿಟ್ಟ! ಮತ್ತೆ, ನನ್ನ [illegible] ಅಂಗೀಕು, ಹೇಳ್ರಿ.

ಆ [illegible] ಎಲ್ಲ [illegible] ರಾಮಸ್ವಾಮಿಯು [illegible]. ಅವನ ಶಾರೀರ ಎಷ್ಟು ಚೆನ್ನ, [illegible] ಗರ್ಜನೆ ಎಂಥ ಉತ್ತಮ ದರ್ಜೆಯದು ಅವನ ಝೇಂಕಾರ ಎಷ್ಟು ಭಯಾನಕ, ಅವನ [illegible] ಅವರೋಹಣ ಎಷ್ಟು ರುದ್ರ [illegible] ಅವನ ಕಾಳಿಂಗಾನ ಎಷ್ಟು ನಿಲ [illegible]—ಎಂದು ಮುಂತಾಗಿ ಅವರು ರಾಮಸ್ವಾಮಿಯು ಸೇವಾಹಿನಿಯನ್ನೇ ಉಪ್ಪು [illegible] ತಳ್ಳಿ ಮೆಚ್ಚಿದರು.

ನಿಶ್ಚಿತವಾಗಿ ಅವರು ಯಾರೂ ನನ್ನ ಕಾಮೇಶ್ವರನ ಗೊರಕೆಯನ್ನು ಎಂದೂ ಕೇಳಿರಲಿಲ್ಲ. [illegible] ಬಂದರೆ ತಾನೆ, ಯಾವುದು ಕಾಳ [illegible] ಹಿತ ಎಂಬ ಪರಿಜ್ಞಾನ ಉದಯವಾಗುವುದು? ಆದರೆ, ನಾನು ರಾಮಸ್ವಾಮಿಯನ್ನು [illegible] ಕಾಮೇಶ್ವರನನ್ನು ಕೇಳಿದ್ದೆ. ಅವರ ರಾಮಸ್ವಾಮಿಯ ಗೊರಕೆಗಿಂತ ನನ್ನ ಕಾಮೇಶ್ವರನ ಗೊರಕೆಯಲ್ಲಿ ನಯನಾಜೂಕು ನಾಗರಿಕತೆ ಹೆಚ್ಚು. ತಲೆದಿಂಬಿಗೆ [illegible] ರಾಮಸ್ವಾಮಿಯ ಕಣ್ಣಿಗೆ ನಿದ್ದೆ ಹತ್ತಿಬಿಡುತ್ತದೆ; ಅವನ ಬಾಯಿ ಅರೆತೆರೆಯುತ್ತದೆ. ಮೂಗಿನ [illegible] ಕೆಂಪಗಾಗುತ್ತದೆ. ಆ ಕೂಡಲೇ ಅವನ ಗೊರಕೆಯೂ ಪ್ರಾರಂಭವಾಗುತ್ತದೆ. ಆದರೆ ಕಾಮೇಶ್ವರ, ಸಭ್ಯ; ನಿಧಾನಸ್ಥ; ಅವನ [illegible] ಇಲ್ಲ. ಅಂತರಾಳದಲ್ಲಿ ನಿದ್ದೆ ಚೆನ್ನಾಗಿ [illegible] ಬಿಟ್ಟಲ್ಲದೆ, ಗೊರಕೆಯ ಸಸಿ ಅವನ [illegible] ಮೇಲೆದ್ದು ಚಿಗುರುಬಿಟ್ಟು ಕುಡಿ ಮೂಡಿ ಹೂತು ಫಲಿತು ಹಣ್ಣಾಗುವುದಿಲ್ಲ. ಅದ್ದರಿಂದಲೇ, ಅವನ ಗೊರಕೆ ರಸ [illegible]; ಅಲ್ಲದೆ, ರಾಮಸ್ವಾಮಿಯ ಗೊರಕೆ, [illegible] ಗೊರಕೆಯಂತೆ ರೂಕ್ಷ, ಕರ್ಕಶ, [illegible], ಅದರಲ್ಲಿ ವಿರಿಕತಗಳು ಕಡಮೆ. [illegible] ಮುರವನ್ನು ಮೊಂಡುಗರಗಸ ಕುಯ್ಯುವಾಗಿನ ಕಠೋರ ಧ್ವನಿ; ಎತ್ತಕಡೆಗೆ ಮಗುಚಿ [illegible], ಅವನ ಗೊರಕೆಯ ಬಿರುಸು ತಗ್ಗುವುದಿಲ್ಲ. ಅದರಲ್ಲಿ ತಿಲುವು ನಲಿವು ಬೆಡಗು [illegible] ಅಗಳೊಂದೂ ಇಲ್ಲ. ಅದು ಒಂದು [illegible] ಕೆಟ್ಟ ಕೂಗು. ಅದ್ದರಿಂದ, ಅವನನ್ನು [illegible] ಹೊತ್ತು ಆಲಿಸುತ್ತ ಮಲಗಿರಲು [illegible]ವಿಲ್ಲ. ಹೊಸದಾಗಿ ಬಂದವರನ್ನು ಅವನು [illegible] ನಾದಸೇವೆಯಿಂದ ಹತ್ತು ಹದಿನೈದು [illegible] ವರೆಗೆ ಬೆರಗುಮಾಡಬಹುದು, ಆದರೆ, ಅಷ್ಟರೊಳಗೆ ಶ್ರೋತೃಗಳ ಕುತೂಹಲ [illegible], ಅವರ ಕಿವಿ ಜೋಲುಬೀಳುವುದು. [illegible] ಗೊರಕೆಯ ಉದ್ದ ಅಗಲ ಆಳ ಎತ್ತರ [illegible] ಮಿತಿ, ನಿಖರ, ನಿರ್ದಿಷ್ಟ. ಒಂದ [illegible] ಮತ್ತೊಂದು ಒಂದರ ಹಿಂದೆ ಮಗು [illegible], ಮೂಡಿ ಮುಳುಗಿ ಕೇಳುತ್ತಿರುತ್ತವೆ. [illegible] ಕೇಳುತ್ತ, ಅಕ್ಕಪಕ್ಕದಲ್ಲಿರುವವರು [illegible] ಅರ್ಧ ಗಂಟೆಯಲ್ಲೇ ತೂಕಡಿಕೆಬಂದು [illegible]

ರಾಮಸ್ವಾಮಿಯ ಗೊರಕೆಯನ್ನು ಅಟ್ಟದ [illegible] ಲೇರಿಸಿ, ಅದರಲ್ಲೂ ಸೊಬಗನ್ನು ಕಂಡು [illegible] ನನ್ನ ಗೆಳೆಯರನ್ನು ನಾನು [illegible] ನನಗೆ ಮರುಕಹುಟ್ಟಿತು. ಹಿಮಾಲಯ [illegible] ಕಾಣದವರಿಗೆ ಹುತ್ತಲಗುಡ್ಡವೇ ದೆಟ್ಟ. [illegible] ನೋಡದವರಿಗೆ ಗೋಷ್ಪದವೇ [illegible]. ಗುಲಾಬಿಯನ್ನು ಮೂಸದವರಿಗೆ [illegible] ಪರಿಮಳ; [illegible] ಕೇಳ [illegible]

ಕಾಮೇಶ್ವರನ ಗೊರಕೆಯ ಮೇಲ್ಮೆಯನ್ನು ನಾನು ಅವರೆದುರು ಅನೇಕ ವೇಳೆ ವಿವರಿಸಿದ್ದುಂಟು. ಆದರೆ, ರಾಮಸ್ವಾಮಿಯನ್ನೇ ತಮ್ಮ ಆರಾಧನೆಯ ಅಧಿದೇವತೆಯಾಗಿ ಅರಿಸಿ ವರಿಸಿದ್ದ ಅವರಿಗೆ ನನ್ನ ಮಾತು ಖರೆ ಎನಿಸಲಿಲ್ಲ. ಅದು ಅವರ ದುರದೃಷ್ಟ. ತಿಳಿಗೇಡಿತನದಿಂದಾದ ಪಕ್ಷಪಾತ, ಅವರನ್ನು ಕುರುಡುಮಾಡಿತು. ಅವರ ಕಿವಿಯ ಕವಾಟವು ಕಾಮೇಶ್ವರನ [illegible] ನನ್ನನ್ನು ಅವರು ಕಾಮೇಶ್ವರನ ಕಲೆಯ ಹೊಗಳುಭಟ್ಟ, ಮೂಢ ಭಕ್ತ, ನಾನು ಅವನ ಅನುಸಾಯಿ, ಎಂದೆಲ್ಲ ದೂಷಿಸಿದರೂ ಪ್ರಪಂಚದ ಎಂಥ ಗೊರಕಾಸ್ಪರ್ಧೆಯಲ್ಲೂ ಅವರ ರಾಮಸ್ವಾಮಿಯೇ ಜಯ ಭೇರಿ ಹೊಡೆಯುವನೆಂದು ಅವರು ಭುಜತಟ್ಟಿದರು.

ಆದರೆ [illegible] ನನ್ನ [illegible] ಮೂರ್ತಿಯೂ ಅವರ ರಾಮಸ್ವಾಮಿಯೂ ಒಂದೆಡೆ ಸೇರುವ ಸುಯೋಗ ದೊರೆಯಿತು. ಆ ರಾತ್ರಿ ನಾನು ಮಾತ್ರ ಅವರಿಬ್ಬರ ಬಳಿ ಮಲಗಿದ್ದೆ. ಕಿವಿ ಮುಚ್ಚದೆ ರಾತ್ರಿಯೆಲ್ಲ ಅವರಿಬ್ಬರ ಗೊರಕೆಯನ್ನೂ ಕಲೆಯ ತಕ್ಕಡಿಯಲ್ಲಿ ತೂಗಿ ಟಿಂಪನದ ಒರೆಗಲ್ಲಿನಲ್ಲಿ ಹಚ್ಚಿ ನೋಡಿದೆ ನಾಪ! ರಾಮಸ್ವಾಮಿಯದು ಕೇವಲ ಅಸಹ್ಯ. ನನ್ನ ಹಂಸದ ಮುಂದೆ ಅವನೊಬ್ಬ ಬಕ! ಈ ಸಿಂಗನ ಮುಂದೆ ಅವನೊಬ್ಬ ಮಂಗ. ಗಂಟಲಿರುವವರೆಲ್ಲ ಗಾಯಕರಾಗುವರೆ? ಕರಡಿಯಂತೆ ಬರಡುಬರಡಾಗಿ ಹಾ. ..ಹೂ, ಹಾ. ..ಹೂ ಎಂದು ಉಸಿರೆಳೆದರೆ, ಮಾನವನಿಗದು ಭೂಷಣವೇ? ನನ್ನ ರಾಮೇಶ್ವರ ಮಾತ್ರ ಆ ರಾತ್ರಿ ತನ್ನ ಕಲಾನೈಪುಣ್ಯವನ್ನೆಲ್ಲ ಹೊರಗೆಡಹಿದ. ನಾನು ಉದ್ಗರಿಸ್ತ್ಯೂ ಶಹಭಾಸ್! ಶಹಭಾಸ್! ಎಂದು ಕೂಗುತ್ತಲೇ ಇದ್ದೆ. ಅದರಿಂದ ಹುರುಪುಗೊಂಡವನಂತೆ, ಅವನು ತನಗೆ ಸಾಧನೆಯಾಗಿದ್ದ ಎಲ್ಲ ರಾಗಗಳನ್ನೂ ಅಂದು ತೋರಿಸಿದ. ಬೆಳುದಿಂಗಳಿನಲ್ಲಿ ಉಬ್ಬಿದ ಕ್ಷೀರಸಾಗರದ ಅಲೆಗಳಂತೆ ಅವನ ಗೊರಕೆ ಉಸಿರು ಉಸಿರಿಗೂ ಹೊಸ ಹೊಸ ಪೆಂಪನ್ನು ಬೀರಿತು. ಪ್ರತಿ ಒಂದು ಧ್ವನಿಯೂ ನನಗೆ ಕರ್ಣರಸಾಯನ. ಅದರ ಮಾಧುರ್ಯಕ್ಕೆ ನಾನು ಹಿಗ್ಗಿದೆ; ಗಾಂಭೀರ್ಯಕ್ಕೆ ಕುಗ್ಗಿದೆ. ಒಮ್ಮೆ ಲಲಿತಕೋಮಲವಾಗಿಯೂ, ಒಮ್ಮೆ ರುದ್ರ ರಮಣೀಯವಾಗಿಯೂ, ಒಮ್ಮೆ ವಿದ್ಯುಲ್ಲತೆಯಾಗಿಯೂ ಮಿಂಚಿ ಮಿನುಗಿ ನುಸುಳಿ ಜಿನುಗಿ ಜೇನು ಹೊಳೆಯನ್ನೇ ಹರಿಸಿದ, . . ಕಾಮೇಶ್ವರ.

ಮರುದಿನ, ಅಲ್ಲಿಗೆ ನನ್ನ ಆ ಮೂರು ಗೆಳೆಯರೂ ಬಂದರು. ರಾತ್ರಿ ಅಲ್ಲಿ ತಂಗುವಂತೆ ನಾನು ಅವರನ್ನು ಕೇಳಿಕೊಂಡೆ. ಇಬ್ಬರು ಹುರಿಯಾಳುಗಳಿಗೂ ಆ ರಾತ್ರಿ ಸ್ಪರ್ಧೆ ನಡೆಯುವಂತೆ ನಿರ್ಧರಿಸಿದೆವು. ತೀರ್ಪನ್ನು ಕೊಡಲು, ಅದೇ ಊರಿನ ಒಬ್ಬರು ನಿವೃತ್ತ ಸಣ್ಣ ನ್ಯಾಯಾಧೀಶರನ್ನು ಅಹ್ವಾನಿಸಿದೆವು. ಅವರಿಗೂ ಒಂದು ಹಾಸಿಗೆಯನ್ನು ಸಿದ್ಧಪಡಿಸಿದೆವು.

ಬೆಳಗ್ಗಿಂದ ಸಂಜೆವರೆಗೂ ಕಾಮೇಶ್ವರನನ್ನು ನಾನೂ, ರಾಮಸ್ವಾಮಿಯನ್ನು ಅವನ ಮೂರು ಭಕ್ತರೂ, ಹುರಿದುಂಬಿಸುತ್ತಲೇ ಇದ್ದೆವು. ಇಬ್ಬರಿಗೂ ಒಂದೇ ತರದ ಆಹಾರವನ್ನು ಒಂದೇ ಅಳತೆಯಲ್ಲಿ ಕೊಡಬೇಕೆಂದು ನ್ಯಾಯಾಧೀಶರು ಕಟ್ಟುಮಾಡಿದ್ದರು. ಆದರೆ, ಅವನ ಅನುಸಾಯಿಗಳು ಅವನಿಗೆ ಒಂದೆರಡು ಸೌಟು ನೀರುಳ್ಳಿಹುಳಿಯನ್ನು ಹೆಚ್ಚಾಗಿಯೇ ಕುಡಿಸಿ ಖುಷಿಮಾಡಿಸಿದ್ದರಂತೆ. ಈ ಸಮಾಚಾರ ಕೇಳಿದಾಗ, ನನಗೆ ಕೊಂಚ ಸಮಾಧಾನವೇ ಆಯಿತು. ರಾಮಸ್ವಾಮಿಯ ಶಾರೀರ ಇನ್ನೂ ಕೆಟ್ಟು ಅವನ ಗೊರಕೆ ಮತ್ತಷ್ಟು ಗ್ರಾಮ್ಯವಾಗುವುದಲ್ಲಾ, ಎಂದು ನಾನು ಕುಣಿದೆ.

ರಾತ್ರಿ ೧೦ ಗಂಟೆಗೆ ಸರಿಯಾಗಿ ಇಬ್ಬರನ್ನೂ ಮಲಗಿಸಿ, ನಾವು ಕಿವಿಮರೆಳಿಸಿ ಸಿದ್ಧರಾದೆವು. ಸರಿಯಾಗಿ ಅತ್ತ ಕಾಲು ಗಂಟೆಗೆ ರಾಮಸ್ವಾಮಿ ಯಥಾ ಪ್ರಕಾರ ತನ್ನ ಕಾರ್ಯಕ್ರಮ ಮೊದಲು ಮಾಡಿದ. ನ್ಯಾಯಾಧೀಶರು ಅದನ್ನು ಕೇಳಿ ದೆಸೆಗೆಟ್ಟು ಬೆರಗಾದಂತೆ ತೋರಿತು. ಆಗ, ನಾನು, "ತಾಳಿ! ತಾಳಿ! ನನ್ನವನೂ ಈಗ ಪ್ರಾರಂಭಿಸುತ್ತಾನೆ. ಆಗ, ಕೇಳಿ, ಅದರ ವೈವಿಧ್ಯ ಲಾಲಿತ್ಯ ಲಾವಣ್ಯ ಕೌಶಲ್ಯ" ಎಂದೆ. ಕಾಮೇಶ್ವರನಿಗೆ ನಿದ್ದೆ ಹತ್ತುವುದೇ ತಡವಾಯಿತು.... ರಾಮಸ್ವಾಮಿಯ ಗೊರಕೆ ಯಂದ ೧೧ ಗಂಟೆ ತನಕ ಅವನು ಅಳಿ [illegible]

ತನ್ನೆರಡೂ ಕಾಲುಗಂಟೆ! ನಾವೆಲ್ಲ ತದ್ದು ದೂಡದೆ ಕತ್ತಲಲ್ಲಿ ಕುಳಿತಿದ್ದೆವು. ಕಾಮೇಶ್ವರನಿಗೆ ಜಯವಾಗಲಿ ಎಂದು ನಾನು ದೇವರನ್ನು ಪ್ರಾರ್ಥಿಸುತ್ತಲೇ ಇದ್ದೆ. ನ್ಯಾಯಾಧೀಶರು ನಿಜಕ್ಕೂ ಕಲಾಪ್ರೇಮಿಯಾಗಿದ್ದರೆ, ಅವನಿಗೆ ಜಯಸಿದ್ಧ ಎಂದು ನನಗೆ ತಿಳಿದಿತ್ತು. ಒಂದೂವರೆ ಗಂಟೆಗೆ, ನನ್ನ ಬಯಕೆ ಕೈಗೂಡಲು ಪೀಠಿಕಾ ಪ್ರಕರಣವಾಗಿ ಕಾಮೇಶ್ವರ ಗಂಟಲು ಮೂಗುಗಳನ್ನು ಸರಿಪಡಿಸಿದ, ನಿದ್ದೆಯಲ್ಲೇ; ಅನಂತರ, ಅವನ ಗೊರಕೆ ಪ್ರಾರಂಭವಾಯಿತು.

ಆದರೆ, ಅಂದು ಅವನು ಅವನಾಗಿರಲಿಲ್ಲ. ಕೇವಲ ಅಶಿಕ್ಷಿತ ಅನಾಥೆಯಂತೆ, ಅವನ ಗೊರಕೆ ತಬ್ಬಿಬ್ಬಾಗಿ ಸೋತು ಕೂತುಕೊಂಡಿತು. "ಕಾಮೇಶ್ವರಾ! ನನ್ನ ಮಾನ ನಿನ್ನ ಮಾನ ಎರಡನ್ನೂ ಉಳಿಸು! ಸೋಲಬೇಡ! ನಿನ್ನೆ ರಾತ್ರಿ ತೋರಿಸಿದ ವರಸೆಗಳನ್ನು ಮತ್ತೊಂದಾವರ್ತಿ ತೋರಿಸು!" ಎಂದು ನಾನು ಪಿಸುಗುಟ್ಟಿದೆ. ಊಹುಂ! ವಾತರೋಗಿಯಂತೆ, ಅವನ ಗೊರಕೆ ತೆವಳುತ್ತ ಮುಂದುವರಿಯಿತು. ಉಸಿರಿಗೊಂದು ಚಮತ್ಕಾರ ನಡೆಯಿಸಬಲ್ಲ ನನ್ನ ಕಾಮೇಶ್ವರ ಸಭಾಕಂಪದಿಂದ ಸ್ವರ ವಿನ್ಯಾಸ ಮಾಡಲಾರದೆ ಹೋದ; ಜಡವಾಗಿ ಬಿದ್ದಿದ್ದ.

"ಥತ್!" ಎಂದು ಹೇಳುತ್ತ, ನಾನು ನಾಚಿಕೆಯಿಂದ ತಲೆಗೆ ಮುಸುಕು ಎಳೆದುಕೊಂಡೆ. ನಿವೃತ್ತ ನ್ಯಾಯಾಧೀಶರು ತುಂಬಾ ಸಹತಪಿಸಿದರು.... ಕಾಮೇಶ್ವರನ ಕಲೆ ಅವನ ಮಿತ್ರರಿಗೆ ಮಾತ್ರ ಮೀಸಲು. ಬಯಲಿನ ಬಿಸಿಲಿಗೆ ಅದು ಬಾಡಿ ಹೋಗುವುದು. ಅವನನ್ನು ಪರೀಕ್ಷಿಸಿದ್ದೇ ನನ್ನ ತಪ್ಪೆಂದು ತೋರುತ್ತದೆ.

— ನಾ. ಕಸ್ತೂರಿ

ವಿಮರ್ಶೆ

## ಬಾಪೂಜಿಯವರ ಸತ್ಸಂಗ

ಬರೆದವರು ಶ್ರೀ ಕೃ. ನಾ. ಗೋಸಾವಿ 'ಭಾರತ ಸಂಚಾರಿ.' ಪ್ರಕಾಶಕರು ಮನೋಹರ ಗ್ರಂಥ ಭಾಂಡಾರ ಧಾರವಾಡ. ಪುಟ ೪೨, ಬೆಲೆ ಹತ್ತಾಣೆ.

ಬಾಪೂಜಿಯವರ ಸತ್ಸಂಗದಲ್ಲಿ ತಮಗಾದ ಅನುಭವಗಳನ್ನು ಗ್ರಂಥಕರ್ತರಿಲ್ಲಿ ಸ್ವಾರಸ್ಯವಾಗಿ ವಿವರಿಸಿದ್ದಾರೆ. ಮಹಾಪುರುಷರ ಜೀವನವೇ ಒಂದು ಹೆದ್ದೊತ್ತಿಗೆ. ಅದರಲ್ಲಿ ನಿರೀಕ್ಷಕ ಪ್ರವೃತ್ತಿಯುಳ್ಳವರು ಅದರಿಂದ ಅನೇಕಾನೇಕ ತತ್ವ ಸೂಕ್ಷ್ಮತೆಗಳನ್ನು, ನ್ಯಾಯನಿರ್ಣಯಕ ತತ್ವಾಂಶಗಳನ್ನು, ದೇಶಕಾಲ ಕಾರ್ಯಗಳಿಗೆ ಯೋಗ್ಯವಾದ ನಡೆನುಡಿಗಳ ಸಾಮಂಜಸ್ಯದ ವಿವರಗಳನ್ನು, ಕಂಡುಕೊಂಡು ತಮ್ಮ ಜೀವನ ಪಥದಲ್ಲಿ ಮಾರ್ಗದರ್ಶನಕ್ಕೆ ಅನುಕೂಲವನ್ನು ಮಾಡಿಕೊಳ್ಳಬಹುದು.

ದಧೀಚಿಯು ಮಹಾತ್ಮರ ಆದರ್ಶವಾದ ಸುಂದರ ರೀತಿ, ಅವರ ಸಮಾಧಿಲಕ್ಷಣದ ವೈಚಿತ್ರ್ಯ, ಇಂಗಿತಜ್ಞತೆಯ ಸೂಕ್ಷ್ಮತೆ, ಅವಿಸ್ಮರಣೀಯ ಸ್ಮರಣ ಶಕ್ತಿ, ಅಹಿಂಸೆಯ ವ್ಯವಹಾರ ಮೀಮಾಂಸೆ ಮುಂತಾದ ವಿವಿಧ ವಿಷಯಗಳನ್ನು ಶ್ರೀ ಗೋಸಾವಿಗಳು ೨೦ ಬೇರೆ ಬೇರೆ ಪ್ರಕರಣಗಳಲ್ಲಿ ಸರಳವಾಗಿ ಆಕರ್ಷಣೀಯವಾಗಿ ಚಿತ್ರಿಸಿದ್ದಾರೆ. ಲೇಖಕರು ಸ್ವಂತ ಅನುಭವದ ಆಧಾರದಿಂದ ಬರೆದ ಈ ಘಟನೆಗಳ ವರ್ಣನೆಯಲ್ಲಿ ಅವರದೇ ಆದ ಒಂದು ಭಕ್ತ ಶೈಲಿ ಸ್ಪಷ್ಟಾಸ್ಪಷ್ಟವಾಗಿ ರೂಪುಗೊಂಡಿದೆ. ಇಂಥ ಪ್ರಬಂಧ ಸಂಗ್ರಹದಲ್ಲಿ ಬಾಪುವಿನ "ಪರೋಪಕಾರಾರ್ಥಮಿದಂ ಶರೀರಂ", "ಪರೋಪಕಾರಾಯ ಸತಾಂ ವಿಭೂತಯಃ", "ವಿಭಾತಿ ಕಾಯಃ ಕರುಣಾಕರಾಣಾಂ ಪರೋಪಕಾರೇಣ ನ ಚಂದನೇನ" ಎಂಬಂತಿರುವ ಸುಂದರ ಸುಮಧುರ ಜೀವನದ ಹಲವಾರು ಪ್ರಕರಣಗಳನ್ನು ಕಂಡು ಸದಾನಂದ ಹೊಂದ ಬಯಸದವರು ವಿರಳರಲ್ಲವೆ?

## ಸಮಸ್ತ ಭಾರತ

### ಮುಂಬಯಿ

ಅಮೇರಿಕ ಹಿಂದುಸ್ಥಾನದ ಅಭಿವೃದ್ಧಿಯಲ್ಲಿ ಆಸ್ಥೆಯುಳ್ಳದ್ದಾಗಿದೆ. ಇದಕ್ಕೆ ಕಾರಣವೆಂದರೆ, ಇತರ ರಾಷ್ಟ್ರಗಳು ತನ್ನ ಸಂಪತ್ತನ್ನು ಉಪಭೋಗಿಸಲು ಅಮೇರಿಕ ಒಪ್ಪದಿದ್ದಲ್ಲಿ ಅದು ತನ್ನ ಉಚ್ಚಸಾಂಪತ್ತಿಕ ಸ್ಥಿತಿಯನ್ನು ಕಾಪಾಡಿಕೊಳ್ಳುವದು ಅಶಕ್ಯವಾಗುವದು ಎಂಬುದನ್ನು ಅದು ಮನಗಂಡಿದೆ-ಎಂದು ಅಮೇರಿಕದ ಪ್ರವಾಸವನ್ನು ಈಗಷ್ಟೇ ಮುಗಿಸಿಕೊಂಡುಬಂದ ಮುಂಬಯಿಯ ಮೇಯರರಾದ ಶ್ರೀ ಎಸ್. ಕೆ. ಪಾಟೀಲರು ಹೇಳಿದರು.

ಮುಂಬಯಿ ಪ್ರಾಂತದಲ್ಲಿಯ ಖಾಸಗಿ ಮೋಟಾರು ಕಾರುಗಳ ಒಡೆಯರಿಗೆ ಪೂರೈಸುತ್ತಿದ್ದ ಪೆಟ್ರೋಲಿನ ಪ್ರಮಾಣವನ್ನು ನೂರಕ್ಕೆ ೫೦ ರಷ್ಟು ಹೆಚ್ಚಿಸುವದಾಗಿ ಮುಂಬಯಿ ಸರಕಾರದ ಅಧಿಕಾರಿಗಳೊಬ್ಬರು ಪ್ರಕಟಿಸಿದ್ದಾರೆ. ಕೇಂದ್ರ ಸರಕಾರವು ಪ್ರಾಂತಗಳಿಗೆ ಹೆಚ್ಚಿಗೆ ಪೆಟ್ರೋಲನ್ನು ಪೂರಯಿಸುವೆನೆಂದು ಸಾರಿದ್ದರಿಂದ ಈ ಹೆಚ್ಚಿನ ಪ್ರಮಾಣವನ್ನು ಕೊಡಲು ಸಾಧ್ಯವಾಗಿದೆ.

ಜೂನ್ ೧೮ ನೆಯ ತಾರೀಕಿನ ವರೆಗೆ ಮಹಾತ್ಮಾಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ೯,೩೮,೬೮,೫೫೦ ರೂಪಾಯಿಗಳು ಕೂಡಿವೆ. ಈ ನಿಧಿಯ ವಿನಿಯೋಗದ ಬಗ್ಗೆ ಸೂಚನೆಗಳನ್ನು ಮಾಡಬೇಕೆಂದು ಕೇಳಿಕೊಂಡಿದ್ದಾರೆ.

ಮುಂಬಯಿಯ ವಿಕ್ಟೋರಿಯಾ ಜುಬಿಲಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ೯೦೦ ವಿದ್ಯಾರ್ಥಿಗಳು ವಸತಿಗೃಹದಲ್ಲಿಯ ೧೭ ವಿದ್ಯಾರ್ಥಿಗಳಿಗೆ ಪ್ರಿನ್ಸಿಪಾಲರು ವಸತಿಗೃಹವನ್ನು ತೆರವುಮಾಡಿ ನಗರದ ಹೊರಗಿನಿಂದ ಬರುವ ವಿದ್ಯಾರ್ಥಿಗಳಿಗೆ ಅವಕಾಶಮಾಡಿಕೊಡಿರಿ ಎಂದು ಅಜ್ಞಾಪಿಸಿ, ಅವಿಧೇಯರನ್ನು ಶಾಲೆಯಿಂದ ವಜಾ ಮಾಡುತ್ತೇವೆಂದುದನ್ನು ಪ್ರತಿಭಟಿಸಲು ಸಂಪು ಹೂಡಿದ್ದಾರೆ.

ಮುಂಬಯಿ ಮಾರವಾಡಿ ವಣಿಕ್‌ಸಂಘವು ತನ್ನ ಹೆಸರನ್ನು ಪಶ್ಚಿಮ ಭಾರತ ವಣಿಕ್ ಸಂಘವೆಂದು ಇನ್ನು ಮುಂದೆ ಕರೆಯಲಾಗುವುದು ಎಂದು ಸಾರಿದೆ. ಮಾರವಾಡಿ ಎಂಬ ಹೆಸರಿನಿಂದುಂಟಾಗುವ ತಪ್ಪು ತಿಳುವಳಿಕೆಯನ್ನು ದೂರಮಾಡುವುದೇ ಇದರ ಉದ್ದೇಶ.

ಜಿ. ಐ. ಪಿ. ರೇಲ್ವೆಯ ಮುಂಬಯಿ ರಾಯಚೂರ ಭಾಗದಲ್ಲಿಯ ಪುಣೆ-ಧೋಂಡ್ ಮಾರ್ಗವನ್ನು ಮತ್ತು ಇಗತಪುರಿ ಭೂಸಾವರ ಮಾರ್ಗವನ್ನು ವಿದ್ಯುತ್ತಿನ ಸಹಾಯದಿಂದ ನಡೆಸುವ ಯೋಜನೆಯನ್ನು ಅಮಲಿಗೆ ತರಲು ನಿರ್ಧರಿಸಲಾಗಿದೆ. ಅದಕ್ಕಾಗಿ ರೇಲ್ವೆ ಮಂಡಲಕ್ಕೆ ೧೧ ಕೋಟಿ ರೂಪಾಯಿಗಳ ವೆಚ್ಚತಗಲಬಹುದು.

### ಮದ್ರಾಸ

ಮದ್ರಾಸ್ ಶಾಸನ ಸಭೆಯ ಕಾಂಗ್ರೆಸ್ ಸಭಾಸದರಲ್ಲಿ ೪೦ ಜನರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೆ ವಿನಂತಿ ಪತ್ರಿಕೆಯೊಂದನ್ನು ಕಳಿಸಿದ್ದಾರೆ. ಅದರಲ್ಲಿ "ಸಾರ್ವಜನಿಕರ ವಿಶ್ವಾಸವು ಅತಿ ಕಡಿಮೆಯಾಗಿರುವ ಮಂತ್ರಿಗಳನ್ನು ಸ್ಥಾನಚ್ಯುತರನ್ನಾಗಿ ಮಾಡಿ ಸರಕಾರದ ಸ್ಥಿರತೆಯನ್ನು ಕಾಪಾಡಿ ಕಾಂಗ್ರೆಸ್ಸಿನ ಪ್ರತಿಷ್ಠೆಯನ್ನು ಕುಗ್ಗದಂತೆ ತಡೆಯಿರಿ" ಎಂದು ಬೇಡಿಕೊಳ್ಳಲಾಗಿದೆ.

ಮದ್ರಾಸ್ ಪ್ರಾಂತದಲ್ಲಿ ಸದ್ಯದಲ್ಲೇ ನಡೆಯಲಿರುವ ಲೋಕಲ್ ಬೋರ್ಡ್ ಚುನಾವಣೆಗಳಲ್ಲಿ ತನ್ನ ಹುರಿಯಾಳುಗಳನ್ನು ನಿಲ್ಲಿಸಬಾರದೆಂದು ಮದ್ರಾಸ್ ಪ್ರಾಂತಿಕ ಮುಸ್ಲಿಂಲೀಗಿನ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. ಆದರೆ ಈ ಚುನಾವಣೆಗಳಲ್ಲಿ ಮುಸ್ಲಿಂ ಮತದಾರರು ಹಿಡಿಯಬೇಕಾದ ಧೋರಣವನ್ನು ನಿಶ್ಚಯಿಸಲು ಅಧ್ಯಕ್ಷ ಮಹಮ್ಮದ್ ಇಸ್ಮಾಯಿಲರಿಗೆ ಅಧಿಕಾರ ಕೊಟ್ಟಿದೆ.

ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯರ ಮತ್ತು ಪ್ರಮುಖ ಆಂಧ್ರ ಧುರೀಣರ ಸಂಯುಕ್ತ ಸಭೆಯೊಂದನ್ನು ನಾಳಿನ ೨೪ ರಲ್ಲಿ ಮದ್ರಾಸಿನಲ್ಲಿ ಕೂಡಿಸಬೇಕೆಂದು ಕರೆಯಲಾಗಿದೆ. ಆಂಧ್ರ ಪ್ರಾಂತರಚನೆಯನ್ನು ತ್ವರೆಯಿಂದ ಸಾಗಿಸಲು ಏನು ಮಾಡಬೇಕೆಂಬುದನ್ನು ವಿವೇಚಿಸುವುದೇ ಸಭೆಯ ಉದ್ದೇಶ.

ದ್ರವಿಡಸ್ಥಾನ ಚಳವಳಿಯ ಮುಖಂಡರಾದ ಡಾ. ಇ. ವಿ. ರಾಮಸ್ವಾಮಿ ನಾಯಕರು ಈಗ ತಮ್ಮ ೭೧ ನೆಯ ವಯಸ್ಸಿನಲ್ಲಿ ೩೦ ವರ್ಷ ವಯಸ್ಸಿನ ಶ್ರೀಮತಿ ಮಣಿಅಮ್ಮ ಯರರೆಂಬವರನ್ನು ವಿವಾಹವಾಗಲಿದ್ದಾರೆ. ತಮ್ಮ ಆಸ್ತಿಗೆ ವಾರಸದಾರನೊಬ್ಬನನ್ನು ಪಡೆಯುವುದಕ್ಕಾಗಿ ತಾವು ಈ ಲಗ್ನ ಮಾಡಿಕೊಳ್ಳುವುದಾಗಿ ಅವರು ಹೇಳಿದರು. ಅದರಲ್ಲಿ ಯಾವ ರಾಜಕಾರಣವೂ ಇಲ್ಲವಂತೆ.

ಮದ್ರಾಸ್ ಸರಕಾರದ ಅಭಿವೃದ್ಧಿ ಕಾರ್ಯದರ್ಶಿಗಳಾದ ಶ್ರೀ ಕೆ. ಜಿ. ಮೆನನ್ನರನ್ನು ಕೇರಳ ಒಕ್ಕೂಟದ ಮುಖ್ಯ ಕಾರ್ಯದರ್ಶಿಗಳೆಂದು ನೇಮಿಸಲಾಗಿದೆ.

### ಹೊಸದಿಲ್ಲಿ

ಜೂನ್ ೨೩ ರಲ್ಲಿ ೩ ತಿಂಗಳ ಶಿಕ್ಷೆ ಮತ್ತು ೧೦೦ ರೂಪಾಯಿ ದಂಡ ವಿಧಿಸಲ್ಪಟ್ಟ ಸೋಶಲಿಸ್ಟ ಧುರೀಣರಾದ ಶ್ರೀ ರಾಮಮನೋಹರ ಲೋಹಿಯಾ ಮತ್ತು ಇಸ್ನಿತರ ೪೨ ಜನರನ್ನು ಬಂಧಮುಕ್ತರನ್ನಾಗಿಮಾಡಲು ಹೊರಡಿಸಿದ ಹಿಂದೀ ಸರಕಾರದ ಅಜ್ಞೆಯಂತೆ ಅವರೀಗ ಮುಕ್ತರಾದರು. ಅದೇ ಕಾರಣಕ್ಕಾಗಿ ಶಿಕ್ಷೆಗೆ ಗುರಿಯಾದ ಎಲ್ಲ ಸೋಶಲಿಸ್ಟರನ್ನೂ ಬಿಟ್ಟುಬಿಡಲು ಪಶ್ಚಿಮ ಪಂಜಾಬ್ ಸರಕಾರವೂ ನಿರ್ಧರಿಸಿದೆಯೆಂದು ತಿಳಿಯುತ್ತದೆ.

ಹಳೆದಿಲ್ಲಿಯಲ್ಲಿ ಒಂದು ಕ್ಷುಲ್ಲಕ ಕಾರಣದಿಂದ ಇಬ್ಬಣಗಳಲ್ಲಿ ಬಡಿದಾಟವಾಗಿ ೧೨ಜನರು ಗಾಯಗೊಂಡರೆಂದೂ ಆ ಸಂಬಂಧದಲ್ಲಿ ಅಂಗಡಿಯವರ ಮೇಲೆ ೨೫೦೦೦ ರೂಪಾಯಿಗಳನ್ನು ಪಂಜಾಬ್ ಸಾರ್ವಜನಿಕ ಸುರಕ್ಷತೆಯ ಕಾಯದೆಯನ್ವಯ ಸಾಮೂಹಿಕ ದಂಡವೆಂದು ಹೇರಲಾಯಿತೆಂದೂ ಸುದ್ದಿ. ಗಲಭೆಗೆ ಒಬ್ಬ ಹುಚ್ಚ ಕಾರಣನಾದದ್ದು ಕಡೆಗೆ ತಿಳಿದು ಬಂದಿತು.

ಮದ್ರಾಸಿನ ಕೆಲ ಶಾಸನಸಭಾಸದಸ್ಯರು ಕೆಲ ಮಂತ್ರಿಗಳ ಮೇಲಿದ್ದ ಆರೋಪದ ವಿಚಾರಣೆಯನ್ನು ಇತ್ತೀಚೆಗೆ ನಡೆಸಿ ಬಂದಿರುವ ಅ. ಭಾ. ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವರು ವಿಚಾರಣೆಯಲ್ಲಿ ತಾವು ಬಂದ ತೀರ್ಮಾನದ ವಿಚಾರದಲ್ಲಿ ಅಭಿಪ್ರಾಯವನ್ನು ಪ್ರಕಟಿಸಲು ನಿರಾಕರಿಸಿದರು.

ಮಹಾತ್ಮರು ಅಹಿಂಸೆಯಲ್ಲಿಟ್ಟ ಅಚಲ ನಿಷ್ಠೆಯಿಂದ ಪ್ರೇರಿತರಾದ ಅವರ ಅನುಯಾಯಿಗಳಲ್ಲಿ ಮೂವರು ಅವರ ಕೊಲೆಗೆ ಕಾರಣನಾದ ನಥುರಾಮ ಗೋಡಸೆಯನ್ನು ಮಾನಸಿಕವಾಗಿ ಪರಿವರ್ತನೆಗೊಳಿಸಲು ಪ್ರಯತ್ನಿಸುತ್ತಿರುವರೆಂದೂ ಆ ಕಾರ್ಯದ ಜಯಾಪಜಯಗಳನ್ನು ಲಕ್ಷ್ಯಿಸದೆ ಅವನಿಗೆ ದಯೆದೋರಲು ಗವರ್ನರ್ ಜನರಲ್ಲರನ್ನು ಬೇಡುವರೆಂದೂ ತಿಳಿಯುತ್ತದೆ.

ಪಶ್ಚಿಮ ಬಂಗಾಲದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಹಿಂದುಸ್ಥಾನ ಸರಕಾರದ ಗೃಹಶಾಖೆಯ ಈರ್ವರು ಉನ್ನತಾಧಿಕಾರಿಗಳನ್ನು ಕಲಕತ್ತೆಕ್ಕೆ ಕಳಿಸಲಾಗಿದೆಯೆಂದು ತಿಳಿದುಬಂದಿದೆ.

ಹಿಂದುಸ್ಥಾನದಲ್ಲಿಯ ಕೂಲಿಕಾರರ ಅಶಾಂತಿಯ ಸ್ಥಿತಿ ಇನ್ನುಳಿದ ದೇಶಗಳಿಗಿಂತ ತೀರ ಕಡಿಮೆಯಿರುವುದೆಂದು ಹಿಂದುಸ್ಥಾನದ ಕೂಲಿಕಾರ ಮಂತ್ರಿಗಳಾದ ಶ್ರೀ ಜಗಜೀವನರಾಮರು ಕಾಂಗ್ರೆಸ್‌ಕಾರ್ಯಕರ್ತರಸಭೆಯೊಂದರಲ್ಲಿ ಭಾಷಣ ಮಾಡುತ್ತ ಹೇಳಿದರು.

ಹಿಂದೀ ಸಂಸ್ಥಾನಗಳಿಗೆ ಸಂಬಂಧಿಸಿದ ಅಧ್ಯಾಯವನ್ನು ರಾಜ್ಯಘಟನೆಯ ಕರಡಿನಲ್ಲಿ ಸೇರಿಸುವ ಬಗ್ಗೆ ಸಂಸ್ಥಾನಗಳು ಮತ್ತು ಕೇಂದ್ರಗಳೊಳಗಿನ ಹಣಕಾಸಿನ ಸಂಬಂಧ ನಿರ್ಧರಿಸುವ ಬಗ್ಗೆ, ಅಲ್ಲದೆ ನಾಗರಿಕತ್ವದ ಅರ್ಥವಿವರಣೆ ಮಾಡುವ ಬಗ್ಗೆ ಮೂರು ಪ್ರತ್ಯೇಕ ಪರಿಷತ್ತುಗಳು ಇದೇ ತಿಂಗಳ ೩ ನೆಯ ಮತ್ತು ನಾಲ್ಕನೆಯ ವಾರದಲ್ಲಿ ದಿಲ್ಲಿಯಲ್ಲಿ ಕೂಡಲಿವೆ.

ಶೀಘ್ರದಲ್ಲಿಯೇ ಹಿಂದುಸ್ಥಾನದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಬೇಕೆಂಬ ವಿಚಾರವು ರಾಜಕೀಯ ವರ್ಗಗಳಲ್ಲಿ ನಡೆಯುತ್ತಿದ್ದರೂ ೧೯೫೦ ರ ಚಳಿಗಾಲದ ಮೊದಲು ರಾಷ್ಟ್ರದ ಪಾರ್ಲಿಮೆಂಟಿನ ಅಥವಾ ಪ್ರಾಂತಗಳ ಶಾಸನಸಭೆಯ ಚುನಾವಣೆಗಳು ನಡೆಯುವ ಸಂಭವವಿಲ್ಲೆಂದು ಹೇಳಲಾಗುತ್ತಿದೆ. ಸಾರ್ವತ್ರಿಕ ಚುನಾವಣೆಯ ಮೊದಲು ಪ್ರಾಂತ ಶಾಸನಸಭೆಗಳ ಚುನಾವಣೆಗಳು ಪ್ರೌಢ ಮತದಾನ ಮತ್ತು ಸಂಯುಕ್ತ ಮತದಾರ ಸಂಘ ಪದ್ಧತಿಯಿಂದ ನಡೆಯಲಿ ಎಂಬ ಸೂಚನೆಯ ಆಚರಣೆಯ ಮಾರ್ಗದಲ್ಲಿ ಅನೇಕ ತೊಂದರೆಗಳಿವೆಯಂತೆ.

---

ಹಿಂದುಸ್ಥಾನದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಶ್ರೀನಗರದಿಂದ ಲಡಖಿಗೆ ಹೋಗಿ ಮುಂದೆ ಲೇಹನಗರದತ್ತ ಸಾಗಿದರು. ಶೇಖಅಬ್ದುಲ್ಲರೊಡನೆ ಅವರು ಗಂಭೀರಪುರಕ್ಕೆ ಬಳಿಕ ನಡೆದರು.

### [illegible]

ಹೈದರಾಬಾದಿನ ಹಳ್ಳದ ಮಂತ್ರಿಮಂಡಲವನ್ನು ವಿಸ್ತರಿಸಿ ಇಲ್ಲವೆ ಸಂಪೂರ್ಣವಾಗಿ ಕಾಂಗ್ರೆಸ್ ಮಂತ್ರಿಮಂಡಲವನ್ನು ಸ್ಥಾಪಿಸಿ ಆಡಳಿತದಲ್ಲಿ ಬದಲಾವಣೆ ಮಾಡಬೇಕೆಂಬ ಹಿಂದೀ ಸಂಸ್ಥಾನ ಶಾಖೆಯು ಗಂಭೀರವಾಗಿ [illegible] ಗಳಿಂದ ತಿಳಿದುಬಂದಿದೆ.

ಮುಂಬಯಿ ಸ್ಥಾನಿಕ ಸ್ವರಾಜ್ಯ ಕಾಯದೆಯನ್ನು ಸೌರಾಷ್ಟ್ರಕ್ಕೆ ಅನ್ವಯಿಸಿದ್ದರಿಂದ ಸೌರಾಷ್ಟ್ರದಲ್ಲಿ ೨೮ ನಗರ ಸಭೆಗಳು ಸ್ಥಾಪಿಸಲ್ಪಡುವುವು. ಈ ನಗರ ಸಭೆಗಳ ಪ್ರಥಮ ಚುನಾವಣೆಯು ಅಕ್ಟೋಬರ್ ೨ ನೆಯ ತಾರೀಕಿನೊಳಗಾಗಿ ಮುಗಿಯಬಹುದು. ಈ ನಗರ ಸಭೆಗಳಿಗೆ ಹರಿಜನರು ಮತ್ತು ಸ್ತ್ರೀಯರಿಗೆ ಕಾಯ್ದಿಟ್ಟ ಸ್ಥಳಗಳುಳ್ಳ ಸಂಯುಕ್ತ ಮತದಾನ ಪದ್ಧತಿಯಿಂದ ಚುನಾವಣೆಗಳು ನಡೆಯಲಿವೆ.

ಇಂದೂರಿನ ಪೋ. ಸಬ್ ಇನ್‌ಸ್ಪೆಕ್ಟರ್ ಗೋವರ್ಧನದಾಸರು ಕಳವಿನ ಸಾಮಾನು ಮಾರುವವನೊಬ್ಬನನ್ನು ಪೋಲೀಸ್ ಠಾಣೆಯಲ್ಲಿ ತಪಾಸಿಸುತ್ತಿರಲು ಅವನು ಕಿಸೆಯೊಳಗಿಂದ ಚೂರಿಯನ್ನು ಹಿರಿದು ಅವರನ್ನು ಇರಿದನು; ತನ್ನನ್ನು ಹಿಡಿಯಲು ಬಂದ ಮೂವರನ್ನು ಗಾಯಗೊಳಿಸಿದನು. ಗೋವರ್ಧನದಾಸರು ಆಸ್ಪತ್ರೆಯಲ್ಲಿ ಮಡಿದರು.

ತಿರುವಾಂಕೂರು—ಕೊಚ್ಚಿ ಒಕ್ಕೂಟದ ಈಗಿನ ಮಂತ್ರಿಮಂಡಲವು ಆರು ಜನರದ್ದಿದೆ. ಅದನ್ನು ವಿಸ್ತರಿಸಿ ಮತ್ತು ಮೂವರನ್ನು ಹೆಚ್ಚಿಗೆ ಸೇರಿಸಿಕೊಳ್ಳಲಾಗುವುದು. ಇದರಿಂದ ಮಂತ್ರಿಗಳ ಸಂಖ್ಯೆ ಒಂಬತ್ತಕ್ಕೇರುವುದು.

ಇಂದೂರಿಂದ ೨೨ ಮೈಲುಗಳ ದೂರದಲ್ಲಿರುವ ದೇವಾಸದ ನ್ಯಾಯಾಲಯದಲ್ಲಿ ಭಾರಿ ದರೋಡೆಯಾದ ವಾರ್ತೆ ಬಂದಿದೆ. ಕೆಲವು ದರೋಡೆಗಾರರು ಮೊದಲು ಅಲ್ಲಿಯ ಖಜಾನೆಯ ಕಾವಲಿಗಿದ್ದ ಶಿಪಾಯಿಯ ಮೇಲೆ ಬಿದ್ದು ಅವನನ್ನು ಚೂರಿಯಿಂದ ಇರಿದು ಕೊಂದರು; ಅನಂತರ ತಿಜೋರಿಯನ್ನು ಒಡೆದು ಹಣ ಒಯ್ದರು.

ಶಿರೋಹಿ ಸಂಸ್ಥಾನದ ಗಾದಿಯ ಹಕ್ಕಿನ ತಂಟೆಯ ವಿಚಾರಣೆ ನಡೆಸಲು ಹಿಂದುಸ್ಥಾನ ಸರಕಾರದಿಂದ ನೇಮಿಸಲ್ಪಟ್ಟ ಮೂವರ ಸಮಿತಿಯು ಈಗ ಗಾದಿಯ ಮೇಲಿರುವ ಮಹಾರಾಜಾ ತೇಜಸಿಂಗರ ಸಾಕ್ಷಿಯನ್ನು ಕೇಳಿಕೊಂಡಿತು. ಮಹಾರಾಜ ಅಭಯಸಿಂಗ್ ಮತ್ತು ಲಖಪತ ರಾಮಸಿಂಗ್ ಎಂಬ ಇಬ್ಬರು ತಮಗೆ ಸಿಂಹಾಸನವೇರುವ ಹಕ್ಕಿದೆಯೆಂದು ವಾದಿಸುತ್ತಿದ್ದಾರೆ.

[illegible]

### ಪಶ್ಚಿಮ ಬಂಗಾಲ

ಪ. ಬಂಗಾಲ [illegible] ಸ್ಥಾನಬದ್ಧತೆಯ ಕಾಯದೆಯ [illegible] ಮುಗಿದ ನಂತರ ಕ್ರಿಮಿನಲ್ ಲಾ ಅಮೆಂಡ್‌ಮೆಂಟಿನ ೨ ನೆಯ ಕಲಮಿನ ಪ್ರಕಾರ [illegible] ಜನರಿಗೆ ಸ್ಥಾನಬದ್ಧತೆಯ ಆಜ್ಞೆಗಳನ್ನು ಹೊರಡಿಸಿದ್ದು ಅಕ್ರಮವಾಗಿದೆಯೆಂದು ಹೋಲಿಸಿ ಕೊಡದಿದ್ದರೆ ಇದರಲ್ಲಿ ಕೈಹಾಕಲು [illegible] ಅಧಿಕಾರವಿಲ್ಲೆಂದು ಕಲಕತ್ತದ [illegible] ವರು ಸ್ಥಾನಬದ್ಧರು ಮಾಡಿಕೊಂಡ [illegible] ಬಗ್ಗೆ ತೀರ್ಪು ಕೊಟ್ಟಿದ್ದಾರೆ.

ಪಶ್ಚಿಮ ಬಂಗಾಲದ ಸ್ಥಿತಿಗತಿಗಳನ್ನು ಅವಲೋಕಿಸುವುದಕ್ಕಾಗಿ ಪಂ. ಜವಾಹರಲಾಲರು ಜುಲೈ ೧೪ಕ್ಕೆ ಕಲಕತ್ತಕ್ಕೆ ಹೋಗುವರು. ಅಲ್ಲಿ ಕಾಂಗ್ರೆಸ್ಸಿನ ಬೇರೆ ಬೇರೆ ಗುಂಪುಗಳೊಡನೆ ಅವರು ಮಾತುಕತೆ ನಡೆಸುವರು.

ಹೌರಾ ಸ್ಟೇಶನ್ನಿನಲ್ಲಿ ಕಾವಲಿದ್ದ ಪೋಲೀಸನೊಬ್ಬನನ್ನು ನಾಲ್ವರು ಮೈಮೇಲೆ ಬಿದ್ದು ಚೂರಿಯಿಂದ ಇರಿದು ಕೊಂದರು. ಅವನು ಹಿಂದುಸ್ಥಾನ ಸರಕಾರದ ಮುಖ್ಯಪ್ರಧಾನ ಶ್ರೀ ಸತ್ಯ ನಾರಾಯಣ ಸಿಂಹರು ಬಂದಿದ್ದ ಹಬ್ಬಿಯನ್ನು ಕಾಯುತ್ತಿದ್ದನಂತೆ.

## ಅಧಿಕೃತ ಹರಾಜುಗಳು

[illegible] ಮೇಲಿನ ಪ್ರಬಂಧದಲ್ಲಿ ನಾನು [illegible] ಪದ್ಧತಿಯನ್ನು (ದೊಡ್ಡ ವ್ಯಾಪಾರಿ [illegible] ಕೊಡುವುದು) ತೆಗೆದು ಹಾಕ [illegible] ಲಕ್ಷ್ಯ ಸೆಳೆದಿದ್ದೇನೆ. ಅದು [illegible]ಗಳನ್ನು ಹೊರಪೂರ ಗುತ್ತಿಗೆ [illegible] ಸಂಯುಕ್ತ ವ್ಯಾಪಾರಗಳಿಗೆ [illegible] ಮಾಡಿಕೊಡುತ್ತದೆ. ಬೇಡದ [illegible] ಮಾರಲು ಅಧಿಕೃತ [illegible] ಮಾಡುವಾಗಲೂ ಅದೇ [illegible]ಗುತ್ತದೆ. ಎಷ್ಟೋ ವೇಳೆ ಈ [illegible] ಬೆಲೆ ಸಾವಿರಾರು ರೂಪಾಯಿಗಳ [illegible] ಮುತ್ತು ಆ ಸರಕಾರೀ ಕಾರ್ಯ [illegible] ಬೇಕಾದಂತೆ ಸ್ವಲ್ಪಸ್ವಲ್ಪವಾಗಿ ಅಥವಾ [illegible] ಮಾರಲು ಬರುವಂತಿರುತ್ತದೆ. [illegible] ಸಣ್ಣ ವ್ಯಾಪಾರಿಗಳು ಆ ಹರಾಜಿನಲ್ಲಿ [illegible]ಸಲಾರದಾಗಿ, ವಸ್ತುತಃ ಕೆಲ [illegible] ವ್ಯಾಪಾರಿಗಳಿಗೆ ಮಾತ್ರವೇ ಅದು [illegible]ವಂತಾಗುತ್ತದೆ. ಅವರು ಅನೇಕ [illegible] ವಿರುದ್ಧ ಇನ್ನೊಬ್ಬರು ಬಹಳ [illegible] ಗುಪ್ತ ಪಾಲುಗಾರಿಕೆ [illegible] ಇಡೀ ಶಿಲ್ಕನ್ನು ಸಾವು ಮಾತ್ರ [illegible] ಪಡೆಯುತ್ತಾರೆ.

ಕೆಲ [illegible]ಗಳ ಹಿಂದೆ ವರ್ಧಾದಲ್ಲಿ ಅಂಥ [illegible] ದೊಡ್ಡದೊಂದು [illegible]ವೇ ನಡೆದುಹೋಯಿತು. ಸರ [illegible] ಹತ್ತಿರ ಹಳೆಯ ಕಡಲೆ ಮತ್ತು [illegible] ಶಿಲ್ಕು ಬಹಳ ಇತ್ತೆಂದು ತೋರು[illegible]ತ್ತದೆ. ಅದನ್ನು ಮಾರಾಟಮಾಡಬೇಕಾಗಿತ್ತು. [illegible] ೫—೧೦ ಚೀಲಗಳಂತೆ ಚಿಲ್ಲರೆ [illegible] ಹರಾಜು ಮಾಡಿದ್ದರೆ ಈ ಮತ್ತು [illegible] ಜಿಲ್ಲೆಗಳ ಹಲವು ಚಿಕ್ಕ ವ್ಯಾಪಾರಿಗಳು [illegible] ಸಾಧ್ಯವಾಗುತ್ತಿತ್ತು. ಅದರೆ [illegible] ಮಾಡದೆ, ನೂರಾರು ಚೀಲಗಳ ಇಡೀ [illegible]ಶಿಲ್ಕನ್ನು ಒಂದೇ ರಾಶಿಯೆಂದು ಹರಾಜಿ[illegible] ಬೆರಳೆಣಿಕೆಯಲ್ಲಿ ಸಿಗುವ [illegible] ಶ್ರೀಮಂತ ವ್ಯಾಪಾರಿಗಳು ಮಾತ್ರ ಅದರಲ್ಲಿ [illegible]ಭಾಗವಹಿಸಿದರು. ಎಂದಿನಂತೆ ಅವರು ಅಗ[illegible]ತವಿಷ್ಟಗಳಿಗೆ ಹಂಚಿಕೆ ಮಾಡಿಕೊಂಡೇ ಬಂದಿ[illegible]. ಅದರಿಂದ ಅವರು ಕಡಲೆಯನ್ನು [illegible] ಸೇರಿನಂತೆಯೂ, ಸಕ್ಕರೆಯನ್ನು [illegible] ೧೦ ಬಿಲ್ಲೆಗೆ ಸೇರಿನಂತೆಯೂ [illegible]ಕೊಂಡರೆಂದು ಹೇಳಲಾಗಿದೆ. ಅದರಲ್ಲಿ ಸ್ವಲ್ಪ [illegible] ಆಶೆ ಕೂಡಿದ್ದರೂ ಎಚ್ಚರಿಕೆಯಿಂದ [illegible] ಕೊಂಡವನು ಕೆಲವೇ ದಿನ[illegible]ಗಳಲ್ಲಿ ಈ ವ್ಯವಹಾರದಿಂದ ಸಾವಿರಾರು [illegible] ರೂಪಾಯಿಗಳ ಲಾಭವನ್ನು ಹೊಡೆದನೆಂದು [illegible]. ಈ ಸುದ್ದಿ ನಗರದಲ್ಲೆಲ್ಲ ಹೇಯಕೃತ್ಯ[illegible] ಜನಜನಿತವಾಗಿ, ಅದನ್ನು ಪರಸ್ಪರ ಸ್ಪರ್ಧಾಲುಗಳಾದ ರಾಜಕೀಯ ಗುಂಪುಗಳ [illegible] ಸ್ವಾಭಾವಿಕವಾಗಿ ದುರುಪಯೋಗಪಡಿಸಿ ಕೊಂಡರು. ಮಂತ್ರಿಮಂಡಲದ ಮೇಲೂ ಸಂಬಂಧಪಟ್ಟ ಅಧಿಕಾರಿಗಳ ಮೇಲೂ ನಾನಾ ವಿಧವಾದ ಆರೋಪಗಳನ್ನು ಹೊರಿಸಲಾಗಿದೆ. [illegible] ಯಾರಾದರೂ ದಮನೀಯ ವರ್ತನೆಯ ಅಪರಾಧಿಗಳಿರಲಿ, ಇಲ್ಲದಿರಲಿ, ಇಷ್ಟನ್ನು ಮಾತ್ರ ಖಾತ್ರಿಯಿಂದ ಹೇಳಬಹುದು— ಸಾಮಾನುಗಳನ್ನು ವಿಭಜಿಸಲು ಬರುವಾಗ ಅವನ್ನು ಬಹಳ ದೊಡ್ಡ ದೊಡ್ಡ ರಾಶಿಗಳನ್ನಾಗಿ ಮಾಡಿ [illegible] ಮಾರಬಾರದು. ಹಾಗೆ ಮಾಡಿದರೆ ಅದರಿಂದ ಸಣ್ಣ ವ್ಯಾಪಾರಿಗೆ ಪ್ರೋತ್ಸಾಹ [illegible] ಅನವಶ್ಯಕವಾಗಿ ದೊಡ್ಡ ಮಧ್ಯಸ್ಥನ ನಿರ್ಮಾಣದ ಮೂಲಕ ಬಳಕೆಗಾರ ಕೊಳ್ಳುವ ಸಾಮಾನು ತುಟ್ಟಿಯಾಗುವಂತೆ ಮಾಡಿದಂತಾಗುತ್ತದೆ. ಸಣ್ಣ ವ್ಯಾಪಾರಿಯು [illegible] ಅಗತ್ಯವಾದ ಮನುಷ್ಯ. ಗುತ್ತಿಗೆದಾರನು ಸ್ವತಃ ಉತ್ಪಾದಕನಲ್ಲವಾದಲ್ಲಿ ಹಾಗೆ ಅಗತ್ಯದ ಮನುಷ್ಯನಾಗಲಾರ.

ತನಗೆ ಬೇಡದ ಯಾವ ಸಾಮಾನುಗಳ ಶಿಲ್ಕನ್ನೇ ಅಗಲಿ, ಹರಾಜಿಗಿಟ್ಟಾಗ ಚಿಕ್ಕ ಚಿಕ್ಕ ರಾಶಿಯನ್ನಾಗಿ ಮಾಡಿ ಮಾರಬೇಕೆಂದು ಸರಕಾರಗಳೂ ಅಂಥ ಇತರ ಸಾರ್ವಜನಿಕ ಸಂಸ್ಥೆಗಳೂ ಒಂದು ನಿಯಮವನ್ನು ಮಾಡಿಕೊಳ್ಳಬೇಕೆಂದು ಆಶಿಸಬಹುದು.

ವರ್ಧಾ, ೩೦-೬-೪೯   ಕಿ. ಘ. ಮಶ್ರುವಾಲಾ

---

✽ ಬ್ರಿಟನ್ನಿನ ಕೂಲಿಕಾರ ಮಂತ್ರಿಗಳಾದ ಜಾರ್ಜ ಇಸ್ಸಾಕರು ಲಂಡನ ಧಕ್ಕೆ ಕೆಲಸ [illegible] ಮೂಲಕ ಕೆಲಸ ನಿಂತಿರುವ [illegible]ಗಳಿಂದ ಆಹಾರ ಧಾನ್ಯಗಳನ್ನಿ[illegible] ಕೆಲಸದಿರುವ [illegible].

## ಮದ್ರಾಸ್ ಖಾದೀಯೋಜನೆ

ಮದ್ರಾಸ್ ಸರಕಾರದ ಖಾದೀಯೋಜನೆ ಸಮವೇಗದಲ್ಲಿ ಮುನ್ನಡೆಯುತ್ತಿದೆ. ಅದರ ರಭಸದದ ಖಾದೀಯೋಜನೆ ಅಯ್ದು ಏಳು ಕೇಂದ್ರಗಳಲ್ಲಿ ಅಮಲಿನಲ್ಲಿದೆ. ೩೧-೩-೪೯ ರ ವರೆಗಿನ ಅದರ ವರದಿಯಲ್ಲಿ ಕೆಳಗಿನ ಅಂಕೆಗಳಿವೆ.

(ಲಕ್ಷಗಟ್ಟಲೆಯಲ್ಲಿ)

| | | |
|---|---|---|
| ಮಾರಿದಹತ್ತಿ | | ರೂ. ೩.೦೯ |
| ಕೊಂಡನೂಲು | ೪.೫೪ ಪೌಂಡು | |
| ತಯಾರಿಸಿದ ಖಾದಿ | ೧೨.೭೭ ವಾರುಗಳು | |
| ಮಾರಿದ ಖಾದಿ | ೭.೪೩ ವಾರುಗಳು | |
| | | ರೂ. ೧೦.೫೫ |
| ಸ್ವತಃನೂಲುವವರಿಗೆ ಧನಸಹಾಯ | | ೦.೯೭ |

ಮದ್ರಾಸ್ ಸರಕಾರವು ಈ ವರ್ಷ ೧೮ ಕೇಂದ್ರಗಳಿಗೆ ಅನ್ವಯಿಸತಕ್ಕದ್ದೆಂದು ಸುಧಾರಿಸಿದ ಒಂದು ಯೋಜನೆಯನ್ನು ಸ್ವೀಕರಿಸಿದೆ. ಆ ಕೇಂದ್ರಗಳಿಗೆ ಫಿರ್ಕಗಳೆಂದು ಹೆಸರು. ಅಲ್ಲಿ ಹೆಚ್ಚಿನ ಗ್ರಾಮಪುನರುದ್ಧಾರದ ಕಾರ್ಯ ಅಗಲೇ ಮಾಡಲ್ಪಟ್ಟಿದೆ ಮತ್ತು ಖಾದಿಯು ಬಗ್ಗೆ ಪುರಸ್ಕಾರವಿದೆ. ಈ ಯೋಜನೆಯ ಪ್ರಕಾರ ಸಧ್ಯದ ಗ್ರಾಮಸೇವಕರ ಮತ್ತು ಫಿರ್ಕಾಭಿವೃದ್ಧಿಯ ಅಧಿಕಾರಿಗಳ ದುಃತತಗಳ ಜೊತೆಗೆ ಚರಕ ಮತ್ತು ಇತರ ಸಾಧನಗಳ ದುರಸ್ತಿನ ಬಗ್ಗೆ ಒಬ್ಬ ಖಾದೀ ಕೆಲಸಗಾರನನ್ನು ಪ್ರತಿ ಕೇಂದ್ರದಲ್ಲೂ ನಿಯಮಿಸಿಕೊಳ್ಳಲಾಗುವದು. ಪ್ರತಿಯೊಂದು ಫಿರ್ಕಕ್ಕೆ ೧೦೦೦ ಚರಕಗಳನ್ನು ೧೯೪೯-೫೦ರಲ್ಲಿ ಕೊಡಲಾಗುವುದು ಮತ್ತು ಹತ್ತಿಯನ್ನು ನೂಲವವರಿಗೆ ಅದರ ಕೊಂಡ ಬೆಲೆಗೇ ಒದಗಿಸಲಾಗುವುದು. ಸರಕಾರವು ನೂಲುವವರಿಗೆ (೧) ಚರಕದ ಬೆಲೆಯ ಒಂದು ಅಂಶವನ್ನೂ (೨) ಅವರು ನೂತು ನೇಯ್ದ ಬಟ್ಟೆಯ ಮೇಲೆ ಮತ್ತು ಅವರೂ ಅವರ ಕುಟುಂಬಗಳೂ ಬಳಸಿದ ಬಟ್ಟೆಗಳ ಮೇಲೆ ಕೂಲಿಯನ್ನೂ ಕೊಡಲು ಸಾಕಾಗುವಷ್ಟು ಸಹಾಯಧನವನ್ನು ಕೊಡುವುದು.

ಅದಕ್ಕಾಗಿ ಈ ಕೆಳಗಿನ ವೆಚ್ಚದ ಅಂದಾಜನ್ನು ಮಂಜೂರು ಮಾಡಲಾಗಿದೆ:

| | | ತಿರುಗಿ ತೆಗೆದು ಕೊಳ್ಳುವುದು | ತೆಗೆದು ಕೊಳ್ಳದುದು |
|---|---|---|---|
| | ರೂ. | ರೂ. | ರೂ. |
| ಚರಕಗಳು | ೧೨೯೬೦೦ | ೭೦೨೦೦ | ೫೯೪೦೦ |
| ಸಂಬಳ | | | (ಪ್ರತಿ ವರ್ಷ ಬರತಕ್ಕದ್ದಲ್ಲ) |
| ಮುಂ. | | ೧೬೨೦೦ | ೧೬೨೦೦ |
| ಹತ್ತಿ | ೪೦೦೦೦೦ | ೪೦೦೦೦೦ | |
| ಧನಸಹಾಯ | ೨೦೦೦೦೦ | | ೨೦೦೦೦೦ |
| ಒಟ್ಟು | ೭೪೫೮೦೦ | ೪೭೦೨೦೦ | ೨೭೫೬೦೦ |

ಧನಸಹಾಯವನ್ನು ಈ ಕೆಳಗಿನ ದರದಂತೆ ಕೊಡಲಾಗುವುದು :

ನೇರವಾದ ಚರಕವೊಂದಕ್ಕೆ — ರೂ. ೫
ರೈತನೊಬ್ಬನಿಗೆ ಅಥವಾ ಪೆಟ್ಟಿಗೆ ಚರಕವೊಂದಕ್ಕೆ — ರೂ. ೩
ಸ್ವತಃ ನೂಲುವವರಿಗೆ ತಯಾರಿಸಿದ ಬಟ್ಟೆಯ ಲಡಿಯೊಂದಕ್ಕೆ ೮ ಪೈಗಳು

ಸ್ವತಃನೂಲುವವರಿಗೆ ವರ್ಷದಲ್ಲಿ ಕೊಡಲಾಗುವ ಒಟ್ಟು ಧನ ಸಹಾಯ:

| | | |
|---|---|---|
| ಚರಕವೊಂದಕ್ಕೆ ಹತ್ತಿ | ೪೦ ಪೌಂಡು | |
| ಕಸಕಳೆದು | ೫ | ,, |
| ನೂತ ಹತ್ತಿ | ೩೫ | ,, |
| ಪರಿಮಾಣ | ೩೫×೧೪=೪೯೦ ಲಡಿ | |

ಲಡಿಗೆ ೮ ಪೈಗಳಂತೆ.

ಸಹಾಯ ಧನ   ರೂ. ೨೦-೬-೮
೧೮೦೦೦ ಚರಕಗಳಿಗೆ ಧನ ಸಹಾಯ ರೂ. ೩,೬೭,೫೦೦

ಈ ಮೊಬಲಗಿನಲ್ಲಿ ಖಾದಿಯ ಒಂದಂಶವನ್ನು ಮಾರುವುದರಿಂದ ಸಿಕ್ಕಿದ ಸಹಾಯ ಧನ ೨,೦೦,೦೦೦ ರೂಪಾಯಿಗಳಷ್ಟಾಗುವುದೆಂದು ಅಂದಾಜು ಮಾಡಲಾಗಿದೆ.

(ಫಿರ್ಕಾಭಿವೃದ್ಧಿಯ ಅಧಿಕಾರಿಯ ವರದಿಯಿಂದ ಉದ್ಧರಿಸಿದ್ದು)

---

✽ ರುಮಾನಿಯಾದಲ್ಲಿ ನಿರುದ್ಯೋಗತನ, ಸಂಪಿನಹಾವಳಿ ಮತ್ತು ವಿಧ್ವಂಸಕ ಕೃತಿಗಳು ಪ್ರತಿರೋಧವಿಲ್ಲದೇ ಸಾಗಿದ್ದು ಉತ್ಪಾದನೆಯು ಕಡಿಮೆಯಾಗುತ್ತಿದೆಯೆಂದು ಯುಗೋಸ್ಲಾವಿಯಾ ಕಮ್ಯುನಿಸ್ಟ ಪಕ್ಷದ ಬೋರ್ಬಾ ಪತ್ರವು ಬರೆದಿರುವದು.

## ಜನಪದ ಗೀತೆಗಳು

ಸಂಗ್ರಹಕಾರರು: ಎಂ. ಎಲ್. ಕೃಷ್ಣಮೂರ್ತಿ
ಮೂಡಿಗೆರೆ

### ಪ್ರಾರ್ಥನೆ

ಹಿಳುಕಾಲೆ ಎದ್ದು ಯಾರ್ಯಾರ ನೆನೆಯಲಿ।
ಎಳ್ಳು ಜೀರಿಗೆ ಬೆಳೆಯೋಳ-ಭೂಮಿ ತಾಯ।
ಎದ್ದೊಂದು ಘಳಿಗೆ ನೆನೆವೇನೂ॥

ನಾರಾಯಣಾ ನಿನ್ನ ನಾಮದ ಬೀಜವ।
ನಾನೆಲ್ಲಿ ಬಿತ್ತಿ ಬೆಳೆಯಲಿ. ನಿನ ನಾಮ।
ನಾಲೀಗೆ ಮೇಲೆ ಬೆಳದೇನೊ॥

ಶಿವಶಿವಾ ಎಂದರೆ ಸಿಡಿಲೆಲ್ಲಾ ಬಯಲಾಗಿ।
ಕಲ್ಲು ಬಂಡೆರಗಿ ಕಡೆಗಾಗಿ. ಎಲೆ ಮನವೆ।
ಶಿವನೆಂಬ ಶಬುದ ಬಿಡಬೇಡಾ॥

ಪಾದತೀರ್ಥವ ಸಲಿಸಿ, ಪಾವನಾಯಿತು ಜನ್ಮ।
ರೋಮರೋಮೆಲ್ಲ ರವಿಚಿನ್ನ-ಗುರು ನಿಮ್ಮ।
ಪಾದದಲಿ ಕಂಡೆ ಮುಕುತೀಯಾ।

ಮಾದೇವ ನಿನ ಹೊರತು ನಾನ್ಯಾರ ನಂಬಿಲ್ಲ।
ನಾ ಮಾಡೆನೆಂಬ ಅಳವಿಲ್ಲ. ರಂಗಯ್ಯ।
ನೀ ನಡೆಸು ನಮ್ಮ ಸರುವೆಲ್ಲಾ॥

ಯಾರಾಸೆ ನನಗಿಲ್ಲಾ ಭಾಗ್ಯಾದ ಬಲವಿಲ್ಲಾ।
ಕುಕ್ಕೆಯಲ್ಲಿರುವೊ ಸುಬ್ಬಣ್ಣಾ-ನಂಧೊರೆಯೆ।
ನಿನ್ನಾಸೆ ನನಗೆ ಅನುಗಾಲ॥

### ಉತ್ತರ

ಚಿಂತಾಕು ಇಟಕೊಂಡು ಚಿಪ್ಪಾಟ ಬಳಿವಾಕೆ।
ಚಿಂತಿಲ್ಲ ಏನು ನಿನಗಿಷ್ಟು—ಶಿವರಾಯ।
ಅಲ್ಲೊಬ್ಬ ಕೂಡ ನಗುತ್ತಿದ್ದ॥

ನಕ್ಕರೆ ನಗಲವ್ವಾ ನಗೆ ಮುಖದ ಕೇದಿಗೆ।
ನಾ ಮುಟ್ಟಿ ಮುಡಿದ ಪರಿಮಳದಾ ಹೂವ।
ಅವಳೊಂದು ಘಳಿಗೆ ಮುಡಿಯಲಿ॥

ಬಡತನ ನನಗಿರಲಿ ಭಾಳ ಮಕ್ಕಳಿರಲಿ।
ಮ್ಯಾಗ ಗುರುವಿನ ದಯವಿರಲಿ-ನನ ಗುರುವೆ।
ಬಡತನದ ಚಿಂತೆ ನನಗಿರಲಿ॥

### ತಾಯಿ

ಕಡಗ ಇಲ್ಲದ ಕೈಯ್ಯ ಕರುಣವಿಲ್ಲದ ಪುರುಷ।
ಹಡದವ್ವ ಇಲ್ಲದ ತವರೀಗೆ ಹೋದಾಕಿ।
ಅಡವಿಯಲಿ ವಸತಿ ಇಳಿದ್ಹಂಗೆ॥

ಯಾರು ಇದ್ದರು ನನ್ನ ತಾಯವ್ನ ಹೋಲ್ಯಾರೆ।
ಸಾಸೀರಕೊಳ್ಳಿ ಬಲೆಯಾಗೆ ಇದ್ದರೂ।
ಜೋತಿ ನಿನ್ನಾರು ಹೋಲ್ಯಾರು॥

ತಾಯಿಲ್ಲ ತವರೀಗೆ ಹೋಗದಿರು ಎಲೆ ಮನವೇ।
ನೀರಿಲ್ಲ ಕೆರೆಗೆ ಕರ ಬಂದು-ಹಣ್ಣಿಲ್ಲ।
ಮರಕೊಂದು ಕಣ್ಣಿಲ್ಲ ಗಿಣಿ ಬಂದು॥

---

## ಉಪ್ಪು

(೧೩ ನೆಯ ಪುಟದಿಂದ)

ಗಳಲ್ಲಿಯೂ ಪೌಂಡಿಗೆ ೭॥ ಯಿಂದ ೯ ಪೈಗೆ ಮಾರುತ್ತಿರಬೇಕು. ಅದರೆ ಸಾರಿಗೆಯ ಲೋಪದೋಷಗಳಿಂದಲೂ ಕಳ್ಳಪೇಟೆಯಿಂದಲೂ ಇಂದು ಹಳ್ಳಿಗಳಲ್ಲಿ ಆ ದರದಲ್ಲಿ ಉಪ್ಪು ದೊರೆಯದಾಗಿದೆ.

ಸರಕಾರದವರು ಲೈಸನ್ಸ್‌ಪದ್ಧತಿಯನ್ನು ತೆಗೆದು ಹಾಕುವದಲ್ಲದೆ ಪ್ರಾದೇಶಿಕ ಪದ್ಧತಿಯನ್ನು ಪುನರ್ವಿಮರ್ಶಿಸಬೇಕಾಗಿದೆಯೆಂದು ತೋರುತ್ತದೆ. ಸರಕಾರದವರು ಸಾರಿಗೆಯ ಸಮಸ್ಯೆಗಳನ್ನು ವಿಚಾರಿಸುತ್ತಿದ್ದರೂ ದೇಶದ ಅವಶ್ಯಕತೆಗಳು ದಿನವೂ ಅತ್ಯಂತ ತೀವ್ರವಾಗುತ್ತಿರುವದರಿಂದ ಅವರು ರೇಲ್ವೆ ಮತ್ತು ಮೋಟಾರು ಸಾರಿಗೆಗಳ ಜತೆಗೆ ಪ್ರಾಣಿಗಳ ಮೂಲಕ ಸಾರಿಗೆ ವ್ಯವಸ್ಥೆ ಮಾಡುವ ವಿಚಾರವನ್ನೂ ಮಾಡಬೇಕು. ಇದು ಎರಡನೆ ಸಂರಕ್ಷಣ ವ್ಯೂಹವೆಂದು ಬಗೆಯತಕ್ಕದ್ದು. ಮೊದಲನೆ ವ್ಯೂಹ ಮುರಿದು ಬಿದ್ದ ನಂತರ ಎರಡನೆಯದನ್ನು ರಚಿಸಹೊರಡುವದು ಮನೆಗೆ ಬೆಂಕಿ ಹತ್ತಿದ ಮೇಲೆ ಬಾವಿ ತೋಡಹೊರಟಂತೆಯೆ. ಪ್ರಥಮ ವ್ಯೂಹ ಸುದೃಢವಾಗಿಯೂ ಕಾರ್ಯಕಾರಿಯಾಗಿಯೂ ಇದ್ದರೂ ಅದು ಮುರಿದು ಬಿದ್ದಿದೆಯೆಂದೇ ಬಗೆದು ಎರಡನೆ ವ್ಯೂಹವನ್ನು ಸಮರ್ಪಕವಾಗಿಟ್ಟಿರುವದು ಯೋಗ್ಯ. ಈ ರೀತಿಯಲ್ಲಿ ಯೋಚಿಸಿದರೆ, ನಾವು ನಮ್ಮ ಪ್ರಾಣಬಲವೂ ಸರಿಯಾಗಿರುವಂತೆ ನೋಡಿಕೊಳ್ಳುವದು ಅವಶ್ಯವೆನಿಸುವದು. ಪ್ರಾಣಿಗಳ ಮೂಲಕ ಹೊರೆ ಸಾಗಿಸುವ ವ್ಯವಸ್ಥೆಯಿಡುವದು ಒಂದು ಮಹತ್ವದ ಕರ್ತವ್ಯವೆಂದು ಸಾರಿಗೆ ಮತ್ತು ಸಂಪರ್ಕ ಶಾಖೆಯವರು ಎಣಿಸಬೇಕು. ಇದು ರೇಲ್ವೆ, ಮೋಟಾರ, ಹಡಗ ಅಥವಾ ವಿಮಾನ ಮೂಲಕ ಸಾರಿಗೆಯ ವ್ಯವಸ್ಥೆಗಿಂತ ಮಹತ್ವದಲ್ಲಿಯೂ ಕಡಿಮೆಯಲ್ಲ, ಜಟಿಲತೆಯಲ್ಲಿಯೂ ಅಲ್ಲ.

ವರ್ಧಾ
೮-೬-೪೯   —ಕಿ. ಘ. ಮಶ್ರುವಾಲಾ

## ವ್ಯಾಪಾರ

### ಮುಂಬಯಿ ಶೇರಪೇಟೆ

| | ತಾ. ೮ |
|---|---|
| ಮುಂಬಯಿ ಡಾಯಿಂಗ್ | ೯೩೨-೮-೦ |
| ಕೋಹಿನೂರು | ೨೩೩-೮-೦ |
| ಸ್ವದೇಶಿ | ೨೫೪-೦-೦ |
| ಗೋಕಾಕ | ೨೨೯-೦-೦ |
| ಸೆಂಚುರಿ | ೨೦೦-೦-೦ |
| ಸಿಂಪ್ಲೆಕ್ಸ | ೧೪೪-೦-೦ |
| ಟಾಟಾ ಸ್ಟೀಲ ಡೆಫರ್ಡ | ೧೧೧೦-೦-೦ |
| ಇಂಡಿಯನ್ ಅಯರ್ನ್ | ೨೦-೩-೦ |
| ಅಸೋ. ಸಿಮೆಂಟ್ಸ | ೧೩೧-೪-೦ |
| ಸೆಂಟ್ರಲ ಬ್ಯಾಂಕ್ | ೭೪-೦-೦ |
| ಇಂಪೀರಿಯಲ್‌ಬ್ಯಾಂಕ್(ಪೂರ್ಣ) | ೧೭೬೦-೦-೦ |

### ಚಿನ್ನ ಬೆಳ್ಳಿ

| | |
|---|---|
| ತಯಾರಿ ಚಿನ್ನ | ೧೧೦-೧೨-೦ |
| ವಾಯದಾ ,, | ೧೦೯-೬-೦ |
| ತಯಾರಿ ಬೆಳ್ಳಿ | ೧೬೦-೧೨-೦ |
| ವಾಯದೆ | ೧೬೧-೮-೦ |

### ಎಣ್ಣೆಕಾಳು

| | |
|---|---|
| ಶೇಂಗಾ | ೧೯೦-೧೫-೦ |
| ಅಗಸೆ (ತಯಾರಿ) | ೨೯-೨-೦ |
| ,, ಹೊಸ | ೨೯-೦-೦ |
| ಅಗಸೆ ಎಣ್ಣೆ | ೨೮-೧೦-೦ |
| ಔಡ್ಲ | ೧೭-೦-೦ |

### ಹುಬ್ಬಳ್ಳಿ

( ಅ. ಪ್ರೊ. ಮಾರ್ಕೆಟ ಕಮೀಟಿ ಹುಬ್ಬಳ್ಳಿ )

| | | | ತಾ. ೮ |
|---|---|---|---|
| ಕುಸುಬಿ (ಬ. ಮಣಕ್ಕೆ) | | ೧೪-೧೦-೦ | ೧೫-೦-೦ |
| ಅಗಸಿ | (ಚೀಲಕ್ಕೆ) | ೪೨-೦-೦ | ೪೩-೦-೦ |
| ಔಡಲ | ,, | ೩೩-೦-೦ | ೩೪-೦-೦ |
| ಜ. ಹೆಸರು | ,, | ೪೪-೦-೦ | ೪೬-೮-೦ |
| ಕರಿ ಎಳ್ಳು | ,, | — | ೬೪-೦-೦ |
| ಬಿಳಿ ಎಳ್ಳು | ,, | ೮೦-೦-೦ | ೯೩-೦-೦ |
| ಕಡಲೆ | ,, | ೫೫-೦-೦ | ೫೬-೦-೦ |
| ಜ. ತೊಗರಿ | ,, | ೨೬-೦-೦ | ೩೦-೦-೦ |
| ಹುರಳಿ | ,, | ೩೪-೦-೦ | ೩೫-೦-೦ |
| ಕೆಂ. ಅಲಸಂದಿ | ,, | --- | ೫೩-೦-೦ |
| ಬಿ. ಅಲಸಂದಿ | ,, | ೫೮-೦-೦ | ೬೦-೦-೦ |
| ಶೇಂಗಾ (ಹೇರು) | | ೫೦-೦-೦ | ೫೫-೦-೦ |
| ಶೇಂಗಾ ಕಾಳು | | ೮೮-೦-೦ | ೯೬-೦-೦ |

### ಸಾಂಗಲಿ ಪೇಟೆ

| | ತಾ. ೮ |
|---|---|
| ಅರಿಸಿಣ(ಹೇರು) | ೯೫-೧೦೯ |
| ಮೆಣಸಿನಕಾಯಿ(ಹೇರು) | ೧೫೦-೨೦೦ |
| ಶೇಂಗಾ(ಖಂಡಿ) | ೧೪೯ |
| ಬೆಲ್ಲ(ಹೇರು) | ೭೦-೭೫ |

### ಶಿವಮೊಗ್ಗೆ ಅಡಿಕೆ ಪೇಟೆ

| | ತಾ. ೮ |
|---|---|
| ದೇಶಾವರ ನಂ. ೧ (ಮಣಕ್ಕೆ) | ೩೦-೩೨ |
| ,, ೨ | ೨೭-೩೦ |
| ರಾಜಾ ಅಲವು | ೨೬-೨೮ |
| ಕೊರಸಾಲು | ೨೩-೨೬ |
| ಬೆಟ್ಟವಂತಿ | ೧೭-೧೮ |
| ಬೆಟ್ಟೆ | ೧೪-೧೬ |
| ಸೀಗೆಕಾಯಿ | ೭-೮ |

---

## ಯರವಡಾ ಚರಕದ ಉಪಕರಣಗಳು

ಯರವಡಾ ಚರಕಕ್ಕೆ (ಪೆಟ್ಟಿಗೆ ರಾಟಿ) ಬೇಕಾದ ಕದಿರು, ತಕಲಿ, ಗಡ್ಡೆ ಇವುಗಳ ಬೇಡಿಕೆಯನ್ನು ನಮಗೆ ಇತ್ತೀಚಿನವರೆಗೂ ಪೂರಯಿಸಲಾಗುತ್ತಿದ್ದಿಲ್ಲ. ಅದರೀಗ ನೂಲುವುದರಲ್ಲಿ ಆಸಕ್ತಿಯುಳ್ಳವರಿಗೆ ಬೇಡಿಕೆಯನ್ನು ಪೂರಯಿಸುವಷ್ಟು ಅವನ್ನು ತಯಾರಿಸುವ ವ್ಯವಸ್ಥೆಯನ್ನು ಮಾಡಲಾಗಿದೆಯೆಂದು ತಿಳಿಸಲು ಸಂತೋಷವಾಗುತ್ತದೆ. ಕಾರ್ಯಾಲಯದಿಂದ ಹೊರಗೆ ಹೋಗುವಾಗ ನಮ್ಮ ದರ ಕೆಳಗಿನಂತಿದೆ:

| | ಆ ಪೈ |
|---|---|
| ತಕಲಿ | ೪-೩ |
| ಬಿಲ್ಲೆಸಹಿತವಾದ ತಕಲಿ | ೪-೬ |
| ಗಡ್ಡೆಯ ಜೊತೆ | ೯-೬ |
| ತಿರುಗಣಿ ಟೊಪ್ಪಿ ಮತ್ತು ಕ್ಲಿಪ್ಪುಗಳಿಂದ ಕೂಡಿದ ಅಚ್ಚಿನ ಜೊತೆಗೆ | ೧೨-೬ |

ಹೆಚ್ಚಿನ ಮಾಹಿತಿಗೆ ಗ್ರಾಮೋದ್ಯೋಗ ಗಾಂಧಿ ಹಾಟ್, ಭದ್ರಾ, ಅಹಮದಾಬಾದ್ ಇಲ್ಲಿಗೆ ಬರೆದುಕೊಳ್ಳಿರಿ.


# ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೧೨ - ೬ - ೫೦

★

ಬೆಲೆ ಎರಡಾಣೆ

ಸಾರನಾಥದ ಬೌದ್ಧ ದೇವಾಲಯ


**KARMAVEER** *Kannada Illustrated Weekly,* **HUBLI.**

Reg. No. B. 3148

LICENCE No. 3
Licenced to Post without Prepaymen[t]

KARMAVEER 11-7-49

# ಕರ್ನಾಟಕದಲ್ಲಿ

## ಧಾರವಾಡ

೫೦ ಕಾರಕೂನರನ್ನು ತೆಗೆದು ಹಾಕಲು ಅವಕಾಶ ಕೊಡಬೇಕೆಂಬ ಹುಬ್ಬಳ್ಳಿಯ ಭಾರತ ಮಿಲ್ಲಿನ ವ್ಯವಸ್ಥಾಪಕರ ಬೇಡಿಕೆ ಮತ್ತು ಮಜದೂರ ಸಂಘ ಮುಂದೊಡ್ಡಿದ ೧೯೪೮-೪೯ ರ ಬಗ್ಗೆ ೫ ತಿಂಗಳ ಪಗಾರದಷ್ಟು ಬೋನಸ್ ದೊರೆಯಬೇಕೆಂಬ ಬೇಡಿಕೆಯ ಬಗ್ಗೆ ಮಧ್ಯಸ್ಥಿಕೆ ಮಾಡಬಂದಿದ್ದ ಡಾ. ಅಭ್ಯಂಕರರು, ವ್ಯವಸ್ಥಾಪಕರು ಲೆಕ್ಕಪತ್ರಗಳು ಸಿದ್ಧವಿಲ್ಲವೆಂದುದರಿಂದ, ಮಧ್ಯಸ್ಥಿಕೆಯನ್ನು ೪ ವಾರ ಮುಂದೂಡಿದರು.

ಬಂಕಾಪುರ ತಾಲೂಕು ಕಾಂಗ್ರೆಸ್ ಸಮಿತಿಯೇ ಮೊದಲಾದ ಸಭೆಗಳು ಹರಿಜನ ದೇವಾಲಯ ಪ್ರವೇಶ ಸಂಬಂಧದಲ್ಲಿ ಸರಕಾರಕ್ಕೆ ಮಾಡಿದ ಸೂಚನೆಗಳಿಗೆ ಉತ್ತರವಾಗಿ ಮುಂಬಯಿ ಸರಕಾರದವರು ದೇವಾಲಯದಲ್ಲಿ ಪ್ರವೇಶಿಸಲು ಹರಿಜನರಿಗೆ ಇತರ ಹಿಂದುಗಳಷ್ಟೇ ಅಧಿಕಾರವಿದ್ದರೂ ಗರ್ಭಗುಡಿಯಲ್ಲಿ ಪೂಜಾರಿಗಳಲ್ಲದೆ ಇತರರಿಗೆ ಪ್ರವೇಶವಿಲ್ಲದಲ್ಲಿ ಹರಿಜನರಿಗೂ ಪ್ರವೇಶವಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆಂದು ತಿಳಿಯುತ್ತದೆ.

ವರ್ಗವಾಗಲಿರುವ ಧಾರವಾಡ ಕಲೆಕ್ಟರರಾದ ಖಾನ ಬಹಾದುರ ಬೆಂಜಾಮಿನ್ನರು ತಮ್ಮ ಕೊನೆಯ ಪತ್ರಿಕಾಪರಿಷತ್ತಿನಲ್ಲಿ ಜಿಲ್ಹೆಯಲ್ಲಿ ಧಾನ್ಯದ ಎತ್ತುವಳಿ ಸಮಾಧಾನಕರವಾಗಿದೆಯೆಂದೂ ಧಾನ್ಯಸಂಗ್ರಹ ತೃಪ್ತಿಕರವಿದೆಯೆಂದೂ ತಿಳಿಸಿದರು. ೧೯೪೮-೪೯ ಕ್ಕೆ ಜಿಲ್ಹೆಯ ಗೋದಾಮುಗಳಲ್ಲಿ ೮೭೮೪ ಟನ್ ಅಕ್ಕಿ, ೮೮೮೭ ಟನ್ ಭತ್ತ, ೨೪೯೦ ಟನ್ ಗೋದಿ, ೭೭೦೩ ಟನ್ ಜೋಳ, ೧೦೩೪ ಟನ್ ಗೋವಿನ ಜೋಳ ಮತ್ತು ೧೧೫೬ ಟನ್ ಬಾರ್ಲಿ ಸಂಗ್ರಹವಿತ್ತು.

ಸಾವಂತವಾಡಿಯಲ್ಲಿ ಅಡಿಶನಲ್ ಅಡ್ಮಿನಿಸ್ಟ್ರೇಟರರಾಗಿದ್ದ ಶ್ರೀ ಆರ್. ವಿ. ವಿಚಾರೆಯವರು ಧಾರವಾಡ ಜಿಲ್ಹೆಗೆ ಡೆಪ್ಯುಟಿ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟಿದ್ದಾರೆಂದು ತಿಳಿಯುತ್ತದೆ.

ಹೈದರಾಬಾದ ಸಂಸ್ಥಾನದ ಕೊನೆಯ ಹಳ್ಳಿಯಾದ ಹಳ್ಳಿಗುಡಿಯಲ್ಲಿ ಜನರ ಅಪೇಕ್ಷೆಯಂತೆ ಒಂದು ರೇಲ್ವೆ ನಿಲ್ದಾಣವನ್ನು ಜುಲೈ ೧೫ರಿಂದ ಪ್ರಾರಂಭಿಸಲಾಗುವದೆಂದು ಎಂ. ಎಸ್. ಎಂ. ರೇಲ್ವೆಯವರು ಪ್ರಕಟಿಸಿದ್ದಾರೆ.

ಧಾರವಾಡ ನಗರ ಸಭಾಧ್ಯಕ್ಷರ ಆಯ್ಕೆಗಾಗಿ ತಾ. ೧ ಕ್ಕೆ ಸೇರಿದ್ದ ನಗರಸಭಾಸದಸ್ಯರ ಸಭೆಯಲ್ಲಿ ಅಂದಿನ ಸಭೆಯ ಅಧ್ಯಕ್ಷತೆಗೆ ಕಲೆಕ್ಟರರು ಗೊತ್ತುಮಾಡಿದ್ದ ಶ್ರೀ ಮಟ್ಟಿ, ಘಾಟೀಕರ ಮತ್ತು ಹರಪನಹಳ್ಳಿಯವರಲ್ಲಿ ಒಬ್ಬರೂ ಸಭೆಗೆ ಬಾರದ್ದರಿಂದ ಯಾವ ಕಾರ್ಯಕಲಾಪಗಳೂ ನಡೆಯಲೇ ಇಲ್ಲ.

ಹುಬ್ಬಳ್ಳಿಯಲ್ಲಿ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜು ಜುಲೈ ೧ ಕ್ಕೆ ಪ್ರಾರಂಭವಾಯಿತು.

ಕರ್ನಾಟಕ ಪ್ರಾಂತಿಕ ರಾಷ್ಟ್ರೀಯ ಮಜದೂರ ಸಂಘದ ಸೂಚನೆಯ ಮೇರೆಗೆ ಸರಕಾರದವರು ಹುಬ್ಬಳ್ಳಿಗೊಬ್ಬ ಪ್ರತ್ಯೇಕ ಸರಕಾರಿ ಕೂಲಿಕಾರ ಅಧಿಕಾರಿ (ಲೇಬರ್ ಆಫೀಸರ)ಯನ್ನು ನೇಮಿಸುವದಾಗಿ ತಿಳಿಯುತ್ತದೆ. ಸ್ವತಂತ್ರ ಕೂಲಿಕಾರ ಕೋರ್ಟು ನೇಮಿಸುವದು ಮಾತ್ರ ಸಾಧ್ಯವಿಲ್ಲವೆಂದು ಸರಕಾರದ ಅಭಿಪ್ರಾಯ.

ಹುಬ್ಬಳ್ಳಿಯಲ್ಲಿ ಶ್ರೀ ಹೋತನಹಳ್ಳಿ ವಕೀಲರ ಅಟ್ಟದ ಮೇಲೆ ಶ್ರೀ ಪಾಟೀಲ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ವಿಲೀನ ಸಂಸ್ಥಾನಗಳ ಸಮಸ್ಯೆಯನ್ನು ಚರ್ಚಿಸಲು ಸೇರಿದ ಅನೌಪಚಾರಿಕ ಸಭೆಯಲ್ಲಿ ವಿಲೀನ ಸಂಸ್ಥಾನಗಳ ಬಗ್ಗೆ ಶಾಸನ ಸಭೆಗೆ ಪ್ರತಿನಿಧಿಗಳನ್ನು ನಾಮಕರಣ ಮಾಡುವ ಪದ್ಧತಿಯನ್ನು ಖಂಡಿಸಿ ಚುನಾವಣೆಯಿಂದಲೇ ಆರಿಸಬೇಕೆಂದು ಗೊತ್ತುವಳಿಯಾಯಿತು. ಈ ಬಗ್ಗೆ ವಿಲೀನ ಕನ್ನಡ ಸಂಸ್ಥಾನಗಳ ಪ್ರಜಾಭಿಪ್ರಾಯ ಪ್ರಕಟನೆಗಾಗಿ ಜುಲೈ ಅಂತ್ಯದೊಳಗಾಗಿ ಪ್ರಾತಿನಿಧಿಕ ಸಭೆ ಕೂಡಿಸಲು ಶ್ರೀ ಪಾಟೀಲ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನಿಮಂತ್ರಕ ಸಮಿತಿ ಏರ್ಪಟ್ಟಿತು.

೧೯೩೦ ಜುಲೈ ೧ ಕ್ಕೆ ಧಾರವಾಡದಲ್ಲಾದ ಗೋಳೀಬಾರಿನಲ್ಲಿ ದೇಹವಿಟ್ಟ ಮಲೀಕ ಮದ್ದಾಸ್, ಗೌಸುಮಿಯಾ ಖಾದರಸಾಹೇಬ ಮತ್ತು ಅಬ್ದುಲ್‌ಶಕುರ ಚಕ್ಕೊತ್ಕಾಯ ಎಂಬ ಹುತಾತ್ಮರ ಸ್ಮರಣಾರ್ಥ ಶ್ರೀ ದಾಬಡೆಯವರ ಅಧ್ಯಕ್ಷತೆಯಲ್ಲಿ ನಗರ ಸಭೆಯ ಅಟ್ಟದ ಮೇಲೆ ನಡೆದ ಸಭೆಯಲ್ಲಿ ಅವರ ಗುಣಗಾನ ಮಾಡಿ ಗೌರವಾರ್ಥ ಎದ್ದು ನಿಂತು ಎರಡು ನಿಮಿಷ ಮೌನವಾಚರಿಸಲ್ಪಟ್ಟಿತು.

## ಮೈಸೂರು ಸಂಸ್ಥಾನ

ಭಾರತದ ಘಟನಾ ಸಮಿತಿ ಸದಸ್ಯರಾದ ಶ್ರೀ ಕೆ. ಎಂ. ಮುನಶಿಯವರು ಮೈಸೂರು ನ್ಯಾಯ ವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಭಾಷಣ ಮಾಡುತ್ತ ಪ್ರಾಂತ ಮತ್ತು ಸಂಸ್ಥಾನ ಸರಕಾರಗಳು ಭದ್ರವಾಗಿರುವದವಶ್ಯವೆಂದೂ ಈ ಬಗ್ಗೆ ಕೇಂದ್ರ ಆತುರವಾಗಿದೆಯೆಂದೂ ಕಾಂಗ್ರೆಸ್ಸಿಗರು ಒಗ್ಗಟ್ಟಿನಿಂದ ಆಡಳಿತೆಯ ಕ್ರಮಗಳಲ್ಲಿ ದಕ್ಷತೆ ವಹಿಸಿದರೆ ಮಾತ್ರ ಇದು ಸಾಧ್ಯವೆಂದೂ ಹೇಳಿದರು.

ಧಾರವಾಡ ಜಿಲ್ಹೆಗೆ ಕಳ್ಳತನದಿಂದ ಭತ್ತ ಸಾಗಿಸುತಿದ್ದಾಗ ಶಿಕಾರಪುರ ಪೋಲೀಸರು ಹಿಡಿದು ಒಬ್ಬ ಗಿರಣಿಯೊಡೆಯ, ಚಕ್ಕಡಿಯವ ಹಾಗೂ ಬೇರಿಬ್ಬರ ಮೇಲೆ ಕಟ್ಲೆ ಹಾಕಿದ್ದಾರೆ. ಇದನ್ನು ಸಾಗಗೊಟ್ಟ ಇಬ್ಬರು ಪೋಲೀಸರನ್ನು ಸಸ್ಪೆಂಡ್ ಮಾಡಲಾಗಿದೆ.

ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಮೈಸೂರಲ್ಲಿ ನಡೆದ ಏಕೀಕರಣ ಚಳವಳಿಗೆ ತಡೆ ಹಾಕುವ ವಿಚಾರ ಸರಕಾರಕ್ಕಿಲ್ಲೆಂದು ಮುಖ್ಯ ಮಂತ್ರಿ ಚಂಗಲರಾಯರೆಡ್ಡಿಯವರು ಹೇಳಿದರು. ಗೋಪಾಲರಾವ ವಿಚಾರಣಾಸಮಿತಿ ಸುಗ್ರೀವಾಜ್ಞೆಯ ಸಂಬಂಧದಲ್ಲಿ ಬಂದ ನಿಲುವಳಿಗೆ ಉತ್ತರವಾಗಿ ಮೈಸೂರಿನ ಆಡಳಿತೆ ಹೊಣೆಗಾರ ಸರಕಾರದ ತತ್ವದ ಮೇಲೆ ನಡೆಯುತಿದ್ದರೂ ಮಹಾರಾಜರ ವಿಶೇಷಾಧಿಕಾರ ಅಬಾಧಿತವಾಗಿ ಉಳಿದಿದೆಯೆಂದು ಮುಖ್ಯ ಮಂತ್ರಿಗಳು ಹೇಳಿದರು.

ಮದ್ಯಪಾನಪ್ರತಿಬಂಧ ಕಾಯದೆಯು ಜುಲೈ ೧ ರಿಂದ ಶಿವಮೊಗ್ಗಾ ಚಿಕ್ಕಮಗಳೂರು ಜಿಲ್ಹೆಗಳಲ್ಲಿ ಜಾರಿಗೆ ಬಂತು.

ಮೈಸೂರು ಸಂಸ್ಥಾನದ ೧೫೦೦೦ ಹೋಟೆಲಗಳು, ಸರಕಾರ ಇಡ್ಲಿ ದೋಸೆಗಳ ಮೇಲೆ ಹಾಕಿದ ಪ್ರತಿಬಂಧ, ಹೊಟೇಲುಗಳ ಮೇಲಿನ ಕರವೇ ಮೊದಲಾದವುಗಳ ವಿರುದ್ಧ ಜುಲೈ ೧ ರಿಂದ ಅನಿಯಮಿತ ಅವಧಿಯ ವರೆಗೆ ಸಂಪು ಹೂಡಿ, ಕಾಂಗ್ರೆಸ್ ಅಧ್ಯಕ್ಷರ ವಿನಂತಿಯ ಮೇರೆಗೆ ಮರುದಿನವೇ ಪುನಃ ತೆರೆದವು. ಆಹಾರ ಧಾನ್ಯಗಳ ಕೊರತೆಯಿರುವಾಗ ಈ ಪ್ರತಿಬಂಧ ನ್ಯಾಯವಾಗಿದೆಯೆಂದೂ ಅದನ್ನು ಹಿಂತೆಗೆದುಕೊಳ್ಳುವದಿಲ್ಲೆಂದೂ ಸರಕಾರದವರು ನ್ಯಾಯ ವಿಧಾಯಕ ಸಭೆಯಲ್ಲಿ ಹೇಳಿದರು. ಹೋಟಿಲುಗಳ ಹರತಾಳದ ಮೂಲಕ ಮೈಸೂರಲ್ಲಿ ಹಾಲು ಕಾಯಿಪಲ್ಲೆಗಳ ಬೆಲೆ ಇಳಿಯಿತಂತೆ.

ಬೆಂಗಳೂರಿನ ಹಿಂದೀ ವಿಜ್ಞಾನಸಂಸ್ಥೆಯ ೧೨ ನೆಯ ವಾರ್ಷಿಕೋತ್ಸವ ಸರ್ ಅರ್ದೇಶೀರ ದಲಾಲರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಂಸ್ಥೆಯ ಮುಂದಿನ ಮಾರ್ಗವನ್ನು ಕುರಿತು ವರದಿಯೊಪ್ಪಿಸಿದ ಪ್ರಸಿದ್ಧ ವಿಜ್ಞಾನಿಗಳಿಂದೊಡಗೂಡಿದ ಪರಿಶೀಲಕ ಸಮಿತಿಯನ್ನು ಅವರು ಅಭಿನಂದಿಸಿದರು.

ಬೆಂಗಳೂರು ನಗರದ ಪಶ್ಚಿಮಕ್ಕೆ ಉದ್ದಿಮೆಗಳ ವಿಸ್ತರಣಕ್ಕಾಗಿ ಕಟ್ಟಿಸಲಾಗುತ್ತಿರುವ "ರಾಜಾಜಿ ಉಪನಗರ"ದ ಪ್ರಥಮ ಕಾರಖಾನೆಯಾದ ಕಿರ್ಲೋಸ್ಕರ ಇಲೆಕ್ಟ್ರಿಕಲ್ ಮೋಟರ್ಸ್ ಕಂಪನಿಯ ಕಾರಖಾನೆಯನ್ನು ಮೈಸೂರು ಮಹಾರಾಜರು ತಾ. ೪ ಕ್ಕೆ ಉದ್ಘಾಟಿಸಿದರು.

ನ್ಯಾಯ ವಿಧಾಯಕ ಸಭೆಯಲ್ಲಿ ಬೆಂಗಳೂರಿಗೆ ಪ್ರೌಢ ಸಂಯುಕ್ತ ಮತದಾನ ಪದ್ಧತಿಯಲ್ಲಿ ಆರಿಸಲ್ಪಟ್ಟ ಕಾರ್ಪೊರೇಶನ್ ಸ್ಥಾಪಿಸುವ ಮಸೂದೆ ಪಾಸಾಗಿದೆ.

## ಕೊಡಗು

ಕೊಡಗಿನ ಸರಕಾರದಿಂದ ನಡೆಸಲ್ಪಡುವ ಪ್ರಥಮ ಸರಕಾರಿ ಕಾಲೇಜನ್ನು ತೆರೆಯುವ ಮತ್ತು ಕಟ್ಟಡದ ಅಡಿಗಲ್ಲು ಇಡುವ ಸಮಾರಂಭ ತಾ. ೪೦ ಕ್ಕೆ ಭಾರತ ಸರಕಾರದ ಗೃಹ ಶಾಖೆಯ ಮುಖ್ಯ ಕಾರ್ಯದರ್ಶಿ ಶ್ರೀ ಎಚ್. ವಿ. ಆರ್. ಅಯ್ಯಂಗಾರರ ಹಸ್ತದಿಂದ ನೆರವೇರಿತು.

ಹೂವಿನ ಸಿಗ್ಗಲಿಯಿಂದ ವನಸಿಗ್ಗಲಿಗೆ ಹೋಗುವ ಮಾರ್ಗದಲ್ಲಿ ಒಬ್ಬ ಅಜ್ಞಾತ ತರುಣನು ಕೊಲೆಯಾಗಿ ಬಿದ್ದಿರುವದನ್ನು (ತಾ ೨೬) ಪೋಲೀಸರು ಕಂಡುಹಿಡಿದಿದ್ದಾರೆ.

## ದಕ್ಷಿಣ—ಕನ್ನಡ

ಕರ್ನಾಟಕ ಪೊಲಿಟೆಕ್ನಿಕ್ ಕೈಗಾರಿಕೆ ಶಾಲೆಗಾಗಿ ಮಂಗಳೂರಿನ ಕದ್ರಿಪದವಿನಲ್ಲಿ ಈ ಮೊದಲು ಶಂಕುಸ್ಥಾಪನೆ ಮಾಡಿದ ಕಟ್ಟೋಣಗಳ ಕೆಲಸವು ಈ ಮಳೆಗಾಲದೊಳಗೆ ಪ್ರಾರಂಭವಾಗಿ ಎರಡು ವರ್ಷದಲ್ಲಿ ಪೂರ್ಣವಾಗುವುದೆಂದು ಮದ್ರಾಸು ಸರಕಾರದ ಉದ್ಯಮ ಶಾಖೆಯ ಡೈರೆಕ್ಟರರು ಶ್ರೀ ಜೆ. ಪಿ. ಮೆನೊನ್ ಇವರು ಮಂಗಳೂರಿಗೆ ಬಂದಿದ್ದಾಗ, ಪತ್ರಿಕೋದ್ಯೋಗಿಗಳ ಸಭೆಯಲ್ಲಿ ಹೇಳಿದ್ದಾರೆ. ಇದರ ವೆಚ್ಚವು ೨೫ ಲಕ್ಷಗಳೆಂದು ಹೇಳಲಾಗಿದೆ. ಅವರು ಇಲ್ಲಿನ ಟ್ರೇಡ್‌ಸ್ಕೂಲನ್ನೂ ಇತರ ಸಂಸ್ಥೆಗಳನ್ನೂ ಸಂದರ್ಶಿಸಿ ಹೋಗಿರುತ್ತಾರೆ.

ಸಿದ್ಧಸಮಾಜದ ಸ್ಥಾಪಕರಾದ ಸ್ವಾಮಿ ಶಿವಾನಂದ ಪರಮಹಂಸರು ತಮ್ಮ ೬೯ ನೆಯ ವಯಸ್ಸಿನಲ್ಲಿ ದಿನಾಂಕ ೨೧ ರಂದು ಬಡಗರೆಯಲ್ಲಿ ಸಮಾಧಿ ಹೊಂದಿದರೆಂದೂ ದಿನಾಂಕ ೨೪ ರಂದು ಸಮಾಧಿ ಮಾಡಲಾಯಿತೆಂದೂ, ಪ್ರತಿವರ್ಷ ಮಿಥುನಮಾಸದ ಅಶ್ವಿನಿ ನಕ್ಷತ್ರದಲ್ಲಿ ಅವರ ಪುಣ್ಯತಿಥಿಯನ್ನು ಆಚರಿಸಲಾಗುವುದೆಂದೂ ಸಿದ್ಧಸಮಾಜದ ಅಧ್ಯಕ್ಷರು ತಿಳಿಸುತ್ತಾರೆ.

ಮದ್ರಾಸು ಪ್ರಾಂತದ ಪಾನನಿರೋಧ ಕಮಿಶನರ ಶ್ರೀ ವಿ. ಎನ್. ಕುಡುವರು, ಈಗ ದಕ್ಷಿಣ ಕನ್ನಡದಲ್ಲಿ ಪಾನನಿರೋಧ ಎಷ್ಟರ ಮಟ್ಟಿಗೆ ಫಲಕಾರಿಯಾಗಿದೆಯೆಂಬುದನ್ನು ಪರಾಂಬರಿಸುತಿದ್ದವರು ದಿನಾಂಕ ೩೦ ರಂದು ಜಿಲ್ಲಾ ಕಲೆಕ್ಟರರ ಭವನದಲ್ಲಿ ಒಂದು ಸಭೆ ಕರೆದಿದ್ದರು. ಆ ಸಭೆಗೆ ಬಂದಿದ್ದ ಮಹನೀಯರಲ್ಲಿ ಹಲವರು ಉಪಯುಕ್ತ ಸಲಹೆಗಳನ್ನಿತ್ತರು.

ಜಿಲ್ಲಾ ಕಾಂಗ್ರೆಸ್ ಸಮಿತಿಯು ಕಳೆದ ವಾರ ಮಂಗಳೂರಲ್ಲಿ ಸೇರಿದಾಗ, ಮುಂಬರುವ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಭಾಗ ವಹಿಸಬೇಕೆಂದು ಅಧಿಕಮತದಿಂದ ನಿರ್ಣಯಿಸಲಾಗಿದೆ.

ಮಹಾತ್ಮಾಗಾಂಧಿ ಸ್ಮಾರಕ ವಿಶ್ವವಿದ್ಯಾಲಯದ ಉದ್ಘಾಟನಾ ಸಮಾರಂಭವು ದಿನಾಂಕ ೨೭ ರಂದು ಉಡುಪಿಯಲ್ಲಿ ಮುಂಬಯಿಯ ಡಾ. ಎ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಂದರ್ಭದಲ್ಲಿ ಉಡುಪಿಯ ಕೆಲ ಸಂಸ್ಥೆಗಳ ಪರವಾಗಿ ಡಾ. ಬಾಳಿಗರಿಗೆ ಅಂದು ಮಾನಪತ್ರವನ್ನರ್ಪಿಸಲಾಯಿತು. ಇಲ್ಲಿನ ನಾಟ್ಯಕೂಟದವರ ನಾಟಕ ಪ್ರದರ್ಶನದೊಂದಿಗೆ ಸಮಾರಂಭವು ಕೊನೆಗಂಡಿತು.

ಧರ್ಮಸ್ಥಳ ಶ್ರೀ ಮಂಜಯ್ಯ ಹೆಗ್ಗಡೆಯವರಿಗೆ ಗ್ರಂಥಕಾಣಿಕೆಯೊಪ್ಪಿಸುವ ನಿರ್ಧಾರದಂತೆ ನೇಮಿಸಲ್ಪಟ್ಟ ಸಂಭಾವನಾ ಸಮಿತಿಯ ಸಭೆಯು ಮಂಗಳೂರಲ್ಲಿ ಜರಗಿತು. ಶ್ರೀಗಳಾದ ವಿ. ಸೀತಾರಾಮಯ್ಯ, ಕೆ. ಬಿ. ಜಿನರಾಜ ಹೆಗ್ಗಡೆ, ಎನ್. ಎಸ್. ಕಿಲ್ಲೆ, ಎಚ್. ಭೀಮರಾವ್ ಎಂ. ಕೆ. ದೇವರಾಜ, ಶ್ರೀನಿವಾಸ ಬಲ್ಲಾಳ, ಡಿ. ಪುಟ್ಟಸ್ವಾಮಿ, ಪಿ. ರಾಮಣ್ಣ ಶೆಟ್ಟಿ, ಕಡೆಂಗೋಡ್ಲು ಶಂಕರಭಟ್ಟ ಮಂಜೇಶ್ವರ ಗೋವಿಂದ ಪೈ, ಶಿವರಾಮ ಕಾರಂತ ಮೊದಲಾದವರೂ ಸಭೆಯಲ್ಲಿದ್ದರು. ಈ ವರೆಗೆ ಬಂದ ಲೇಖನಗಳ ಪರಿಶೀಲನೆಯಾದ ಮೇಲೆ ಮುಂದಿನ ಲೇಖನಗಳು ಜುಲಾಯಿ ೧೫ ರೊಳಗಾಗಿ ತಲಪಬೇಕೆಂದು ನಿರ್ಣಯಿಸಲಾಯಿತು. ಗ್ರಂಥ ಪ್ರಕಾಶನದ ವೆಚ್ಚ ರೂ. ೭೦೦೦ ಆಗಬಹುದೆಂದು ಅಂದಾಜ ಮಾಡಲಾಗಿದೆ.

## ಉತ್ತರ ಕನ್ನಡ

ಕಾರವಾರದ ಸಮೀಪದಲ್ಲಿರುವ ಸುಂಕೇರಿ ಕಾಳಿ ನದಿಯಲ್ಲಿ ೨೫ ವರ್ಷ ವಯಸ್ಸಿನ ತರುಣನ ಶವವೊಂದು ತಾ. ೨೬ ಕ್ಕೆ ದೊರಕಿತು. ಮೃತನ ಗೊತ್ತುಗುರಿಯೊಂದೂ ತಿಳಿದಿಲ್ಲ.

ಕಾರವಾರ ಜಿಲ್ಲಾ ಬೋರ್ಡಿಗೆ ೩ ಕಾರಕೂನರ ಸ್ಥಳಗಳಿಗೆ ೭೦ ಅರ್ಜಿಗಳೂ ೪೦೦ ಶಿಕ್ಷಕ ಸ್ಥಳಗಳಿಗೆ ೬೦೦ ಮಿಕ್ಕಿ ಅರ್ಜಿಗಳೂ ಬಂದಿದ್ದವೆಂದು ತಿಳಿಯುತ್ತದೆ. ಸುಪರ್ವೈಜರ ಮೊದಲಾದ ಕೆಲ ಸ್ಥಳಗಳಿಗೆ ಮತ್ತೆ ೨೦೦ ಮಿಕ್ಕಿ ಅರ್ಜಿಗಳು ಬಂದಿದ್ದವು.

ಕಾರವಾರದ ಹಬ್ಬುವಾಡಾಕೇರಿಯ ಸಮೀಪದ ಅಡವಿಯಲ್ಲಿ ಹಾಡು ಹಗಲೇ ಹುಲಿಗಳ ಗರ್ಜನೆ ಕೇಳಿ ಬರುತಿದೆಯಲ್ಲದೆ ಎರಡು ಹುಲಿಗಳು ಜಗಳಾಡಿ ಒಂದನ್ನು ಇನ್ನೊಂದು ರಕ್ತಿಗೆ ಕೆಡಹಿತೆಂದೂ ಜನರು ಅದನ್ನು ಹೊಡೆಯಲು ಓಡಿ ಬರುವಷ್ಟರಲ್ಲಿ ಅದು ಓಡಿತೆಂದೂ ಹೇಳಲಾಗಿದೆ.

## ಬೆಳಗಾವಿ

ಜೂನ್ ೨೬ ಕ್ಕೆ [illegible] ಶ್ರೀ ಮರುಳಾರಾಧ್ಯ ಶಾಸ್ತ್ರಿಗಳ [illegible] ಸೇರಿದ ಕರ್ನಾಟಕ ಪುರೋಗಾಮಿ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಕಾಂಗ್ರೆಸ್ ಸರಕಾರಗಳ ಬಂಡವಳಶಾಹಿ ನೀತಿಯನ್ನು [illegible] ತಲ್ಲದೆ ಅಧಿಕಾರಾರೂಢ ಪಕ್ಷದ [illegible] ಎಲ್ಲ ಎಡಪಕ್ಷಗಳು ಸಂಯುಕ್ತ [illegible]ದಲ್ಲಿ ಸಮ್ಮಿಲಿತವಾಗಬೇಕೆಂಬ ಶ್ರೀ ಶರ[illegible] ಜೋಸರ ಸೂಚನೆಗೆ ಬೆಂಬಲ ಕೊಡ[illegible].

ಹುಕ್ಕೇರಿ ರೋಡ್ [illegible]ದಲ್ಲಿ ಈರವ್ವಾ ಮಾದಿಹಳ್ಳಿ ಎಂಬ ಹೆಣ್ಣುಮಗಳು (ವಯಸ್ಸು ೪೫) ಹೊಟ್ಟೆಯ ಬಾವಿಗಾಗಿ ಚಿಕಿತ್ಸೆ ಪಡೆಯಲು ಬಂದು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಾಗ ೪೨ ಪೌಂಡು ಭಾರವಾದ ಗಂಟು ಬೆಳೆದದ್ದು ಕಂಡುಬಂತು. ಅದು ಒಂದೂವರೆ ಬಕೀಟಿನಷ್ಟು ನೀರಿನಿಂದ ತುಂಬಿತ್ತು, ಈ ಶಸ್ತ್ರಕ್ರಿಯೆಯ ನಂತರ ಅವಳ ಆಶ್ಚರ್ಯವೆನಿಸುವಂತೆ ಒಂದೇ ವಾರದಲ್ಲಿ ಗುಣಹೊಂದಿದಳು.

ಬೈಲಹೊಂಗಲದಲ್ಲಿ ಕಲಾವೈಭವ ನಾಟ್ಯಸಂಘದವರು ಹೊಸತಾಗಿ ರಚಿಸಿದ ಕರ್ನಾಟಕ ಏಕೀಕರಣ ನಾಟಕದ ಉದ್ಘಾಟನ ತಾ. ೨೭ ಕ್ಕೆ ಉರವಕೊಂಡ ಜಗದ್ಗುರುಗಳ ಹಸ್ತದಿಂದ ನೆರವೇರಿತು. ಜಗದ್ಗುರುಗಳು ಮರುದಿನ ಚೆನ್ನಮ್ಮರಾಣಿ ಇತಿಹಾಸ ಮಂಟಪಕ್ಕೆ ಭೆಟ್ಟಿಯಿತ್ತದ್ದಲ್ಲದೆ ರಾತ್ರಿ ಸಾರ್ವಜನಿಕ ಭಾಷಣದಲ್ಲಿ ಏಕೀಕರಣ ಮತ್ತು ಸ್ವರಾಜ್ಯದ ಅಂತರಾರ್ಥಗಳನ್ನು ವಿವರಿಸಿದರು.

## ವಿಜಾಪುರ

ವಿಜಾಪುರದಿಂದ ಶ್ರೀ ಮುರಿಗೆಪ್ಪ ಸುಗಂಧಿಯವರು ಒಂದು ಹೇಳಿಕೆ ಹೊರಡಿಸಿ, ಕರ್ನಾಟಕ ಪ್ರಾಂ. ಕಾಂಗ್ರೆಸ್ ಸಮಿತಿಯವರು ಪತ್ರಿಕೆಗಳಿಗೆ ಕೊಟ್ಟ ಹೇಳಿಕೆಯಲ್ಲಿ ತಮ್ಮ (ಶ್ರೀ ಸುಗಂಧಿಯವರ) ವಿರುದ್ಧ ಬರೆದ ದೂರುಗಳನ್ನು ಸಮಿತಿ ಹಿಂದಿನಿಂದ ವಿಚಾರಿಸುವದು ಎಂದು ಉಲ್ಲೇಖಿಸಿದ್ದನ್ನು ಖಂಡಿಸಿದ್ದಾರೆ. ತಮ್ಮ ಮೇಲೆ ದೂರುಗಳು ಬಂದುದನ್ನು ತಮಗೆ ತಿಳಿಸಿ ಉತ್ತರ ಪಡೆಯದೆ ಹೀಗೆ ಪತ್ರಿಕೆಗಳಿಗೆ ಹೊಣೆಗೆಟ್ಟ ಹೇಳಿಕೆ ಕೊಟ್ಟದ್ದು ತಮ್ಮ ಬೆನ್ನಲ್ಲಿ ಇರಿಯುವ ಕುಹಕವೆಂದು ಅವರ ಅಭಿಪ್ರಾಯ.

ಲ್ಯಾಂಡ್ ರಿಕ್ವಿಜಿಶನ್ ಕಾಯದೆಯ ೬ ನೆ ಕಲಮನ್ನು ವಿಜಾಪುರ ನಗರಕ್ಕೆ ಜಾರಿಮಾಡಲಾಗಿದ್ದು ಇನ್ನು ಮುಂದೆ ಹೊಸ ಕಟ್ಟಡ ಕಟ್ಟಿಸಿದರೆ ಮತ್ತು ಕಟ್ಟಡಗಳು ಖಾಲಿಯಾದರೆ ಕಲೆಕ್ಟರರಿಗೆ ತಿಳಿಸಬೇಕೆಂದೂ ಹಾಗೆ ತಿಳಿಸದ್ದರೆ ಅಪರಾಧವಾಗುವದೆಂದೂ ಸಾರಲಾಗಿದೆ.

ವಿಜಾಪುರದ ಗೃಹರಕ್ಷಕ ದಲವು ಪ್ರಾಂತದಲ್ಲೇ ಶ್ರೇಷ್ಠವಾದುದೆಂಬ ಅಭಿಪ್ರಾಯವನ್ನು ವಿಜಾಪುರಕ್ಕೆ ಬಂದು ಅದರ ಕಾರ್ಯಕಲಾಪವನ್ನು ನಿರೀಕ್ಷಿಸಿದ ಡಿ. ಆಯ್. ಜಿ. ಯವರಾದ ಶ್ರೀ. ಪೃಥ್ವೀಸಿಂಗಜಿಯವರು ವ್ಯಕ್ತಗೊಳಿಸಿದ್ದಾರೆ. ಜಿಲ್ಹೆಯಲ್ಲೀಗ ೨೪೧೦ ಗೃಹರಕ್ಷಕರಿರುವರು.



ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.

## ಮುಖಪತ್ರದಲ್ಲಿ

ಸಾರನಾಥದ ಈ ಪ್ರಾಚೀನ ಬೌದ್ಧಮಂದಿರ ಜಗತ್ತಿನ ಎಲ್ಲ ಬೌದ್ಧರ ಯಾತ್ರಾ ಸ್ಥಾನವಾಗಿದೆ. ವಿವರಗಳ ಬಗ್ಗೆ ವಿಸ್ತಾರವಾದ ಲೇಖವನ್ನು ಮಧ್ಯ ಪುಟದಲ್ಲಿ ನೋಡುವಿರಿ.

### ಬುದ್ಧವಾಣಿ

ಎಲ್ಲ ವಸ್ತುಗಳಲ್ಲಿಯೂ ವಿನಾಶ ಹುದುಗಿಕೊಂಡಿದೆ. ಜಾಣ್ಮೆಯಿಂದ ಕೆಲಸ ಮಾಡಿ ನಿನ್ನ ಮುಕ್ತಿಯನ್ನು ಸಾಧಿಸಿಕೋ. ನೀನೇ ನಿನ್ನ ಬೆಳಕಾಗು. ನಿನ್ನನ್ನು ನೀನೇ ಆಶ್ರಯಿಸು. ಬೇರೊಬ್ಬರನ್ನು ಆಶ್ರಯಿಸುವ ವಿಚಾರ ಬಿಟ್ಟುಬಿಡು. ಎಂದೆಂದಿಗೂ ಸತ್ಯಕ್ಕೆ ಅಂಟಿಕೋ. ಸತ್ಯವೇ ನಿನ್ನ ದಾರಿಯ ದೀಪವಾಗಲಿ. ಎಂಥ ಪ್ರಸಂಗದಲ್ಲಿಯೂ ಸತ್ಯಪಥದಿಂದ ವಿಮುಖನಾಗಬೇಡ. ಪರರಿಂದ ಮಾರ್ಗದರ್ಶನ ಬರಬೇಕೆಂದು ಅಪೇಕ್ಷಿಸಬೇಡ. ನಿನಗೆ ನೀನೇ ಮಾರ್ಗದರ್ಶಕನಾಗಬೇಕು. ಈ ರೀತಿ ನಡೆದುಕೊಂಡರೆ ಯಾರೂ ಏರದಂಥ ಉನ್ನತಿಗೆ ನೀನು ಏರಿ ಹೋಗಬಲ್ಲೆ. ಸಾಧನೆಯ ಕಳಕಳಿ ಹಾಗೂ ಕುತೂಹಲ ಮಾತ್ರ ನಿನ್ನಲ್ಲಿ ಉಂಟಾಗಲಿ. ಆ ಸಾಧನೆಯ ಅವಸ್ಥೆಯನ್ನು ದಾಟಿದವರು ಮನುಷ್ಯಕುಲವನ್ನು ಉದ್ಧರಿಸಬಲ್ಲರು. ಜಗತ್ತಿನಲ್ಲಿ ಹುದುಗಿರುವ ದುಃಖವನ್ನು ಕುರಿತು ಅವರು ಸಂತತವೂ ಚಿಂತಿಸುತ್ತಾರೆ. ಆ ಮೂಲಕ ಅದನ್ನು ನಿವಾರಣೆ ಮಾಡುವ ಹಾದಿಯನ್ನೂ ಕಂಡು ಹಿಡಿಯುತ್ತಾರೆ.

ಪಾಪವಿಮುಕ್ತಿಯನ್ನು ಪಡೆಯಲು ಪ್ರತಿಯೊಬ್ಬ ವ್ಯಕ್ತಿಗೂ ಸಾಧ್ಯವಿದೆ. ತನಗೆ ತಾನು ಬೆಳಕಾಗಬೇಕೆನ್ನುವ ತಿಳಿವಳಿಕೆ ಮನುಷ್ಯನಲ್ಲಿ ಬಂದಾಗ ಮುಕ್ತಿ ಆತನನ್ನು ಹುಡುಕಿಕೊಂಡು ಬರುತ್ತದೆ. —ಬುದ್ಧ

(ಪಾಟೀಲ ಶ್ರೀ "ಪುಟ್ಟಪ್ಪನವರ ಧರ್ಮದೃಷ್ಟಿ" ಯಿಂದ)

## ಕರ್ಮವೀರ

**ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ**

ಸಂಸ್ಥಾಪಕರು :
**ಶ್ರೀ. ರಂ. ರಾ. ದಿವಾಕರ**
ಸಂಪಾದಕರು :
**ಶ್ರೀ. ಹ. ರಾ. ಪುರೋಹಿತ**

**ಹೊಸ ವರ್ಗಣಿ ವಿವರಗಳು :**

| | |
|---|---|
| ೧ ವರ್ಷಕ್ಕೆ | ರೂ. ೬—೧೨—೦ |
| ೬ ತಿಂಗಳಿಗೆ | ರೂ. ೩—೮—೦ |
| ೩ ,, | ರೂ. ೨—೦—೦ |

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೮ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಲೆ ಚಂದಾದಾರರಲ್ಲಿ ತಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ವ್ಯಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ.

ಸಂಪುಟ ೨೧ — ಸಂಚಿಕೆ ೧೪
ಕರ್ಮವೀರ
ಸೋಮವಾರ — ಆಷಾಢ ಬ. ೮
ತಾರೀಕು ೧೮—೭—೧೯೪೯

# ಸದ್ಯದ ಪರಿಸ್ಥಿತಿಯಲ್ಲಿ ಕರ್ತವ್ಯವೇನು ?

ಹಿಂದುಸ್ತಾನವು ಅರುವತ್ತು ವರುಷಗಳ ಸತತ ಹೋರಾಟದಿಂದ ಸ್ವಾತಂತ್ರ್ಯವನ್ನು ಸಂಪಾದಿಸಿದೆ. ಸ್ವಾತಂತ್ರ್ಯ ಸಂಪಾದನೆಯ ಕಾಲದಲ್ಲಿ ಕೆಲ ಸ್ವಾರ್ಥಸಾಧಕರು ಪರಸರ ಕೈಗೊಂಬೆಗಳಾಗಿದ್ದರೂ ಬಹುಸಂಖ್ಯರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಾನುಭೂತಿಯನ್ನು ತಾಳಿದ್ದರು. ತತ್ಪರಿಣಾಮವಾಗಿ ಕಾಂಗ್ರೆಸ್ಸು ಬ್ರಿಟನ್‌ದಂಥ ಬಲಾಢ್ಯರಾಷ್ಟ್ರದಿಂದರಕ್ತದಹನಿಕೂಡಚೆಲ್ಲದೆ ಸ್ವಾತಂತ್ರ್ಯವನ್ನು ಸಂಪಾದಿಸಲು ಸಮರ್ಥವಾಯಿತು. ಆದರೆ ಸ್ವಾತಂತ್ರ್ಯ ಸಂಪಾದನೆಯ ಅನಂತರ ದೇಶದ ಪರಿಸ್ಥಿತಿ ವಿಷಮವಾಗಿದೆ. ಸ್ವಾತಂತ್ರ್ಯದ ಸಮಯದಲ್ಲಿಯೆ ದೇಶವು ಒಡೆದು ಹೋದ್ದರಿಂದ ಅನೇಕ ಸಮಸ್ಯೆಗಳು ಧುತ್ತೆಂದು ಮುಂದೆ ಬಂದುವು. ಬ್ರಿಟಿಶರು ಇಲ್ಲಿಂದ ಕಾಲ್ದೆಗೆಯುವಾಗ ದೇಶವನ್ನು ವಿಭಜಿಸಿ ಬಗೆಬಗೆಯ ಸಮಸ್ಯೆಗಳನ್ನು ನಿರ್ಮಿಸಿದರು. ಅವನ್ನೆಲ್ಲ ಯಶಸ್ವಿಯಾಗಿ ಎದುರಿಸಲು ಹಿಂದುಸ್ತಾನ ಸರಕಾರವೀಗ ಅಣಿಯಾಗಿದೆ. ಇವುಗಳ ಪರಿಹಾರಕ್ಕೆ ಅಡ್ಡಿ ಆತಂಕಗಳನ್ನೊಡ್ಡಲು ಹಿತಶತ್ರುಗಳು ಸದಾ ಸಿದ್ಧರಾಗಿರುವರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಮೊನ್ನೆ ಮೊನ್ನೆಯ ವರೆಗೆ ಭಾರತೀಯರೇ ಆಗಿದ್ದ ಪಾಕಿಸ್ತಾನಿಗಳು ಪರಕೀಯರ ಈ ಕೈವಾಡಕ್ಕೆ ಮನಸೋತು ಸ್ವಪರ ಹಿತಕ್ಕೆ ಎರವಾಗುತಿರುವರು. ಇದನ್ನೆಲ್ಲ ಸರಿಪಡಿಸಿ ರಾಷ್ಟ್ರವನ್ನು ಪ್ರಗತಿಪರ ಸ್ಥಿತಿಗೊಯ್ಯುವದು ಕರ್ತವ್ಯವಾಗಿದೆ.

ಅಧಿಕಾರ ವಹಿಸಿಕೊಂಡ ಕಾಂಗ್ರೆಸ ಪ್ರತಿನಿಧಿಗಳು ಇವೆಲ್ಲ ಸಮಸ್ಯೆಗಳನ್ನೆದುರಿಸುವಲ್ಲಿ ತೊಡಗಿದಾಗ ಭಾರತದಲ್ಲಿಯ ವಿವಿಧ ಪಕ್ಷಪಂಗಡಗಳು ಎಲ್ಲ ಬಗೆಯಿಂದ ಸಹಾಯ ಸಹಕಾರಗಳನ್ನು ನೀಡುವದು ಅವಶ್ಯವಾಗಿದೆ. ಮೊನ್ನೆ ಮೊನ್ನೆಯ ವರೆಗೆ ಕಾಂಗ್ರೆಸ್ಸಿನಲ್ಲಿದ್ದ ಸಾಮ್ಯವಾದಿಗಳು ಸದ್ಯದ ಸರಕಾರದ ಯೋಜನೆಗಳನ್ನು ಕಾಲಾಕಾಲವನ್ನು ಲಕ್ಷಿಸದೆ ವಿರೋಧಿಸುತಿರುವರಲ್ಲದೆ ವ್ಯತ್ಯಯವನ್ನೂ ಉಂಟುಮಾಡುತಿರುವರು. ಹಿಂದೂ ಮಹಾಸಭಾವಾದಿಗಳು, ಆರ್. ಎಸ್. ಎಸ್‌ದವರು ಪುರೋಗಾಮಿ ಪಕ್ಷದವರು, ಅಕಾಲಿಗಳು ಮೊದಲಾದವರೂ ಸರಕಾರವು ಕೈಕೊಂಡ ಯೋಜನೆಗಳಿಗೆ ಸಹಕಾರವನ್ನು ನೀಡುವದಿಲ್ಲ. ಕಮ್ಯುನಿಸ್ಟಪಕ್ಷವಂತೂ ಸದ್ಯದ ಸರಕಾರವನ್ನು ಉರುಳಿಸಲು ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಿಂದ ಪ್ರಯತ್ನಿಸುತಿರುವುದು. ಈ ಪಕ್ಷದವರು ಅಲ್ಲಲ್ಲಿ ನಡೆಸಿದ ಹಿಂಸಾತ್ಮಕ ಮತ್ತು ರಾಷ್ಟ್ರವಿಘಾತಕ ಚಟುವಟಿಕೆಗಳನ್ನು ನೋಡಿದರೆ ಈ ಮಾತು ಸ್ಪಷ್ಟವಾಗುವದು. ಈ ಸಾಮ್ಯವಾದಿಗಳು ಮತ್ತು ಕಮ್ಯುನಿಸ್ಟರು ಆಡುವ ಮೋಹಕ ಮಾತುಗಳಿಗೆ ಮತ್ತು ಇಡುತಿರುವ ಆಕರ್ಷಕ ಚಿತ್ರಗಳಿಗೆ ಬಲಿಬಿದ್ದ ಅನೇಕ ತರುಣರು ಮತ್ತು ಅಜ್ಞ ರೈತಬಾಂಧವರು ಅಡ್ಡ ಹಾದಿಯನ್ನು ಹಿಡಿಯುತಿರುವರು. ಇದರಿಂದ ರಾಷ್ಟ್ರಕ್ಕೆ ಬಲವಾದ ಹಾನಿಯಾಗುತಿದೆ. ಆಯಾ ಪಕ್ಷಪಂಗಡಗಳ ಗೊತ್ತುಗುರಿಗಳು ವಿಭಿನ್ನವಾಗಿದ್ದರೂ ಕಾಂಗ್ರೆಸ್ ವಿರೋಧಕ ಚಟುವಟಿಕೆಗಳಲ್ಲಿ ಇವೆಲ್ಲ ಒಟ್ಟುಗೂಡುವವೆಂದು ಹೇಳಬಹುದು.

ಆದರೆ ಈ ಬಗೆಯ ಕಾಂಗ್ರೆಸ್ ವಿರೋಧಕ ಇಲ್ಲವೆ ಸದ್ಯದ ಸರಕಾರವಿರೋಧಕ ಧೋರಣವನ್ನು ತಾಳುವದರಿಂದ ಯಾವದೊಂದು ಪಕ್ಷದ ಧ್ಯೇಯವೂ ಈಡೇರಲಾರದು. ತದ್ವಿರುದ್ಧವಾಗಿ ರಾಷ್ಟ್ರದ ಹೆಜ್ಜೆ ಮಾತ್ರ ಹಿಂದೆ ಬೀಳುತಿದೆ. ಈ ಪರಿಸ್ಥಿತಿಯಲ್ಲಿ ಆಯಾ ಪಕ್ಷದವರು ಆಳವಾಗಿ ವಿಚಾರಿಸಿ ಕರ್ತವ್ಯವನ್ನು ತಿಳಿದುಕೊಂಡು ನಡೆಯಬೇಕಾಗಿದೆ. ಸರಕಾರ ಕೈಕೊಳ್ಳುವ ಯಾವದೊಂದು ಯೋಜನೆಯಲ್ಲಿ ತಮ್ಮ ಮತಭೇದವಿದ್ದರೆ ಅಷ್ಟರಮಟ್ಟಿಗೆ ವಿರೋಧಿಸಬೇಕಲ್ಲದೆ ಅದಕ್ಕಾಗಿ ಸರಕಾರದ ಎಲ್ಲ ಯೋಜನೆಗಳನ್ನೂ ವಿರೋಧಿಸುವದಾಗಲಿ ಇಲ್ಲವೆ ಸರಕಾರದ ಕೂಡ ಅಸಹಕಾರವನ್ನು ಹೂಡುವದಾಗಲಿ ಸಮಂಜಸವಾಗದು. ಅಲ್ಲದೆ ಕಾಂಗ್ರೆಸ್ಸು ಇತ್ತೀಚೆ ಅಧಿಕಾರ ಸಂಪನ್ನವಾಗಿದ್ದರಿಂದ ಆಡಳಿತೆಯ ಅನುಭವವನ್ನು ಪಡೆಯಲು ಕೆಲ ಸಮಯವನ್ನು ಅದಕ್ಕೆ ಕೊಡುವದು ಅವಶ್ಯವಾಗಿದೆ. ಹಿಂಸಾಮಾರ್ಗಾವಲಂಬಿಗಳಾದ ಕಮ್ಯುನಿಸ್ಟರನ್ನು ಬಟ್ಟುಗೊಟ್ಟರೂ ಉಳಿದ ಪಕ್ಷಗಳು ತಮ್ಮ ಅಲ್ಪಸ್ವಲ್ಪ ಮತಭೇದವನ್ನು ಬದಿಗಿಟ್ಟು ರಾಷ್ಟ್ರಕಾರ್ಯವನ್ನು ಸಾಧಿಸುವಲ್ಲಿ ಸರಕಾರದೊಂದಿಗೆ ಸಹಕರಿಸಬೇಕಾಗಿದೆ. ಸಾಮ್ಯವಾದಿಗಳು ಮತ್ತೆ ಕಾಂಗ್ರೆಸ್ಸಿನಲ್ಲಿ ಸೇರಬಹುದೆಂಬ ಸುದ್ದಿ ಸಂತೋಷಪ್ರದವಾಗಿದೆ. ಭಾರತದ ಸಾಮ್ಯವಾದಿಗಳಿಗೆ ಜನಕಪ್ರಾಯರಾಗಿರುವ ಪಂಡಿತ ಜವಾಹರಲಾಲರ ಕೈಯಲ್ಲಿ ಸರಕಾರದ ಧುರೀಣತ್ವವಿರುವ ವರೆಗೆ ತಮಗೆ ಅನುಕೂಲವಾದ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಲು ಸಾಮ್ಯವಾದಿಗಳಿಗೆ ಶಕ್ಯವಿದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಶರದ್ಬಾಬುಗಳ ಪುರೋಗಾಮೀಪಕ್ಷದವರೂ ಸದ್ಯದಲ್ಲಿ ಕರ್ತವ್ಯವನ್ನು ತಿಳಿದುಕೊಂಡು ನಡೆದುಕೊಳ್ಳಬೇಕಾಗಿದೆ ಆರ್. ಎಸ್. ಎಸ್. ದವರೂ ಕೊಟ್ಟ ಆಶ್ವಾಸನದಂತೆ ನಡೆದುಕೊಂಡು ರಾಷ್ಟ್ರಹಿತ ಕಾರ್ಯದಲ್ಲಿ ಸರಕಾರಕ್ಕೆ ನೆರವನ್ನು ನೀಡುವದು ಅವಶ್ಯವಾಗಿದೆ. ಹಿಂದೂ ಮಹಾಸಭಾವಾದಿಗಳು ಮತ್ತು ಆರ್. ಎಸ್. ಎಸ್. ದವರು ಹಿಂದೆ ಯಾವದೇ ಬಗೆಯ ಜಾತಿನಿಷ್ಠ ಸಂಕುಚಿತ ಧೋರಣವನ್ನು ಇಟ್ಟುಕೊಂಡಿದ್ದರೂ ಬದಲಾದ ಸದ್ಯದ ಪರಿಸ್ಥಿತಿಯಲ್ಲಿ ಅದನ್ನೆಲ್ಲ ಬಿಟ್ಟುಗೊಟ್ಟು ಜಾತ್ಯತೀತ ರಾಷ್ಟ್ರವನ್ನು ಕಟ್ಟಬೇಕೆಂಬ ಸರಕಾರದ ಧ್ಯೇಯವು ಕೈಗೂಡುವಂತೆ ನೋಡಿಕೊಳ್ಳಬೇಕು.

ಶರಚ್ಚಂದ್ರರು ಹಿಂದಿನದನ್ನೆಲ್ಲ ಮರೆತು, ತಮ್ಮ ಪ್ರಾಂತದಲ್ಲಿಯ ಇಂದಿನ ದುಃಸ್ಥಿತಿಯನ್ನು ಮತ್ತು ಕಮ್ಯುನಿಸ್ಟರ ಹಾವಳಿಯನ್ನು ನೆನೆದು ಅದನ್ನೆದುರಿಸುವಲ್ಲಿ ಸರಕಾರಕ್ಕೆ ಸಹಾಯ ನೀಡಬೇಕೆಂದು ರಾಷ್ಟ್ರಹಿತನಿಷ್ಠರು ಬಿನ್ನವಿಸಿಕೊಳ್ಳದಿರಲಾರರು. ಕಮ್ಯುನಿಸ್ಟರಾದರೂ ಸದ್ಯದಲ್ಲಿ ತಮ್ಮ ಕರ್ತವ್ಯವನ್ನು ತಿಳಿದುಕೊಂಡು ನಡೆಯಬೇಕಾಗಿದೆ. ಹೀಗೆ ಎಲ್ಲ ಪಕ್ಷಪಂಗಡಗಳು ಸದ್ಯದಲ್ಲಿ ತಮ್ಮ ಕರ್ತವ್ಯವನ್ನು ತಿಳಿದುಕೊಂಡು ಅದರಂತೆ ಆಚರಿಸಿ ರಾಷ್ಟ್ರಕ್ಕೆ ಬಂದಿರುವ ಗಂಡಾಂತರವನ್ನು ತಪ್ಪಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ.

× × ×

ಮುಂಬಯಿ ಪ್ರಾಂತದಲ್ಲಿಯ ವಿಶೇಷತಃ ಕರ್ನಾಟಕದಲ್ಲಿಯ ಪ್ರಾಥಮಿಕ ಶಿಕ್ಷಕರ ಸಮಸ್ಯೆ ದಿನದಿನಕ್ಕೆ ಜಟಿಲವಾಗಹತ್ತಿದೆ. ಸರಕಾರದವರು ಪ್ರಾಥಮಿಕ ಶಿಕ್ಷಣಕ್ಕೆಂದು ಕೊಡುತಿರುವ ನಿಧಿಯಲ್ಲಿ ಸದ್ಯದ ಭಾರವಾದ ವೆಚ್ಚವನ್ನು ತೂಗಿಸಿಕೊಂಡು ಹೋಗುವದು ಸ್ಥಾನಿಕ ಸಂಸ್ಥೆಗಳಿಗೆ ವಿಶೇಷತಃ ನಗರ ಸಭೆಗಳಿಗೆ ಶಕ್ಯವಾಗದ್ದರಿಂದ ಶಿಕ್ಷಕರು ಅಸಮಾಧಾನಗೊಂಡಿರುವರು. ಸರಕಾರ ವಿಧಿಸಿದಷ್ಟು ತುಟ್ಟಿಭತ್ತೆ ಮೊದಲಾದ್ದನ್ನು ಕೊಡದ್ದಕ್ಕಾಗಿ ಹುಬ್ಬಳ್ಳಿಯ ಶಿಕ್ಷಕರು ಬರುವ ೨೦ ನೇ ತಾರೀಖಿಗೆ ಅನ್ನಸತ್ಯಾಗ್ರಹ [illegible] ತಿದ್ದರೆ ಧಾರವಾಡದ ಶಿಕ್ಷಕರು [illegible] ನಾಲ್ಕು ತಿಂಗಳಿಂದ ಸಂಬಳ ಸಿಕ್ಕದ್ದಕ್ಕಾಗಿ ಮುಂದೇನು ಎಂದು ಬಾಯಿ ಬಿಡುತಿರುವರು. ಸರಕಾರದವರು ಸಾಕಷ್ಟು ಧನ ಸಹಾಯ ಮಾಡದಿದ್ದರೆ ತಮ್ಮಿಂದ ಪ್ರಾಥಮಿಕ ಶಾಲೆಗಳನ್ನು ನಡೆಯಿಸಿಕೊಂಡು ಹೋಗುವದೇ ಶಕ್ಯವಿಲ್ಲೆಂದು ಈ [illegible] ನಗರ ಸಭೆಗಳು ಸರಕಾರಕ್ಕೆ ಈ ಮೊದಲೆ ತಿಳಿಸಿರುವವಂತೆ. ಹುಬ್ಬಳ್ಳಿ ಶಿಕ್ಷಕ ಶಿಷ್ಟ ಮಂಡಲದವರು ೧೪ ಕ್ಕೆ ಸೊಲ್ಲಾಪುರದಲ್ಲಿ ಶಿಕ್ಷಣ ಮಂತ್ರಿಗಳಾದ ಮಾನ್ಯ ಖೇರರನ್ನು ಭೆಟ್ಟಿಯಾಗಿ ತಮ್ಮ ಕರುಣ ಕಥೆಯನ್ನು ವಿವರಿಸಿದರು. ನಿಮ್ಮ ಪ್ರಶ್ನೆಯು ಸರ್ಕಾರ ಮುಂದೆ ಬಂದಿದೆ. ನಾವು ಆ ಬಗ್ಗೆ ವಿಚಾರ ನಡೆಸಿದ್ದೇವೆ. ಮುನಿಸಿಪಾಲಿಟಿಯವರು ಬೇಡುವಷ್ಟು ಹಣ ಕೊಡುವದು ಸರಕಾರಕ್ಕೆ ಸಾಧ್ಯವಿಲ್ಲ. ಆದರೂ ಅವರು ನಿಮಗೆ ಸರಕಾರ ಸ್ಕೇಲಿನಂತೆ ಹಣ ಕೊಡಬೇಕಾಗುವದು. ಕೊಡದಿದ್ದರೆ ಏನು ಮಾಡಬೇಕೆಂಬದನ್ನು ನಾವು ವಿಚಾರಿಸುವೆವು— ನೀವು ಉಪವಾಸ ಮಾಡಬೇಡಿರಿ. ಆದರಿಂದ ಮುನಿಸಿಪಾಲಿಟಿಯವರಿಗೆ ಪಯಿ ಹುಟ್ಟದು ಎಂದು ಮುಂತಾಗಿ ಹೇಳಿದರೆಂದು ತಿಳಿಯುತ್ತದೆ. ಇಂಥ ದೊಡ್ಡ ನಗರಗಳಲ್ಲಿಯ ಶಿಕ್ಷಕರು ಇಷ್ಟೊಂದು ಅಸಮಾಧಾನ ಹೊಂದಿರುವಾಗ ಶಿಕ್ಷಣದ ಕಾರ್ಯವು ಅದೆಂತು ಸಮಾಧಾನಕರವಾಗಿ ಸಾಗಬಲ್ಲುದು? ಪರಿಸ್ಥಿತಿ ಹೀಗಿರುವಾಗ ಸರಕಾರದವರು ಮತ್ತೆ ೬೦ ಸಾವಿರ ಪ್ರಾಥಮಿಕ ಶಾಲೆಗಳನ್ನು ತೆರೆಯಲಿರುವರಂತೆ. ಶಿಕ್ಷಣ ಪ್ರಸಾರವು ಆವಶ್ಯವಾಗಿದ್ದರೂ ಅದಕ್ಕಾಗಿ ಯೋಗ್ಯ ಏರ್ಪಾಡು ಮಾಡುವದು ಕರ್ತವ್ಯವಾಗಿದೆ. ಸರಕಾರದವರು ಈ ಎರಡೂ ನಗರ ಸಭೆಗಳಲ್ಲಿಯ ಪ್ರಾಥಮಿಕ ಶಿಕ್ಷಕರ ಸಮಸ್ಯೆಯನ್ನು ಬಗೆಹರಿಸಬೇಕಲ್ಲದೆ ಹೊಸ ಶಾಲೆಗಳನ್ನು ಹೊರಡಿಸುವ ಮೊದಲು ಇವೆಲ್ಲ ಸಮಸ್ಯೆಗಳ ಬಗ್ಗೆ ಪೂರ್ಣ ವಿಚಾರ ಮಾಡಬೇಕೆಂದು ಸೂಚಿಸಬಯಸುತ್ತೇವೆ.

× × ×

ಚೀನದ ಸರ್ವಾಧಿಕಾರಿಗಳಾಗಿದ್ದ ಜನರಲಿಸಿಮೊ ಚಯಾಂಗ ಕೈಶೇಕರು ಮತ್ತೆ ಅಧಿಕಾರಕ್ಕೆ ಬರುವ ಸುದ್ದಿ ಬರಹತ್ತಿದೆ. ಅವರು ಫಿಲಿಪಾಯಿನ್‌ದ ಅಧ್ಯಕ್ಷರಾದ ಕ್ವಿರಿನೋರೊಂದಿಗೆ ಮಾತುಕತೆ ನಡೆಸಿ ಕಮ್ಯುನಿಸ್ಟ ವಿರೋಧಕ ಪ್ಯಾಸಿಫಿಕ್ ಸಂಘವೊಂದನ್ನು ನಿರ್ಮಿಸುವಲ್ಲಿ ಅಣಿಯಾಗಿದ್ದಾರೆ. ಯಾವದೇ ಅಧಿಕಾರ ಸ್ಥಳವನ್ನು ವಹಿಸದೆ ಅವರು ಕಮ್ಯುನಿಸ್ಟರ ಪ್ರಗತಿಯನ್ನು ತಡೆಯಲು ಮಿಲಿಟರಿ ಕ್ರಮವನ್ನು ಕೈಕೊಳ್ಳುವರೆಂದು ತಿಳಿಯುತ್ತದೆ. ಅವರು ಇತ್ತೀಚಿನ ತಮ್ಮ ಭಾಷಣಗಳಲ್ಲಿ ಅಯಿದು ವರುಷಗಳಲ್ಲಿ ಕಮ್ಯುನಿಸ್ಟರನ್ನು ಸೋಲಿಸುವದಾಗಿ ಸಾರಹತ್ತಿರುವರು. ಇಷ್ಟು ದಿನಗಳ ವರೆಗೆ ಚೀನದ ಸರ್ವಾಧಿಕಾರಿತ್ವ ತಮ್ಮ ಕಡೆಗಿದ್ದರೂ ಕಮ್ಯುನಿಸ್ಟರನ್ನು ಸೋಲಿಸುವದು ಅವರಿಂದಾಗಲಿಲ್ಲ. ಹೀಗಿದ್ದರೂ ಅಯಿದು ವರುಷಗಳಲ್ಲಿ ಅವರನ್ನು ಸೋಲಿಸುವ ಮಹತ್ವಾಕಾಂಕ್ಷೆಯನ್ನು ಅವರು ತಾಳಿದ್ದು ಅಭಿನಂದನೀಯವಾಗಿದೆ. ಕಮ್ಯುನಿಸ್ಟರ [illegible] ಬೇಕಾದರೆ [illegible]

[illegible]

ಈ ನಮ್ಮ [illegible] ಸಾಧ್ಯವಾಗಿದೆ.

# ಗೋವೆಯ ಸಂಕಟಗ್ರಸ್ತ ಪರಿಸ್ಥಿತಿ

## ಪೋರ್ತುಗೀಸರ ಧರ್ಮಾಂಧತೆ—ಸ್ವಾತಂತ್ರ್ಯಾಂದೋಲನದ ದಮನ—ಭೇದೋಪಾಯ ಪ್ರಯೋಗ—ಭಾರತದ ಕರ್ತವ್ಯ

"ಗೋವೆಯ ಹಣ್ಣು" ಅಥವಾ ಗೋಡಂಬಿಯನ್ನು ಅರಿಯದವರಿಲ್ಲ. ಮೆಣಸಿನಕಾಯಿಯನ್ನು ತೆಂಕಣ ಕನ್ನಡಿಗರು "ಗೋವೆಯ ಕೋಡು" ಎನ್ನುತ್ತಾರೆ. ದಕ್ಷಿಣದ ಕಾಶ್ಮೀರವೆನಿಸಿದ ಗೋವೆ ಪೋರ್ತುಗೀಸರ ಆಡಳಿತಕ್ಕೆ ಸಿಕ್ಕಿದ್ದರಿಂದ ಬಹಳ ಕಾಲದಿಂದ ಭಾರತದ ಲಕ್ಷ್ಯ ಅತ್ತ ಹರಿದಿಲ್ಲ.

### ಕರ್ನಾಟಕದ ಸಂಬಂಧ

ಗೋವೆ ಒಮ್ಮೆ ಕರ್ನಾಟಕದ ಭಾಗವಾಗಿತ್ತು; ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ಪ್ರದೇಶವಾಗಿತ್ತು. ವಿಜಯನಗರದ ಅರಸರು ಅದನ್ನು ೧೩೩೩ ರಿಂದ ೧೪೭೦ ರ ವರೆಗೆ ಆಳಿದರು. ಅನಂತರ ಬಹಮನಿ ರಾಜ್ಯಗಳಲ್ಲೊಂದಾದ ವಿಜಾಪುರದ ಯೂಸುಫ್ ಆದಿಲ್‌ಶಹ ಅದನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಅವನಿಂದ ಪೋರ್ತುಗೀಸರು ಗೋವೆಯನ್ನು ಗೆದ್ದುಕೊಂಡರು. ಗೆದ್ದ ಬಳಿಕ ಅವರು ಮಾಡಿದ ಮಹತ್ಕಾರ್ಯವೆಂದರೆ ಸ್ಥಳೀಯರ ಬಲಾತ್ಕಾರದ ಧರ್ಮಾಂತರೀಕರಣ. ಇದರಲ್ಲಿ ನೊಂದವರ, ಕೊಂದವರ ಮಡಿದವರ, ಮರುಗಿದವರ ಸಂಖ್ಯೆಗೆ ಮಿತಿಯಿರಲಿಲ್ಲ. ಪೋರ್ತುಗೀಸರು ಧರ್ಮಾಂತರ ಹೊಂದದೆ ಉಳಿದವರಿಗೆ ನಾನಾ ತೊಂದರೆಗಳನ್ನು ಕೊಟ್ಟರು. ಅವುಗಳಲ್ಲಿ "ಧಾನಪಟ್ಟಿ" (ಎದೆತೆರಿಗೆ) ಎಂಬುದು ಮುಖ್ಯವಾದುದು. ಆ ಸಮಯದಲ್ಲಿ, ಅಂದರೆ ೧೮೫೭ ರ ಶಿಪಾಯಿ ದಂಗೆಗೂ ಮೊದಲು, ಸ್ಥಳೀಯ ರಾಣರು ಇಂಥ ಕ್ರೂರ ದಬ್ಬಾಳಿಕೆಯ ವಿರುದ್ಧ ದಂಗೆಯೆದ್ದಿದ್ದರು. ಮೊದಲನೆಯ ದಂಗೆ ನಡೆದದ್ದು ೧೮೫೨ ರಲ್ಲಿ. ಅದು ೧೮೫೫ ರ ವರೆಗೆ ಸಾಗಿತು. ಪ್ರಮುಖ ದಂಗೆಗಾರನಾದ ದೀಪಾಜಿ ರಾಣನು ಎರಡೆರಡು ಸಲ ಯಶಸ್ವಿಯಾಗಿ ಸರಕಾರವನ್ನು ಬೆದರಿಸಿ ತನ್ನ ಬೇಡಿಕೆಗಳೆಲ್ಲವನ್ನೂ ಅದು ಮಾನ್ಯ ಮಾಡುವಂತೆ ಮಾಡಿದನು. ಆದರೆ ೧೯೧೧-೧೨ ರಲ್ಲಿ ಸರಕಾರವು ನಿರ್ದಯೆಯಿಂದ ದಂಗೆಗಾರರನ್ನು ನಾಶಗೊಳಿಸಲು ಶಕ್ತವಾಯಿತು. ಆ ಬಳಿಕ ಪೋರ್ತುಗೀಸರು ಅಪ್ರತಿಹತರಾಗಿ ಗೋವೆಯನ್ನು ಆಳುತ್ತ ಬಂದಿದ್ದಾರೆ.

### ಸ್ವಾತಂತ್ರ್ಯಾಂದೋಲನವೂ ದಬ್ಬಾಳಿಕೆಯೂ

ಗೋವೆಯ ವಿಸ್ತಾರ ೧೩೪೭ ಚದುರ ಮೈಲುಗಳಷ್ಟು; ಜನಸಂಖ್ಯೆ ೬,೩೯,೧೭೭. ಅಲ್ಲಿ ೧೯೩೪ ರಲ್ಲಿ ಸುಮಾರು ೫೦೪ ಪ್ರಾಥಮಿಕ ಶಾಲೆಗಳೂ ೧೩ ಹೈಸ್ಕೂಲುಗಳೂ ಒಂದು ವೈದ್ಯಕೀಯ ಶಾಲೆಯೂ ಒಂದು ಶಿಕ್ಷಕರ ತರಬೇತಿನ ಕಾಲೇಜೂ ಇದ್ದವು. ಪ್ರಜೆಗಳಲ್ಲಿ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಜನರು ಹಿಂದುಗಳೂ ಸ್ವಲ್ಪ ಕಡಿಮೆ ಜನರು ಕ್ರಿಶ್ಚಿಯನ್ನರೂ ಅತ್ಯಲ್ಪಸಂಖ್ಯರಾಗಿ ಮುಸಲ್ಮಾನರೂ ಇದ್ದಾರೆ. ಇಲ್ಲಿ ಜಾತೀಯತೆಗಿಂತ ಪಂಗಡಗಳ ಬಡಿದಾಟವೇ ಹೆಚ್ಚು. ಸರಕಾರ ಇದರ ಲಾಭ ಪಡೆದು ಭೇದಸೂತ್ರವನ್ನು ಅವಲಂಬಿಸಿ ತನ್ನ ನಿರಂಕುಶತೆಯನ್ನು ದಿನ ದಿನಕ್ಕೂ ಬೆಳೆಸಿಕೊಳ್ಳುತ್ತ ಬಂದಿದೆ. ಒಮ್ಮೆ ಅಲ್ಲಿಯ ಆ ಅಲ್ಪಸಂಖ್ಯ ಮುಸಲ್ಮಾನರನ್ನು ಎತ್ತಿಕಟ್ಟಿ ಗೋವೆ ಪಾಕಿಸ್ತಾನಕ್ಕೆ ಸೇರಬೇಕೆಂಬ ಚಳವಳಿ ಹೂಡಿಸಿತು. ಮುಸಲ್ಮಾನರಿಂದಬಂದ ಅದು ತಿರುಗಿ ಮುಸಲ್ಮಾನರಿಗೇ ಹೋಗಬೇಕೆಂದು ಹೇಳಿಸಿತು. ಇದು ಅಲ್ಲಿಯ ಇತರ ಪಕ್ಷಗಳ ಸ್ವಾತಂತ್ರ್ಯಾಂದೋಲನವನ್ನು ಭಂಗಿಸುವ ಒಂದು ತಂತ್ರವಷ್ಟೆ. ಮೊದಲು ಪಾದ್ರಿಗಳ ಮೂಲಕ ಕ್ರಿಶ್ಚಿಯನ್ನರನ್ನು ತನ್ನ ಕಂಕುಳಲ್ಲಿ ಅಡಗಿಸಿಕೊಳ್ಳುವುದರಲ್ಲಿ ಕೆಲಮಟ್ಟಿಗೆ ಸರಕಾರ ಯಶಸ್ವಿಯಾದರೂ ತಮ್ಮನ್ನು ಇತರ ಜಾತಿಯ ಪ್ರಜೆಗಳಂತೆಯೇ ದಬ್ಬಾಳಿಕೆಗೆ ಒಳಪಡಿಸಿದ್ದರ ಅರಿವಾಗಿ ಅವರೀಗ ಹಿಂದುಗಳೊಡನೆ ಬೆರೆತು ಸ್ವಾತಂತ್ರ್ಯದ ಹೋರಾಟವನ್ನು ನಡೆಸುತ್ತಿದ್ದಾರೆ. ಆದರೆ ಪೋರ್ತುಗೀಸರು ಪೋಲೀಸರ ಮೇಲೆ ಅತ್ಯಧಿಕ ಬಂದೋಬಸ್ತ ಮಾಡಿ ಸ್ವಾತಂತ್ರ್ಯದ ಚಳವಳಿಯ ಬಲವನ್ನು ಕುಗ್ಗಿಸಿದರು. ಹೋರಾಟವನ್ನು ಗೋವೆಯ ಗಡಿಯಾಚೆಗೆ ಓಡಿಸಲು ಶಕ್ತರಾಗಿದ್ದಾರೆ. ಶ್ರೀ ರಾ. ಮ. ಲೋಹಿಯಾ ಲೋಹಿಯಾರವರೇ ಈ ಹೊಸ ಹೋರಾಟದ ಅಧ್ವರ್ಯುಗಳು.

ಗೋವೆಯ ಕಾಂಗ್ರೆಸ್ಸೆಂಬುದು ಸ್ವಾತಂತ್ರ್ಯ ಚಳವಳಿಯ ಪೂರ್ಣ ಜ್ಞಾನ ಪಡೆದು ಕೆಲಸ ಮಾಡುತ್ತಿರುವಾಗ ಹೀಗೆ ಸರಕಾರದ ಶಾಸನಬದ್ಧ ಶಿಕ್ಷೆಗೆ ಗುರಿಯಾಗಬೇಕಾಯಿತಲ್ಲದೆ, ಒಳಗಿಂದ ಒಳಗೆ ಅದರ ಭೇದನೀತಿಯಿಂದ ಉಂಟಾದ ಒಡಕಿಗೂ ತುತ್ತಾಗಬೇಕಾಯಿತು.

ಒಡಕಿಗೆ ಭಾಷಾತತ್ವವೇ ಕಾರಣ. ಬಹುಸಂಖ್ಯರ ಭಾಷೆ ಕೊಂಕಣಿ. ಶಿಕ್ಷಿತರಾದ ಕ್ರಿಶ್ಚಿಯನ್ನರು ಬರಹಕ್ಕೆ ಪೋರ್ತುಗೀಸನ್ನೂ ಇಂಗ್ಲೀಷನ್ನೂ ಬಳಸುತ್ತಾರೆ. ಹಿಂದುಗಳು ದೇವನಾಗರಿಯನ್ನು ಬಳಸುತ್ತಾರೆ. ಅಲ್ಲದೆ ಕೊಂಕಣಿ ಮರಾಠಿಯ ಒಂದು ಉಪಭಾಷೆಯೆಂದು ಒಂದು ಬಣ ಸಾಧಿಸಿದರೆ, ಮತ್ತೊಂದು ಬಣ ಅದು ಸ್ವತಂತ್ರಭಾಷೆಯೆಂದು ವಾದಿಸುತ್ತದೆ; ಆ ಕಾರಣದಿಂದ ಗೋವೆ ಒಂದು ಕೊಂಕಣಿಪ್ರಾಂತವಾಗಬೇಕೆನ್ನುತ್ತದೆ. ಮಹಾರಾಷ್ಟ್ರೀಯರೂ ಕರ್ನಾಟಕದವರೂ ಗೋವೆ ತಮ್ಮ ಭಾವೀ ಪ್ರಾಂತಕ್ಕೆ ತಪ್ಪದೆ ಸೇರಬೇಕೆಂದು ಐತಿಹಾಸಿಕ ಆಧಾರಗಳನ್ನು ಮುಂದೊಡ್ಡಿದ್ದಾರೆ. ಈ ಗೊಂದಲದ ಪರಿಸ್ಥಿತಿಯನ್ನು ಸರಕಾರ ದುರುಪಯೋಗಪಡಿಸಿಕೊಳ್ಳುತ್ತಿದೆ. ಇದನ್ನೆಲ್ಲ ಕಂಡು ಗಾಬರಿಹೊಂದಿದ ಗೋವೆಯ ಕಾಂಗ್ರೆಸ್ ನಾಯಕರು ಹಿಂದುಸ್ತಾನದತ್ತ ರಕ್ಷಣೆಗಾಗಿ ಯಾಚಿಸಿ ಕಾದು ಸುಮ್ಮನೆ ಕುಳಿತುಕೊಂಡಿರುವುದೊಂದೇ ಉಪಾಯವೆಂದು ತಮ್ಮ ಬೆಂಬಲಿಗರಿಗೆ ಹೇಳತಣ್ಣಗಾಗಿದ್ದಾರೆ.

### ಭಾರತವೇ ತಾರಕ

ಇಂಥ ಸಮಯದಲ್ಲಿ ಅವಧಿ ಮೀರಗೊಡದೆ ಭಾರತ ಸರಕಾರವು ಜಾಗರೂಕತೆಯಿಂದ ಪೋರ್ತುಗಾಲ್ ಸರಕಾರದೊಡನೆ ವ್ಯವಹರಿಸಿ ಗೋವೆಯ ಜನರನ್ನು ಸಂಕಟದಿಂದ ಪಾರು ಮಾಡುವದು ಅವಶ್ಯವೆಂದು ಶ್ರೀ ದಿನಕರ ಸಕ್ರೀಕರರು ಬರೆಯುತ್ತಾರೆ. ಹೈದರಾಬಾದನ್ನು ಹದಗೆಡುವವರೆಗೆ ಬಿಟ್ಟಿದ್ದರಿಂದ ಎಂಥ ಅನಾಹುತಗಳಿಗೆ ಅಲ್ಲಿಯ ಪ್ರಜೆಗಳು ಎದುರಾಗಬೇಕಾಯಿತೋ ಅದಕ್ಕಿಂತಲೂ ಹೆಚ್ಚಿನ ಅವಘಡಗಳಿಗೆ ಗೋವೆಯ ಪ್ರಜೆಗಳು ತುತ್ತಾಗುವ ಸಂಭವವಿದೆ. ಸಮುದ್ರದ್ವಾರದ ಸವಲತ್ತಿರುವ ಪೋರ್ತುಗೀಸರು ನಿಜಾಮನಿಗಿಂತ ಹೆಚ್ಚು ಸುಲಭವಾಗಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ದಂಡಬಲದಿಂದ ಪ್ರಜೆಗಳನ್ನು ದಮಿಸಿ ಬಿಡಬಹುದಾಗಿಯೂ ಅಂಥ ಪ್ರಸಂಗದಲ್ಲಿ ಅಲ್ಲಿಯ ಜನರ ಬೆಂಬಲಸಿಕ್ಕದೆ ಅದನ್ನು ಭಾರತಕ್ಕೆ ಸೇರಿಸಿಕೊಂಬ ಪ್ರಯತ್ನ ಯಶಸ್ವಿಯಾಗದೆಂದೂ ಅವರು ಉಲ್ಲೇಖಿಸುತ್ತಾರೆ. ಈ ಮಾತಿನಲ್ಲಿ ಸತ್ಯತೆಯಿಲ್ಲದಿಲ್ಲ. ಹಿಂದುಸ್ತಾನದ ವಿದೇಶ ಖಾತೆಯವರಿಗೆ ಈಗೀಗ ಈ ವಿಷಯ ಮನದಟ್ಟಾಗುತ್ತಿದೆ. ಆದರೆ ಸದ್ಯದಲ್ಲೇ ಯಾವುದಾದರೂ ಉಪಾಯವನ್ನು ಕೈಕೊಳ್ಳಲು ಉಚಿತ ಸಂದರ್ಭವೊದಗಿದರೆ ಉತ್ತಮವೆಂದು ಯಾರಾದರೂ ಹೇಳಬಹುದಾಗಿದೆ.

'ಕರ್ಮವೀರ'ದ ಮಾರ್ಚ ೩೧ರ ಸಂಚಿಕೆಯಲ್ಲಿ ಬಣ್ಣಿಸಿರುವಂತೆ ಪೋರ್ತುಗಾಲ್ ಸರಕಾರವು ಪ್ರಜಾಸತ್ತೆಯೆಂದರೇನೆಂಬುದನ್ನು ಅರಿತಿಲ್ಲ; ಪ್ರಜಾಸತ್ತೆಯ ಸಂಸ್ಕೃತಿ, ಪರಂಪರೆಗಳ ಬಗ್ಗೆ ಅದಕ್ಕೆ ಗೌರವವಿಲ್ಲ. ಸ್ವತಃ ತನ್ನ ದೇಶದಲ್ಲೇ ದಬ್ಬಾಳಿಕೆಯನ್ನು ನಡೆಸಿ ಕಾರಭಾರ ಸಾಗಿಸುತ್ತಿರುವ ಆ ಸರಕಾರದ ಉಗ್ರವಾದ ಪೋರ್ತುಗೀಸ್ ಭಾರತದ ಪ್ರಜೆಗಳ ಆಶೆ ಆಕಾಂಕ್ಷೆಗಳಿಗೆ ಪ್ರಜಾಧಿಕಾರವನ್ನು ಸುಲಭವಾಗಿ ಮನ್ನಣೆ ಕೊಟ್ಟೀತೆಂಬುದು ಸುಳ್ಳು. ಎಂದು ಮೇಲಿನ ಲೇಖಕರು ಬರೆದ ಅಂಶವನ್ನು ಗಮನಿಸಿದರೆ ಹಿಂದುಸ್ತಾನ ಸರಕಾರವು ಗೋವೆ, ದಯೂ, ದಮನ್ ಈ ಮೂರೂ ಪ್ರದೇಶಗಳ ಭವಿತವ್ಯ ನಿರ್ಧಾರದ ಬಗ್ಗೆ ವಿಲಂಬ ಧೋರಣ ತಾಳುವದಾಗಲಿ, ಅಲಕ್ಷ್ಯಭಾವದಿಂದ ಕಾಣುವದಾಗಲಿ ಯುಕ್ತವೆನ್ನಲಾಗದು. ಈಗಾಗಲೇ ಈ ವಿಷಯ ವಿದೇಶಖಾತೆಯ ಗಮನಕ್ಕೆ ಬಂದಿರುವದು ಸ್ತುತ್ಯರ್ಹವಾಗಿದೆ; ಅದು ಬೇಗನೆ ಕಳ್ಳದನ್ನು ಮಾಡುವದೆಂದು ನಿರೀಕ್ಷಿಸಲಾಗಿದೆ.

— ಅರ್ಜುನ

# ಸಮಸ್ಯಾರೋಗ

- ಶ್ರಮಜೀವಿಗಳಿಗೆ ಹೆಚ್ಚಾಗಿ ಬರುವದು ದೈಹಿಕರೋಗ, ಬೌದ್ಧಿಕ ಕೆಲಸಗಾರರಿಗೆ ಬರುವದು ಮಾನಸಿಕರೋಗ. ಮನೋವಿಜ್ಞಾನಿಗಳು ಅನೇಕ ವಿಧದ ಮಾನಸರೋಗಗಳನ್ನು ಹೇಳಿದ್ದರೂ ಅವು ಅತ್ಯಲ್ಪಸಂಖ್ಯೆಯ ವಿಕ್ಷಿಪ್ತ ವರ್ಗಕ್ಕೆ ಮಾತ್ರ ಅನ್ವಯಿಸುತ್ತವೆ. ಆದರೆ ವಿಚಾರಶಕ್ತಿಯುಳ್ಳ ಅನತ್ಯಲ್ಪ ಸಂಖ್ಯೆಯ ಪ್ರಾಮಾಣಿಕ ವಿದ್ಯಾವಂತರಲ್ಲಿಂದು ಹೊಸದೊಂದು ರೋಗ ತಲೆದೋರಲಾರಂಭವಾಗಿದೆ: ಅದೇ ಸಮಸ್ಯಾರೋಗ!

ಜ್ಞಾನ, ವಿಜ್ಞಾನಗಳ ವಿವಿಧ ಶಾಖೆಗಳಲ್ಲಿ ವಿಶೇಷಜ್ಞತೆಯನ್ನು ಪಡೆಯುವ ಹುಚ್ಚು ಇಂದು ಜಗತ್ತಿನ ಎಲ್ಲೆಡೆಯೂ ಹೆಚ್ಚುತ್ತಿದೆ. ಈ ವಿಶೇಷಜ್ಞಂಮನ್ಯರು ತಮ್ಮ ಅಸಮ್ಯಗ್ ದೃಷ್ಟಿಯಮೂಲಕ ಸಮಸ್ಯೆಗಳೆಂಬ ವೈಶ್ವಾಮಿತ್ರ ವಿಚಾರಗಳನ್ನು ಕಂಡು ಅದನ್ನು ಸಮಾಜಕ್ಕೆ ಎಚ್ಚರಿಕೆ ಕೊಡುವ ಬುದ್ಧಿಯಿಂದ ಪ್ರಚುರಪಡಿಸಿ ಜನಗಳ ತಲೆಕೆಡಿಸುತ್ತಾರೆ. ತಮ್ಮ ಜ್ಞಾನದ ವಿಶಿಷ್ಟತೆಯನ್ನು ಮರೆತು ಅದಕ್ಕೆ ವ್ಯಾಪ್ತಿ ವಿಸ್ತಾರವನ್ನು ಕಲ್ಪಿಸಿ ಉಪದೇಶ ಉಪನ್ಯಾಸಗಳಿಗಾರಂಭಿಸುವದು ಇಂದಿನೊಂದು "ಫ್ಯಾಶನ್"; ಅದೇ ಈ ವಿಶೇಷಜ್ಞರಿಗೆ ಪರಮಾನಂದ; ಕುಚೋದ್ಯವನ್ನು ಮಾಡಿ ಸಂತೋಷಪಡುವ ಈ ಕೃತ್ಯದ ದೆಸೆಯಿಂದ ಮನಸ್ಸಿನಲ್ಲಿ ಎಲ್ಲ ವಿಷಯಗಳಿಗೂ ಮುಕ್ತದ್ವಾರವಿರುವಂತೆ ನೋಡಿಕೊಳ್ಳುವದು ತಮ್ಮ ಕರ್ತವ್ಯವೆಂದು ತಿಳಿದ ವಿಚಾರವಂತರು ವಿಶೇಷಜ್ಞರ ಮಾಯಾಜಾಲಕ್ಕೆ ಬಲು ಬೇಗ ಬಲಿಯಾಗುತ್ತಾರೆ. ಸತ್ವಶಾಲಿಯಾದ ಪ್ರಜಾಪ್ರಭುತ್ವದ ಬೆನ್ನೆಲುಬು ಎಂದು ಕರೆಸಿಕೊಳ್ಳುವ ಪಂಡಿತರು, ಪ್ರಾಧ್ಯಾಪಕರು, ಮುಲ್ಕಿ ಅಧಿಕಾರಿಗಳು ಮತ್ತು ಇತರ ಬೌದ್ಧಿಕ ವೃತ್ತಿಯ ಅವಲಂಬಿಗಳು ಸಮಸ್ಯಾದಶಮುಖರಟ್ಟುವ ಮಾಯಾಮೃಗದ ಮಂಗತನಕ್ಕೆ ಮೋಹಿಸಿ ಸಿಕ್ಕಿಬೀಳುತ್ತಾರೆ.

### ಅಲ್ಪಜ್ಞರ ತಾಮಸೀ ಪ್ರಚಾರ

ಭೂಸಾರಕ್ಷಯದ ಒಂದು ಸಮಸ್ಯೆಯನ್ನೆತ್ತಿಕೊಳ್ಳಬಹುದು. ಅನೇಕಸಾವಿರ ವರ್ಷಗಳಿಂದ ಮಾನವನು ತನ್ನ ದುರಾಶೆಯನ್ನು ತೃಪ್ತಿಪಡಿಸಿಕೊಳ್ಳಲು ಭೂಮಿಯನ್ನು ದುರುಪಯೋಗಮಾಡಿಕೊಂಡದ್ದರ ಫಲವಾಗಿ ಈಗ ಭೂಮಿಯಲ್ಲಿ ಏನೂ ಬೆಳೆಯದ ಪರಿಸ್ಥಿತಿ ಸನ್ನಿಹಿತವಾಗುತ್ತದೆ! ಎಂದು ಗಾಬರಿಹುಟ್ಟಿಸುವದೇ ಭೂಶಾಸ್ತ್ರಜ್ಞರ ಕರ್ತವ್ಯವೆನಿಸಿದೆ. ಜನರನ್ನು ದಂಗುಬಡಿಸಿ, ಭಯಪಡಿಸಿ, ನಿರಾಶೆಗೊಳಿಸಿ ಆನಂದಪಡುವದರಲ್ಲಿ ಅಗ್ರಗಣ್ಯರಾದ ಸಮಸ್ಯಾಪಂಡಿತರಲ್ಲಿ ಮಾನಸಶಾಸ್ತ್ರಜ್ಞರು, ಸ್ತ್ರೀ ಶಾಸ್ತ್ರಜ್ಞರು ಮತ್ತು ಕಾಮಶಾಸ್ತ್ರಜ್ಞರು ಕಿರೀಟಪ್ರಾಯರಾಗಿದ್ದಾರೆ. ಹಿಂದೆ ಸ್ವರ್ಗನರಕಗಳ, ಪಾಪಪುಣ್ಯಗಳ, ದೇವಾಸುರ ಭೂತಪಿಶಾಚಗಳ ನಿರ್ಮಾಪಕರಾದ ಪೌರಾಣಿಕರ ಮತ್ತು ಗ್ರಹಗತಿ ಪರಿವರ್ತಕರಾದ ಜ್ಯೋತಿಷಿಕರ ಮಾಯಾ ಪ್ರಪಂಚದಂತೆ ಭೂ ಶಾಸ್ತ್ರ, ಶರೀರ ಶಾಸ್ತ್ರ, ಅರ್ಥಶಾಸ್ತ್ರ, ಮುಂತಾದ ದೃಶ್ಯ ಸ್ಪೃಶ್ಯ ವಸ್ತುವಿಜ್ಞಾನಗಳಲ್ಲಿ ಕೈಯಾಡಿಸುವ ಆಳಲಿಕಾಯಿ ಪಂಡಿತರಿಗಿಂತ ಹೆಚ್ಚಾಗಿ ಸಂತತಿನಿಯಂತ್ರಣದ, ಸೌಂದರ್ಯವೃದ್ಧಿಯ, ಪೌರುಷಸಂವರ್ಧನದ ಮತ್ತು ಕಾಮಪ್ರವೃತ್ತಿನಿರೂಪಣದ ತಾತ್ವಿಕಾಂಶಗಳಲ್ಲಿ ಸಂಶೋಧನ ನಡೆಸಿದವರ ಹಾವಳಿ ಮಿತಿಮೀರಿದೆ. ಈ ತಾಕ್ಷರ ಪ್ರಚಾರದ ಹಿಡುಗಿನಿಂದ ಪಾರಾಗುವದು ಸಾಕ್ಷರರಿಗಿಂದು ಕಷ್ಟವಾಗಿದೆ.

ಒಬ್ಬ ಮನಃಶಾಸ್ತ್ರಿ ಹೆದರಿಸುತ್ತಾನೆ-ಜಗತ್ತಿನಲ್ಲೀಗ ಮಾನವನ ಬುದ್ಧಿಶಕ್ತಿ ದಿನೇ ದಿನೇ ಕ್ಷೀಣವಾಗಲಾರಂಭಿಸಿದೆ; ಅಂತ್ಯದಲ್ಲಿ "ಬುದ್ಧಿನಾಶಾತ್ ಪ್ರಣಶ್ಯತಿ" ಎಂಬ ಸ್ಥಿತಿಯೊದಗಬಹುದು-ಎಂಬುದು ಅವನ ಸಿದ್ಧಾಂತ! ಸ್ತ್ರೀಯರ ಕಾಮಪ್ರವೃತ್ತಿ ಪುರುಷರದ್ದಕ್ಕಿಂತ ಬೇರೆ ಮತ್ತು ವಿಲಕ್ಷಣವಾಗಿದೆ; ಅದರಿಂದ ಅವಳಿಗೆ ಭೋಗಕ್ಕೆ ಮೊದಲು ಆಟವಿರಬೇಕಾದುದು ಅವಶ್ಯಕ, ಕೇವಲ ವ್ಯಾಪಾರಿಕ್ಕಿನ ವ್ಯವಹಾರದಿಂದ ಅವಳು ಜಡಳೂ ಅತೃಪ್ತಳೂ ಜಟಮಾರಿಯೂ ಆಗುತ್ತಾಳೆ ಎಂದು ಅಭಿನವ ವಾತ್ಸ್ಯಾಯನನೊಬ್ಬಳ ಪ್ರಭುಸಂಮಿತಿ. ನಿದ್ದೆ ಹೆಚ್ಚಾದವರು ಇಂಥವಿಚಾರಗಳನ್ನು ಮೆಲುಕು ಹಾಕುವದರಿಂದ ನಿದ್ದೆ ಕಡಿಮೆ ಮಾಡಿಕೊಳ್ಳಬಹುದಲ್ಲದೆ, ಸಾಮಾನ್ಯರು ಮುಗ್ಧಹೃದಯದವರಿದ್ದರೆ ಖಂಡಿತವಾಗಿ ನಿದ್ರಾಹೀನತೆಯ ರೋಗಕ್ಕೆ ತುತ್ತಾಗದಿರರು.

### ಹುಚ್ಚು ಹಿಡಿಸುವ ಹುಚ್ಚು

ವಿಚಾರಪರರ ಚಿತ್ತಭ್ರಮೆಯಿಂದ ಸಂತುಷ್ಟರಾಗುವ ಸಮಸ್ಯಾವೈದ್ಯರ ಸಿದ್ಧಾಂತಗಳು ವಿಶ್ವರೂಪವನ್ನೆಳ್ಳವಾಗಿವೆ. ದ. ಇಂಗ್ಲೆಂಡಿನಲ್ಲಿಯ ಕಡಪಾ ಕಲ್ಲುಗಳ ಕೊರತೆ, ದಂತವೈದ್ಯ... ತಮ್ಮ ಸೇವಾಪ್ರತಿಫಲವನ್ನು ಹೆಚ್ಚಿಸಿದ್ದು... ಆಫ್ರಿಕದಲ್ಲಿ ಸರಕಾರ ಜೆಳೆಯುತ್ತಿರುವ ಸೂರ್ಯ... ಕಾಂತಿಗೆ (ಸೂರೇಪಾನಕ್ಕೆ) ಪರಾಗಾಕರ್ಷ... ಮಾಡಲು ಜೇನುಹುಳುಗಳ ಕೊರತೆ, ಅಮೆ... ಕನ್ನರು ತಮ್ಮ ದನಕರುಗಳಿಗೆ ವೈಲಿಚುಚ್ಚಲು ನಿರಾಕರಿಸಿದ್ದು, ಅಮೇರಿಕದ ಪ್ರವಾಸಿಗರಿ... ನೆರವೀಯಲು ಹೆಸರುಗಂಬಗಳಿಲ್ಲದಿರುವುದು, ಫ್ರೆಂಚ್ ತೆರಿಗೆಗಾರನ ಮತ್ತು ಜರ್ಮನ್ ಸಾವಕಾರನ ಪಾಪಗಳು, ಸರ್ ಸ್ಟಾಫರ್ಡ್ ಕ್ರಿಪ್ಸರು ಆಹಾರಸಂಯಮವನ್ನು ಒತ್ತಾಯ ಪಡಿಸುವುದರ ಅಯೋಗ್ಯತೆ ಎಂಬಂತಹ ಹಲವಾರು ಸಮಸ್ಯೆಗಳನ್ನು ಅರ್ಥಶಾಸ್ತ್ರಕ್ಕೆ ಮೀಸಲಾದ ಒಂದು ಪತ್ರಿಕೆ ಇತ್ತೀಚೆಗೆ ಪ್ರಕಟಿಸಿದೆ. ಹೀಗೆ ಬಭ್ರುವಾಹನನು ಪಿಪೀಲಿಕಾಸ್ತ್ರವನ್ನು ನಾಗಗಳ ಮೇಲೆ ಬಿಟ್ಟಂತೆ ಓದುಗರ ಮೇಲೆ ಸಮಸ್ಯಾಸ್ತ್ರವನ್ನು ಪ್ರಯೋಗಿಸಿದರೆ ಅವರ ಸುಖವನ್ನು ಹೆಚ್ಚಿಸಿದಂತಾಯಿತೇ?

ಕತೆ ಕಾದಂಬರಿಗಳನ್ನು ಕೂಡ ಸಮಸ್ಯಾಂತವಾಗಿ ಬರೆಯುವುದಿಂದು ಒಂದು ಕಲಾಕೌಶಲ್ಯವೆನಿಸಿದೆ. ಅರ್ಧಾರ್ಧವಾಗಿ, ಅಪೂರ್ಣವಾಗಿ, ಅಸ್ತವ್ಯಸ್ತವಾಗಿ, ಅಸಂಬದ್ಧವಾಗಿ ಕಥಾವಿವರಣವನ್ನು ಕೊನೆಗೊಳಿಸುವುದು ಸಮಸ್ಯೆಯ ಮೂಲಸೂತ್ರ. ಸಮಸ್ಯೆಗೆ ಉತ್ತರವನ್ನು ಓದುಗರೇ ಹುಡುಕುವಂತಾಗಿ ಅವರ ವಿಚಾರಶಕ್ತಿ, ಊಹಾಬಲಗಳು ವೃದ್ಧಿಯಾಗುವುವೆಂದು ಅದಕ್ಕೆ ಮನೋವಿಜ್ಞಾನದ ಆಧಾರ. ಹೇತ್ವಾಭಾಸಗಳ, ಅಪೂರ್ಣ ಕಾರಣಸಾಮಗ್ರಿಗಳ, ಅನುಕ್ತ ಸನ್ನಿವೇಶಗಳ, ಪ್ರತಿಬಂಧಕವಿಶಿಷ್ಟ ಪರಿಸ್ಥಿತಿಗಳ, ಸ್ವಕಪೋಲ ಕಲ್ಪಿತ ಸಿದ್ಧಾಂತಗಳ ಪ್ರಚಾರಕರೊಂದಿಗೆ ಮತ್ತು ವಾಸ್ತವಿಕ ವಿಷಯಗಳನ್ನು ಅಲ್ಪ ಪ್ರಯೋಗದಿಂದ ನಿರ್ಣಯಿಸಿ ಹೇಳುವ, ಅತಿಶಯೋಕ್ತಿಯಿಂದ ಬಿತ್ತರಿಸುವ, ಬೀಭತ್ಸ, ಭಯಾನಕ ರೀತಿಯಿಂದ ಚಿತ್ರಿಸುವ Problem Posers— ಸಮಸ್ಯಾವಿಕ್ಷೇಪಕರು ಮತ್ತೊಂದೆಡೆ, ಪ್ರಾಮಾಣಿಕ ಮುಗ್ಧ ವಿದ್ಯಾವಂತರ ತಲೆಯನ್ನು ತಿನ್ನಲು ಸಂಚು ಹೂಡಿರುವುದಕ್ಕೆ ಯೋಗ್ಯ ಪರಿಹಾರವನ್ನು ಹುಡುಕಿರುವವರು ವಿರಳ.

### ಸತತವ್ಯಾಕುಲತೆ ಕ್ಷಯದ ಹದಿನೇಳನೆಯ ರೂಪ

ಚಿಂತಾಸಕ್ತಿ ಎಂಬ ರೋಗವು ಸಮಸ್ಯಾಪರರಲ್ಲಿ ತೋರುವ ಮೊದಲ ರೋಗಚಿಹ್ನ. ಅದರಿಂದ ಭೂಸಾರಕ್ಷಯದಂತೆ ಮನಃಕ್ಷಯ ಎಂಬ ರೋಗ ಅವರಲ್ಲಿ ತಲೆದೋರುವುದೆಂದು ಊಹಿಸಬಹುದು. ಮನಃಶಕ್ತಿ ಕ್ಷಯಿಸುವುದರಿಂದ ಅನೇಕ ಮಾನಸಿಕ ಭಯಗ್ರಂಥಿಗಳು ಹುಟ್ಟಿ ಮನುಷ್ಯನನ್ನು ಜೀವನ್ಮೃತನನ್ನಾಗಿ ಮಾಡುವುದು. ಇದರಿಂದ ತಪ್ಪಿಸಿಕೊಳ್ಳಬೇಕಾದರೆ ಸಮಸ್ಯಾಭಕ್ಷಕರು ಅಜೀರ್ಣವಾಗುವಷ್ಟು ಸಮಸ್ಯೆಗಳನ್ನು ಒಮ್ಮೆಗೇ ತಿಂದುಬಿಡಬಾರದು. ಅದರಿಂದ ಸಮಸ್ಯೆಗಳ ಮೇಲೆ ಮನನವನ್ನು ಹರಿಬಿಟ್ಟು ಅವುಗಳ ಪರಿಣಾಮ ಪರಿಹಾರಗಳ ಚಿಂತನದಿಂದ ಪಡೆಯುವ ಸಂತೋಷ ಯಶಸ್ಸುಗಳು ಕೆಟ್ಟು ಕಮರಿಹೋಗುವವು. ಅಗ್ನಿಬಲ ಕಡಿಮೆಯಿರುವವರು ಮೃದು ಆಹಾರವನ್ನು ತೆಗೆದುಕೊಳ್ಳುವಂತೆ ದುರ್ಬಲಮನಸ್ಕರು ಚಿಕ್ಕಚಿಕ್ಕ ಸಮಸ್ಯೆಗಳನ್ನು ಮಾತ್ರ ಸೇವಿಸಬೇಕು. ಸಂಸಾರಿ ಮನಸ್ಕರು ಮಿತಪ್ರಮಾಣದಲ್ಲಿ ಕ್ಲಿಷ್ಟಕಾಲಗಳಲ್ಲಿ ಸಮಸ್ಯೆಗಳನ್ನು ಉಪಯೋಗಿಸಿಕೊಂಡರೆ ನಷ್ಟವಿಲ್ಲ. ಎಲ್ಲದರ ಬಗ್ಗೂ ಅಳುವನ್ನಾದರೂ ಮಾಡಬೇಕೆಂಬ ತುಡಿಹಿಡಿದವರು ಬೇಜ್‌ಹಾಟನು, 'ಮಾನವನ ದಯಾಶೀಲತೆಯಿಂದ ಮಾನವಕುಲಕ್ಕೆ ಅತಿ ಹೆಚ್ಚು ಕೇಡಾಗಿದೆಯೋ ಒಳ್ಳೆಯದಾಗಿಯೋ ಎಂಬುದೇ ಅತ್ಯಂತ ದುರಾರಾಧ್ಯವಾದ ಮಾನವ ಸಮಸ್ಯೆ' ಎಂದುದನ್ನು ಎಚ್ಚರಿಕೆಯಾಗಿ ತೆಗೆದುಕೊಳ್ಳಲಿ.

—ವಿಜ್ಞಾನಭೇಷಜ

# ನಾನು ಬಯಸಿದ ಹುಡುಗಿ

ಲೇ:— ಸೇವ ನಮಿರಾಜ ಮಲ್ಲ, ಬಿ. ಎ. (ಆನರ್ಸ್)

ಥರಥರನೆ ನಡುಗುವ ಕೈಯಿಂದ ನಾನು ಬೆಳ್ಳಿಯ ಲೋಟವನ್ನು ಕೊಟ್ಟೆ. ನನ್ನ ದೇಹ ಈಗ ಆವಳದಕ್ಕೆ ಸೋಕಿರಬೇಕು,

ಕುಳಿತವರೆಲ್ಲ ನನ್ನನ್ನೇ ಎವೆಯಿಕ್ಕದೆ ನೋಡುತ್ತಿರುವರೆಂದು ನನಗಾಗ ಭಾಸವಾಯಿತು. ನನ್ನ ವಸ್ತ್ರಗಳನ್ನು ಪುನಃ ಒಮ್ಮೆ ನೋಡಿಕೊಂಡೆ. ಎಲ್ಲಿಯೂ ಅಸ್ತವ್ಯಸ್ತವಾಗಿಲ್ಲ. ಹಣೆಯ ಬೆವರನ್ನೊರಸಿಕೊಳ್ಳುತ್ತ ಹಿಂದೆ ಬಂದೆ.

ಅವಳೂ ನನ್ನನ್ನು ನೋಡಿರಬಹುದು. ಲೋಕದ ಕಣ್ಣುಕಟ್ಟಿಗೋಸ್ಕರ ಹಸೆಯ ಮಣೆಯ ಮೇಲೆ ತಲೆ ತಗ್ಗಿಸಿ ಕುಳಿತಿರಬೇಕು. ನಾನು ಬಂದೆನೆಂದು ತಿಳಿಯಲು ಅವಳು ನನ್ನನ್ನು ಕಣ್ಣಿಂದ ನೋಡಬೇಕಾಗಿಲ್ಲ. ನನ್ನ ಗಾಳಿ ಸೋಂಕಿದರೆ ಸಾಕು, ಅವಳು ಬೆಚ್ಚಿ ಬೀಳಬಹುದು.

ಈ ಘಳಿಗೆ ಬರಲಾರದೆಂದು ನಾನು ಯಥಾರ್ಥವಾಗಿ ನಂಬಿದ್ದೆ. ಆದರೆ ಗಂಟೆಯ ಮುಳ್ಳು ನಿಲ್ಲಲಿಲ್ಲ. ನನ್ನನ್ನು ಲೆಕ್ಕಿಸದೆ ಅದು ಮುಂದು ವರಿಯಿತು. ಮತ್ತೂ ಎಷ್ಟೋ ಅಸಂಭವನೀಯ ಘಟನೆಗಳು ಸಂಭವಿಸಬಹುದೆಂದೂ ಲೆಕ್ಕ ಹಾಕಿದ್ದೆ. ಮಳೆಗಾಲದ ಸಮಯ: ಸಿಡಿಲಿನ ಹೊಡೆತ, ನೀರಿನ ಉಬ್ಬರಗಳು ಈ ಘಳಿಗೆಯನ್ನು ತಪ್ಪಿಸಬಹುದಿತ್ತು. ಅದೂ ಅಲ್ಲದೆ ವಿಶೇಷ ಸೆಕೆಯೂ ಇದೆ. ಉಷ್ಣ ಹೆಚ್ಚಾಗಿ ಬಿಸಿಲಿನ ಹೊಡೆತಕ್ಕೀಡಾಗಿ ಆ ಮನೆಯವರು ಯಾರಾದರೂ ಸಾಯಲೂಬಹುದೆಂದೆಣಿಸಿದ್ದೆ. ಹಳೆಯ ಮನೆ, ಇರುವವರೆಲ್ಲ ಮುದುಕರು: ಆದುದರಿಂದ ಮನೆಯ ಒಂದು ಭಾಗ ಕೆಳಗೆ ಬೀಳಬಹುದು, ಇಲ್ಲವೇ ಯಾರಾದರೂ ಮುದುಕರು ಸಾಯಬಹುದು. ಮತ್ತೆ ಒಂದೆಡೆಯಿಂದ ಸರಕಾರದ ಕಟ್ಟಳೆಗಳು: ಧಾನ್ಯದ ದುರುಪಯೋಗಕ್ಕಾಗಿ, ಇಲ್ಲವೆ ಕಳ್ಳಸಂತೆಯಲ್ಲಿ ವ್ಯಾಪಾರಮಾಡಿದುದಕ್ಕಾಗಿ ಅವರಲ್ಲಿ ಯಾರನ್ನಾದರೂ ಸೆರೆಹಿಡಿಯಬಹುದು. ಇಪ್ಪತ್ತನಾಲ್ಕು ಗಂಟೆಗಳಿಂದ ಇವೆಲ್ಲ ಯೋಚನೆ ಮಾಡುತಿದ್ದೇನೆ. ನನಗೆ ಅವಳ ಜೀವನದಲ್ಲಿ ಸಮಪಾಲು ಇದೆ ಎಂದು ನಿಷ್ಕಾರಣವಾಗಿ ಊಹಿಸುತಿದ್ದೆ. ಈ ಯಾವ ಊಹೆಗಳೂ ನಿಜವಾಗಲಿಲ್ಲ, ಸಂಧಿಕಾಲವೂ ದಾಟಿತು. ಅವಳ ಜೀವನದ ಮೇಲೆ ನಾನು ಸ್ಥಾಪಿಸಿದ್ದ ಹಕ್ಕು ಮುರಿಯಿತು.

* *

ಅವಳೀಗ ಬೇರೆಯವರ ಸೊತ್ತಾದರೂ ಅವಳನ್ನು ನಾನು ಬಯಸಿದುದರ ತಪ್ಪು ನನಗೆ ತೋಚದು. ನಾನು ಮಹತ್ತಾದ ಪಾಪಕೃತ್ಯ ನಡೆಸಿದೆನೆಂದು ನನಗೆ ವಿದಿತವಾಗದು. ನಾನು ಅವಳನ್ನು ಬಯಸಲು ಪ್ರಾರಂಭಿಸಿದಾಗ ನಾನು ಹೀಗೆಲ್ಲ ಭಾವಿಸಿರಲಿಲ್ಲ. ಆಗ ಅವಳನ್ನು ಬಯಸಲು ಇತರರಂತೆ, ಇತರರಷ್ಟೇ ನ್ಯಾಯ್ಯವಾದ, ಹಕ್ಕು ನನಗೂ ಇತ್ತು. ನನ್ನ ಬಯಕೆ ಈಡೇರಲೂ ಹೆಚ್ಚಿನ ಅತಂಕಗಳಿರಲಿಲ್ಲ. ಅತಂಕಗಳಿದ್ದರೂ ಅವಳು ಮದುವೆಯಾಗುವ ತನಕ ನಾನು ಅವಳನ್ನು ಬಯಸುವುದಕ್ಕೆ ಯಾರೂ ಅಡ್ಡಿಮಾಡಲಾರರಲ್ಲವೆ?

ನಾನು ಅನೇಕ ವರ್ಷಗಳಿಂದ ಅವಳನ್ನು ಬಯಸಿದ್ದೆ. ಬಹುಶಃ ಆಗ ನನಗೆ ಬಯಕೆ ಎಂದರೇನೆಂಬುದೇ ತಿಳಿಯದಿದ್ದಿರಬಹುದು. ಆದರೂ ನನ್ನ ಮನಸ್ಸು ಆಗ ಅವಳಲ್ಲಿ ನೆಟ್ಟು ಹೋಗಿತ್ತು. ಹಾಗೆಂದು ನಾನವಳನ್ನು ಪೂಜಿಸಹೊರಡಲಿಲ್ಲ. ಅವಳ ಕುರಿತು ಕವನ ರಚನೆ ಮಾಡಲಿಲ್ಲ. ಆದರೂ ಅವಳನ್ನು ಕಂಡೊಡನೆ ಅವಳ ಮೇಲೆ ನನಗೆ ಅಳಿಯದಂಥ ಒಂದು ಹಕ್ಕು ಇದೆಯೆಂಬ ಭಾವನೆ ಮಾತ್ರ ಮರಳಿ ತಲೆಗೊಳ್ಳುವದು. ಆ ಹಕ್ಕನ್ನು ಎಂದು ಸ್ಥಾಪಿಸುವೆನೆಂದು ಮಾತ್ರ ನಾನು ಕೆಲದಿನಗಳ ಹಿಂದಿನ ವರೆಗೂ ಯೋಚಿಸಿರಲಿಲ್ಲ.

ಹಾಯ್! ವಾದ್ಯಗಳ ಸ್ವರ ಕಿವಿಯನ್ನು ಕುಕ್ಕುತ್ತಿದೆ. ಅಲ್ಲ, ತುಪಾಕಿಗಳ ಗರ್ಜನೆ! ನನ್ನ ಮೈಯಲ್ಲಿ ಸಾವಿರ ಚೇಳುಗಳು. ಏನು ಸಮಾರಂಭ, ಏನು ಉತ್ಸವ! ಅದರಲ್ಲಿ ನಾನೂ ಭಾಗವಹಿಸಿದೆ! ಏಕೆ? ಈ ಪಾಯಸ, ಏಕೆ ಈ ಭಕ್ಷ್ಯಗಳು? ನಾನೂ ಅವುಗಳನ್ನು ತಿನ್ನಬೇಕು!

ನನ್ನ ಮನಸ್ಸಿಗೆ ಮಾತಾಡಲು ನಾಲಿಗೆ ಇರುತಿದ್ದರೆ ಏನಾಗುತಿತ್ತೋ! ಆಗ ನನ್ನ ಮನಸಿನಲ್ಲಿದ್ದುದೆಲ್ಲ ಇತರರಿಗೆ ತಿಳಿದಿದ್ದರೆ? ನನ್ನನ್ನು ಆವರು ಹುಚ್ಚನೆನ್ನಬಹುದಿತ್ತು: ನನ್ನ ಕೈಕಾಲುಗಳನ್ನು ಗಟ್ಟಿಯಾಗಿ ಬಿಗಿದು ಬಾಯಿಯೊಳಗೆ ವಸ್ತ್ರ ತುರುಕಿ ಕೋಣೆಯಲ್ಲಿ ಹಾಕಿಬಿಡುತಿದ್ದರು. ಮತ್ತೆ ಪಿಸುಮಾತಿನ ಪ್ರಚಾರಯುದ್ಧ ಪ್ರಾರಂಭವಾಗಬಹುದಿತ್ತು. ನನ್ನ ಗತಜೀವನದ ಅಣುಕಣಗಳೂ ಶೋಧಿಸಲ್ಪಡುತಿದ್ದುವು. ಹೆಚ್ಚೇಕೆ, ನಾನು ಸಮಾಜಬಾಹಿರನೆಂದೂ ಸಾರಲಾಗುತಿತ್ತು.

ಇಲ್ಲ, ನನ್ನ ಬಯಕೆ ಅಂಥ ಸಿಡಿಲಿನ ಧ್ವನಿಯಂತೆ ಗುಡುವ ಸ್ವಭಾವದ್ದಲ್ಲ: ಮಿಂಚಿನ ಬೆಳಕಿನಂತೆ ಹೊಳೆಯುವಂಥದೂ ಅಲ್ಲ. ಇದೊಂದು ನನಗೆ ಅನುಕೂಲ ಗುಣ.

* *

ನಾನು ಈ ಸಮಾರಂಭವನ್ನು ನಂಬಲಾರೆ. ಸಮಾರಂಭವನ್ನು ನೋಡಲೆಂದು ನಾನು ಬಂದದ್ದಲ್ಲ. ಸಮಾಜದ ಜರಿತಾರಿ ವಸ್ತ್ರದ ಬೆಡಗನ್ನು ನೋಡಲು ನಾನು ಬಂದವನಲ್ಲ. ನಾನು ಬಂದುದು ತಮಾಷೆ ನೋಡಲಿಕ್ಕೆ. ಇತರರು ನನ್ನ ಮನಸ್ಸಿನ ವಿರೋಧವಾಗಿ ನಿರ್ಣಯಿಸಿದ ಈ ಘಟನೆಯು ಕುಸಿದು ಬೀಳುವ ಸಂಭ್ರಮವನ್ನು ಮುಯ್ಯಿಯ ಕಣ್ಣುಗಳಿಂದ ನೋಡಿ ತೀರಿಸಲಿಕ್ಕೆ.

ಆದರೆ ನನ್ನ ನಿರೀಕ್ಷಣೆ ತಲೆ ಕೆಳಗಾಗಿದೆ.

ಅದನ್ನು ನಾನೇ ಒಪ್ಪಿಕೊಂಡೆ. ನಾನು ಅವಳಿಗೆ ಪಾರಿತೋಷಕವಿತ್ತ ಬೆಳ್ಳಿಯ ಲೋಟ, ಅವಳಿಗೆ ಹಾಗೆಯೇ ಕೊಡಲು ತಂದುದಲ್ಲ: ಆದರೆ ಈಗ ಕೊಡಲೇ ಬೇಕಾಯಿತು. ನನ್ನ ಮನಸ್ಸನ್ನು ಹಿಸುಕಿದಂತಾಯಿತು.

ನೋಡುತ್ತಲಿದ್ದೇನೆ. ಸಮಾರಂಭ ಜಯಪ್ರದವಾಗಿ ಈಗತಾನೇ ಕೊನೆಗೊಳ್ಳುವುದು. ಹಸೆಯ ಮಣೆಯಿಂದ ಈಗಲೇ ವಧೂವರರನ್ನು ಎಬ್ಬಿಸುವರು. ಆಕಾಶ, ಮನೆಯ ಗೋಡೆ, ಮುದುಕರು—ಎಲ್ಲ ಇದ್ದಕ್ಕಿದ್ದಂತೆಯೇ, ನನ್ನ ಊಹೆಗೆ ಪ್ರತಿಕೂಲವಾಗಿ, ಇದ್ದಾರೆ. ಏನೂ ಆಕಸ್ಮಿಕ ಘಟನೆಗಳು ಸಂಭವಿಸಲಿಲ್ಲ.

ಅವಳ ಮುಖ ಬಾಗಿದೆ. ಬಹುಶಃ ಮುಡಿಯಲ್ಲಿಟ್ಟದ್ದ ದೊಡ್ಡ ಹೂವಿನ ಚೆಂಡಿನ ಭಾರದಿಂದಾಗಿರಬೇಕು. ಅವಳ ನೇರ ಹುಬ್ಬುಗಳು ಅಲುಗಾಡುವುದಿಲ್ಲ. ಕಣ್ಣು ರೆಪ್ಪೆ ಗಂಭೀರವಾಗಿ ಅರ್ಧ ಮುಚ್ಚಿಕೊಂಡಿದೆ. ನಾನು ಅನೇಕ ಸಲ ಬಯಸಿದ್ದ ಆ ನೇರವಾದ ಎಸಳು ಮೂಗು ಇನ್ನೂ ಸ್ಪಷ್ಟವಾಗಿಯೇ ಕಾಣುವುದು. ಅಗಲವಾದ ಬೆವರುತ್ತಿರುವ ಹಣೆಯ ಮೇಲಿನ ತಲೆಕೂದಲು ಇಬ್ಭಾಗವಾಗಿ ಹರಡಿದೆ. ಮೈತುಂಬಿ ಬೆಳೆದಿದ್ದಾಳೆ. ಎದೆ ಉಬ್ಬಿ ಸೆಟೆದು ನಿಂತಿದೆ.

ಇದು ಕೊನೆಯ ಗಳಿಗೆ. ನಾನು ಇನ್ನು ಅವಳನ್ನು ಈ ರೀತಿ ನೋಡಬಾರದು, ವರ್ಣಿಸಬಾರದು. ಹೀಗೆಲ್ಲ ಕತೆ ಬರೆಯಬಾರದು. ಅವಳ ಕುರಿತು ಯಾರಿಗೂ ಹೇಳಬಾರದು. ಮತ್ತೆ?

ಅವಳನ್ನು ನಾನು ಮರೆಯಬೇಕು.

ನಾನು ಹುಟ್ಟಿದಂದಿನಿಂದ ಅವಳನ್ನು ನೋಡಿಲ್ಲವೆಂದು ಕಲ್ಪಿಸಬೇಕು.

ನೋಡಿದರೂ ಪರಸ್ತ್ರೀಯಾದ ಅವಳನ್ನು ಒಡಹುಟ್ಟಿದವಳೆಂದು ಭಾವಿಸಬೇಕು.

ಚಿತ್ತವಿಕಾರವಿರಕೂಡದು.

* *

ಇಲ್ಲ, ಮನುಷ್ಯನಾದ ನನಗೆ ಮಂಗನಂತಿರುವ ನನ್ನ ಮನಸನ್ನು ಅಷ್ಟು ಸುಲಭವಾಗಿ ಪರಿವರ್ತಿಸಲು ಸಾಧ್ಯವಿಲ್ಲ. ನಾನು ಅವಳನ್ನು ಇನ್ನು ನೋಡಲಿಕ್ಕಿಲ್ಲವೆಂದು ಪ್ರತಿಜ್ಞೆಮಾಡಿಕೊಳ್ಳಬಹುದು: ಆ ಪ್ರತಿಜ್ಞೆಯನ್ನು ಕಾರ್ಯರೂಪಕ್ಕೆ ತರಲು ಊಹುಬಿಟ್ಟು ಓಡಿಹೋಗಬಹುದು. ಆದರೆ ಆ ನೆನಪು ಅಳಿಯದು. ಅವಳ ಜೀವಂತ ಮೂರ್ತಿ ನನ್ನೊಳಗೆ ಉಳಿದಿದೆ. ಎಂಥ ಅಸೂಯೆ, ಎಂಥ ಕೋಪವೂ ಅದನ್ನು ನಾಶಮಾಡಲಾರದು. ಆದರ ಸಾವು ನನ್ನೊಡನೆ.

ಆದರ ತೀಕ್ಷ್ಣತೆ ಮಾತ್ರ ಬದಲಾಗಬಹುದು ಅಷ್ಟೆ.

ಸಮಾಜದ ಯಾವ ನಿರ್ಬಂಧಗಳೂ, ನೀತಿಶಾಸ್ತ್ರದ ಯಾವ ಬೋಧೆಯೂ ನನ್ನ ಅಂತರ್ಯದ ಮೇಲೆ ಪರಿಣಾಮಕಾರಿಯಾಗಲಿಕ್ಕಿಲ್ಲ. ಬಾಲಹೋದ ನರಿಯಹಾಗೆ ಈ ನನ್ನ ಸ್ವಭಾವವಿಲ್ಲರೆಲ್ಲೂ ಉಂಟೆಂದು ತೋರಿಸಿಕೊಡುವುದಿಲ್ಲ. ನನಗಿಂತ ಭಿನ್ನವಾದ ಅಪರಿಚಿತ ಈ ವೈವಿಧ್ಯಮಯ ಲೋಕದಲ್ಲಿ ಇರಬಹುದು.

ನನಗೆ ಆಸೆಯ ಹಕ್ಕು ಇಷ್ಟು ಇರುವಾಗ ಅವಳು ನನ್ನವಳಾಗಳೇಕೆ? ನನ್ನಕ್ಕ ಅವಳನ್ನು ಲಿಸುವಂಥ ರೂಪವಿಲ್ಲ. ಹಣ, ಐಶ್ವರ್ಯ ವೈಭವಗಳು ಅವಳನ್ನು ಇಲ್ಲವೇ ಅವಳ ಹೆತ್ತವರನ್ನು ಕೂಡ ಆಕರ್ಷಿಸಲು ಸಾಧ್ಯವಿಲ್ಲ. ಒಂದು ಹೆಣ್ಣನ್ನು ತನ್ನವಳನ್ನಾಗಿ ಮಾಡಲು ಸಾಮ್ರಾಜ್ಯ ಸಾಮ್ರಾಜ್ಯಗಳೊಳಗೆ ಯುದ್ಧವಾಗಿ ಲಕ್ಷೋಪಲಕ್ಷ ಜನರು, ದೇವತೆಗಳು, ರಾಕ್ಷಸರು, ಮಂಗಗಳು, ಆನೆಗಳು ಮತ್ತು ಕುದುರೆಗಳು ಸತ್ತುದಿದೆ. ತಮ್ಮ ಘನಸ್ಥಿಕೆ, ಅಧಿಕಾರ ಎಲ್ಲ ಬಿಟ್ಟು ಸಿಂಹಾಸನಗಳನ್ನು ಕೂಡ ತ್ಯಜಿಸಿದವರಿದ್ದಾರೆ. ಆದರೆ ನಾನು! ಇನ್ನೊಂದು ಹುಳದ ಬೆಂಬಲವಾದರೂ ಇರುವುದಂತಿರಲಿ, ನನ್ನದೇ ನನಗೆ ಬೆಂಬಲವಿಲ್ಲ! ಗುಡ್ಡವನ್ನು ದೂರದಿಂದಲೇ ನೋಡಿ ಹಿಮ್ಮೆಟ್ಟುವ [illegible] ವ್ಯಕ್ತಿ! ಕೆಲಸನೇನೂ ಸಿಗುವುದಿಲ್ಲವೆಂದು ಕೊರಗುತ್ತ ಇದ್ದುದನ್ನೇ ಕರಗಿಸುತ್ತ ಬಾಳುತ್ತಿರುವ ಅನ್ನಕತ್ತು! ಮತ್ತೆ ನನ್ನ ತ್ಯಾಗ: ನನ್ನಲ್ಲಿ ತ್ಯಜಿಸಲು ನನ್ನೊಂದು ದೇಹವಲ್ಲದೆ ಇನ್ನೇನೂ ಉಳಿದಿಲ್ಲ ಅದನ್ನು ತ್ಯಜಿಸಿ ಕಾರ್ಯಸಿದ್ಧಿಯಾದರೆ ಅದರಿಂದಾಗಿ ನನಗೇನೂ ಸುಖಸಿಗದು. ಬದಲಾಗಿ ನನ್ನ ಬಳಗದವರಿಗೆ ನಾಲ್ಕು ಮೊಳ ವಸ್ತ್ರ ಮತ್ತು ಎಂಟು ಮೋಟಿ ಕಟ್ಟಿಗೆಯ ಖರ್ಚು.

ನನಗೆ ಸಂತೈಸುವ ಮಿತ್ರರಿಲ್ಲ. ಸಹಾನುಭೂತಿಯನ್ನು ಬೀರುವ ಉದಾರಿಗಳು ಇಲ್ಲ. ಎಲ್ಲರೂ ಅವರವರಾಗಿ, ಅವರವರಿಗಾಗಿ, ಹುಲಿಗಳಂತೆ, ದನಗಳಂತೆ ಮತ್ತು ನಾಯಿಗಳಂತೆ ವರ್ತಿಸುತಿದ್ದಾರೆ.

ನನ್ನದೇನು ಅವರಿಗೆ ಗೊತ್ತು? ನಾನು ಅವರೆದುರು ಏನನ್ನಾದರೂ ಹೇಳಿದರೆ, ಬರಿ ಕ್ಷಮೆ, ಅಂತ್ಯವಿಲ್ಲದ ಸಾಮಾನು ಸರಬರಾಯಿ ಮಾಡುವ ಎತ್ತಿನ ಬಂಡಿಯ ಗಾಡಿಗಳಂತೆ ಅವರ ಸಮಸ್ಯೆಗಳು.

ಅಯ್ಯೋ ನನಗೆ ಮನಸ್ಸೇ ಗತಿ.

ಈಗ ನನ್ನಲ್ಲಿ ಸುಡುವ ಶಕ್ತಿಯಿರುತಿದ್ದರೆ ಜಗತ್ತನ್ನೀಗಲೇ ಸುಡುತಿದ್ದೆ— ನನ್ನನ್ನು ಮತ್ತು ಅವಳನ್ನು ಹೊರತಾಗಿ. ಇದಲ್ಲದೆ ಬೇರೆ ಯಾವ ರೀತಿಯ ಶಕ್ತಿಯಿರುತಿದ್ದರೂ ಅದನ್ನು ಈ ಸಮಯದಲ್ಲಿ ಉಪಯೋಗಿಸದೆ ಬಿಡುತಿದ್ದಿಲ್ಲ.

ಆದರೆ ನಾನು ನಿಶ್ಶಕ್ತ!

ನಾನು ಬಹಳ ಸಾಧು ಪ್ರಾಣಿ. ಸೌಜನ್ಯ—ವಿನಯಗಳಿಗಾಗಿಯೇ ಹೆಸರುವಾಸಿಯಾದವ. ಥೂ ನಾನೇನೂ ಅಕೃತ್ಯ ಮಾಡಲಾರೆ. . ಮತ್ತೆ ಹೇಗೆ ನಾನು ಈ ವಿಷಮ ಪರಿಸ್ಥಿತಿಯನ್ನು ಪರಿವರ್ತಿಸಬೇಕು? ನಾನು ಧ್ಯೇಯದಲ್ಲಿ ಪುರೋಗಾಮಿ. ಸಮಾಜವನ್ನು ಹಳಿಯುವವ: ಸಮಾಜದಿಂದ ಹಳಿಸಿಕೊಳ್ಳುವವ. ಈ ಮೊದಲೆ ಈ ಕುರಿತು ಅನೇಕ ಬಾರಿ ನನ್ನ ಅಭಿಪ್ರಾಯವನ್ನು ಜನರಿಗೆ ಬಯಲು ಮಾಡಿದ್ದೇನೆ:

"ಸಿಡಿಲಿನ ರವದಿಂ<br>
ಮಿಂಚಿನ ಜವದಿಂ<br>
ನೇಗಿಲು ಶಕ್ತಿಯು ನೆಕ್ಕಿದ ರೆಕ್ಕೆ ಕವು<br>
ಬೀಗದ ಬಾಗಿಲ ಒಡೆಯುತ ಬರುತಿದೆ"

ಆ ಶಕ್ತಿ ಮಾತ್ರ ನನ್ನಲ್ಲಿಲ್ಲ. ನನ್ನ ಶಕ್ತಿ ಬೀಗದ ಬಾಗಿಲನ್ನು ಒಡೆಯದು: ಅದನ್ನು ಕಂಡು ಅವಿಯಾಗಬಹುದು, ಇಲ್ಲವೇ ಹೆಪ್ಪುಗಟ್ಟಬಹುದು, ಅಷ್ಟೆ.

* *

ಸಮಾರಂಭ ಮುಗಿದಂತೆಯೇ. ಇನ್ನು ವಧೂವರರಿಬ್ಬರೂ ತೆರಳುವರು. ನೆರೆದವರೊಡನೆ ಬೀಳ್ಕೊಡುವ ಉಪಚಾರ ಪ್ರಾರಂಭವಾಯಿತು. ಅವರು ಹಿರಿಯರನ್ನೆಲ್ಲ ಕಾಲು ಮುಟ್ಟಿ ವಂದಿಸಬೇಕು.

ಅವಳನ್ನು ನನ್ನ ಹತ್ತಿರವೂ ತಂದರು. ಅವಳ ಮುಖ ನನಗೆ ಮಸಕು ಮಸಕಾಗಿ ಕಾಣುತಿತ್ತಷ್ಟೆ. ಅವಳ ಕಣ್ಣುಗಳಲ್ಲೂ ನೀರು ಹರಿಯುತಿತ್ತು. ನನ್ನ ಕಾಲುಗಳನ್ನು ಮಡಚಿ ಪಾದಗಳನ್ನು ಹೊರಗೆ ಕಾಣದಂತೆ ಮಾಡಿದ್ದೆ. ನನ್ನ ಪಾದಗಳನ್ನು ಮುಟ್ಟುವ ಸಾಹಸ ಅವಳು ಮಾಡಲಿಲ್ಲ— ಅವಳೊಟ್ಟಿಗಿದ್ದವರೂ ಮಾಡಿಸಲಿಲ್ಲ.

ನಾನು ಪ್ರಾಯದಲ್ಲಿ ಅವಳಿಗಿಂತ ತಿಂಗಳುಗಳ ದೊಡ್ಡಿಗನಾದರೂ ಹಿರಿಯನೆನ್ನುವುದಕ್ಕೆ ಸಂಶಯವಿಲ್ಲ. ಆದರೆ ನಾನು ಅವಳನ್ನು ಆಶೀರ್ವದಿಸಲು ಯೋಗ್ಯನೇ, ಎಂಬುದು ನನಗೆ ತಿಳಿಯದ ಸಂಗತಿ.

ನನ್ನನ್ನು ದಾಟಿ ಹೋಗುವಾಗ ಅವಳನ್ನು ಮಿಂಚಿನಂತೆ ನನ್ನ ಕಣ್ಣುಗಳು ಅನುಸರಿಸಿ[illegible] [illegible] ಒಕ್ಕ ಒಕ್ಕ [illegible] ನನ್ನನ್ನು ನೋಡಿ [illegible] [illegible]

[illegible] ಆ [illegible] ಹುಡುಗಿಯರು, ಅವಳ [illegible] ನೋಡುತಿರುವರು.

ನನಗೆ ಇನ್ನೂ ಅರ್ಥವಾಗದು [illegible] ನನ್ನನ್ನು ಕಂಡು ಹೋಳೆ [illegible] ಅಷ್ಟೇ, ಇಲ್ಲವೇ ಹಾಗೆಯೇ [illegible] [illegible] ಸಲ ಗಂಡನ [illegible] [illegible] ಅಳುವುದೊಂದು ಮಾಮೂಲು [illegible] ಎಂದು ನನಗೆ ಮೊದಲೇ ಗೊತ್ತಿತ್ತು. ಅಲ್ಲದೆ, ಅವಳು ನನ್ನನ್ನು ಕಂಡು [illegible] ಬೇಕಾದ ವಿಶೇಷ ಕಾರಣವಿಲ್ಲ.

[illegible] ನಿರಾಶೆಯಾಯಿತು.

[illegible] ಮನೆಯೊಳಗಿಂದ [illegible] ಬಿದ್ದುದನ್ನು ಯಾರೂ ತೋರಿಸಲಿಕ್ಕಿಲ್ಲ.

ಇನ್ನು ನನಗೆ ಅವಳ ಮತ್ತು ಅವಳ [illegible] ನಡುವಿನ ಸಂಬಂಧ [illegible] [illegible] ಗುಡ್ಡ ಅಲೆದೆ. [illegible] ರಾತ್ರಿಯಾಗಿತ್ತು.

[illegible] ಹಾಸಿಗೆ [illegible] ದಿನ ಅವಳನ್ನು ಅಲ್ಲಿ ಹಾಕುತಿದ್ದೆ! [illegible] ವರುಷಗಳು ಕಳೆದಿರಬಹುದು— [illegible] ಅವಳನ್ನು ಇಟ್ಟಿಸಕೊಡಗಿ. ಆ [illegible] ದಪ್ಪನ್ನ ಹಾಸಿಗೆ, ನನ್ನ ಈ ಸೀಳಪಾದ [illegible] ಇವನ್ನೆಲ್ಲ ಎಂದೂ ನಾನು ಮನಸಿನಲ್ಲೇ ಅವಳಿಗೆ ಅರ್ಪಿಸಿಯಾಗಿತ್ತು. ಮಾತ್ರವಲ್ಲ, ಅವನ್ನು ಅವಳು ಸ್ವೀಕರಿಸಿದ್ದಳೆಂದೂ ಕಲ್ಪಿಸಿದ್ದೆ.

ಪೂರ್ಣ ನಿದ್ರೆ ಬರಲಿಲ್ಲ. ಮನಸಿನಲ್ಲಿ ಉದ್ವೇಗ ಮಾತ್ರ [illegible] ಒಂದೇ ನವಣೆ ಮುಂದೆ ಸಾಗುತಿತ್ತು. ಹನ್ನೊಂದು. . .

ಇನ್ನೊಂದು ಚಿತ್ರ ಕಣ್ಣು ಮುಂದೆ. [illegible] ಆಗ ಒರಗಿಕೊಂಡಿರಬೇಕು; ಅವಳು [illegible] ತಗ್ಗಿಸಿ ಕುಳಿತುಕೊಂಡಿರಬೇಕು. [illegible] ಅವಳ ಮುಖವನ್ನು ಕೈಯಿಂದ ಮೇಲಕ್ಕೆತ್ತ ಪ್ರಯತ್ನಿಸುವನು, ಅವಳ ಹೆಗಲಿಗೆ ಕೈ [illegible] ವನು.

ಆಗ ಅವಳು!

ಸುತ್ತಲಿದ್ದ ಹೂಗಳ ಘಮಘಮ [illegible] ದಿಂದ ಉನ್ಮತ್ತಳಾಗಿರಬಹುದು. [illegible] ಏಕಾಂತದ ಸೊಗಸಿಗೆ ಮೈ [illegible] ಬೀಯುವ ಸೆಕೆಯನ್ನು ನಿವಾರಿಸಲು [illegible] ನಿಂದ ಗಾಳಿ ಹಾಕಿಕೊಳ್ಳಬಹುದು. [illegible] ಯಲ್ಲಿ ಸುರಿಯುತಿದ್ದ ಬೆವರಿನ ಕಣ [illegible] ಬೆರಳುಗಳಿಂದ ತೀಡುತ್ತಿರಬಹುದು. [illegible] ಯಲು ಕೂಡ ಅವಳಿಗೆ ಸಂಕೋಚ ಪ್ರಯ[illegible] ಬಹುದು.

ಒಂದು ವೇಳೆ ಅವಳು ನನ್ನನ್ನು [illegible] ಆಗ ಅತ್ತಿದ್ದರೆ?— ನನ್ನ ಚಿತ್ರ ಅವಳ [illegible] ಬರಬಹುದೆ? ಅವನ [illegible] [illegible] ನನ್ನ ಮೂಡಲಿಸಿ, [illegible] ಬಲಕದನ್ನು ಕೆಳಿಸು [illegible] [illegible] [illegible]!

ಇದೇ ಪಕೋಡ್ಡೇಗದ [illegible] ಸುತ್ತ ಸಿದ್ಧಕೋಡೆ.

ಮತ್ತೆಯೂ ದಿನಗಳು [illegible] ಸಾಗತೊಡಗಿದುವು.

ನನ್ನ ಸಂತಯ ತೀರಿಗೊಳ್ಳಲು [illegible] ಒಂದು ವರುಷ ಬೇಕಾಯಿತು: [illegible] [illegible]

---

## ಹೊಸ ಪುಸ್ತಕಗಳು

[illegible]

ಶ್ರೀ ಶಿವಾನಂದ ಮಂದಿರ

[illegible]

---

# ಆರ್. ಎಸ್. ಎಸ್ ಮೇಲಿನ ನಿರ್ಬಂಧ ದೂರಾಯಿತು

## ಪಂಡಿತ ಜವಾಹರಲಾಲರಿಂದ ಬಂಗಾಲ ಸಮಸ್ಯೆಗಳ ಪರಿಶೀಲನೆ— ಮಲೆನಾಡಿನ ಅಭಿವೃದ್ಧಿಯ ಅವಶ್ಯಕತೆ

ಹಿಂದುಸ್ಥಾನ ಸರಕಾರದವರು ಹಾಕಿದ ನಿರ್ಬಂಧಗಳೆಲ್ಲ ತಪ್ಪಿದ್ದರಿಂದ ಆರ್. ಎಸ್. ಎಸ್. ದ ಮೇಲೆ ಹಾಕಿದ ನಿರ್ಬಂಧವನ್ನು ೧೨ ನೇ ತಾರೀಖಿನ ದಿನ ತೆಗೆದುಹಾಕಲಾಗಿದೆ. ಪ್ರಸಿದ್ಧರಾದ ಗೋಳವಲಕರರನ್ನು ಬಂಧಮುಕ್ತರನ್ನಾಗಿಸಿದ್ದು ಉಳಿದವರನ್ನು ಬಂಧಮುಕ್ತಗೊಳಿಸಲಾಗುವದು. ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸಂಘದ ಘಟನೆಯನ್ನು ಮಾಡುವದಾಗಿ ಗೋಳವಲಕರರು ಆಶ್ವಾಸಿಸಿರುವರು. ಪ್ರಿಕ್ಯೂಟ ಘಟನೆಗೆ ನಿಷ್ಠೆಯನ್ನು ವ್ಯಕ್ತಪಡಿಸುವದಾಗಿಯೂ ರಾಷ್ಟ್ರಧ್ವಜಕ್ಕೆ ಗೌರವವನ್ನು ಸಲ್ಲಿಸುವದಾಗಿಯೂ ಹಿಂಸೆ ಹಾಗೂ ಗುಪ್ತಪದ್ಧತಿಗಳನ್ನು ಅನುಸರಿಸುವದಿಲ್ಲೆಂದೂ ಗೋಳವಲಕರರು ಆಶ್ವಾಸಿಸಿರುವರಲ್ಲದೆ ಸರಸಂಘ ಚಾಲಕನ ಹುದ್ದೆಗೆ ಚುನಾವಣೆಯನ್ನು ನಿರ್ಧರಿಸುವದಾಗಿಯೂ ಆಶ್ವಾಸನಕೊಟ್ಟಿದ್ದಾರೆ. ಮಧ್ಯಪ್ರಾಂತದ ಗೃಹಮಂತ್ರಿಗಳಾದ ಶ್ರೀ ಡಿ. ಪಿ. ಮಿಶ್ರರು ಈ ಆಶ್ವಾಸನವನ್ನೊಳಗೊಂಡ ಬರೆಹವನ್ನು ಸರದಾರರಿಗೆ ಒಪ್ಪಿಸಿದ್ದಾಗಿ ಅವರು ಆರ್. ಎಸ್. ಎಸ್. ದ ಮೇಲಿನ ನಿರ್ಬಂಧವನ್ನು ದೂರಮಾಡಲು ವಿಧಿಸಿದರು. ಈ ಸಂಸ್ಥೆಯು ಅಕ್ರಮವಾದುದರ ಹಿನ್ನೆಲೆ ಇಂತಿದೆ. ಮಹಾತ್ಮಾಗಾಂಧಿಯವರ ಕೊಲೆಯ ಅನಂತರ ಅಂದರೆ ೧೯೪೮ ನೇ ಫೆಬ್ರುವರಿ ೪ ನೇ ತಾರೀಖಿಗೆ ಈ ಸಂಸ್ಥೆಯನ್ನು ಅಕ್ರಮಗೊಳಿಸಲಾಯಿತು. ಆಗ ಸರಕಾರದ ಪರವಾಗಿ ಹೊರಡಿಸಲಾಗಿದ್ದ ಪ್ರಕಟನೆಯಲ್ಲಿ ಸಂಘದ ಮೇಲೆ ಕೊಳ್ಳೆ, ಕೊಲೆ, ಸುಲಿಗೆ, ದರೋಡೆ ಮೊದಲಾದ ಆರೋಪಗಳನ್ನು ಮಾಡಲಾಗಿತ್ತು. ಅನಂತರ ಪ್ರಾಂತೀಯ ಸರಕಾರಗಳೂ ಕೇಂದ್ರ ಸರಕಾರವೂ ಈ ನಿರ್ಬಂಧ ತೆಗೆಯುವದರ ಸಂಬಂಧವಲ್ಲ ವಿಚಾರ ಮಾಡಿದರೂ ಈ ವರೆಗೆ ನಿರ್ಬಂಧವು ಹಾಗೆಯೇ ಉಳಿದಿತ್ತು. ಅನಂತರ ಶ್ರೀ ಗೋಳವಲಕರರು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳನ್ನು ಕಾಣಲು ಪ್ರಯತ್ನಿಸಿದರೂ ಅದೆಲ್ಲ ನಿರರ್ಥಕವಾಗಿ ನವಂಬರ ೧೦ ರಂದು ಅವರನ್ನು ೧೮೧೮ ನೆ ಇಸ್ವಿಯ ಕಾಯಿದೆಯನ್ವಯ ಸ್ಥಾನಬದ್ಧತೆಯಲ್ಲಿಡಲಾಯಿತು. ಆರ್. ಎಸ್. ಎಸ್. ದವರು ಇಷ್ಟಕ್ಕೆ ಸುಮ್ಮನೆ ಕೂಡ್ರದೆ ದಿಸಂಬರ ೯ ಕ್ಕೆ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಸರಕಾರದವರು ಕೂಡಲೆ ಕ್ರಮ ಕೈಕೊಂಡು ಸುಮಾರು ೪೦ ಸಾವಿರದಷ್ಟು ಸ್ವಯಂಸೇವಕರನ್ನು ಸೆರೆಹಿಡಿದರು. ಅನಂತರ ಜನೆವರಿ ೨೦ ರಂದು ಸತ್ಯಾಗ್ರಹವು ಅನಿರ್ಬಂಧ ಹಿಂತೆಗೆದುಕೊಳ್ಳಲ್ಪಟ್ಟಿತು. ಎಪ್ರಿಲ ೮ ಕ್ಕೆ ಗೋಳವಲಕರರು ಸಂಘದ ಘಟನೆಯ ಕರಡನ್ನು ಸರಕಾರಕ್ಕೆ ಸಾದರಪಡಿಸಿದರು. ಆದರೆ ಅದರಲ್ಲಿ ಆಕ್ಷೇಪಾರ್ಹ ವಿಷಯಗಳಿದ್ದುದರಿಂದ ಸರಕಾರದವರು ಅದಕ್ಕೊಪ್ಪಲಿಲ್ಲ. ಹೀಗಾಗಿ ಮಾತುಕತೆ ಅಯಶಸ್ವಿಯಾದವು ಆದರೆ ಇತ್ತೀಚೆ ನಡೆದ ಮಾತುಕತೆಗಳಲ್ಲಿ ಗೋಳವಲಕರರು ಸರಕಾರಕ್ಕೆ ಸಮ್ಮತವಾಗುವಂತೆ ಆಶ್ವಾಸನಕೊಟ್ಟದ್ದರಿಂದ ನಿರ್ಬಂಧವು ಹಿಂತೆಗೆದುಕೊಳ್ಳಲ್ಪಟ್ಟು ಆರ್. ಎಸ್. ಎಸ್. ಕಾರ್ಯಕರ್ತರನ್ನೆಲ್ಲ ಬಿಡುಗಡೆಮಾಡಬೇಕೆಂಬ ಹುಕುಮು ಹೊರಟಿತು.

### ಕಲಕತ್ತೆಯಲ್ಲಿ ಜವಾಹರರು

ಹಿಂದುಸ್ಥಾನದ ಮುಖ್ಯಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಇವರು ೧೨ ನೇ ತಾರೀಖಿನ ದಿನ ವಿಮಾನದಿಂದ ಕಲಕತ್ತೆಗೆ ಹೋದರು. ಪಶ್ಚಿಮಬಂಗಾಲದ ಕಾಂಗ್ರೆಸ್ಸಿಗರಲ್ಲಿ ಉಂಟಾದ ಮತಭೇದ, ಆಡಳಿತೆಯಲ್ಲಿ ಬಂದ ಒಂದು ಬಗೆಯ ಶೈಥಿಲ್ಯ ಮತ್ತು ಕಾಂಗ್ರೆಸ ವಿರೋಧಕ ಸಂಸ್ಥೆಗಳು ನಡೆಸಿದ ಪುಂಡಾಟಿಕೆ ಮುಂತಾದವುಗಳನ್ನು ಪ್ರತ್ಯಕ್ಷವಾಗಿ ಪರೀಕ್ಷಿಸಿ ಉಪಾಯ ಯೋಜನೆ ಮಾಡುವುದೇ ಪಂಡಿತರು ಕಲಕತ್ತೆಗೆ ಹೋದುದರ ಉದ್ದೇಶವೆಂದು ಹೇಳಬೇಕಾಗುವದು. ಇತ್ತೀಚಿನ ಶಾಸನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ದೊರೆತ ಸೋಲು ಅಲ್ಲಿನ ವಿಷಮ ಪರಿಸ್ಥಿತಿಯ ನಿದರ್ಶಕವಾಗಿದೆ. ಅಲ್ಲದೆ ಕಮ್ಯುನಿಸ್ಟರು ನಡೆಸಿದ ದಾಂಧಲೆಯಿಂದಲೂ ನಾಗರಿಕರು ಜರ್ಜರಿತರಾಗತೊಡಗಿದ್ದಾರೆ. ... ಪರಿಹರಿಸುವದು ಅವಶ್ಯವೆಂದು ... ಮುಖ್ಯಮಂತ್ರಿಗಳು ಸ್ವತಃ ಕಲಕತ್ತೆಗೆ ಹೋಗಿರುವರು. ಶಾಮಬಜಾರದಲ್ಲಿ ಕೆಲ ಕಿಡಿಗೇಡಿಗಳು ನಡೆಸಿದ ಉಪದ್ವ್ಯಾಪವನ್ನು ಬಿಟ್ಟರೆ ಕಲಕತ್ತೆಯಲ್ಲಿ ಪಂಡಿತ ಜವಾಹರಲಾಲರಿಗೆ ಅಪೂರ್ವ ಸ್ವಾಗತವನ್ನೀಯಲಾಯಿತು. ಪಂಡಿತರ ಭಾಷಣಾದಿಗಳನ್ನು ಬಹಿಷ್ಕರಿಸಬೇಕೆಂದು ಕಾಂಗ್ರೆಸ್ ವಿರೋಧಕ ಸಂಸ್ಥೆಗಳು ನಿರ್ಧರಿಸಿರುವವು. ಪಂಡಿತ ಜವಾಹರಲಾಲರು ತಾವು ಬಂದ ದಿವಸದಿಂದಲೆ ಕಾಂಗ್ರೆಸ್ಸಿನಲ್ಲಿಯ ವಿವಿಧ ಗುಂಪುಗಳೊಡನೆ ಪರಿಸ್ಥಿತಿಯ ಬಗ್ಗೆ ವಿಚಾರವಿನಿಮಯ ನಡೆಸಿದ್ದಾರೆ. ಪಶ್ಚಿಮ ಬಂಗಾಲ ಸರಕಾರದವರು ತಮ್ಮನ್ನೆದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನೊಳಗೊಂಡ ಮನವಿಯೊಂದನ್ನು ಮುಖ್ಯಮಂತ್ರಿಗಳಿಗೊಪ್ಪಿಸಿದರು. ಕಾಂಗ್ರೆಸ್ಸಿಗರು ವ್ಯಾಪಾರ ವ್ಯವಹಾರ ಮೊದಲಾದವುಗಳಲ್ಲಿ ಲಾಭ ಪಡೆಯಬೇಕೆಂಬ ಆಸೆಯಿಂದ ವಿಧಾಯಕ ಕಾರ್ಯದತ್ತ ಅಲಕ್ಷ್ಯಮಾಡಿದ್ದರಿಂದಲೆ ಜನತೆಯ ಅಪ್ರೀತಿಗೆ ಅವರು ಪಾತ್ರರಾಗಬೇಕಾಯಿತೆಂದು ಈ ಮನವಿಯಲ್ಲಿ ಹೇಳಲಾಗಿದೆ. ಹಲವು ನಿವಾರಣೋಪಾಯಗಳೂ ಈ ಮನವಿಯಲ್ಲಿ ಸೂಚಿತವಾಗಿವೆ. ಶ್ರೀ ಬಸೂ ಇವರು ಪೂರ್ವ ಬಂಗಾಲದಲ್ಲಿಯ ಪರಿಸ್ಥಿತಿಯನ್ನು ವಿವರಿಸಿದರು. ಹುಗಳಿ ಬರದ್ವಾನ ವಿಭಾಗದ ಕಾಂಗ್ರೆಸ್ಸಿಗರು ಮುಖ್ಯ ಮಂತ್ರಿಗಳನ್ನು ಕಂಡು ಪ್ರಾಂತೀಯ ಕಾಂಗ್ರೆಸ್ಸು ಕಾಂಗ್ರೆಸ್ಸಿಗರೆಲ್ಲರ ಪ್ರತಿನಿಧಿತ್ವ ಪಡೆದಿಲ್ಲವಾದ್ದರಿಂದ ಪರಿಸ್ಥಿತಿ ಹದಗೆಟ್ಟಿದೆಯೆಂದು ಅಭಿಪ್ರಾಯ ಪಟ್ಟರಲ್ಲದೆ ಶಾಸನಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಉಂಟಾದ ಸೋಲಿಗೆ ಚುನಾವಣೆಯನ್ನು ವ್ಯವಸ್ಥಿತವಾಗಿ ಹೋರಾಡದಿದ್ದುದೆ ಕಾರಣವಾಗಿದೆಯಲ್ಲದೆ ಸದ್ಯದ ಮಂತ್ರಿ ಮಂಡಳದ ವಿರುದ್ಧ ಅವಿಶ್ವಾಸದ ದ್ಯೋತಕವಲ್ಲವೆಂದೂ ಅವರು ಹೇಳಿದರು. ಕೂಲಿಕಾರರ ಪರವಾಗಿಯೂ ಅವರಿಗೆ ಮನವಿಯನ್ನು ಸಮರ್ಪಿಸಲಾಯಿತು. ಸರಕಾರೀ ಭವನದಲ್ಲಿ ಶಾಸನ ಸಭಾ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಪಂ. ಜವಾಹರಲಾಲರು ದೇಶದಲ್ಲಿಯ ಸದ್ಯದ ಗಂಭೀರ ಪರಿಸ್ಥಿತಿಯನ್ನು ವಿಶೇಷತಃ ಪಶ್ಚಿಮ ಬಂಗಾಲದಲ್ಲಿಯ ವಿಷಮ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಜನತೆಯ ಬೆಂಬಲ ದೊರೆಯುವಂತೆ ವರ್ತಿಸಬೇಕೆಂದು ಕೇಳಿಕೊಂಡರು. ದಿಲ್ಲಿಗೆ ಮರಳಿದ ಬಳಿಕ ಸಹಕಾರಿಗಳೊಡನೆ ವಿಚಾರ ವಿನಿಮಯ ಮಾಡಿ ಬಂಗಾಲ ಸಮಸ್ಯೆಯ ಪರಿಹಾರೋಪಾಯಗಳನ್ನು ಸೂಚಿಸುವದಾಗಿ ಆಶ್ವಾಸಿಸಿದರು.

### ಕಮ್ಯುನಿಸ್ಟರಿಂದ ಗಂಡಾಂತರ

ಹದಿನಾಲ್ಕನೆಯ ತಾರೀಖಿನ ದಿನ ಸಾಯಂಕಾಲ ೪-೧೫ ಗಂಟೆಗೆ ಪಂಡಿತ ಜವಾಹರಲಾಲರು ಬ್ರಿಗೇಡ ಪರೇಡ ಗ್ರೌಂಡಿನಲ್ಲಿ ಸೇರಿದ್ದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಗವರ್ನರರಾದ ಡಾ. ಕೈಲಾಸನಾಥ ಕಟಜು ಇವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಮಂತ್ರಿಗಳು ದೇಶದಲ್ಲಿಯ ವಿಶೇಷತಃ ಬಂಗಾಲದಲ್ಲಿಯ ಸದ್ಯದ ಪರಿಸ್ಥಿತಿಯನ್ನು ವಿಮರ್ಶಿಸಿ ಈ ಪ್ರಸಂಗದಲ್ಲಿ ಬಂಗಾಲಿಗಳು ಏನು ಮಾಡಬೇಕೆಂಬದನ್ನು ತಿಳಿಸಿದರು. ಕಮ್ಯುನಿಸ್ಟರ ಉಪಟಳವನ್ನು ಧೈರ್ಯದಿಂದ ಎದುರಿಸಿ ಹೋರಾಡಿರಿ; ಅವಿಚಾರಿ ಯುವಕರು ಬಾಂಬು ಒಗೆಯುವದರಿಂದ ಇಲ್ಲವೆ ಇತರ ಶಸ್ತ್ರಾಸ್ತ್ರಗಳನ್ನುಪಯೋಗಿಸುವದರಿಂದ ಬೆದರಿ ಹಿಂಜರಿಯಬೇಡಿರಿ. ಹಿಂಸೆಯಿಂದ ಸರಕಾರವನ್ನು ಬದಲಿಸುವದು ಅಶಕ್ಯವಾಗಿದೆ ಎಂದು ಮುಂತಾಗಿ ಹೇಳಿದರು. ನಾಗರಿಕ ಹಕ್ಕುಗಳು ದೊರೆತಿಲ್ಲವೆಂದು ಕೆಲವರು ಕೂಗಾಡುತ್ತಿರುವರು. ಆದರೆ ಅವರು ನಿಜವಾದ ನಾಗರಿಕ ಹಕ್ಕುಗಳನ್ನು ಬೇಡುತ್ತಿಲ್ಲ. ತಮ್ಮದೇ ಆದ ಮಾರ್ಗವನ್ನು ಅವರು ಅನುಸರಿಸುತ್ತಿದ್ದಾರೆ. ಹೀಗಾದರೆ ಜರ್ಮನಿಗೆ ಹಿಟ್ಲರನಿಂದೊದಗಿದ ದುರ್ದೈವವು ಭಾರತಕ್ಕೂ ಒದಗುವದು ಎಂದು ಅಭಿಪ್ರಾಯಪಟ್ಟರು. ಅನೀತಿ ಮಾರ್ಗದಿಂದ ಹಣ ಗಳಿಸುವದು ಸರಕಾರದಲ್ಲಿ ಅಷ್ಟೇ ಅಲ್ಲ ಸರಕಾರದ ಹೊರಗೂ ಇದೆ. ಯುದ್ಧ ನಡೆದಾಗಲೂ 'ಹಣ-ಕಂಡು' ಬರುತಿಟ್ಟುಕೊಂಡ ಯುದ್ಧ ಮುಗಿದ ಅನಂತರವೂ ಇದು ತಲೆದೋರಿದೆ. ಬರಗಾಲದ ಬವಣೆಯನ್ನು ಬಂಗಾಲಿಗಳು ಅನುಭವಿಸುತ್ತಿರುವಾಗ ಕೂಡ ಅನೇಕರು ಕಳ್ಳಪೇಟೆಯಿಂದ ಹಣಗಳಿಸಿದರು. ನಾವೆಲ್ಲ ತುರಂಗದಲ್ಲಿ ಇದ್ದಾಗ ಕಮ್ಯುನಿಸ್ಟ ಪಕ್ಷವು ಬ್ರಿಟಿಶರ ಸಹಾಯದಿಂದ ಮುಂದೆ ಬಂದಿದೆ. ಜನತೆ ಇದನ್ನು ಮರೆತಿದೆ. ಕಳ್ಳಪೇಟೆ, ಲಂಚಗುಳಿತನ ಇವನ್ನು ಹೋಗಲಾಡಿಸುವದು ಅತ್ಯವಶ್ಯವಾಗಿದೆ. ಇದರಲ್ಲಿ ಜನತೆ ನನ್ನೊಡನೆ ಸಹಕರಿಸಬೇಕು. ಕಮ್ಯುನಿಜಂ ತತ್ವಗಳನ್ನು ನಾನೂ ಅಭ್ಯಾಸ ಮಾಡಿದ್ದೇನೆ ಆದರೆ ಕಲಕತ್ತೆಯಲ್ಲಿ ಕಮ್ಯುನಿಜಂನ ಹೆಸರಿನಲ್ಲಿ ನಡೆದ ಘಟನೆಗಳು ಅವರ ತತ್ವಕ್ಕೇ ವಿರೋಧಕವಾಗಿವೆ. ಹೀಗೆಯೆ ನಡೆದದ್ದಾದರೆ ಹಿಂಸೆಯಲ್ಲಿ ಇವರ ಪರ್ಯವಸಾನವಾಗುವದು. ಕಲಕತ್ತೆಯಲ್ಲಿ ೪೦-೫೦ ಲಕ್ಷ ಜನರು ಇದ್ದಾರೆ. ಹೀಗೆಯೆ ನಡೆಯಗೊಟ್ಟರೆ ನಗರದಲ್ಲಿ ಇರುವದೆ ಶಕ್ಯವಾಗಬಹುದು, ಕೇವಲ ಪೋಲೀಸರ ಇಲ್ಲವೆ ಸೈನಿಕರ ಸಹಾಯದಿಂದ ಶಾಂತಿಯನ್ನು ಕಾಪಾಡುವದು ಶಕ್ಯವಿಲ್ಲ ಎಂದೂ ಹೇಳಿದರು. ಅನಂತರ ನೆಹರು ಇವರು ಪ್ರಾಂತಗಳ ಗಡಿ ಪ್ರಶ್ನೆಯನ್ನು ಈಗ ಎತ್ತಬೇಡಿರೆಂದು ನಿವೇದಿಸಿದರು. ರಾಷ್ಟ್ರದ ಭದ್ರತೆಗಾಗಿ ಕಾಂಗ್ರೆಸ್ಸು ಅಗತ್ಯವೆಂಬುದನ್ನು ಪ್ರತಿಪಾದಿಸುತ್ತ ಕಾಂಗ್ರೆಸ್ಸು ಸೇವಾಭಾವನೆಯನ್ನು ಬಿಟ್ಟುಗೊಟ್ಟರೆ ತಂತಾನೇ ಮಾಯವಾಗುವದೆಂದು ಹೇಳಿದರು. ಸರಕಾರವನ್ನು ಬದಲಿಸುವ ರಾಜಮಾರ್ಗವನ್ನು ವಿವರಿಸುತ್ತ ಬರುವ ಚುನಾವಣೆಗಳ ಮುಖಾಂತರ ಜನತೆ ಬೇಕಾದ ಸರಕಾರವನ್ನು ರಚಿಸಿಕೊಳ್ಳಲೆಂದು ಹೇಳಿದರು. ಕೊನೆಯಲ್ಲಿ ಅವರು ರಾಷ್ಟ್ರಪುನಾರಚನೆಯ ಅವಶ್ಯಕತೆಯನ್ನು ಪ್ರತಿಪಾದಿಸಿದರು. ಡಾ. ಕಟಜು ಇವರು ಅಭಿನಂದನೆಗಳನ್ನು ಸಲ್ಲಿಸಿದ ಬಳಿಕ ಸಭಾಕಾರ್ಯ ಕೊನೆಗಂಡಿತು.

### ಪಂ. ಜವಾಹರಲಾಲರನ್ನು ಕೊಲ್ಲುವ ಪ್ರಯತ್ನ?

ತಾ. ೧೪ಕ್ಕೆ ನೆಹರು ಇವರು ವ್ಯಾಸಪೀಠವನ್ನೇರುವಾಗ ಸುಮಾರು ನೂರು ಯಾರ್ಡುಗಳ ಅಂತರದ ಮೇಲೆ ಭಯಂಕರ ಸ್ಫೋಟ ಕೇಳಬಂದಿತು. ಈ ಬಾಂಬಿನ ಸ್ಫೋಟದಿಂದ ಒಬ್ಬ ಪೋಲೀಸನು ಮರಣ ಹೊಂದಿದ್ದಲ್ಲದೆ ೩-೪ ಜನರಿಗೆ ಗಾಯಗಳಾದವು. ಅನಂತರ ಜವಾಹರಲಾಲರು ಭಾಷಣ ಮುಗಿಸಿಕೊಂಡು ಸರಕಾರೀ ಭವನಕ್ಕೆ ಮರಳುವಾಗ ತುಂಬಿದ ಪಿಸ್ತೂಲು ಹಿಡಿದುಕೊಂಡ ಯುವಕನೊಬ್ಬನು ದ್ವಾರದಲ್ಲಿ ಅವರು ಬರುವ ದಾರಿ ಕಾಯುತ್ತ ನಿಂತದ್ದು ಕಂಡು ಬಂದಿತು. ಅಲ್ಲಿ ಕೆಲಸದ ಮೇಲೆ ಇದ್ದ ಸ್ಪೆಶಲ್ ಬ್ರ್ಯಾಂಚದ ಡೆ. ಪೊ. ಕಮೀಶನರರು ಈ ತರುಣನನ್ನು ಪ್ರಶ್ನಿಸಲಾಗಿ ಅವನು ಮೂರು ಗುಂಡುಗಳನ್ನು ಹಾರಿಸಿದನು, ಗುರಿತಪ್ಪಿದ್ದರಿಂದ ಕಮೀಶನರರಿಗೆ ಗಾಯವಾಗಲಿಲ್ಲ. ಅಶ್ವಾರೋಹಿ ಸಾರ್ಜಂಟನೊಬ್ಬನು ಹಿಂದಿನಿಂದ ಬಂದು ಯುವಕನ ಮೇಲೆ ಗುಂಡು ಹಾರಿಸಿ ಪಿಸ್ತೂಲು ಸಹಿತ ಅವನನ್ನು ಹಿಡಿದನು.

### ಆಹಾರ ಸಮಸ್ಯೆಯ ಭೀಕರತೆ

ದೇಶದಲ್ಲಿಯ ಭೀಕರ ಆಹಾರ ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸಿ ರಾಷ್ಟ್ರವನ್ನು ಸ್ವಾವಲಂಬಿಯನ್ನಾಗಿ ಮಾಡುವತ್ತ ಹಿಂದುಸ್ಥಾನ ಸರಕಾರವೀಗ ವಿಶೇಷ ಲಕ್ಷ್ಯ ಹಾಕಿದೆ. ಮಧ್ಯಪ್ರಾಂತ ಸರಕಾರದ ಆಹಾರ ಮಂತ್ರಿಗಳೂ ಆಹಾರ ಸಮಸ್ಯೆಯಲ್ಲಿ ವಿಶೇಷ ತಜ್ಞರೂ ಆಗಿರುವ ಶ್ರೀ ಆರ್. ಕೆ. ಪಾಟೀಲರನ್ನು ಆಹಾರ ಕಮೀಶನರರನ್ನಾಗಿ ನೇಮಿಸಲಾಗಿದೆ. ಅವರು ಇಷ್ಟರಲ್ಲಿಯೇ ಅಧಿಕಾರ ಸ್ವೀಕರಿಸಿ ತಮ್ಮ ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವರು. ಅವರು ಈಗಾಗಲೇ ಪತ್ರಿಕಾಕರ್ತರಿಗೆ ಕೊಟ್ಟ ಸಂದರ್ಶನದಲ್ಲಿ ತಮ್ಮ ಕಾರ್ಯಪದ್ಧತಿಯ ರೂಪರೇಖೆಗಳನ್ನು ನಿವೇದಿಸಿದ್ದಾರೆ. ಆಹಾರ ಸಮಸ್ಯೆಯನ್ನು ಕೂಡಲೆ ಬಿಡಿಸುವದರ ಮೇಲೆಯೆ ನಮ್ಮ ಸ್ವಾತಂತ್ರ್ಯದ ಅಸ್ತಿತ್ವವು ಅವಲಂಬಿಸಿದೆಯೆಂಬ ಬೀಜ ಮಂತ್ರವನ್ನು ಅವರು ಪತ್ರಿಕಾಕರ್ತರಿಗೆ ಹೇಳಿ ತಮ್ಮ ಯೋಜನೆಗಳನ್ನು ದಿಲ್ಲಿಯಲ್ಲಿಯ ತಮ್ಮ ಸಹಕಾರಿಗಳಿಗೆ ತಿಳಿಸಿ ಅವರು ಒಪ್ಪಿದ ನಂತರ ಅವನ್ನು ಬಳಕೆಯಲ್ಲಿ ತರಲಾಗುವದೆಂದೂ ಹೇಳಿದರು. ಈ ಪ್ರಶ್ನೆ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಸಹಕಾರವನ್ನು ವಿಶೇಷವಾಗಿ ಅವಲಂಬಿಸಿರುವದರಿಂದ ಆ ಬಗೆಯ ಅವಶ್ಯಕ ಸಹಕಾರವನ್ನು ದೊರಕಿಸುವದು ಅವಶ್ಯವಾಗಿದೆಯೆಂದೂ ಅವರು ಹೇಳಿದರು. ಅಧಿಕ ಆಹಾರೋತ್ಪಾದನೆ, ಆಹಾರ ಧಾನ್ಯ ಹಾಳಾಗದಂತೆ ನೋಡಿಕೊಳ್ಳುವದು, ಅವಶ್ಯವೆನಿಸಿದರೆ ರೂಢಿಯ ಆಹಾರಗಳನ್ನು ಬದಲಿಸುವದು ಮೊದಲಾದ ವಿಷಯಗಳಲ್ಲಿ ಸಾರ್ವಜನಿಕರ ಮನವೊಲಿಸುವಲ್ಲಿ ಪತ್ರಿಕಾಕರ್ತರು ಅವಶ್ಯವಾದ ಸಹಾಯವನ್ನು ಮಾಡಬಲ್ಲರೆಂದು ಕಮೀಶನರರು ಅಭಿಪ್ರಾಯಪಟ್ಟು ಆ ಬಗೆಯ ಸಹಾಯ ಸಹಕಾರಗಳನ್ನು ನೀಡಲು ಬಿನ್ನವಿಸಿಕೊಂಡರು. ದೃಢ ನಿರ್ಧಾರದಿಂದ ಎಲ್ಲರೂ ಪ್ರಯತ್ನಿಸಿದರೆ ಆಹಾರ ಸ್ವಾವಲಂಬನದ ಈ ಧ್ಯೇಯವನ್ನು ಸಾಧಿಸುವದೇನು ಕಠಿಣವಾಗದೆಂದೂ ಅವರು ಅಭಿಪ್ರಾಯಪಟ್ಟರು. ಆಹಾರ ಕಮೀಶನರರ ಈ ಗುರಿಯು ಸಾಧಿಸಿ ರಾಷ್ಟ್ರವು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಬೇಕಾದರೆ ಜನತೆಯ ಹಾರ್ದಿಕ ಸಹಕಾರವು ಅವಶ್ಯವೆಂದು ಪ್ರತ್ಯೇಕ ಹೇಳಬೇಕಿಲ್ಲ. ಸರಕಾರೀ ಅಧಿಕಾರಿಗಳು ಎಷ್ಟೇ ಉಪಯುಕ್ತ ಯೋಜನೆಗಳನ್ನು ಗೊತ್ತುಪಡಿಸಿದರೂ ಸಾರ್ವಜನಿಕರ ಸಹಾಯ ಸಹಕಾರ ಅವರಿಗೆ ಸಿಕ್ಕದಿದ್ದರೆ ಅವೆಲ್ಲ ನಿರರ್ಥಕವಾಗಿ ಹೊಳೆಯಲ್ಲಿ ಹೋಮ ಮಾಡಿದಂತಾಗುವದು. ಆದುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಭಾರತೀಯರು ತಮ್ಮ ಕರ್ತವ್ಯವನ್ನು ನೆನೆದುಕೊಂಡು ವರ್ತಿಸಿ ರಾಷ್ಟ್ರವನ್ನು ಸದ್ಯದ ಆಹಾರ ಕೊರತೆಯಿಂದ ಪಾರು ಮಾಡಿದ ಶ್ರೇಯಸ್ಸಿಗೆ ಪಾತ್ರರಾಗಬೇಕಲ್ಲದೆ ಬಲು ಪ್ರಯಾಸದಿಂದ ಗಳಿಸಿದ ಸ್ವಾತಂತ್ರ್ಯಕ್ಕೆ ಭದ್ರವಾದ ತಳಹದಿಯನ್ನು ಹಾಕಿ ಕೃತಕೃತ್ಯರಾದ ಪುಣ್ಯವನ್ನು ಪಡೆಯಬೇಕು.

### ಮಲೆನಾಡಿನ ಅಭಿವೃದ್ಧಿ

ಸಂಪತ್ಸಮೃದ್ಧಿಯಿಂದೊಡಗೂಡಿದ ಮಲೆನಾಡಿನ ಅಭಿವೃದ್ಧಿಯತ್ತ ಸರಕಾರದ ಮತ್ತು ಸಾರ್ವಜನಿಕರ ಲಕ್ಷ್ಯ ಇತ್ತೀಚೆ ಎಳೆಯಲ್ಪಟ್ಟದ್ದು ಸಂತೋಷದ ಸಂಗತಿಯಾಗಿದೆ. ಕಳೆದ ವಾರ ಹೊಸದಿಲ್ಲಿಯಲ್ಲಿ ಒಕ್ಕಲತನ ಮಂತ್ರಿ ಶ್ರೀ ಜಯರಾಮದಾಸ ದೌಲತರಾಮರ ಅಧ್ಯಕ್ಷತೆಯಲ್ಲಿ ಮಲೆನಾಡ ಪರಿಷತ್ತೊಂದು ಕೂಡಿತ್ತು. ಇದಕ್ಕೆ ಮುಂಬಯಿ ಮೈಸೂರು ಒಕ್ಕಲತನ ಮಂತ್ರಿಗಳೂ ಶ್ರೀ ಎಸ್. ಪಿ. ಕೃಷ್ಣಮೂರ್ತಿರಾಯರು ಮತ್ತು ಕೊಡಗಿನ ಕಮೀಶನರರೂ ಮೊದಲಾದವರು ಬಂದಿದ್ದರು. ಆಹಾರ ಕೊರತೆಯ ಈ ಸಮಯದಲ್ಲಿ ಮಲೆನಾಡನ್ನು ಆಹಾರೋತ್ಪಾದನೆಯ ಕಾರ್ಯದಲ್ಲಿ ಉಪಯೋಗಿಸಿಕೊಳ್ಳುವದು ಅತ್ಯಗತ್ಯವಾಗಿದೆಯೆಂದು ಈ ಸಭೆಯಲ್ಲಿ ಸೂಚಿಸಲಾಯಿತು. ಮಲೆನಾಡಿನ ಅಭಿವೃದ್ಧಿಗಾಗಿ ಪ್ರಾಂತೀಯ ಹಾಗು ಸಂಸ್ಥಾನ ಮಂಡಲಗಳನ್ನು ಸ್ಥಾಪಿಸಬೇಕು. ಯೋಜನೆಯನ್ನು ಸಿದ್ಧಪಡಿಸಿ ಅದನ್ನು ಕಾರ್ಯಕಾರಿ ಮಾಡಬೇಕು ಎಂದು ಸೂಚಿಸಲಾಯಿತು. ಉತ್ತರಕನ್ನಡ ದಕ್ಷಿಣಕನ್ನಡ ಜಿಲ್ಲೆಗಳು ಮೈಸೂರು ಸಂಸ್ಥಾನ ಪ್ರದೇಶ ಮತ್ತು ಕೊಡಗು ಕೂಡಿ ೨೧ ಸಾವಿರ ಚದುರು ಮೈಲು ವಿಸ್ತಾರವಾಗಿರುವ ಈ ಮಲೆನಾಡಿನ ಅಭಿವೃದ್ಧಿಯಾದರೆ ಸಂಪತ್ಸಮೃದ್ಧವಾದ ಈ ಪ್ರದೇಶದಲ್ಲಿ ಮೊದಲಿನಂತೆ ಜನವಸತಿ ಹೆಚ್ಚಿ ಆಹಾರೋತ್ಪಾದನೆಯೂ ಭರದಿಂದ ಆಗಬಲ್ಲುದೆಂದು ಆಶಿಸಲಾಗಿದೆ. ಈ ಮಲೆನಾಡಿನಲ್ಲಿ ೧೫೦-೩೦೦ ಇಂಚುಗಳವರೆಗೆ ಮಳೆ ಬೀಳುತ್ತದೆ. ಇಲ್ಲಿಯ ಅನೇಕ ಹೊಳೆ ಕೆರೆ ಕಾಲುವೆಗಳನ್ನು ನೀರಾವರಿಗಾಗಿ ಉಪಯೋಗಿಸಬಹುದಾಗಿದೆ. ಚಳಿಜ್ವರದ ಹಾವಳಿ ಇಲ್ಲಿ ಹೆಚ್ಚಾಗಿದ್ದುದರಿಂದ ಮತ್ತು ಸಂಪರ್ಕ ಸೌಕರ್ಯ ಹೆಚ್ಚಿಗಿಲ್ಲದ್ದರಿಂದ ಈ ಪ್ರದೇಶದ ಅಭಿವೃದ್ಧಿಗೆ ಬಹಳ ಅಡ್ಡಿಯಾಗಿದೆ. ಅಲ್ಪಕಾಲಾವಧಿ ದೀರ್ಘಕಾಲಾವಧಿ ಹೀಗೆ ಅಭಿವೃದ್ಧಿಯ ಯೋಜನೆಗಳನ್ನು ಗೊತ್ತುಪಡಿಸಿ ಅವನ್ನು ಕಾರ್ಯರೂಪದಲ್ಲಿ ತಂದುದಾದರೆ ನಿರೀಕ್ಷಿಸಿದ್ದಕ್ಕಿಂತ ಬೇಗ ಈ ಪ್ರದೇಶದ ಅಭಿವೃದ್ಧಿಯಾಗಬಲ್ಲುದು. ಮಲೆನಾಡ ಅಭಿವೃದ್ಧಿಯ ಕೇಂದ್ರ ಮಂಡಲವೊಂದನ್ನು ಸ್ಥಾಪಿಸಬೇಕು. ಈ ಮಂಡಲದಲ್ಲಿ ಪ್ರಾಂತಗಳ ಹಾಗು ಸಂಸ್ಥಾನಗಳ ಮಂತ್ರಿಗಳೂ ಸರಕಾರೇತರ ಪ್ರತಿನಿಧಿಗಳೂ ಇರಬೇಕು ಮತ್ತು ಇದು ಮಲೆನಾಡಿನ ಅಭಿವೃದ್ಧಿಗಾಗಿ ಪ್ರಯತ್ನಿಸಬೇಕು ಎಂದು ಕೇಳಿಕೊಳ್ಳಲಾಯಿತು. ಇದಲ್ಲದೆ ಬೇರೆ ಬೇರೆ ಪ್ರಾಂತ ಹಾಗು ಸಂಸ್ಥಾನಗಳ ಯೋಜನಾ ಸಮಿತಿಗಳನ್ನು ನಿಯಮಿಸಬೇಕು. ಕೇಂದ್ರ ಸರಕಾರವು ಮಲೆನಾಡಿನ ನಿರೀಕ್ಷಣೆ ನಡೆಸಿ ಎರಡು ತಿಂಗಳೊಳಗಾಗಿ ಒಂದು ತಾತ್ಪೂರ್ತಿಕ ವರದಿಯನ್ನು ಒಪ್ಪಿಸಬೇಕು. ಅಂದರೆ ಪ್ರಾಸ್ತಾವಿಕ ಕಾರ್ಯವನ್ನು ಪ್ರಾರಂಭಿಸಲು ಅನುಕೂಲವಾಗುವದೆಂದು ಸೂಚಿಸಲಾಗಿದೆ. ಕೇಂದ್ರ ಸರಕಾರದವರು ಆಹಾರೋತ್ಪಾದನೆಯಲ್ಲಿ ವಿಶೇಷ ಸಹಾಯಕನಾಗುವ ಈ ಮಲೆನಾಡಿನ ಅಭಿವೃದ್ಧಿಯತ್ತ ಕೂಡಲೆ ಗಮನಕೊಟ್ಟು ಅವಶ್ಯಕ ಉಪಾಯಗಳನ್ನು ಕೈಕೊಳ್ಳುವರೆಂದು ಆಶಿಸಲಾಗಿದೆ.

# ಚಂದ್ರಲೋಕ ಪ್ರಯಾಣಕ್ಕೆ ವಿಜ್ಞಾನಿಗಳ ಯೋಜನೆ

[illegible] ಅಥವಾ [illegible] ಉಪಯೋಗಿಸುವುದು [illegible] ಎಲ್ಲ ವಿಷಯಗಳಲ್ಲಿಯೂ [illegible] ಆತುರರಿರುವಾಗಿದ್ದರೆ, ಚಂದ್ರಲೋಕಕ್ಕೆ [illegible] ಬರುವ ಸಲುವಾಗಿ ಯಾವ ಯಾವ [illegible] ಗಳನ್ನು ಗಂಟುಕಟ್ಟಿ ಹಿಡಿದುಕೊಳ್ಳಬೇಕಾದೀ ತೆಂದು ಈಗಲೇ ಯೋಚನೆ ಮಾಡಿ ಇಡಿರಿ. ಇಲ್ಲದಿದ್ದರೆ ಹೊರಡುವಾಗ [illegible] ಅವಶ್ಯ [illegible] ಮರೆತು [illegible] ಹೋದೀರಿ— ಜೋಕೆ!

ಚಂದ್ರಲೋಕದ ಪಯಣ! ಈ ನಂಬಲಾರದ ಕಾರ್ಯ ಸಾಧ್ಯವಾಗುವ ದಿನ ನೀವು-ನಾವು ಎಣಿಸಿದ್ದಕ್ಕಿಂತ [illegible] ಹತ್ತಿರವಾಗಿದೆಯೆಂದು [illegible] ಪತ್ರಿಕೆಯಲ್ಲಿ ಶ್ರೀ ಎಸ್. ಪಿ. [illegible] ಮಹಾಶಯರು ಸೂಚನೆ ಕೊಟ್ಟಿದ್ದಾರೆ. ಮನುಷ್ಯನು [illegible] ವೇಗಕ್ಕೆ [illegible] ಇದ್ದಾನೆಂದು [illegible] ಅನುಭವಶಾಲಿ [illegible] ಇಂಜಿನಿಯರರು ಹೇಳುತ್ತಾರೆ. ನಂಬಲಾರದ [illegible] ಇಂಜಿನಿಯರರೂ ವಿಜ್ಞಾನಿಗಳೂ ಇದನ್ನು ಹೇಗೆ [illegible] ಹೇಳೋಣ?

## ತಾರಕ ವೇಗ

ಭೂಮಿ ನಮ್ಮನ್ನು ತನ್ನ ಕಡೆ ಆಕರ್ಷಿಸುತ್ತಿರುವುದರಿಂದಲೇ ನಾವು ಆಕಾಶದತ್ತ ಹಾರಿ ಹೋಗದೆ ಉಳಿದಿದ್ದೇವೆಂದು ಸ್ವಲ್ಪವಾದರೂ ಕಲಿತ ನಿಮಗೆಲ್ಲರಿಗೂ ಗೊತ್ತಿದೆ. ಆದರೆ ಈ ಆಕರ್ಷಣಶಕ್ತಿ [illegible] ಅನುಲ್ಲಂಘನೀಯವೇನೂ ಅಲ್ಲ, ಹಾಗಿದ್ದರೆ ಹಕ್ಕಿಗಳಿಗೆ ಆಕಾಶದಲ್ಲಿ ಹಾರಲು ಬರುತ್ತಿರಲಿಲ್ಲ, ಅಷ್ಟೇ ಏಕೆ, ನಮಗೆ ನೆಲದ ಮೇಲೆ ಕೂಡ ಚಲಿಸಲು ಸಾಧ್ಯವಾಗುತ್ತಿರಲಿಲ್ಲ.


ವಸ್ತುತಃ, ನೀವು ಭೂಮಿಯಿಂದ ಸೆಕೆಂಡಿಗೆ ೭ ಮೈಲಿ ಅಥವಾ ತಾಸಿಗೆ ಸುಮಾರು ೨೫,೦೦೦ ಮೈಲು ವೇಗದಿಂದ ಭೂಮಿಯಿಂದ ಬಾಣದಂತೆ [illegible] ಸಾಧ್ಯವಾದರೆ ನೀವು ಈ ಭೂಮಿಯ ಸೆಳೆತದಿಂದ "ಪಾರಾಗ"ಬಲ್ಲಿರಿ. ವೈಜ್ಞಾನಿಕರು ಇದನ್ನು "ತಾರಕವೇಗ" ಎಂದು ಕರೆಯುತ್ತಾರೆ, [illegible] ತಾರಕ ವೇಗದಿಂದ ಭೂಮಿಯಿಂದ [illegible] ಹೋಗಬಲ್ಲಿರಾದರೆ [illegible] ಕೆಳಗೆ ಬೀಳುವ ಭಯವಿಲ್ಲ. ಅನಂತ [illegible] ವೆಲ್ಲವೂ ನಿಮ್ಮ ವಿಹಾರಭೂಮಿಯಾಗಬಲ್ಲದು. ಭೂಮಿಯಿಂದ ಬರಿ [illegible] ಸಾವಿರ ಮೈಲಿ ಮಾತ್ರ ದೂರವಿರುವ ಚಂದ್ರಲೋಕಕ್ಕೆ ಹೋಗಿ ಮುಟ್ಟಲು ನಿಮಗೆ [illegible] ತಾಸುಗಳಿಗಿಂತ ಹೆಚ್ಚು ಕಾಲ ಹಿಡಿಯಲಾರದು.

ತಾಸಿಗೆ ಅರವತ್ತು ಮೈಲಿನ ವೇಗವನ್ನು ನಿಮ್ಮಲ್ಲಿ ಕೆಲವರಾದರೂ ಅನುಭವಿಸಿರಬಹುದು. ವಿಮಾನಗಳ ಅತ್ಯಾಧುನಿಕ ಮಾದರಿಗಳಲ್ಲಿ ಸಂಚರಿಸಿದವರಿಗೆ ಅದಕ್ಕಿಂತ ೧೦ ಪಟ್ಟು ಅಂದರೆ ತಾಸಿಗೆ ೬೦೦ ಮೈಲು ವೇಗವೂ ಗೊತ್ತಿರಬಹುದಾಗಿದೆ. ಈ ವೇಗದಿಂದ ಹೋಗುವಾಗಲೇ ನಿಮ್ಮ ಎದೆ ಡವಡವ ಬಡಿದುಕೊಳ್ಳುತ್ತದೆ, ಕೆಲವರಿಗೆ ತಲೆ ಕೂಡ ತಿರುಗುತ್ತದೆ. ಇನ್ನು ತಾಸಿಗೆ ೨೫,೦೦೦ ಮೈಲಂತೆ-ಅಬ್ಬಬ್ಬ! ಎನ್ನದೇವಿರಿ.

## ಗಾಳಿಯ ಕಾಟ

ಆದರೆ ನಿಮ್ಮ ಗಾಬರಿಗೆ ಗಾಳಿಯು ಕಾರಣ. [illegible] ಹೊಡೆತದಿಂದ ನಿಮಗೆ ಉಸಿರು ಕಟ್ಟು [illegible] ಮಾತ್ರವಲ್ಲದೆ ನಿಮ್ಮ ಯಂತ್ರವೂ [illegible] ದಹುತ್ತದೆ. ಈ ವಾತಾವರಣ ನೀವು ಹೋದಲ್ಲೆಲ್ಲ ಇರುವದು ನಿಮ್ಮ ಅನುಭವಕ್ಕೆ ಬಂದಿದ್ದರೂ ಅದು ಸರ್ವವ್ಯಾಪಿಯಲ್ಲ. ಭೂಮಿ ಬಿಟ್ಟು ೧೦೦ ಮೈಲು ಹೋದ ಮೇಲೆ ಅದರ ಪ್ರಭಾವ ಪೂರ್ತಿ ಕುಂದಿಹೋಗುತ್ತದೆ. [illegible] ಮೈಲಿನ ಆಚೆಗೆ ಗಾಳಿಯೆ ಇಲ್ಲ. ಅಲ್ಲಿ [illegible] ಶೂನ್ಯ. ಆಮೇಲೆ ನೀವು ಸಾಗುತ್ತಿರುವ [illegible] ನಿಮಗೇ ತಿಳಿಯಲಿಕ್ಕಿಲ್ಲ. ನಿಮ್ಮ

[illegible]



[illegible]

ಅಂತರ್ಜ್ವಲ [illegible] (internal combustion) [illegible] ಇದ್ದಷ್ಟು ಕಾಲ ತಾಸಿಗೆ ೩,೦೦೦ [illegible] ವೇಗ ಕಲ್ಪನಾತೀತವೇ ಆಗಿತ್ತು. ಅದರ [illegible] ಮಾವಧಿ ವೇಗ ೬೫೦ ಮೈಲು [illegible] ಆದರೆ ಜರ್ಮನರು [illegible] ಸಿತ್ತ [illegible] ಬಹುದು. ಈ ಆಕಾಶಬಾಣ [illegible] ವೇಗವನ್ನು [illegible] ರಚಿಸಲ್ಪಟ್ಟಿತ್ತು. [illegible] ಮೈಲು ವೇಗವನ್ನು-ಅಂದರೆ [illegible] ಮೈಲು ಮುಟ್ಟಿತ್ತು. [illegible] ಮೈಲು ಎತ್ತರದ ವರೆಗೂ [illegible] ಆ ಮೇಲೆ ಅಮೇರಿಕೆಯಲ್ಲಿ [illegible] ಹೊಸ ಆಕಾಶ [illegible] ಮೈಲಿನ ವೇಗವನ್ನು [illegible] ೨೫೦ ಮೈಲು ದೂರ ಹೋಗಿದ್ದವು. [illegible] ಚಂದ್ರಲೋಕಕ್ಕೇ [illegible] ಅದೂ [illegible] ಭೂಮಿಯ ಗುರುತ್ವಾಕರ್ಷಣ ಕಡಿಮೆಯಾಗುತ್ತ ಹೋಗುವದರಿಂದ [illegible] ಪ್ರಯಾಣ ಹೆಚ್ಚು ಸುಗಮ [illegible].

## ಆತಂಕಗಳು

ಆಕಾಶಬಾಣದ ಯಂತ್ರದ [illegible] ಮಿತಿಯೇ ಇಲ್ಲವಾದು [illegible] ವಿಜ್ಞಾನಿಗಳಿಗೆ ಚಂದ್ರಲೋಕ [illegible] ತೋರಿತು. ಆದರೆ V 2 [illegible] ಆದಕ್ಕಿಂತಲೂ [illegible] ಅಮೇರಿಕೆಯ N ಆಕಾಶಬಾಣದ ವೇಗವನ್ನು ಮೀರಿಸುವದಕ್ಕಿಂತ ಹೆಚ್ಚಿಗೆ ಮಾಡಲು ಅಡ್ಡಿಯೊಂದರೆ ಆ ಅಪ್ರತಿಮ ವೇಗದಲ್ಲಿ ಉಂಟಾಗುವ ಯಂತ್ರದ ಉಷ್ಣವನ್ನು ತಡೆದುಕೊಳ್ಳುವ ವಸ್ತುಗಳು ಸಿಗದಿರುವದು. ಅದಲ್ಲದೆ "ಸೌದೆ"ಯನ್ನು ಹೊರುವ ಸಮಸ್ಯೆ. ಆಕಾಶಬಾಣದ ಯಂತ್ರಕ್ಕೆ [illegible] N ಮಾದರಿಯ ಆಕಾಶಬಾಣ ೧ ಸೆಕೆಂಡಿಗೆ ಒಂದು ಟನ್ನಂತೆ "ಸೌದೆ"ಯನ್ನು ಧ್ವಂಸ ಗೊಳಿಸುತ್ತದೆ. ಆ ರೀತಿ [illegible] ತಾಸಿನ ಪ್ರಯಾಣಕ್ಕೆ ಎಷ್ಟು ಸೌದೆ ಬೇಕಾದೀತು! ಅದನ್ನು ಹೊರುವದರಲ್ಲೇ ಆಕಾಶಬಾಣದ [illegible] ವಾಗಿ ಹೋದೀತು. [illegible]

ವಿಚಾರ [illegible] ನಡೆದಿದೆ.

## ಪರೀಕ್ಷಾ ಪ್ರವಾಸ

ಅದ್ದರಿಂದ ಅಷ್ಟು ವೇಗದ ಬಿಸಿಯನ್ನು ತಡೆದುಕೊಳ್ಳಬಲ್ಲ ವಸ್ತುಗಳಿಂದ ಯಂತ್ರವನ್ನು ರಚಿಸಲು ಸಾಧ್ಯವಾದಾಕ್ಷಣ ಈ ಜರ್ಮನ್ ಉಪಾಯದ ಮಾದರಿಯಲ್ಲಿ ಆಕಾಶಬಾಣ ಕಟ್ಟಿ ಆಕಾಶದತ್ತ ಎಸೆಯಲು ಯಾವ ಅಡ್ಡಿಯೂ ಇಲ್ಲ. ಆದರೆ ಮೊದಲನೆ ಪ್ರಯಾಣದಲ್ಲಿ ನಿಮಗೆ ಟಿಕೀಟು ಸಿಗಲಿಕ್ಕಿಲ್ಲ. ನಿಜವಾಗಿ ಕೇಳಿದರೆ ಅದು ಚಂದ್ರಲೋಕದ ವರೆಗೆ ಹೋಗದೆ ಅರ್ಧದಿಂದಲೇ ಫೋಟೊಗಳನ್ನು ತೆಗೆದುಕೊಂಡು ಬರಬಹುದು. ೩೦೦ ಟನ್ ಸೌದೆಯನ್ನು ಕಳಿಸಿದರೆ ಅದು ೧೦೦ ಟನ್ ಸೌದೆಯೊಡನೆ ಧ್ವಂಸಗೊಳಿಸಿ ಚಂದ್ರಲೋಕವನ್ನು ಮುಟ್ಟಿದರೂ ಮುಟ್ಟಬಹುದು. ಅದರಲ್ಲಿ ನೀವು ಹೋಗದಿದ್ದರೂ ಅದು ಚಂದ್ರನ ಮೇಲೆ ಬಿದ್ದೊಡನೆ ಆಗಬಹುದಾದ ಅಥವಾ ಆಗದಿರಬಹುದಾದ ಅದ್ಭುತಗಳನ್ನು ಭೂಮಿಯಲ್ಲಿ ಈಗ ಸಿದ್ಧವಾಗಿರುವ ದೂರದರ್ಶಕ ಯಂತ್ರಗಳಿಂದ ನೋಡಲು ಸಾಧ್ಯವಿದೆ.

ಅದರೆ ಈ ಮಧ್ಯ—ಪ್ರಾಣವಾಯು ಆಕಾಶಬಾಣದಲ್ಲೇ ನೀವು ಚಂದ್ರಲೋಕಕ್ಕೆ [illegible] ಬೇಡಿರಿ. ಅಷ್ಟೆಲ್ಲ "ಸೌದೆ"ಯನ್ನು ಹೊತ್ತುಕೊಂಡು ಹೋಗುವದು ವ್ಯವಹಾರ್ಯವಾಗಲಿಕ್ಕಿಲ್ಲೆಂದು ಎಂಜಿನಿಯರರು ಹೇಳುತ್ತಾರೆ. ಆದರೆ ಈ ಆಕಾಶಬಾಣಗಳಿಂದ ಅನೇಕ ಉಪಯೋಗಗಳನ್ನು ನಾವು ಪಡೆಯಬಹುದು. ಅವನ್ನು [illegible] ವಾಯುಮಂಡಲದ ಹೊರಗಿಂದ ವಿಶ್ವದ ಚಿತ್ರಗಳನ್ನು ತೆಗೆಯಬಹುದು ಈಗ ನಮಗೆ ದೊರೆಯುವ ಚಿತ್ರಗಳು ನಮ್ಮ ವಾಯುಮಂಡಲದ ಕಂಪನದಿಂದ ಅಸ್ಪಷ್ಟವಾಗಿರುತ್ತವೆ. ವಾಯುಮಂಡಲ ದಾಟಿ ಈ ರಗಳೆಯಿಲ್ಲ. ಮೇಲಾಗಿ ನಾವು ಕೆಲ ಆಕಾಶ ಬಾಣಗಳನ್ನು ಭೂಮಿಯಿಂದ ೨೫,೦೦೦ ಮೈಲು ದೂರ ಕಳಿಸಿದರೆ [illegible] ಶಾಶ್ವತವಾಗಿ ಚಂದ್ರನಂತೆ ಭೂಮಿಯ ಸುತ್ತ ತಿರುಗುತ್ತಲೆ ಹೋಗಬಲ್ಲವು. ಈ ಬಗೆಯಿಂದ ನಮಗೆ ಚಂದ್ರನ ಅಗೋಚರಭಾಗದ ದರ್ಶನವೂ ಆಗಬಹುದು....

## ಅಣುವಿಸ್ಫೋಟದ ಪರಿಣಾಮ

ಅದರೆ ಚಂದ್ರಲೋಕಕ್ಕೆ ಮುಟ್ಟುವ ನಿಮ್ಮ ಆಸೆಯನ್ನು ಪೂರೈಸಬಲ್ಲ ಶೋಧನೆಗಳು ಈಗಾಗಲೆ ಆಗಿವೆ. ಅದು ಅಣುವಿಸ್ಫೋಟ. ಈ ಅಣುವಿಸ್ಫೋಟದಿಂದ ಹುಟ್ಟುವ ಶಕ್ತಿ [illegible] ಯುರೇನಿಯಮ್ ಸ್ಫೋಟದಲ್ಲಿ ಹುಟ್ಟುವ ಶಕ್ತಿ [illegible] ಸಾವಿರ ಮೈಲು [illegible] [illegible]

[illegible]

## ವಾಹನದ ಸ್ವರೂಪ

ಚಂದ್ರಲೋಕಕ್ಕೆ [illegible] ಈ [illegible] ಧರಿಸಿ [illegible] ಅದರ ಜೊತೆಗೆ [illegible] ಅದರಿಂದ ಬೇಕಾದೀತು. [illegible] ಮಂಡಲವನ್ನು ದಾಟುವ [illegible] ನಿಮ್ಮ ಉಷ್ಣದಿಂದ ನಿಮ್ಮನ್ನು [illegible] ಆ ಅವರಣವೇ ಕಮ್ಮಿ [illegible] ಗಿನ ಶೂನ್ಯದಲ್ಲಿ [illegible] ನಿಮ್ಮನ್ನು ರಕ್ಷಿಸಲು ಥರ್ಮಾಸ್ [illegible] ಮಾದರಿ ರಚನೆ [illegible] ಒಂದು ಗ್ಯಾಸಿನ ಒತ್ತಡವನ್ನು [illegible] ಕೊಡ್ಬೇಕಾಗುವದು. ವಾಯುಮಂಡಲ ದಾಟಿ ಹೋಗುವವರೆಗೆ ಅದರು ಮಲಗಿಕೊಳ್ಳಬೇಕಾದೀತು. ಮೊದಮೊದಲು ಈ ಆಕಾಶ ಬಾಣವನ್ನು ಭೂಮಿಯಿಂದ ರೇಡಿಯೋ ಮೂಲಕ ನಿಯಂತ್ರಿಸಲಾಗುವದು. ಕೊನೆಯ ಪ್ರಯಾಣ [illegible] ಮಾತ್ರ ಸಾಧ್ಯವೆಂದು ತೋರುತ್ತದೆ. ಏಕೆಂದರೆ ಶೂನ್ಯದಲ್ಲಿ ಬೆಳಕಿಲ್ಲ, ಉಷ್ಣವಿಲ್ಲ, ಎಲ್ಲ ಶೂನ್ಯ ಶೂನ್ಯವೆಂದು ಗೊತ್ತಿದ್ದರೂ ಈ ಪರಿಸರ ಮನುಷ್ಯನು ಭೂಮಿಯಿಂದ ೧೪ ಮೈಲಿಗಿಂತ ದೂರ ಹೋಗಿಲ್ಲವಾದುದರಿಂದ ಆ ಅನಂತದಲ್ಲಿ ಏನೇನು ಘಟಿಸಬಹುದೋ ಯಾರು ಹೇಳಬಲ್ಲರು? ವಿಶ್ವಕಿರಣಗಳ ಸ್ವಭಾವ ಅಲ್ಲಿ ಹೇಗೆ ವ್ಯಕ್ತವಾಗುವದೋ ಏನೋ. ಅಲ್ಲದೆ ಭೂಮಿ ಚಂದ್ರರ ನಡುವಣ ಶೂನ್ಯದಲ್ಲಿ [illegible] ಹಾರಿ ಬರುತ್ತಿರುವ ೨ ಕೋಟಿ ಉಲ್ಕೆಗಳಲ್ಲಿ ಯಾವುದಾದರೊಂದು ಈ ವಾಹನಕ್ಕೆ ಬಡಿದರೇನು ಗತಿ? ಅದೂ ಹಾಳಾದ್ದಕ್ಕೆ ಭೂಮಿಯು ನಿಲುದಿನಿಂದಾಚೆಗೆ ಹೋದ ಮೇಲೆ ಮನುಷ್ಯ ಶರೀರ ಹೇಗೆ ವರ್ತಿಸುವದೆಂದು ಹೇಳಬಲ್ಲವರಾರು? ಆದುದರಿಂದ ಚಂದ್ರಲೋಕಗಮನಕ್ಕಾಗಿ ನಿಮ್ಮನ್ನು ನೀವು ತೈಯಾರು ಮಾಡಿಕೊಳ್ಳಬೇಕೆಂದು ಬಯಸುತ್ತಿದ್ದರೆ ನಿಮ್ಮ ಎದೆ ತುಂಬ ಗಟ್ಟಿಯಿರಬೇಕು. ವಿನಾಕಾರಣ [illegible] ನಿಮ್ಮ ದಿನ ಇಳಿಸಲು ಒಪ್ಪಲಿಕ್ಕಿಲ್ಲವೆಂದು ತೋರುತ್ತದೆ.

## ವಿಚಾರದರ್ಪಣ

[illegible]

ರಾಗ್ರೆಸಿಸ. — ಸಂ.

★

## ಮಂತ್ರಿಮಂಡಲದ ಬಿಕ್ಕಟ್ಟು

ಕರ್ಮವೀರದ ೨೭-೩-೪೯ ರ ಸಂಚಿಕೆಯಲ್ಲಿ "ಪುರತ್ಕೃತ" ಯವರ "ಮಂತ್ರಿಮಂಡಲದಲ್ಲಿ ಬಿಕ್ಕಟ್ಟು" ಎಂಬ ಶಿರೋನಾಮೆಯುಳ್ಳ ಲೇಖನವನ್ನು ಗಮನಿಸಿದೆ. ಅವರ ಸೂಚನೆಗಳು ಕೂಡಾ ಫಲಕಾರಿಯಾಗುವಂತೆ ತೋರುವುದಿಲ್ಲ. ನಮ್ಮ ಪ್ರತಿನಿಧಿಗಳ ಬಹುಮತದಂತೆ ಮಂತ್ರಿಮಂಡಲ ರಚಿಸುವುದರಿಂದ (ಪುರತ್ಕೃತರವರ ಸೂಚನೆಯಂತೆ) ಇದೇ ಬಿಕ್ಕಟ್ಟು ಇನ್ನು ಮುಂದೆಯೂ ಉಳಿಯುವುದರಲ್ಲಿ ಸಂಶಯವಿಲ್ಲ. ನನ್ನ ಒಂದೇ ಒಂದು ಈ ಕುರಿತಾದ ಸೂಚನೆ— ಜನತೆಯೇ ತಮ್ಮ ಮಂತ್ರಿಗಳನ್ನು ಆರಿಸುವಂತಾಗಬೇಕೆಂದು.

ಭಾರತದ ಹೊಸ ಘಟನೆಯಲ್ಲಿ ಪ್ರತಿಯೊಂದು ಪ್ರಾಂತಕ್ಕೆ ಇಂತಿಷ್ಟೇ ಮಂತ್ರಿಗಳಿರಬೇಕೆಂದು ನಿರ್ಧರಿಸಬೇಕು. ಮುಖ್ಯ ಮಂತ್ರಿ ಮತ್ತು ಇತರ ಮಂತ್ರಿಗಳ ಸ್ಥಾನಕ್ಕೆ ತಮ್ಮ ತಮ್ಮ ಪಕ್ಷಗಳಿಂದ ಯೋಗ್ಯ ಉಮೇದವಾರರು (ಈ ಕೈತ ಸ್ವತಂತ್ರ ಉಮೇದವಾರರೂ ಇರಬಹುದು) ಯಥಾ ಕ್ರಮದ ಪ್ರಾಂತದ ಜನಗಳಲ್ಲಿ ಮತ ಕೊಟ್ಟು ಆಯಾ ಸ್ಥಾನಕ್ಕೆ ಮಂತ್ರಿಗಳನ್ನು ಆರಿಸಬೇಕು. ನ್ಯಾಯವಿಧಾಯಕ ಸಭೆಯ ಸದಸ್ಯರಿಗೆ ಮಂತ್ರಿಮಂಡಲ ರಚನೆಯಲ್ಲಿ ಅಥವಾ ಉರುಳಿಸುವಲ್ಲಿ ಯಾವ ಅಧಿಕಾರವೂ ಇರಬಾರದು. ಅವರಿಗೆ ಹೊಸ ಶಾಸನ ಮಾಡುವಲ್ಲಿ ಇಲ್ಲವೆ ಇದ್ದ ಶಾಸನದ ತಿದ್ದುಪಡಿಯ ಸಂದರ್ಭದಲ್ಲಿ ಯೋಗ್ಯ ಮತ ಕೊಡುವ ಅಧಿಕಾರವಿರಬೇಕು.

ಜನತೆಯಿಂದಲೇ ಆರಿಸಿ ಬಂದ ಮಂತ್ರಿಮಂಡಲವು ೧೦ ವರ್ಷಗಳ ಕಾಲ ಸ್ಥಿರವಾಗಿ ಉಳಿಯುವಂತಾಗಬೇಕು. ಒಮ್ಮೊಮ್ಮೆ ಮಂತ್ರಿಗಳು ಸ್ವಾರ್ಥಸಾಧಕರು ಇಲ್ಲವೆ ಅಸಮರ್ಥರು ಎಂದಾದರೆ ಕೇಂದ್ರ ಶಾಸನ ಸಭೆಯವರು ನ್ಯಾಯವಾದ ಕಾರಣಗಳಿಂದ ಅಂಥ ಮಂತ್ರಿಗಳನ್ನು ತಕ್ಕ ಹಾಗೆ ೬ ತಿಂಗಳ ಮಟ್ಟಿಗೆ ಮಾತ್ರ ಸಂಪೂರ್ಣ ಅಧಿಕಾರವನ್ನು ಗವರ್ನರರಿಗೆ ಕೊಡುವಂತಾಗಬೇಕು; ತನ್ಮಧ್ಯೇ ಜನತೆಯು ಬಹುಮತದಂತೆ ಮಂತ್ರಿಮಂಡಲವನ್ನು ರಚಿಸುವಂತಾಗಬೇಕು.

ಈ ಕ್ರಮದಿಂದ ಸರಕಾರಕ್ಕೆ ವ್ಯಯವು ಹೆಚ್ಚಾಗಬಹುದು. ಅದಕ್ಕಾಗಿ ನ್ಯಾಯವಿಧಾಯಕ ಸಭೆಯ ಸದಸ್ಯರ ಸಂಖ್ಯೆಯನ್ನು ಇಳಿಸಿ ಕಡಿಮೆ ಮಾಡಬಹುದು. ಹೀಗೆ ಮಾಡುವುದರಿಂದ ಪಾಳೆಯದೊಳಗಿನ ಕಚ್ಚಾಟವು ನಿಲ್ಲುವುದು. ಜನತೆಯ ಬಹುಮತದಂತೆ ಅಧಿಕಾರ ಸ್ಥಾನಕ್ಕೇರಿದ ಮುಖ್ಯ ಮಂತ್ರಿ ಮತ್ತು ಇತರ ಮಂತ್ರಿಗಳು ಜನತೆಯ ಹಿತವನ್ನು ಬಯಸದಿರಲಾರರು. "ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ" ಎಂಬಂತಾಗ [illegible]. ಹೆಚ್ಚೇಕೆ? ಜಿಲ್ಲೆಗೊಂದು ಮನೆ [illegible], ಹೊಸ ಶಾಸನವು [illegible] ಮಾಡಬೇಕು.

[illegible] ಸಂದರ್ಭವೂ ಬರಲಾರದು! [illegible], ಒಂದೆರಡು ಸಲ ಮಂತ್ರಿಮಂಡಲದ [illegible].

[illegible] — ಶ್ರೀ ಅ.

## ನೃಪತುಂಗನ ಹೆಂಡತಿ ಯಾರು?

[illegible]

ಹೊಸ ಪುಸ್ತಕಗಳು

# ಅಧ್ಯಾತ್ಮವೂ ಆಧುನಿಕತೆಯೂ

ಜಗತ್ತಿನ ಸಮಾಜಗಳ ಸ್ಥಿತ್ಯಂತರಗಳನ್ನು ಗಮನಿಸಿ ಅಧ್ಯಾತ್ಮ ರೀತಿನೀತಿ ಆ ಕಳಕಳಿಯುಳ್ಳವ ನಮಗೆ ಬಹುಕಾಲ ಮಾನವನ ಬದುಕು ಉಳಿಯದು ಎಂದು. ಪರಹಿತಬುದ್ಧಿ ಎಂಬುದು ಆಧುನಿಕರಿಂದ ಪುರಸ್ಕೃತವ ಸರಿ. ಅದು ಅಧ್ಯಾತ್ಮಿಕತೆಯ ತಿರುಳು ಎನ್ನಲು ಅನೇಕರಿಗೆ ಸಂಕೋಚ. ಸನಾತನ ಮತ್ತು ಆಧುನಿಕ ವಿಚಾರಗಳ ದ್ವಂದ್ವ ನಡೆದದ್ದು ಈ ಕಾರಣದಿಂದಲೇ. ಪ್ರತಿಫಲಾಪೇಕ್ಷೆಯ ರಹಿತ ಪರಹಿತ ದೃಷ್ಟಿ ಸನಾತನವಾದುದು, ಸನಾತನರೂ ಆಗ ಸಂದೇಹವಿಲ್ಲದಿದ್ದ. ಪ್ರತಿಫಲಾಪೇಕ್ಷೆಯುಳ್ಳವ ಪರಹಿತಬುದ್ಧಿ ಆಧುನಿಕ, ಕ್ಷಣಿಕ ಮತ್ತು ಅದೂರದರ್ಶಿತ್ವದ ದುಷ್ಪರಿಣಾಮ, ವಾದುದು.

ಹುಬ್ಬಳ್ಳಿಯ [illegible] ಮಂದಿರದ ಅವಧೂತ ಗ್ರಂಥಮಾಲೆಯವರ ಆಶ್ರಯದಲ್ಲಿ ಕೆ. ಈ. ಬೋರ್ಡ್ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ನಾರಾಯಣರಾವ್ ಕುಲಕರ್ಣಿ, ಎಂ. ಎ. ಎಲ್‌ಎಲ್. ಬಿ. ಅವರು ಬರೆದ "ಅಧ್ಯಾತ್ಮ ಹಾಗೂ ನವ ಕ್ರಾಂತಿಯ ಕ್ಷಣಗಳು" ಎಂಬ ಪುಸ್ತಕದ ಮುನ್ನುಡಿಯಲ್ಲಿ ಮೇಲಿನ ವಾದವನ್ನು ಪ್ರಸ್ತಾವಿಸಿ (ಅಧ್ಯಾತ್ಮ ಹಾಗೂ ನವ ಕ್ರಾಂತಿಯ ಕ್ಷಣಗಳು: ಲೇಖಕರು, ಶ್ರೀ. ನಾರಾಯಣರಾವ ಕುಲಕರ್ಣಿ, ಎಂ. ಎ., ಎಲ್‌ಎಲ್. ಬಿ., ಅವಧೂತ ಗ್ರಂಥಮಾಲೆ, ಬೆ. ೩-೦-೦) "ಅಧ್ಯಾತ್ಮ ಜೀವನವೆಂದರೆ ನರಗಳ ವಿಕಾರದಿಂದಾಗಲಿ, ಮನಸ್ಸಿನ ವಿಕಾರದಿಂದಾಗಲಿ, ಅಗಿರುವ ಒಂದು ರೋಗದ ಅಥವಾ ವಿಲಕ್ಷಣ ಸ್ಥಿತಿಯಿಂದು ಇಂದಿನ ಕಲಿತವರ ತಿಳುವಳಿಕೆ ನಂಬಿಗೆಯಾಗಿರುತ್ತದೆ" ಎಂದುದು ವಾಸ್ತವ ಸಂಗತಿಯಾಗಿದೆ. ಅದಕ್ಕೆ ಉತ್ತರವಾಗಿ ಅವರು, "ಈ ಭೌತಿಕ ದಲ್ಲಿ ಪರಿಣತರೆನಿಸಿದ ಸಜ್ಜನರು ರೋಗಿಗಳಾಗಿದ್ದರೂ ವಿಶ್ವದ ಮನಸ್ಥಿತಿಯವರಾಗಿದ್ದರೆಂದೂ ಹೇಳುವ ಸಾಹಸವನ್ನು ಯಾವ ಬುದ್ಧಿವಂತನೂ ಮಾಡಲಾರ. ಅವರೆಲ್ಲರೂ ರೋಗಿಗಳಾದರೆ ಅಂತಹ ರೋಗವು ಎಲ್ಲರಿಗೂ ಬರಲಿ" ಎಂಬ ಉತ್ತರ ಕೊಟ್ಟಿರುವುದು ಸಮಂಜಸವಾಗಿದೆ. ಆದರೆ ಅಧ್ಯಾತ್ಮವೆಂಬುದು ಮುದುಕರ, ರೋಗಿಗಳ, ಹಟವಾದಿಗಳ, ನಿರಾಶಾಗ್ರಸ್ತರ, ನಿಷ್ಕರುಣಿ, ಹತವೀರ್ಯರ ಸ್ವತ್ತೆಂದು ಆಧುನಿಕರಲ್ಲಿ ಕೆಲವರು ನಂಬುವದಕ್ಕೆ ಮತ್ತು ಆ ಪ್ರಕಾರ ವಾದಿಸುವುದಕ್ಕೆ ಅವರ ಅಜ್ಞಾನ ಒಂದೇ ಅರ್ಥಕಾರಣ ಎನ್ನಬೇಕು.

### ಅಧ್ಯಾತ್ಮದ ಬೀಭತ್ಸತೆಗೆ ಕಾರಣ

ಪ್ರಥಮತಃ, ಯಾವ ವಿಷಯವನ್ನು ತೆಗೆದುಕೊಂಡರೂ ಸರಿ—ಆ ವಿಷಯದ ಬೋಧನ ಕ್ರಮ, ಪದ್ಧತಿ, ಉಪಕರಣಾದಿಗಳ ಪ್ರಧಾನ ಅಧಿಕಾರಿಗಳ ಯೋಗ್ಯತೆ ಮತ್ತು ಜಿಜ್ಞಾಸೆ ಇವು ಆ ವಿಷಯದ ಬಗ್ಗೆ ಅಧಿಕಾರಿಗಳ ಅಥವಾ ವಿದ್ಯಾರ್ಥಿಗಳ ಮನಸ್ಸಿನಲ್ಲಿ ನಿಶ್ಚಿತ ಚಿತ್ರವನ್ನು ಕಲ್ಪಿಸಿಕೊಡಲು ಕಾರಣಗಳಾಗುತ್ತವೆ ಎಂಬುದು ಒಂದಲ್ಲ ಒಂದು ದಿನ ವಿದ್ಯಾರ್ಥಿಗಳಾಗಿಯೇ ದೊಡ್ಡವರಾದ ಪ್ರತಿಯೊಬ್ಬರಿಗೂ ಕೆಲ ಮಟ್ಟಿಗಾದರೂ ಅನುಭವಕ್ಕೆ ಬಂದಿರಲೇ ಬೇಕು. ಮಕ್ಕಳಿಗೆ ಶೀರಸ ವಿಷಯಗಳೆನಿಸುವ ಕೊಂಡವುಗಳಲ್ಲಿ ವ್ಯಾಕರಣ, ತರ್ಕಶಾಸ್ತ್ರ ಅಥವಾ ಅಧ್ಯಾತ್ಮವಿದ್ಯೆ, ಕೆಲ ಜಾತಿಯ ಗಣಿತ ಪ್ರಕಾರಗಳು, ಸಂಸ್ಕೃತದಂತಹ ಹಳೆಯ ಅಧಿಜಾತ ಭಾಷೆಗಳು ಇವು ಮುಖ್ಯವಾದವು. ಸಾಮಾನ್ಯವಾಗಿ ವ್ಯವಹಾರಕ್ಕೆ ನೇರವಾಗಿ ಸಂಬಂಧಿಸಿದ ವಿಷಯಗಳೆನ್ನಾದರೂ ಜಿಜ್ಞಾಸುಗಳ ಅಭಿರುಚಿ ಆಸಕ್ತಿಗಳನ್ನು ವೃದ್ಧಿಗೊಳಿಸುವ ಬಗೆಯಲ್ಲಿ ಹೇಳಿಕೊಡಲು ಶಿಕ್ಷಕರಿಗೆ ಕೊಂಡ ಎಲ್ಲರಿಗೂ ಸಾಧ್ಯವಿಲ್ಲ; ಹಾಗಿರುವಾಗ ವಾಣಿಜ್ಯರಹಿತ ದೃಶ್ಯವಾದ, ಅಂತಃಸಾರ ಳ್ಳ ಮೇಲೆ ಹೇಳಿದ ಪ್ರಬುದ್ಧ ವಿಷಯ

"ಕವಿರಾಜ ಮಾರ್ಗ" ವೆಂಬ ಕನ್ನಡ ಲಕ್ಷಣ ಗ್ರಂಥದಲ್ಲಿ ಶ್ಲೇಷಾಲಂಕಾರಕ್ಕೆ ಉದಾಹರಿಸಿರುವ [illegible]

ಅಂಗೋದ್ಭವಭೇದಿ ವಿಬುಧೇಶ್ವರನಲ್ಲಂ, ದ್ವಿಜಕುಲ ಕಲಾಪ ದೋಷಾಕರನಲ್ಲಂ, ವಿಧಿ ಕೋಪ, ಪರಿಸಾಡ್ತ ಭುಜಂಗನಲ್ಲಶೀ ಭೂಪಾಲಂ ಇಲ್ಲಿ ಮೂರನೆ ಪಾದಾಂತ ಅಕ್ಷರಗಳನ್ನು ನೋಡಿರಿ. 'ಅಮಮ' ಎಂಬುದು ಕಾಣುವುದು. ಇದುದೇ ಆ ರಾಣಿಯ ಹೆಸರೆಂದು ಹೇಳಲಿಕ್ಕೆ ಸಾಕು.

ತಾ. ೧೦-೬-೪೯

—ರಂಗನಾಥ [illegible], ಸುರತ್ಕಲ್.

ಗಳನ್ನು ಮಕ್ಕಳಿಗಾಗಲಿ, ದೊಡ್ಡವರಿಗೆ ಆದ ಬಹುಸಂಖ್ಯ ಸಾಧಕರಿಗಾಗಲಿ ಹೇಳಿಕೊಡಲು ಎಂಥ ಶಿಕ್ಷಕರಿರಬೇಕೆಂದಿದ್ದೆ, ಕೊಡಲು ಕಡಿಮೆಯೇ ಇದ್ದಿದ್ದೇವೆ. ಹಿಂದಿನ ವಿದ್ಯಾಪೀಠಗಳಲ್ಲಿ ಕಾಲಿದಾಸ ಸೂಚಿಸಿದಂತೆ ಶಿಕ್ಷಕ ಶಿಷ್ಯರೆನ್ನ ಇಬ್ಬರು, ಅವರಿಗೆ ಮಾತ್ರ ಆಯಾ ವಿದ್ಯೆಯನ್ನು ದಾನಮಾಡತಕ್ಕ ವಿವೇಕವುಳ್ಳ ಸದ್ಗುರುಗಳ ಇಂಥ ಸಂದರ್ಭಗಳಲ್ಲಿ ಲಭಿಸುವದು ಅಗತ್ಯ. ಅದಿಲ್ಲವಾದುದರಿಂದಲೇ ಅಧ್ಯಾತ್ಮದ ಬೀಭತ್ಸಚಿತ್ರದ ಪ್ರಾಮುಖ್ಯಕ್ಕೆ ಅವಕಾಶವನ್ನುಂಟುಮಾಡಿದೆ.

ವಿಷಯ, ಪ್ರಯೋಜನ, ಸಂಬಂಧ, ಅಧಿಕಾರಿಗಳನ್ನು ಮೊದಲು ಅರ್ಥಮಾಡಿಕೊಳ್ಳದೆ ಎಲ್ಲರಿಗೂ ಎಲ್ಲಕಾಲಕ್ಕೂ ಪ್ರಸ್ತುತವಾದ ಜ್ಞಾನ ವಿದ್ಯೆಯೂ ಅಧ್ಯಾತ್ಮವಿದ್ಯೆ ಎನ್ನುವುದು ಸಮರ್ಥನೀಯವಾಗಿಲ್ಲ. ಇತ್ತೀಚೆ ಅವಶ್ಯಕತೆಗಳನ್ನು ಗಮನಿಸದೆ ಅದರ ಮುಂದೆ ಅಧ್ಯಾತ್ಮ ಪ್ರಸ್ತಾವಮಾಡಿದರೆ "ಅಸಮಯೋವೇದಪಾಠ ಇದ" ಎಂಬಂತಾಗುತ್ತದೆ. ಶ್ರೀ ದತ್ತಮೂರ್ತಿಯವರು 'ಆರತಿಯಲ್ಲಿ ಹೇಳಿರುವಂತೆ ಪ್ರಕೃತಿಯನ್ನು ನೋಡಿ ಔಷಧ ಕೊಡಬೇಕಲ್ಲದೆ, ವಯಸ್ಸು, ಅನುಭವ, ಸಂಸ್ಕಾರ, ಚಿತ್ತಪ್ರವೃತ್ತಿಗಳನ್ನು ಲೆಕ್ಕಿಸದೆ ಅಧ್ಯಾತ್ಮದ ಪ್ರಶಂಸೆಮಾಡುವದು, ಅಥವಾ ಯಲ್ಲಿ ತಾವು ತಾರದ ಉಪದೇಶದ ದಂಭವನ್ನು ಪ್ರದರ್ಶಿಸುವದು ಇತ್ಯಾದಿ ವ್ಯವಹಾರಗಳಲ್ಲಿ ವಾಗ್ಗ್ರಸ್ತರಾಗುವದು ತಪ್ಪು. ಅದರಿಂದಲೇ ಅಧ್ಯಾತ್ಮದ ಬಗ್ಗೆ ಕೆಲ ಕಲಿತವರು ಮೂಗು ಮುರಿಯುವಂತಾದುದು.

### ಕಾಲಿದಾಸ ಅಧ್ಯಾತ್ಮಕ್ಕೆ ಕೊಟ್ಟ ಸ್ಥಾನ

"ಕಲಿತವರು" ಅರ್ಥಜ್ಞರಿರುವುದು ಅವರ ದೋಷ. ಪರೀಕ್ಷಿಸಿದ ವಸ್ತುವಿನ ಗುಣಾವಗುಣಗಳ ಬಗ್ಗೆ ಪೂರ್ವಗ್ರಹ ತಾಳುವ ಆರೋಪವನ್ನು ಸನಾತನಿಗಳ ಮೇಲೆ ಹೊರಿಸುವ ಇವರೇ ಸ್ವತಃ ಆ ರೀತಿ ಅಧ್ಯಾತ್ಮದ ಗಂಧಗಾಳಿಗೆ ಮೈಮನಗಳನ್ನೊಡ್ಡ ಬರದ ಗಳವುವುದು ಮಾನವ ಸಂಸ್ಕೃತಿಗೆ ಅವಮಾನ ಮಾಡಿದಂತೆಯೇ ಸರಿ; ವಿದ್ಯಾವಂತಿಕೆಯ ದುಬಳಕೆ ಮಾಡಿದಂತೆ ಹಾಗೇ ಸರಿ. ಇಂಥ ಪ್ರಸಂಗದಲ್ಲಿ ಉಭಯರೂ ಪರೀಕ್ಷಿಸದ ಅಭಿಪ್ರಾಯಕ್ಕೆ ಬರುವ ಬುದ್ಧಿಯನ್ನು ಪರಿಹರಿಸಿಕೊಂಡರೆ ಉಭಯ ಹಿತಕ್ಕೆ, ಸಂಧಾನಕ್ಕೆ, ಒಮ್ಮತಕ್ಕೆ ಸಹಕಾರಿಯಾಗುವುದು.

ಅಧ್ಯಾತ್ಮದ ಸ್ಥಾನವನ್ನು ಕಾಲಿದಾಸನು—
"ಶೈಶವೇಭ್ಯಸ್ತವಿದ್ಯಾನಾಂ
ಯೌವನೇ ವಿಷಯೈಷಿಣಾಂ ।
ವಾರ್ಧಕ್ಯೇ ಮುನಿವೃತ್ತೀನಾಂ
ಯೋಗೇನಾಂತೇ ತನುತ್ಯಜಾಂ ॥"

ಎಂಬ ಶ್ಲೋಕಗಳಲ್ಲಿ ಚೆನ್ನಾಗಿ ನಿರ್ದೇಶಿಸಿದ್ದಾನೆ. ಹಿಂದುಧರ್ಮದ ತಿರುಳಾದ ಆಶ್ರಮ ಚತುಷ್ಟಯದ ವ್ಯವಸ್ಥೆಯಲ್ಲಿ ತತ್ತ್ವಚಿಂತನವನ್ನು ಕಿವಾಚರಣೆಯಾಗಿಟ್ಟುಕೊಳ್ಳುವ ಮುಪ್ಪಿನವರಿಯ ವಾನಪ್ರಸ್ಥ ಅವಸ್ಥೆಯನ್ನು ಸ್ವೀಕರಣಶುದ್ಧಿಯುಳ್ಳ ವ್ಯವಹಾರಜ್ಞನಾದ ಅಧ್ಯಾತ್ಮಪರಾಯಣನೇ ನಿಜವಾಗಿ ಯೋಗ್ಯನೆಂದು ಒಪ್ಪಿಕೊಳ್ಳಲೇಬೇಕಲ್ಲವೆ? ಸಂಸಾರದ ನಿಸ್ಸಾರತೆಯನ್ನು ಯಥಾರ್ಥವಂಗಬುದ್ಧಿಯ ಅನನುಭವಿಗಳಿಗೆ ಬೋಧಿಸುತ್ತ ಬಂದುದೇ ಅಧ್ಯಾತ್ಮವಿದ್ಯಾಪ್ರಚಾರಕರ ಅವಮರ್ಯಾದೆಗೆ ಕಾರಣ. ಗೃಹಸ್ಥಾಶ್ರಮದ ಕಹಿಸಿಹಿಗಳ ಅನುಭವವಿಲ್ಲದೆ, ಪಾರಮಾರ್ಥಿಕ ವೈರಾಗ್ಯ ಜ್ಞಾನವಿಲ್ಲದೆ ಅಧ್ಯಾತ್ಮವನ್ನು ಅಪ್ಪುವುದು ಸಾಮಾನ್ಯನ ಅತ್ಯಶಕ್ತಿಗೆ ಮೀರಿದ್ದೆಂಬುದನ್ನು ಅಧ್ಯಾತ್ಮಪ್ರಸಾರಕರು ಗಮನಿಸುವುದು ಅವಶ್ಯಕ. ಅಲ್ಲದೆ, ಪ್ರಸಂಗದ ವಸ್ತುಗಳಿಗೆ ಸ್ವತಃ ಸುಖದುಃಖಾದಿ ಬೆಲೆಗಳ ಸಂಬಂಧ ಮೂಲತಃ ಇಲ್ಲ, ಅವೆಲ್ಲ ಪರಸ್ಪರ ಸಂಬಂಧ, ಸಾಪೇಕ್ಷತೆ, ಕಾರಕವನ್ನು ಇತ್ಯಾದಿ ಜ್ಞಾನವನ್ನಾದವು ಎಂಬ ಅಂಶವನ್ನು ಮನದಂದು, ಕಾಮ ಕ್ರೋಧಾದಿ ಗುಣಗಳು ಸ್ವತಃ ನಿಂದ್ಯವಲ್ಲ; ಅವು ವಿಶಿಷ್ಟ ಶಕ್ತಿಗಳು; ಅವನ್ನು ದುರುಪಯೋಗ ಮಾಡಿಕೊಂಡಾಗ ಮಾತ್ರ ಅವು ನಿಂದ್ಯವಾಗುವವು, ಸದುಪಯೋಗಪಡಿಸಿಕೊಂಡಾಗ ವಂದ್ಯವೇ ಆಗುವುವು ಎಂಬ ಅಂಶವನ್ನು ಅರಗಿಸಿಕೊಳ್ಳಬೇಕು. ರಸಶಾಸ್ತ್ರದಲ್ಲಿ ಇದೇ ಮಾತನ್ನು ಹೇಳುತ್ತಾರೆ: ನವರಸಗಳ ಸ್ಥಾಯಿಗಳು ರತಿ, ಕ್ರೋಧ, ಭಯಾದಿಗಳಾದರೂ ಅವು ಸಹೃದಯ ಉದ್ರೇಕದಿಂದ ಬರತಕ್ಕಂಥವು; ಅಂದರೆ ಸಾತ್ವಿಕ ಸಾಯುಕನ ಪ್ರೇರಣೋದ್ರೇಕಕ ಅವಸ್ಥೆಗಳು; ಅವು ಪರಸ್ಪರರಿಗೆ ಉಂಟಾದ ರಸಗಳಾಗುತ್ತವೆ ಎಂದಿದೆ. ಕಾಮವಾಗಲಿ, ಕ್ರೋಧವಾಗಲಿ ಸಹಜಸ್ಥಿತಿಗಳಲ್ಲ, ಸರ್ವ ಸಂದರ್ಭಗಳಲ್ಲಿ ನಿಂದ್ಯ, ಹೇಯವಾದವು ಎಂಬ ಅಂಶವನ್ನು ವೈರಾಗ್ಯ ಬೋಧಕರು, ಅಧ್ಯಾತ್ಮ ಪುರಸ್ಕರ್ತರು ತಿಳಿದುಕೊಳ್ಳಬೇಕು; ಮತ್ತು "ತ್ವಮೇವ ಶರಣಂ ಮಮ", "ಕೇವಲ ಕೋಪನ ಪೂರಯೋಗ" ಎಂಬ ಗುರುತ್ವದ ಬೋಧನಕ್ರಮವು ಅಧ್ಯಾತ್ಮ ವಿದ್ಯೆಗೆ ಕುತ್ತು ಹಿಡಿಸುತ್ತದೆ, ಮತ್ತು ಬದುಕಿಗೆ ಮಾರಕವಾಗುತ್ತದೆ, ತಿರಸ್ಕಾರಕ್ಕೆಡೆ ಒಯ್ದು ಮುಟ್ಟಿಸುತ್ತದೆ ಎಂಬ ಅಂಶವನ್ನು ಲಕ್ಷಿಸಬೇಕು.

### ಕಾಮ ಕ್ರೋಧಗಳ ನಾಟಕೀಯ ತಾಂಡವ

ಬುದ್ಧಿಸಂಗತ ದೃಷ್ಟಿಯಿಂದ ಇಂದಿನ ಪರಿಸ್ಥಿತಿ ನೋಡಿದ ಅಧ್ಯಾತ್ಮವೀರರ ಚರಿತ್ರೆಯನ್ನು ತೆಗೆದುಕೊಂಡರೂ ಅವರಲ್ಲಿ ಸಾಧಕರು ಕಾಮ ಕ್ರೋಧಾದಿಗಳೊಡನೆ ಹೋರಾಡಿ ಅನೇಕ ಸಲ ಸೋತಿದ್ದು ಅಂತ್ಯದಲ್ಲಿ ಜಯಿಸುವ ನಾಟಕೀಯ ರಮ್ಯತೆಯನ್ನು ತರುವ ಪ್ರಯತ್ನ ಕಂಡುಬರುತ್ತದೆ. ಸಂಸಾರ, ಸ್ತ್ರೀಯರು, ಕೀರ್ತಿ, ಧನ, ಆಹಾರ ವಿಹಾರ ಇವುಗಳ ತಿಂದು ಅಜೀರ್ಣವಾಗಿ, ಇಲ್ಲವೆ ಅಸಮಂಜಸ ಅಸಮರ್ಥನೆಯಿಂದ ಬರುತ್ತದೆ. ಅವುಗಳ ದೇಹಕ್ಕೆ ಕೆಟ್ಟ ಸಾಹಚರ್ಯ ತನ್ನ ಮನೋಜಯದಲ್ಲಿ ನಿಜವಾಗಿ ಸ್ಥಿರ ಇರಲಿ, ಆಗ ಅನ್ಯ ವಸ್ತುವನ್ನು ಹೀಗಳೆಯಲು ಅವಕಾಶವೇನು ಇದೆ? ಅದರಿಂದಲೇ ಹುಟ್ಟಿ ಬೆಳೆದು ಅನಂತರ ಅದನ್ನೇ ಹಳಿಯುವ ಇಂತಹ ಕೃತಕತೆಯು ದೂರಿಸಲ್ಪಡಬೇಕಾಗಿದೆ. ಕೆಲ ಕಲಿತವರಿಗೆ ಕಂಡರೆ ಅವರಲ್ಲಿ ಆಶ್ಚರ್ಯವಿಲ್ಲ. ನಿಜವಾಗಿ ಸಾಧಕರಿಗೇ ಹೆಚ್ಚು ಕಾಮಕ್ರೋಧಗಳಿದ್ದವೆ? ಅವುಗಳ ಹಾವಳಿಗೆ ತುತ್ತಾಗಿ ಅದರ ಅರ್ಪಣೆಯಿಂದ ಒಬ್ಬ ಅಪೂರ್ವ ಪ್ರಯತ್ನದಿಂದ ಆದ್ದರಿಂದ ಆಗುವುದರಲ್ಲಿ ಅವರ ಹಿರಿಮೆಯಲ್ಲಿ ಬಂತು? ಆ ದೃಷ್ಟಿಯ ಅತಿರೇಕ ಚರ್ಚೆ ಅನೇಕ ವೇಳೆ ಜುಗುಪ್ಸಾಜನಕವೆನಿಸಿದರೆ ಅಸ್ವಾಭಾವಿಕವಲ್ಲ. ತನ್ನ ಕಾಮ ಕ್ರೋಧಗಳಿಗಾಗಿ ನಿಸರ್ಗಗಳನ್ನು ನಿಂದಿಸಬೇಕೇ? ಕೆಟ್ಟದ್ದಕ್ಕೆ ವಸ್ತುವಾದರೂ ಧ್ವನಿಕರವಾದ ಬಹಿರ್ಲೇಪದ ಜನೆಗುಂಗಿನಿಂದ ಮಾಡಿಕೊಡುವ ಪ್ರಚಾರಕ್ಕಿರುವುದನ್ನು ಅಧ್ಯಾತ್ಮಪ್ರಸಾರದ ಹೊಣೆ ಹೊತ್ತವರು ಹಿಡಿದರೆ ಅವರ ಪ್ರಯತ್ನ ಯಶಸ್ವಿಯಾಗುತ್ತದೆ.

ಈ ಪ್ರಯತ್ನ ಪ್ರಸ್ತುತ ಪುಸ್ತಕದಲ್ಲಿ ಪೂರ್ಣ ಯಶಸ್ವಿಯಾಗಿ ನಡೆದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಲೇಖಕರು ಮುನ್ನುಡಿಯಲ್ಲಿ ಕೊಟ್ಟ ವಾಚಕ ಸಾಮರ್ಥ್ಯ ಶ್ಲಾಘ್ಯವಿದ್ದರೂ ಅದನ್ನು ಪುಸ್ತಕದಲ್ಲಿ ಬರುವ ಅಹಿಂಸಾತ್ಮಕ ಹೋರಾಟಕ್ಕೆ ಹೊಂದಿಸಿದ ಭಾರತೀಯ ಕೆಲ ಸಾಧಕರ ಜೀವನಕ್ಕೆ ಸಂಬಂಧಿಸಿದ ಕಥೆಗಳು ನಿದರ್ಶಿಸುವುದು ಎಲ್ಲಿಯೂ ಕಂಡು ಬರುತ್ತಿಲ್ಲ. ಆದರೆ, ಅವರ ಕರ್ತವ್ಯದಲ್ಲಿ ಲ್ಲದ ನಿರ್ಣಯ ಮತ್ತು ಅನುಭವ ಕಥನ ಎಷ್ಟೋ ಕಡೆ "ಅನುಭಾವದ" ದ ಹೆಸರಲ್ಲಿ ಬಳೆದು, ನಂಬಿಗೆ ಹುಟ್ಟಿಸಲು ಲೇಖಕರು ಸಾಂದರ್ಭಿಕವಾಗಿ ಪ್ರಯತ್ನಿಸಿರುವರಲ್ಲದೆ, ಮುನ್ನುಡಿಯಲ್ಲಿ ತೋರಿದ ತಮ್ಮ ತರ್ಕಶಕ್ತಿಯಿಂದ ಕಾಲನ್ನು ಹೊಟ್ಟಿದಂದ, ವೈಜ್ಞಾನಿಕ ಸತ್ಯಾಂಶವನ್ನು ಕುರುಡು ನಂಬಿಗೆಗಳಿಂದ ಬೇರ್ಪಡಿಸಿ ವಿವರಿಸಲು ನಿಲ್ಲಿಕಸಿ ಯತ್ನಿಸಿಲ್ಲ. ಇದರಿಂದ ಅವರು, ತಪ್ಪಿಸಲು ಹೊರಟ "ಕಲಿತವರು ಮಾಡುವ ಆರೋಪ" ತಪ್ಪದೆ ಕೆಲವೆಡೆ ಹಾಗೇ ಉಳಿಯುವಂತಾಗಿದೆ.

ಪಾಶ್ಚಾತ್ಯ ಅಭಿಪ್ರಾಯದ ದಾಸ್ಯವನ್ನು ಹೇಳಿದ ಇವರುಸ್ವತಃ ಒಮ್ಮೆ ಹೆಂಗಸರ "ಅಂತಃಸ್ಫೂರ್ತಿ" ಎಂಬ ಮಾತನ್ನು ಉಪಯೋಗಿಸಿ ವ್ಯಾಖ್ಯಾತರನ್ನುಸುತ್ತದೆ. ಹೆಂಗಸರಿಗೆ ಮಾತ್ರ ಅಂತಃಸ್ಫೂರ್ತಿಯದೆ ಎಂದು ಯಾವ ಭಾರತೀಯ ಶಾಸ್ತ್ರಶಾಸ್ತ್ರದಲ್ಲೂ ಹೇಳಿಲ್ಲ. ಎರಡನೆಯದಾಗಿ ಇಂದಿನ ಕಲಿತವರ ಕಲಿಕೆಯನ್ನು ಪುರಸ್ಕರಿಸಿದ ಇವರು ಬರಹಗಳಲ್ಲಿ ಕಂಡು ಬರುವಂಥ ಬೇಸರಿಸಿಕೊಂಡವರು, ನ್ಯಾಯನಿಷ್ಠೆ, ದೊಡ್ಡಸ್ತನ, ಕರೆಕೊಂಡು ಕುರುಡವಾಗಿರುತ್ತದೆ, ಎಂಬಂತಹ ಚಿತ್ರ ಹುಟ್ಟಿ, ಸ್ವಾಂತಿಕ್ಯ ನಕಲನ್ನು ಉಳಿಯದಂತೆ ಎಷ್ಟೂ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಇಂಥ ಅಲ್ಪದೋಷಗಳನ್ನು ಗಣ್ಯವೆಂದೆಣಿಸದಲ್ಲಿ, ಸಾರ್ವಜನಿಕ ಹೀನನಿಂದತೆಗಳನ್ನು ತಿದ್ದುವ, ಅವರೆದುರು ಉನ್ನತ ಅಧ್ಯಾತ್ಮಿಕ ಆದರ್ಶಗಳನ್ನು ಬಿಂಬಿಸುವ ಮಹಾತ್ಮರಗಳನ್ನು ಇರುವ ಕೆಲಸವನ್ನು ಈ ಪುಸ್ತಕ ತಕ್ಕ ಮಟ್ಟಿಗೆ ಸಮರ್ಥವಾಗಿ ನೆರವೇರಿಸಿದೆಯೆಂದು ನಿಸ್ಸಂಕೋಚದಿಂದ ಹೇಳಬಹುದು. ಆ ಬಗ್ಗೆ ಸಮಾಜವು ಲೇಖಕರಿಗೆ ಕೃತಜ್ಞತೆ ಸಲ್ಲಿಸಬೇಕು.

ಕರ್ಮವೀರ ೧೪ ಜುಲೈ ೧೯೪೯

# ೨೫೦೦ ವರ್ಷ ಹಳೆಯ
# [illegible]ತೀಯ ಸಂಸ್ಕೃತಿಯ ಕೇಂದ್ರ

[illegible] ತ್ರಿಯನ್ನು ಅಕ್ಕಪಕ್ಕದ ಮನೋ [illegible] ನೋಡುತ್ತಾ ಅನಾಯಾಸ [illegible] ಕಾಶಿನೊಳಗೆ ಪ್ರವಿಸಿಬಿಡ [illegible] ಆದರೆ ಅಷ್ಟು ಸಮಯವೂ [illegible] ದ್ದರೆ ಮಾತ್ರ ಇದು ಸಂಭವ. [illegible]ವು, ಬನಾರಸದ ಉಪನಗರ [illegible] ಮತ್ತು ಒಂದು ಲೆಕ್ಕದಿಂದ [illegible] ಕೊಡಿಯೇ ಇದ್ದರೂ ಇನ್ನೂ [illegible]ದೆ. [illegible] ಮೊನ್ನೆ [illegible] ಸಂಬಂಧವನ್ನು [illegible] ವಿದ್ಯುದ್ದೀಪಗಳ ಕೃತ್ರಿಮ [illegible] ಒಂದು ಚಕ್ರ [illegible] ಹಾಯಸ್ಕೂಲನ್ನು ಬಿಟ್ಟರೆ [illegible] ನಗರದ ನಿಶಾನೆಗಾಗಿ [illegible]ಇಲ್ಲ. ನಿಮಗೆ ಇಲ್ಲಿಯ ಒಂದು [illegible]ಅಂಗಡಿಯಿಂದ 'ಸಿಂಗಲ್ ಚಾ' [illegible]

[illegible]

[illegible] ಮುಂದೆ [illegible] ನಮಗೆ [illegible] ವಾದವು. ಸಾರನಾಥಕ್ಕೆ ಬರುವವರೆಲ್ಲಾ ಬರುವದು ಹೆಚ್ಚಾಗಿ ಇದನ್ನೇ ನೋಡಲೆಂದು ಇಲ್ಲೇ ಸ್ವತಂತ್ರ ಭಾರತದ ಹೆಗ್ಗುರುತಾದ ಅಶೋಕನ ಧರ್ಮಚಕ್ರವು [illegible] ಒಳಗೆ ಹೋಗಲು ತಲಾ ಎರಡಾಣೆಯ ತಿಕೀಟು ತೆಗೆದುಕೊಳ್ಳಬೇಕಾಗುವದು.

### ಅಶೋಕ ಚಕ್ರ

ಒಳಕ್ಕೆ ಹೋದಿರೆಂದರೆ ನಿಮಗೆ ಅನೇಕ ಪ್ರಕಾರದ ಕೆತ್ತಿದ ಕಲ್ಲುಗಳೂ ಮೂರ್ತಿಗಳೂ ಸಾಲಾಗಿ ಅಂದವಾಗಿರಿಸಲ್ಪಟ್ಟದ್ದು ಕಂಡುಬರುವದು. ಪ್ರಾಚ್ಯಸಂಶೋಧನ ಶಾಖೆಯವರು ಪುರಾತನ ಅವಶೇಷ

[illegible] ನಾಲ್ಕು ಸಿಂಹಗಳು. [illegible] ಇದೇ ಅಶೋಕನ [illegible] ಈ ಚಕ್ರವೇ [illegible] ಇನ್ನು ಬರೆದಿರುವ [illegible]ಜಸುತ್ತಿರುವದು. [illegible] ಸಿಂಹ ಎತ್ತು [illegible] ಒಂದೇ ತೆರನಾಗಿ ಕಾಣಬರುವದ. ಈ ನಾಲ್ಕು ಪಶುಗಳು ನಾಲ್ಕು ದಿಕ್ಪಾಲಕರಂತೆ ಸಿಂಹ ಉತ್ತರ, ಎತ್ತು ದಕ್ಷಿಣ, ಕುದುರೆ ಪಶ್ಚಿಮ ಮತ್ತು ಆನೆ ಪೂರ್ವದ ದಿಕ್ಪಾಲಕ. ಈ ದಿಕ್ಪಾಲಕರು ಆ ಮಹಾ ಧರ್ಮದ ಸಂದೇಶವನ್ನು ಜಗತ್ತಿನ ನಾಲ್ಕೂ ಮೂಲೆಗೆ ಬೀರುವದಕ್ಕಾಗಿಯೋ ಎಂಬಂತೆ ತೋರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅವರ ಸೂಕ್ಷ್ಮವಾದ ಕೆತ್ತನೆಯ ಕೆಲಸ ಮತ್ತು ಅದರ ಕುಂದದ ಕಾಂತಿ ಆಶ್ಚರ್ಯಕರವಾದವು. ಇದು ಕ್ರಿ. ಪೂ. ೨೫೦ ನೆಯ ಇಸ್ವಿಯಲ್ಲಿ ಮಾಡಿದುದೆಂದು ಅದಕ್ಕೆ ಅಂಟಿಸಿದ ಚೀಟಿಯಿಂದ ಗೊತ್ತಾಗುತ್ತದೆ. ಇದರ ಪಕ್ಕದಲ್ಲೇ ಇರುವ ಕಲ್ಲಿನ ಒಂದು ಅತಿ ದೊಡ್ಡ ಕೊಡೆಯೂ ದಂಗುಬಡಿಸುವಂತಹದು. ಅದು ಬೋಧಿಸತ್ವನ ಛತ್ರವಂತೆ. ಈ ಎಲ್ಲಾ ಹಳೆಯ ಕುರುಹುಗಳನ್ನು ನೋಡುವಾಗ, ೭—೮ ನೂರು



ಸಾರನಾಥದ ಜೈನ ಮಂದಿರ.



ಧರ್ಮಸ್ತೂಪ.

[illegible]ದರೂ ಊಟ ತಿಂಡಿಯ ವ್ಯವಸ್ಥೆ [illegible] ಮಾಡಿಕೊಳ್ಳಬೇಕು.

### [illegible]ಸಿ ರಾಮನ ಐತಿಹಚ್ಯ

[illegible]ಕದ ಪುಟ್ಟ ಸ್ಟೇಶನ್ನಿನಿಂದ [illegible] ಮೂರ್ನಾಲ್ಕು ಮೈಲು ದೂರದಲ್ಲಿದೆ [illegible]ರ್ಧಮೈಲು ಸಾಗುತ್ತಲೇ ಎಡ [illegible] ಸಣ್ಣ ಕೋಟೆಯ ಹಾಗೆ [illegible]ದೆ. ಇದಕ್ಕೆ ಚೌಖಂಡಿಸ್ತೂಪ [illegible] ಒಂದು ಚಿಕ್ಕ [illegible] [illegible] ಎತ್ತರವಾಗಿದೆ. [illegible] ನಾವು ಬಲು ದೂರದ [illegible] ನೋಡಬಹುದು. ಅಲ್ಲಿಂದ [illegible] ಮಂದಿರಶಿಖರಗಳೂ ದೂರದ [illegible] ಭವನಗಳೂ ರಮ[illegible] ಕಾಣಿಸುತ್ತವೆ. ಅದರ ಒಳ[illegible] ಹೊದರಿದೆ. ಇದಕ್ಕೆ ಪನವಾಸ [illegible]

ಗಳನ್ನೂ ಸ್ಮಾರಕ ವಸ್ತುಗಳನ್ನೂ ಬಹಳ ಖರ್ಚುಮಾಡಿ ಜತನವಾಗಿ ಕೂಡಿಟ್ಟಿದ್ದಾರೆ. ಪ್ರತಿಯೊಂದು ಮೂರ್ತಿ ಇಲ್ಲವೆ ಕಟೆದ ವಸ್ತುವಿನಡಿಯಲ್ಲಿ ಅದರ ಕಾಲ ಮತ್ತು ಶೈಲಿಗಳನ್ನು ಚೀಟಿಯೊಂದರಲ್ಲಿ ನಮೂದಿಸಲಾಗಿದೆ. ಕ್ರಿ. ಪೂ. ೩ನೇ ಶತಮಾನದಿಂದ ಕ್ರಿ. ಶ. ೮ ನೇ ಶತಮಾನದ ವರೆಗಿನ ಶಿಲ್ಪಕಲೆಯನ್ನು ನಾವಿಲ್ಲಿ ನೋಡಬಹುದು. ಬುದ್ಧನ ಪ್ರತಿಮೆಗಳಲ್ಲಿ ಅಶೋಕನ ಕಾಲದವು, ಗುಪ್ತಕಾಲದವು ಮತ್ತು ಕುಶಾನ ಕಾಲದವು ಮುಖ್ಯವಾದವು. ಇವುಗಳಲ್ಲಿ ಕಾಲಕ್ಕನುಗುಣವಾಗಿ ಆದ ಶೈಲಿವಿನ್ಯಾಸಗಳನ್ನೂ ಮಾರ್ಪಾಡನ್ನೂ ಅವುಗಳಲ್ಲಿಯ ಭೇದವನ್ನೂ ನಾವು ಕಾಣಬಹುದು. ಆದರೆ ಮೇಲೆ ಹೇಳಿದಂತೆ ಇವೆಲ್ಲವುಗಳನ್ನು ತನ್ನ ಪ್ರತಿಭೆಯಿಂದ ಮುಚ್ಚುವ ವಸ್ತುವೆಂದರೆ ಅಶೋಕ ಚಕ್ರ. ಶಿಲ್ಪಕಲೆಯ ತವರಿನವರಾದ ಕನ್ನಡಿಗರ ಮನವನ್ನು ಸೆರೆಹಿಡಿಯುವ

ವರ್ಷಗಳ ಬೌದ್ಧಧರ್ಮದ ಉತ್ಥಾನ ಕಾಲದ ಇತಿಹಾಸವೇ ನಮ್ಮ ಕಣ್ಣಿಗೆ ಕಟ್ಟಿದಂತಾಗುತ್ತದೆ.

### ಜೈನ ಮಂದಿರ

ಪ್ರದರ್ಶನಾಲಯದ ಎದುರಿಗೇ ಒಂದು ಬಯಲುಂಟು. ಅಲ್ಲಿ ನಾವು ನಾಲ್ಕಾರು ನಿಮಿಷ ಅಡ್ಡಾಡಿದರೆ ಪ್ರಸಿದ್ಧ ಭಿಕ್ಷುಗಳ ಸಮಾಧಿಗಳೂ ಕೆಲವು ಮುರುಕು ಮಂಟಪ, ಕಡಿದ ಕಂಬ (ಸ್ತೂಪ) ಗಳೂ ಕಂಡುಬರುವವು. ಹಾಗೇ ಬಲಕ್ಕೆ ಹೊರಳಿದೆವೆಂದರೆ ಬರುವದು ಜೈನ ಮಂದಿರ. ಹೊರಗಿನಿಂದ ನೋಡಲು ಇದು ಸಾಮಾನ್ಯವಾಗಿ ಕಂಡರೂ ಒಳಗಿನ ಹಸ್ತಿದಂತದ ಪೀಠದಲ್ಲಿರುವ ಜಿನದೇವನ ಮೂರ್ತಿಯೂ ಗೋಡೆಯ ಮೇಲೆ ಬರೆಯಲ್ಪಟ್ಟ ಗೋಮಟೇಶ್ವರನನ್ನೊಳಗೊಂಡ [illegible] ಚಿತ್ರಗಳೂ ನೋಡತಕ್ಕಂಥವೇ. ಈ ಗುಡಿಯ ಪಕ್ಕ [illegible]

## [illegible]

ಫಿಲಿಪ್ಪೈನ್ಸಿನ ಅಧ್ಯಕ್ಷ [illegible] ಅವರನ್ನು [illegible] ವಿರುದ್ಧವಾಗಿ [illegible] [illegible]

[illegible] ಯಲ್ಲಿ [illegible] ಅವರನ್ನು [illegible] ನೀಡಿದರು.

ಇಂಡೋನೇಶಿಯದ ಅವಸರದ [illegible] ರಾಜ್ಯ ಸರಕಾರದ ನೇತೃವಾದ ಡಾ. [illegible] ಬಿಟ್ಟುಕೊಟ್ಟು ಹೋದರು. ಇವರ ಪುನರಾಗಮನಕ್ಕೆ ಸುಮಾತ್ರಕ್ಕೆ ಹೋದ ಪ್ರಜಾರಾಜ್ಯದ ಮಂತ್ರಿಮಂಡಲದ ಸಮಿತಿಯ ಪ್ರಯತ್ನವೇ ಕಾರಣ.

ಮಲಯ ಮಹಾಮಂಡಲದ ಮತ್ತು ಸಿಂಗಪುರದ ಸರಕಾರಗಳು [illegible] ಎಲ್ಲ ಡಾಲರ್ ಪ್ರದೇಶಗಳಿಂದಲೂ ಆಯಾತ ಮಾಡಿಕೊಳ್ಳಲು ಲೈಸೆನ್ಸ ಕೊಡುವುದನ್ನು [illegible] ನಿಲ್ಲಿಸಲು ನಿರ್ಧರಿಸಿವೆ. [illegible] ಕಾಮನ್‌ವೆಲ್ತಿನ [illegible] ಮಂತ್ರಿಗಳ ಪರಿಷತ್ತು (ಲಂಡನ್ನಿನಲ್ಲಿ) [illegible] ಮಾಡಬೇಕೆಂದು [illegible] ಬ್ರಿ. ಸರಕಾರ ತಿಳಿಸಿದ್ದೇ ಕಾರಣ.

ಬ್ರಿಟನ್, ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳ ಹಣಕಾಸಿನ ಮಂತ್ರಿಗಳು ಕೂಡಿ ಬ್ರಿಟನ್ನಿನ ಡಾಲರ್ ಕೊರತೆಯ ಭಯಂಕರ ಪ್ರಶ್ನೆಯನ್ನು ಬಿಡಿಸಲು ಪ್ರಯತ್ನಿಸಿ [illegible] ತಿಳಿಯುತ್ತದೆ.

ಈಗ ಲಂಡನ್ನಿನಲ್ಲಿರುವ ಭಾರತದ ಪ್ರಮುಖ ಉದ್ಯಮಿಗಳಾದ ಶ್ರೀ ಜಿ. ಡಿ. ಬಿರ್ಲಾ ಅವರು ಬ್ರಿಟನ್ನು ತನ್ನ ತಾಂತ್ರಿಕ ತಜ್ಞರನ್ನು [illegible] ಕಳಿಸಿ, ನಿರ್ಯಾತದ ದರ [illegible], ಸಾಮಗ್ರಿಗಳ [illegible] ಡಾಲರ್ [illegible] ಮಾಡುವುದರಲ್ಲಿ [illegible] ಎಂದರು.

ಅಂತಾರಾಷ್ಟ್ರೀಯ ಗೋದಿ ಸಮಿತಿಯ [illegible] ಲಂಡನ್ನಿನಲ್ಲಿ [illegible] ವೆಂದು [illegible]. ಆ ಸಮಿತಿಗೆ [illegible] ಬ್ರಿಟಿಶ್ [illegible] ಅಧಿಕಾರಿ ಶ್ರೀ ಎಫ್ [illegible] ಅವರನ್ನು ಅಧ್ಯಕ್ಷರನ್ನಾಗಿ ಆರಿಸಲಾಗಿದೆ.

[illegible] ಶಸ್ತ್ರಾಸ್ತ್ರಗಳನ್ನು [illegible] ಮಾರ್ಶಲ್ ಟಿಟೋ [illegible] ಸುದ್ದಿ [illegible].

ಫ್ರೆಂಚ್ ಇಂಡಿಯಾ ಸರಕಾರದ [illegible] ಚಂದ್ರನಗರದಲ್ಲಿ ನಡೆದ [illegible] ಪರಿಣಾಮವಾಗಿ ಇನ್ನು ಮೇಲೆ [illegible] ಭಾರತ ರಾಷ್ಟ್ರೀಯ ಧ್ವಜಕ್ಕೆ ಅವಮಾನವಾಗದಿರಲು ಅದರ ಸಾರ್ವಜನಿಕ ಬಳಕೆಯನ್ನೇ ಬಿಟ್ಟುಬಿಡಬೇಕೆಂದು ಸಾರಿದ್ದಾರೆ.

ದಕ್ಷಿಣಆಫ್ರಿಕೆಕ್ಕೆ [illegible] ಕೋಟಿ ಪೌಂಡಿನ [illegible] ಸಾಲದಲ್ಲಿ [illegible] ಕೊಟ್ಟದೆಂದು ತಿಳಿಯುತ್ತದೆ.

ಲಂಡನ್ ಧಕ್ಕೆ ಕೆಲಸಗಾರರ [illegible] ಕಾರಣ [illegible] ಆದರಿಂದ [illegible] ಸರಕಾರ [illegible].

[illegible] ಫ್ರೆಂಚ್ [illegible] ಸರಕಾರ [illegible].

ಬೆಲ್ಜಿಯಮ್ಮಿನ ಮುಖ್ಯಮಂತ್ರಿ ಶ್ರೀ [illegible]

## ಶಹನಾಯಿ

ಒಬ್ಬ ಜಮೀನುದಾರ. ಅವನ ಮಗಳು ... ಈ ಜಮೀನುದಾರ ಮುತ್ತಿ ... ರ ಅಪ್ಪಯನ್ನು ಎತ್ತಿ ಸಾಕಿರುತ್ತಾನೆ. ಅಪ್ಪಿ ... ಯಿಂತವನ ಮಗ ವಿಕ್ರಮ ಎಂಬ ... ಕಳ್ಳರಿಂದ ಜಮೀನುದಾರನಿಗೆ ... ಕಳಿಸುತ್ತಿರುತ್ತಾನೆ. ಅವನನ್ನು ಹಿಡಿ ... ಜಮೀನುದಾರನು ವಿಕ್ರ ಪ್ರಯತ್ನ ... ದರೂ ಅವನು ಸಿಕ್ಕಿದಿಲ್ಲ. ಇದ ... ಇನ್ನೊಬ್ಬ ... ಒಬ್ಬ ... ಅವನ ... ಪ್ರಮೀಳೆ ಧನಮದ ಮತ್ತು ... ಮುಕ್ತಳಾಗಿ, ... ಹೀನವಾಗಿ ನಡೆಸಿ ... ಇದಕ್ಕಾಗಿ ಅವನಿಗೆ ಕೆಡಕೆನಿ ... ಪ್ರಮೀಳೆಯ ತಂದೆ ಇನ್ನೊಬ್ಬ ಜಮೀನುದಾರನ ಮಗನಿಗೆ ಅವಳನ್ನು ಕೊಡುವದಾಗಿ ಒಪ್ಪಂದಮಾಡಿಕೊಂಡಿರುತ್ತಾನೆ. ಆ ಪ್ರಕಾರ ಅವರಿಬ್ಬರನ್ನೂ ಒಂದು ಕಡೆ ಭೆಟ್ಟಿ ಮಾಡಿಸಲು ಯತ್ನಿಸಿದ. ಈ ಸನ್ನಿವೇಶವನ್ನು ಉಪಯೋಗಿಸಿಕೊಂಡು ಅಕೆಯು ... ನಾಲ್ಕು ... ಹುಡುಗಿಯರು ಸಂಚುಮಾಡುತ್ತಾರೆ. ಆ ಪ್ರಕಾರ ಆ ವರನನ್ನು ಅವರೊಳಗಿನ ಒಬ್ಬಳು ತಾನು ಪ್ರಮೀಳೆಯೆಂದು ಹೇಳಿ ಮೋಸದಿಂದ ಒಲಿಸಿಕೊಳ್ಳುವಳು. ಒಂದೇದಿನ ವಿಕ್ರಮ ... ಚೋರನುಸಾರಯನು ... ಹೋಗುವಾಗ ... ಕಾಲೀಯ ... ಆ ವರನಿಗಾಗಿ ದಾರಿ ... ಪ್ರಮೀಳೆಗೆ ಭೆಟ್ಟಿಯಾದನು. ಅವನೇ ಅವನೆಂದು ತಿಳಿದ ಪ್ರಮೀಳೆಯು ... ಪ್ರಣಯದಿಂದ ವಿಹರಿಸುತ್ತಾಳೆ. ... ಪ್ರಮೀಳೆಯು ... ಬಡಹುಡುಗಿಯನ್ನು ಬಲಾತ್ಕಾರದಿಂದ ... ಲಗ್ನ ಮಾಡಿಕೊಂಡು ... ಮೋಸದಿಂದ ... ಅವನು ... ಪ್ರಮೀಳೆಯು ... ಹೋಗುತ್ತಾನೆ ... ಅವನು ಆ ಸಮಯದಲ್ಲಿ ... ಜಮೀನು ... ಅವನು ... ಜಮೀನು ... ಪ್ರಮೀಳೆ ... ಮರುಳಾದ ... ಬಡ ಹುಡುಗಿಯರನ್ನು ಅವರವರ ಅಪೇಕ್ಷಿತ ವರರೊಡನೆ ಲಗ್ನ ಮಾಡುವನು.

ಹುಬ್ಬಳ್ಳಿಯ "ರೂಪಂ ಟಾಕೀಸ್"ನಲ್ಲಿ ಈ ಚಿತ್ರ(ಪ್ಲಾಟಿನಮ್ ವಾರ)ಈಗ ನಡೆಯುತ್ತಿದೆ. ರೆಹಾನಾ, ..., ಮಮುತಾಜಅಲಿ, ... ಮುಂತಾದವರು ಪಾತ್ರಗಳು. ಚಿತ್ರವನ್ನು ಅವಲೋಕಿಸಿದರೆ ... ಪ್ರದರ್ಶಿಸಿದ ಕಥೆಯಾಗಿದೆ. ... ಸನ್ನಿವೇಶಗಳು ಇಲ್ಲಿ ಬಂದಿರುವದು ... ಫಿಲ್ಮಿಸ್ತಾನದವರು ... ಹುಟ್ಟಿಸಿದ್ದು ... ಸರ್ವಸಾಧಾರಣ.

ಬಡ ಹುಡುಗಿಯರು ... ಹೊಟ್ಟೆ ಹೊರೆಯಲು ... ನೃತ್ಯ ಸಂಗೀತಗಳನ್ನು



ಹಿಂದುಸ್ಥಾನದಲ್ಲಿ ಹೆಸರಾದ ಅಶ್ವಪತಿಯೆಂದರೆ ಸತೀಸಾವಿತ್ರಿಯ ತಂದೆ. ಆದರೆ ಈ ಅಶ್ವಪತಿ ರೋಮ್ ದೇಶದವನು. ಕ್ರಿಸ್ತಶಕದ ಆದಿಯಲ್ಲಿದ್ದ ರೋಮನ್ ಚಕ್ರವರ್ತಿ ಕಲಿಗುಲನು ತನ್ನ ನಚ್ಚಿನ ಕುದುರೆಗೆ ಸಹ-ಚಕ್ರವರ್ತಿಯ ಪದವಿಯನ್ನು ಕೊಟ್ಟಿದ್ದನಂತೆ. ಕುದುರೆಗೆ ಅರಮನೆಯ ಸರ್ವ ರಾಜಮರ್ಯಾದೆಯೂ ಸಿಕ್ಕಿತು. ಅದಕ್ಕೆ ಕಡಲೆ ತಿನ್ನಲು ಒಂದು ಪುಷ್ಟದಂತದ ಹಣೆಮರಿಗೆ(ಗೋದ್ಲೆ)(Manger) ದ್ರಾಕ್ಷಾರಸ ಕುಡಿಯಲು ಒಂದು ಬಂಗಾರದ ದೊಡ್ಡ ಕಟ್ಟೆ ಇವನ್ನು ಮಾಡಿಸಿಕೊಡಲಾಗಿತ್ತು. ಅದು ಹಿಂದುಸ್ಥಾನದಲ್ಲಿರುತ್ತಿದ್ದರೆ, ರಾಜದ್ವಾರದಲ್ಲಿ ಅದಕ್ಕೆ ಪರಾಕು ಹೇಳದೆ ಇರುತ್ತಿದ್ದರೇನು? "ಅಶ್ವಪತಿ ಮಹಾರಾಜಕೀ ಜೈ" ಎಂದೂ "ಅಶ್ವರಾಜ್ಯರಮಾರಮಣಾ ಆಆಆ ಘೋ ಪರಾಕು" ಎಂದೂ ಅದಕ್ಕೆ ಸೇವೆ ಸಲ್ಲುತ್ತಿತ್ತಲ್ಲವೆ?

ಬಳಸಿಕೊಂಡು ಬೀದಿಯ ಬಸವಿಯರಾಗುವ ಕರುಣಾಸ್ಪದ ನೋಟ ಕಾಣಿಸುವಂತಿದ್ದರೂ ಅವರಿಗೆ ಹಾಗೆ ಮಾಡದೆ ಬೇರೆಯ ಸುಶೀಲವಂತಿಕೆಯ ದೇಹಶ್ರಮದ ಕೆಲಸ ಅಸಾಧ್ಯವಾಗಿತ್ತು, ದುರ್ಭರವಾಗಿತ್ತು ಎಂಬ ಕಾರಣವನ್ನು ಸೂಚಿಸಬಹುದಾದ ... ಆದ ... ಲಲಿತಕಲೆಗಳನ್ನು ... ಬಳಸಿ ... ಕಲೆ, ಲಲಿತವಾಗಿ ಉಳಿಯದು, ಅದು ... ಬಡತನ ... ಲಕ್ಷಣೀಯ ಅಂಶ.

—"ಕರ್ಮವೀರ"ದ ಪ್ರತಿನಿಧಿಯಿಂದ

## ವಿಚಿತ್ರ ಭಾರತೀಯರು!

"The People" ಎಂಬ ದಿಲ್ಲಿಯ ಇಂಗ್ಲೀಷ ಪತ್ರಿಕೆಯೊಂದರಲ್ಲಿ "M. O." ಎಂಬ ಅಂಕಿತದಲ್ಲಿ ಇಂಗ್ಲೀಷ ಮನುಷ್ಯನೊಬ್ಬನು ಈ ಪ್ರಕಾರ ಬರೆದಿದ್ದಾನೆ:

"ಕಾಶ್ಮೀರ ಮಹಾದ್ವಾರದಲ್ಲಿ ನಾನು ೫ ನೆ ನಂಬರಿನ ಬಸ್ ಏರುತ್ತಿದ್ದೆ. ಒಬ್ಬಳು ಹೆಣ್ಣು ಮಗಳು ಮೊದಲು ಬಸ್ ಏರಿ ಬಲಮಗ್ಗುಲಿನ ಎರಡನೆ ಆಸನದಲ್ಲಿ ಕುಳಿತಳು. ಅವಳ ಅನಂತರ ಬಂದ ಗಂಡಸರೆಲ್ಲ ಅವಳ ಹಿಮ್ಮಗ್ಗಲಿಗಿರುವ ಆಸನಗಳಲ್ಲಿ ಒಟ್ಟೊಟ್ಟಾಗಿ ಕುಂಡಿಸಿದರು. ಕೊನೆಗೆ ಅವೆಲ್ಲವೂ ತುಂಬಿಹೋದವು.

"ಬಸ್ಸಿನ್ನೂ ಮತ್ತಾವ ಹೆಂಗಸೂ ಏರಲಿಲ್ಲ. ಆದರೆ ಸಲು ಖಾಲಿ ಆಸನಗಳೂ ಅಷ್ಟೇ ಜನ ಪ್ರಯಾಣಿಕರೂ ಉಳಿದಿದ್ದರು. ತಮಾಷೆ ಪ್ರಾರಂಭವಾದುದು ಇಲ್ಲಿ! ಮೊದಲು ನಾಲ್ಕು ಪುರುಷ ಪ್ರಯಾಣಿಕರು ತುಂಬ ಸಂಕೋಚದಿಂದ ಆ ಮಹಿಳೆಯ ಎದುರು ಸಾಲಿನಲ್ಲಿದ್ದ ನಾಲ್ಕು ಆಸನಗಳಲ್ಲಿ ಕುಂಡಿಸಿದರು. ಸ್ತ್ರೀಯರಿಗಾಗಿ ಮೀಸಲಿಟ್ಟ ಆಸನಗಳ ಮೇಲೆ ಕುಳಿತದ್ದು ಏನೋ ಭಯಂಕರ ಅಪರಾಧ ಮಾಡಿದಂತೆ ಎಂಬಂತೆ ಅವರ ನಡತೆಯಿತ್ತು. ಆ ಮೇಲೆ ಇಬ್ಬರು ಗಂಡಸರು ಬಲಮಗ್ಗುಲಿನ ಎರಡು ಆಸನಗಳಲ್ಲಿ ಕುಳಿತರು; ಆ ಏಕಾಕಿನಿಯ ಎದುರಿಗಿದ್ದ ಎರಡು ಆಸನಗಳಲ್ಲಿ ಕುಳ್ಳಿರಿಸುತ್ತಿರುವಾಗ ಅವರಿಗಾಗುತ್ತಿದ್ದ ಸಂಕೋಚ ಮುಖದಲ್ಲಿ ಎದ್ದು ಕಾಣುತ್ತಿತ್ತು.

"ಈಗ ಒಂದು ಆಸನ ಖಾಲಿ ಉಳಿಯಿತು; ಒಬ್ಬ ಪ್ರಯಾಣಿಕನೂ ಬಸ್ಸಿನಲ್ಲಿ ನಿಂತಿದ್ದನು. ಕಂಡಕ್ಟರನು ಸೀಟಿ ಊದಿದನು ಮತ್ತು ಮೋಟಾರು ಹೊರಟಿತು. ನಿಂತ ಗಂಡಸು ಬಹಳ ನಾಚಿಕೆಯಿಂದ ಮೆಲ್ಲನೆ ಮುಂದೆ ಹೊರಟನು. ತನ್ನ ಅಂತಃಸಾಕ್ಷಿಯೊಡನೆ ಅವನು ನಡೆಸುತ್ತಿದ್ದ ಕುಸ್ತಿ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಹೋಗಲೇ ಬೇಡವೆ? ಎಂದು ಅವನ ನಿರಿಗುಂದಿದ ನಡೆ ಕೇಳುವಂತಿತ್ತು. ಒಮ್ಮಿಂದೊಮ್ಮೆ ಬಸ್ಸಿನಲ್ಲಿದ್ದ ಎಲ್ಲರ ದೃಷ್ಟಿಗಳೂ ತನ್ನ ಮೇಲೆ ನಟ್ಟಿರುವದನ್ನು ಅರಿತು ನಿಜವಾಗಿ ತನ್ನ ಪೌರುಷವನ್ನು ತೋರಿಸುವ ಸಾಹಸದಿಂದ ಅವನು ಹುಡುಗಿಯ ಪಕ್ಕದಲ್ಲಿದ್ದ ಖಾಲಿ ಆಸನದತ್ತ ನುಗ್ಗಿದನು. ಆ ಮೇಲೆ ಅವಳ ಕಡೆ ನಸುಬಾಗಿ, ಆದರೆ ಪ್ರಯತ್ನಪೂರ್ವಕ ಅವಳ ದೃಷ್ಟಿಯಿಂದ ತನ್ನದನ್ನು ತಪ್ಪಿಸಿಕೊಳ್ಳುತ್ತ, ಶಿಥಿಲ ಕಂಠದಿಂದ ಕೇಳಿದ: "ನಾನು ಕುಳಿತರೆ ನಿಮ್ಮ ಆಕ್ಷೇಪ....?" "ಛೇ ಛೇ ಆಕ್ಷೇಪ ಏನು? ಕೂತುಕೊಳ್ಳಿರಿ" ಎಂದು ಆ ಹುಡುಗಿ ನಡುವೆ ತಡೆದಳು. ಅಷ್ಟಾದ ಮೇಲೆ ಆ ಮನುಷ್ಯ ಹುಳ್ಳುಹುಳ್ಳಗೆ, ಆದರೂ ಆ ಆಸನದ ಒಂದು ತುದಿಯಲ್ಲಿ, ಕುಂಡಿಸಿದನು. ತನಗೂ ಹುಡುಗಿಗೂ ಕನಿಷ್ಠ ಅರಿಂಚಾದರೂ ದೂರ ಉಳಿಯುವಂತೆ ಅವನು ನೋಡಿಕೊಳ್ಳದಿರಲಿಲ್ಲ. ಇಷ್ಟು ಸಾಲದೋ ಎಂಬಂತೆ ಅವನು ಇನ್ನಷ್ಟು ಮುಂದಾಗ್ರತೆ ವಹಿಸಿ ತಲೆಯನ್ನು ಅರ್ಧವಾಗಿ ಹೊರಳಿಸಿ ಬಸ್ಸಿನ ಮಧ್ಯದತ್ತ ಮುಖ ಮಾಡಿದನು!

"ಅಪರಿಚಿತ ಸ್ತ್ರೀಯನ್ನು ಕಂಡೊಡನೆ ಭಾರತೀಯರಿಗೆ ಇಷ್ಟೇಕೆ ನಾಚಿಕೆಯಾಗಬೇಕು? ಅವರ ಒಳಗಿನ ಕಳ್ಳಮನಸಿನ ದ್ಯೋತಕವೇ

## ಸಾರನಾಥ

ನೀವು ಕಾಶಿಗೆ ಬಂದು ಸಾರನಾಥವನ್ನು ನೋಡದೆ ಹೋದರೆ ವೈಕುಂಠಕ್ಕೆ ಹೋಗಿ ... ಕನ್ನಂಬಾಡಿ ನೋಡದಿದ್ದಂತೆ. ಈ ಕಾಲ ... ಯಿಂದ ಸಾರನಾಥವು ಒಂದು ನಂದನವನ ... ಗಳಿಂದ ... ಕ್ರೀಡಾಸ್ಥಾನವೆನಿಸಿದೆ. ನೀವು ... ಸಾರನಾಥ ಒಂದು ... ಸ್ಥಾನ. ಮುಖ್ಯ ... ಇವಕ್ಕಿಂತ ಹೆಚ್ಚಾಗಿ ಕಲಾಕೋವಿದರು, ... ಐಂದ ಭಾವಿಕರೂ ರಸಿಕರೂ ಕೂಡ ... ನೋಡಬೇಕಾದಂಥ ಸ್ಥಳ.

ಹಿಂದೆ ಭಾರತದಲ್ಲಿ ಬೌದ್ಧ ಧರ್ಮ ... ಊರ್ಜಿತ ಸ್ಥಿತಿಯಲ್ಲಿದ್ದಾಗ ಮತ್ತು ಅದಕ್ಕೆ ರಾಜಾಶ್ರಯವಿದ್ದಾಗ ದೇಶದ ತುಂಬ ... ಬೌದ್ಧ ವಿಹಾರಗಳಿದ್ದವು. ಇವು ಶೈಕ್ಷಣಿಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಇಂಥ ವಿಹಾರಗಳಲ್ಲಿ ... ಮಾಡುವ ಭಿಕ್ಷುಗಳು ಅನೇಕ ರೀತಿಯಿಂದ ಜನತೆಯ ಸೇವೆ ಮಾಡುತ್ತಿದ್ದರು. ಸಾಮಾನ್ಯವಾಗಿ ಪ್ರತಿಯೊಂದು ವಿಹಾರದಲ್ಲಿ ಒಂದು ಪಾಠಶಾಲೆ ಮತ್ತು ಒಂದು ಔಷಧಾಲಯ ಇವುಗಳನ್ನೊಳಗೊಂಡೇ ಇರುತ್ತಿ... ಆದರೆ ಬರಬರುತ್ತ ಬೌದ್ಧ ಧರ್ಮವು ಹ್ರಾಸವಾದಂತೆ ಇವೂ ಲೋಪಹೊಂದುತ್ತ ... ದವು. ಇಂದು ಭಾರತದಲ್ಲಿ ಕೇವಲ ಬೆರಳಿನಲ್ಲೆಣಿಸುವಷ್ಟು ವಿಹಾರಗಳು ಮಾತ್ರ ಇರುತ್ತವೆ. ಅವುಗಳಲ್ಲೆಲ್ಲಾ ಹೆಸರಾದದ್ದು ಸಾರನಾಥ ವಿಹಾರ.

### ಬೌದ್ಧ ಧರ್ಮದ ಹುಟ್ಟೂರು

ಸಾರನಾಥವೇ ಮುಖ್ಯವಾದುದಕ್ಕೆ ಕಾರಣಗಳಿವೆ. ಮೊದಲನೆಯದಾಗಿ ಇದು ಬೌದ್ಧ ಧರ್ಮದ ಹುಟ್ಟೂರು. ಗೌತಮನು ಗಯೆಯಲ್ಲಿ ತಪಸ್ಸುಮಾಡಿ 'ಬುದ್ಧ' ನಾದ ಮೇಲೆ ಮೊಟ್ಟಮೊದಲು ಇಲ್ಲಿಗೆ ಬಂದು ತನ್ನ ಜ್ಞಾನವನ್ನು ಬಿತ್ತತೊಡಗಿದ. ... ಅವನಿಗೆ ಪ್ರಸಿದ್ಧರಾದ ಐವರು ಶಿಷ್ಯರು ದೊರೆತರು. ಎರಡನೆಯದಾಗಿ ವಿಷ್ಣುವಿನ ಒಂಭತ್ತನೆಯ ಅವತಾರವಾದ ಬುದ್ಧನ ... ಶೇಷಗಳೂ (Relics) ಇಲ್ಲಿ ... ಇವಲ್ಲದೆ ಇಲ್ಲಿರುವಷ್ಟು ಬುದ್ಧ ಪ್ರತಿಮೆಗಳು ... ಮತ್ತೆಲ್ಲಿಯೂ ಇಲ್ಲ. ಅದುದರಿಂದ ... ಪ್ರಪಂಚದ ಬೌದ್ಧರಿಗೆಲ್ಲಾ ಇದೊಂದು ಮಹಾ ಪುಣ್ಯಕ್ಷೇತ್ರ. ಇಲ್ಲಿ ಒಂದು ... ಸಂಗ್ರಹಾಲಯವೂ ಎರಡು ಬೌದ್ಧಮಂದಿರಗಳೂ (ಒಂದು ಹಿಂದೀ ಮತ್ತೊಂದು ಚೀನೀ) ಒಂದು ಜೈನ ಮಂದಿರವೂ ಇವೆ.

ಬನಾರಸದಿಂದ ಉತ್ತರಕ್ಕೆ ಐದು ಮೈಲು ದೂರದಲ್ಲಿದೆ ಸಾರನಾಥ. ಕಂಟೋನ್ಮೆಂಟ್ ಸ್ಟೇಶನ್‌ದಲ್ಲಿ ರೈಲುಗಾಡಿಯನ್ನಿಳಿದು ನೀವು ಹತ್ತು ದುಡ್ಡು ಮತ್ತು ಹದಿನೈದು ನಿಮಿಷಗಳಲ್ಲಿ ಸಾರನಾಥವನ್ನು ತಲುಪಬಹುದು. ಲೋಕಲ ಸ್ಟೇಶನ್ನುಗಳನ್ನು ಕಳೆದು ಬರುವ ಮೊದಲನೆಯ ಸ್ಟೇಶನ್ನೇ ಸಾರನಾಥ. ಆದರೆ ಬಹಳ ಜನ ಈ ಓ. ಟಿ. (ಅನೃತ ನಾಮ old and tired) ರೈಲ್ವೆಯ ಮೇಲೆ ಭರವಸೆಯನ್ನಿಡಲು ಅಂಜುತ್ತಾರೆ. ಅದಕ್ಕೂ ಸಮಯಪಾಲನೆ (Punctuality) ಗೂ ಇರುವ ಹಾದುಹಗೆತನವೇ ಇದಕ್ಕೆ ಕಾರಣ. ಇನ್ನು ಹುಡು... ದ್ದರೆ ನಿಮಗೆ ತ್ರಿಚಕ್ರಿ (ರಿಕ್ಷಾ) ...

ಹೇಗೆ? ಇದಕ್ಕೆ ಉತ್ತರ ದೊರೆತದ್ದರೆ ... ತುಂಬ ಸಂತೋಷವಾಗುತ್ತಿತ್ತು. ... ನಮ್ಮಂಥ ವಿದೇಶೀಯರ ದೃಷ್ಟಿಯಲ್ಲಿ ... ತೀಯರ ಪ್ರತಿಷ್ಠೆ ಕಡಿಮೆಯಾಗಲು ... ತೀಯರ ಈ ದ... ಒಂದು ... ವಾಗಿದೆ."

# ಜೀವನ ಮತ್ತು ತತ್ವಶಾಸ್ತ್ರ

ಲೇಖಕರು:— ಡಾ|| ಕೆ. ಕೃಷ್ಣಮೂರ್ತಿ, ಎಂ. ಎ., ಪಿ ಎಚ್. ಡಿ.

ಡಾ. ಕೃಷ್ಣಮೂರ್ತಿಯವರು ಮೈಸೂರು ಮಹಾರಾಜರ ಕಾಲೇಜಿನಲ್ಲಿ ಸಂಸ್ಕೃತವನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಂಡು ಬಿ. ಎ. ಆನರ್ಸ್, ಎಂ. ಎ. ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರಲ್ಲದೆ, ಪಂಡಿತ ಪರೀಕ್ಷೆಯನ್ನು ಮುಗಿಸಿ ಮುಂಬಯಿ ವಿಶ್ವವಿದ್ಯಾನಿಲಯದ ಪಿ ಎಚ್. ಡಿ. ಪದವಿಯನ್ನು ಪಡೆದವರಾಗಿದ್ದಾರೆ. ಈ ವರೆಗೆ ಅವರು ಬಾಗಿಲುಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಸಂಸ್ಕೃತ ಕನ್ನಡವೆರಡಕ್ಕೂ ಪ್ರೊಫೆಸರರಾಗಿದ್ದರು. ಇತ್ತೀಚೆಗೆ ಕಾರಣಾಂತರದಿಂದ ಮೈಸೂರಿಗೆ ಮರಳಿದ್ದಾರೆ. ತತ್ವ ಶಾಸ್ತ್ರದಲ್ಲಿ ಪಾರಂಗತರಾದ ಅವರ ಪಾಂಡಿತ್ಯಪೂರ್ಣ ಲೇಖನಗಳನ್ನು 'ಕರ್ಮವೀರ'ದಲ್ಲಿ ಇನ್ನು ಮೇಲೆ ಓದುಗರು ಆಗಾಗ ಕಾಣಬಹುದು.

"ಅಲ್ಲದ ಕರಿಯ ಬೆಕ್ಕನ್ನು ಕತ್ತಲೆಯ ಕೋಣೆಯಲ್ಲಿ ಹುಡುಕುವ ಕುರುಡನೇ ತತ್ವವಿವೇಚಕ" ಎಂಬ ಹಾಸ್ಯದ ಮಾತು ಎಲ್ಲರಿಗೂ ಗೊತ್ತೇ ಇದೆ. ಅದರ ಕುಚೇಷ್ಟೆಯನ್ನು ಸುಲಭವಾಗಿ ಮಾಡುವ ಸರ್ವಜ್ಞರು ಎಷ್ಟಕ್ಕೆ ಸುಳ್ಳಿಗೆ ತತ್ವಜ್ಞರೆನ್ನುವುದು ಪವಿತ್ರ ಬ್ಯಹಸ್ಪತಿಗೂ ಬಿಡಿಸಲಾರದ ಸಮಸ್ಯೆಯೇ. ಜೀವನಕ್ಕೂ ತತ್ವಜ್ಞಾನಕ್ಕೂ ಸಂಬಂಧವೇ ಇಲ್ಲ ಎನ್ನುವವರಿಗೆ ಯಾವ ಸಂಬಂಧವನ್ನು ಹೇಳಿದರೂ ಬಾದರಾಯಣ ಸಂಬಂಧದಂತೆಯೇ ಕಾಣಬಹುದು. ಹೇಗೇ ಆಗಲಿ; ಈ ವಿಷಯಕ್ಕೆ ಒಂದೆರಡು ಮುಖ್ಯಾಂಶಗಳನ್ನು ಪ್ರಕೃತ ಲೇಖನದಲ್ಲಿ ಸೂಚಿಸಲಾಗಿದೆ.

## ಪಾಶ್ಚಾತ್ಯ ದೃಷ್ಟಿ

ಜಗತ್ತಿನ ಜೀವಾಳವನ್ನೂ ಅದರಲ್ಲಿ ಮನುಷ್ಯನ ಸ್ಥಾನಮಾನವಿವೇಕವನ್ನೂ ಕುರಿತ ಮೂಲಭೂತ ಹಾಗು ಮಹತ್ವದ ಪ್ರಶ್ನೆಗಳಿಗೆ ಯುಕ್ತಿಯುಕ್ತ ಮತ್ತು ವಿಚಾರಪೂರ್ಣ ಉತ್ತರಗಳನ್ನು ಒದಗಿಸುವುದೇ ತತ್ವಶಾಸ್ತ್ರದ ಕೆಲಸವೆಂದು ಸ್ಥೂಲವಾಗಿ ಹೇಳಬಹುದು. ಇಂಗ್ಲಿಷಿನಲ್ಲಿ "ಫಿಲಾಸಫಿ" ಎಂಬ ಶಬ್ದವು ಸಾಮಾನ್ಯವಾಗಿ ಈ ಅರ್ಥದಲ್ಲೇ ರೂಢವಾಗಿದೆ. ಈ ಅರ್ಥವನ್ನಂಗೀಕರಿಸಿದರೆ ಜೀವನಕ್ಕೂ ತತ್ವಶಾಸ್ತ್ರಕ್ಕೂ ಯಾವದೇ ಬಗೆಯ ಗಾಢ ಸಂಬಂಧವಿದೆಯೆಂದು ಒತ್ತಿ ಹೇಳಿದಂತಾಗುವುದಿಲ್ಲ. ತತ್ವಾನ್ವೇಷಿಯ ಜೀವನವು ಸಾಮಾನ್ಯ ಜೀವನಕ್ಕಿಂತ ಭಿನ್ನವಾದುದೆಂದು ಹೊಂದಲೇ ಸಿದ್ಧವಾಗುವುದಿಲ್ಲ. ಪಾಶ್ಚಾತ್ಯರ ದೃಷ್ಟಿಯೇ ಇದು. ತತ್ವಚಿಂತಕನಾಗಬೇಕೆಂದರೆ ಲೋಕೋತ್ತರವಾದ ಅಥವಾ ಅಸಾಧಾರಣವಾದ ಯಾವದಾದರೊಂದು ಶಕ್ತಿವಿಶೇಷವು ಅವಶ್ಯವೆಂದು ಅವರು ಒಪ್ಪುವುದಿಲ್ಲ. ಇತರ ಕಾರ್ಯಕ್ಷೇತ್ರಗಳಂತೆಯೇ ಇಲ್ಲಿಯಾದರೂ ಒಬ್ಬೊಬ್ಬರಿಗೆ ಅದರಲ್ಲೇ ಕುತೂಹಲ ಹೆಚ್ಚಾಗಿದ್ದರೆ ತೀರಿತು, ಹೆಚ್ಚೇನೂ ಬೇಕಾಗಿಲ್ಲ. ತತ್ವವಿಚಾರವನ್ನು ವಿಚಾರಮಾಡುವ ಮನುಷ್ಯರಲ್ಲಿ ವೈಶಿಷ್ಟ್ಯವಿರುವುದೇ ಹೊರತು ಅವನ ಮಾನಸಿಕಜೀವನದಲ್ಲಿ ಯಾವ ವೈಶಿಷ್ಟ್ಯವೂ ಇಲ್ಲ. ಒಬ್ಬೊಬ್ಬರಿಗೆ ಒಂದೊಂದು ವಿಷಯದಲ್ಲಿ ಆಸಕ್ತಿ ಹೆಚ್ಚಾಗಿರುವಂತೆ ತತ್ವಜಿಜ್ಞಾಸುವಿಗೆ ವಿಶ್ವದ ಮೂಲತತ್ವಗಳಲ್ಲಿ ವಿಶೇಷವಾದ ಪ್ರೀತ್ಯಾದರಗಳಿರುತ್ತವೆ; ವಿಜ್ಞಾನಿಗೆ ಬಾಹ್ಯವಸ್ತುಗಳ ನಿಷ್ಕೃಷ್ಟಜ್ಞಾನದಲ್ಲಿ ಅಭಿನಿವೇಶವಿರುವಂತೆ; ಅಥವಾ ಇತಿಹಾಸಜ್ಞನಿಗೆ ಜನರ ರಾಜಕೀಯ ವ್ಯವಹಾರ ಹಾಗು ಸಂಸ್ಕೃತಿಸಮೀಕ್ಷೆಯಲ್ಲಿ ವಿಶೇಷ ಅಭಿಲಾಷೆಯಿರುವಂತೆ.

## ಭಾರತೀಯ ಕಲ್ಪನೆ

ಈ ದೃಷ್ಟಿಗೆ ಭಾರತದಲ್ಲಿ ಪುರಸ್ಕಾರ ದೊರೆಯುವುದು ದುರ್ಘಟ. ಏಕೆಂದರೆ ನಮ್ಮ ಸಂಪ್ರದಾಯದ ಪ್ರಕಾರ ಕೆಲವೊಂದು ಪಾರಮಾರ್ಥಿಕ ಸಮಸ್ಯೆಗಳನ್ನು ಸ್ವಧೀಶಕ್ತಿಯಿಂದ ಪರಿಹರಿಸಲು ಪ್ರಯತ್ನಿಸುವವರೆಲ್ಲ ಅಗಲಿ ಇಲ್ಲವೆ ಬಹಳ ಪ್ರೌಢವಾಗಿ ಈ ವಿಷಯಗಳ ಮೇಲೆ ವಾಗ್ಜಾಲವನ್ನು ಹರಿಯಬಿಡಬಲ್ಲವರೆಲ್ಲ ಆಗಲಿ ತತ್ವಜ್ಞಾನಿಗಳೆಂದು ಪರಿಗಣಿಸುವುದಿಲ್ಲ. ತತ್ವಜ್ಞಾನವು ಪ್ರೌಢಿಮೆಯ ಅಲಂಕಾರವಲ್ಲ; ಅದು ಮುಖ್ಯವಾಗಿ ಜೀವನದ ಪ್ರಕಾರವೆಂಬುದೇ ನಮ್ಮವರ ಮತ. ತತ್ವಜ್ಞಾನವೇ ಜೀವನದಸಾರಸರ್ವಸ್ವ. ಉತ್ಕೃಷ್ಟ ಜೀವನವೇ ತತ್ವಜ್ಞಾನದ ನಿಜವಾದ ಪ್ರತೀಕ.

ಈ ರೀತಿಯಾಗಿ ದೃಷ್ಟಿಭೇದ ಬರಲು ಕಾರಣವೇನು? ತತ್ವಚಿಂತನೆಯ ಸ್ವರೂಪನಿರ್ಣಯದಲ್ಲಿಯೇ ಪಾಶ್ಚಾತ್ಯರಿಗೂ ಭಾರತೀಯರಿಗೂ ಭಿನ್ನಾಭಿಪ್ರಾಯವಿರುವುದು ಮುಖ್ಯವಾದ ಕಾರಣ. ಪಾಶ್ಚಾತ್ಯದೇಶಗಳಲ್ಲಿ ತತ್ವಜ್ಞಾನವು ಮೊದಲಿನಿಂದಲೂ ವಿಜ್ಞಾನಶಾಸ್ತ್ರಗಳ ಬೆಂಬಳಿಯಲ್ಲೇ ಸಾಗಿದೆ. ಅದು ಕೇವಲ ಬೌದ್ಧಿಕ ವ್ಯಾಪಾರವಾಗಿಯೂ ಕರ್ಕಶತರ್ಕಪ್ರತಿಷ್ಠಿತವಾಗಿಯೂ ಪ್ರಾಮುಖ್ಯವನ್ನು ಪಡೆದುದೇ ಪಾಶ್ಚಾತ್ಯ ತತ್ವಶಾಸ್ತ್ರದ ಇತಿಹಾಸಪರಂಪರೆ. ಲೌಕಿಕಾನುಭವದ ವಿವಿಧಪ್ರಕಾರಗಳನ್ನೂ ಒಳಗೊಳ್ಳುವಂತಹ ಒಂದು ಬುದ್ಧಿಯ ಚೌಕಟ್ಟನ್ನು ಒದಗಿಸಿ, ಆ ಚೌಕಟ್ಟಿನ ಆಧಾರದ ಮೇಲೆ ಅವುಗಳನ್ನೆಲ್ಲ ವಿವರಿಸುವುದೇ ಪಾಶ್ಚಾತ್ಯ ತತ್ವಜ್ಞರ ಮುಖ್ಯೋದ್ದೇಶ. ಈ ಚೌಕಟ್ಟು ಅತ್ಯಂತ ವಿಶಾಲವೂ ವ್ಯಾಪಕವೂ ಆಗುವುದು ಅನಿವಾರ್ಯ. ಏಕೆಂದರೆ ಅನುಭವದ ಪ್ರಕಾರಭೇದಗಳು ಅತಿಜಟಿಲವಾಗಿಯೂ ವಿವಿಧರೀತಿಗಳಲ್ಲಿ ವಿಪ್ರಕೀರ್ಣವಾಗಿಯೂ ಇರುತ್ತವೆ. ಇಂತಹ ಅನುಭವಗಳೆಲ್ಲವನ್ನೂ ವ್ಯಾಪಿಸಬೇಕಾದ ಶಾಸ್ತ್ರಪ್ರಕ್ರಿಯೆಯೂ ಅಷ್ಟೇ ಜಟಿಲವೂ ವಿಶಾಲವೂ ಆಗಬೇಕಾಗುತ್ತದೆ. ಈ ಬಗೆಯ ಶಾಸ್ತ್ರಪ್ರಕ್ರಿಯೆ ಅಥವಾ ಬುದ್ಧಿಯ ಚೌಕಟ್ಟು ಸಾಧಿಸಬೇಕಾದರೆ ಪಾಶ್ಚಾತ್ಯತತ್ವಜ್ಞರಿಗಿರುವ ಸಾಧನವು ಒಂದೇ — ಭಾವನಾಗತವಾದ ವಸ್ತುತತ್ವಪರಿಕಲ್ಪನೆ ಅಥವಾ ಪ್ರತೀತಿ. ವಿಜ್ಞಾನಿಯತಿ ಗಳೆಲ್ಲವೂ ಸಾಧನಾಗುವುದೂ ಈ ಬಗೆಯಲ್ಲಿಯೇ. ಇಬ್ಬರಿಗೂ ಅನುಸರಿಸುವ ಮಾರ್ಗವು ಒಂದೇ; ವಿಷಯದ ವ್ಯಾಪ್ತಿ ಮಾತ್ರ ಬೇರೆ. ನಿದರ್ಶನ್ನ ಸರ್ವಾಂಗಸಮಗ್ರವೂ ಆದ ತತ್ವಪ್ರಕ್ರಿಯೆಯು ಸದಾಕಾಲಕ್ಕೂ ಅಸಾಧ್ಯವೆಂದೇ ಹೇಳಿದರೂ ಹೇಳಬಹುದು. ಅದರೂ ಅದನ್ನೇ ತತ್ವಶಾಸ್ತ್ರಕ್ಕೆ ಅಪೇಕ್ಷಣೀಯ ಹಾಗು ಅದಕ್ಕೆ ರಚನೀಯವಾದ ಚರಮ ಧ್ಯೇಯವೆನ್ನಲಡ್ಡಿಯಿಲ್ಲ. ಅಂತೆಯೇ ಸರ್ವದಾ ಪ್ರಗತಿಶೀಲವಾಗಿಯೇ ಇರುವುದು ತತ್ವಶಾಸ್ತ್ರದ ನೈಸರ್ಗಿಕ ಸ್ವಭಾವವಾಗುತ್ತದೆ.

## ವಿಜ್ಞಾನ ಮತ್ತು ತತ್ವಶಾಸ್ತ್ರ

ತತ್ವಶಾಸ್ತ್ರಕ್ಕೂ ವಿಜ್ಞಾನಕ್ಕೂ ಒಂದು ಮುಖ್ಯವಾದ ವ್ಯತ್ಯಾಸವಿದೆ. ತತ್ವಶಾಸ್ತ್ರದಲ್ಲಿ ಯಾವದೇ ಕಾಲಕ್ಕೂ ಯಾವದೊಂದು ಸಮಸ್ಯೆಯ ನಿರ್ಣಾಯಕಪರಿಹಾರವನ್ನಾದರೂ ಸೂಚಿಸುವುದು ಶಕ್ಯವಿಲ್ಲವೆಂಬ ಮಾತು ಮೇಲೆ ಹೇಳಿದ ಅಂಶಗಳಿಂದಲೇ ವ್ಯಕ್ತವಾಗುತ್ತದೆ. ತತ್ವಶಾಸ್ತ್ರಸಮಸ್ಯೆಗಳೆಲ್ಲ ಒಂದಕ್ಕೊಂದು ಹೆಣೆದುಕೊಂಡೇ ಇರುತ್ತವೆ; ವಿಜ್ಞಾನದ ಸಮಸ್ಯೆಗಳಂತೆ ಬಿಡಿಬಿಡಿಯಾಗಿ ಪರಸ್ಪರ ಸಂಬಂಧವಿಲ್ಲದೆ ಇರುವುದಿಲ್ಲ. ಯಾವೇನೋ ಪ್ರತ್ಯೇಕವಾಗಿಯೇ ಅವುಗಳನ್ನು ಭೇದಿಸಲು ಯತ್ನಿಸಬಹುದು; ಅದರೂ ಅಂತಹ ಪ್ರಯತ್ನಗಳು ಎಂದಿಗೂ ಫಲಕಾರಿಗಳಾಗುವುದಿಲ್ಲ. ಒಂದನ್ನು ನಾವು ನಿಜವಾಗಿ ಭೇದಿಸಿದೆವೆಂದು ಕೊಳ್ಳಬೇಕಾದರೆ; ಉಳಿದೆಲ್ಲವುಗಳನ್ನೂ ಒಂದಿಲ್ಲೊಂದು ರೀತಿಯಿಂದ ಬಿಡಿಸಲೇಬೇಕಾಗುತ್ತದೆ. ತತ್ವಶಾಸ್ತ್ರದ ಸಮಸ್ಯೆಗಳ ಪರಸ್ಪರ ಸಂಬಂಧವು ಅಷ್ಟು ಮೂಲಭೂತವಾದುದು. ಒಂದು ಸಮಸ್ಯೆಯೇ ಇನ್ನೊಂದಕ್ಕೆ ಉಗಮಸ್ಥಾನವಾಗುತ್ತದೆ; ಇನ್ನೊಂದಕ್ಕೆ ಮತ್ತೊಂದು ಹೆಣೆದುಕೊಂಡೇ ಇರುತ್ತದೆ. ಹೀಗಿರುವುದರಿಂದ ತತ್ವಶಾಸ್ತ್ರದ ಸಮಸ್ಯೆಗಳನ್ನೆಲ್ಲ ಏಕಕಾಲದಲ್ಲಿ ಸಮಾಧಾನಕರವಾಗಿ ಬಿಡಿಸುವ ಮಾರ್ಗವೊಂದೇ ತತ್ವಜ್ಞನ ಪಾಲಿಗೆ ಬರುತ್ತದೆ. ಹಾಗಲ್ಲದೆ ಅವನು ಪ್ರತ್ಯೇಕವಾಗಿ ಯಾವ ಒಂದು ಪ್ರಶ್ನೆಯ ಉತ್ತರವನ್ನೂ ಕೊಡುವುದೇ ಅಸಂಭವವಾಗುತ್ತದೆ. ವಿಜ್ಞಾನದಲ್ಲಾದರೆ ಹೀಗಿಲ್ಲ. ವಿಜ್ಞಾನಶಾಸ್ತ್ರದಲ್ಲಿನ ವಿಷಯಗಳೆಲ್ಲವನ್ನೂ ಕೆಲವೊಂದು ನಿರ್ದಿಷ್ಟ ವರ್ಗಗಳಲ್ಲಿ ಅಡಕಮಾಡಲು ಬರುತ್ತದೆ. ಒಂದೊಂದು ವರ್ಗವನ್ನೂ ಬೇರೆ ಬೇರೆಯಾಗಿಯೇ ಅದರ ಇತರ ವರ್ಗದ ವಿಷಯಗಳ ಪರಿವೆಯಿಲ್ಲದೆಯೇ ವಿಚಾರಮಾಡಲಿಕ್ಕೂ ಬರುತ್ತದೆ. ವಿಜ್ಞಾನದಲ್ಲಿನ ಬೇರೆ ಬೇರೆ ಶಾಸ್ತ್ರಗಳ ವಿಷಯಗಳಲ್ಲಿ ಪರಸ್ಪರ ಸಂಬಂಧವಿರುವುದೇ ಇಲ್ಲವೆಂದಲ್ಲ; ಒಂದಿಲ್ಲೊಂದು ರೀತಿಯಲ್ಲಿ ಇದ್ದೇ ಇರಬಹುದು. ಅದರೂ ಆ ಸಂಬಂಧದ ಪೂರ್ಣವಿಮರ್ಶೆಯು ವಿಜ್ಞಾನಶಾಸ್ತ್ರಕ್ಕೆ ಅಪ್ರಕೃತವಾಗುತ್ತದೆ. ತತ್ವಶಾಸ್ತ್ರದಲ್ಲಿ ಮಾತ್ರ ಈ ರೀತಿಯಾದ ವಿವಿಕ್ತವಿಷಯನಿರೂಪಣೆಗೆ ಅವಕಾಶವೇ ಇಲ್ಲ. ತತ್ವಶಾಸ್ತ್ರದ ವಿಷಯಗಳ ನಡುವೆ ವಿಭಾಗರೇಖೆಗಳನ್ನು ಹಾಕುವಂತೆಯೇ ಇಲ್ಲ. ಏಕೆಂದರೆ, ಅನುಭವಗೋಚರಗಳಾದ ಅಂಶಗಳೆಲ್ಲವನ್ನೂ ಒಟ್ಟಿಗೆ ಪರಾಮರ್ಶಿಸಿ ಒಂದು ಸರ್ವಾನುಗತವಾದ ದರ್ಶನವನ್ನು ಸಾಧಿಸಿಕೊಡುವುದೇ ತತ್ವಶಾಸ್ತ್ರದ ಹೆಗ್ಗುರಿ.

## ತತ್ವಶಾಸ್ತ್ರದ ಪ್ರಯೋಜನ

ತತ್ವಶಾಸ್ತ್ರದಿಂದ ಸಮಸ್ಯೆಗಳೆಲ್ಲವೂ ಸಂಪೂರ್ಣವಾಗಿ ಬಗೆಹರಿಯಲಾರವೆಂದಮೇಲೆ ಅದರ ಪ್ರಯೋಜನವಾದರೂ ಏನು ಎಂಬ ಪ್ರಶ್ನೆಯು ಅಂಕುರಿಸುವುದು ಸಹಜವಾಗಿಯೇ ಇದೆ. ಪಾಶ್ಚಾತ್ಯರ ಪ್ರಕಾರ, ತತ್ವಶಾಸ್ತ್ರದಪ್ರಯೋಜನವಿರುವುದು ಅದು ಪ್ರತಿಪಾದಿಸುವಸಿದ್ಧಾಂತಗಳಲ್ಲಿಲ್ಲ; ಅದರೆ ಆ ಸಿದ್ಧಾಂತಗಳನ್ನು ಹುಟ್ಟಿಸಲು ಬೇಕಾಗುವ ನಿಷ್ಪಕ್ಷಪಾತ ಹಾಗು ನಿರ್ವಿಕಾರ ವಿಚಾರಸರಣಿಯಲ್ಲಿ. ತತ್ವಜ್ಞಾನಕ್ಕಿಂತಲೂ ತತ್ವಾನ್ವೇಷಕದೃಷ್ಟಿಗೇ ಹೆಚ್ಚಿನ ಪ್ರಾಮುಖ್ಯ. ನಮ್ಮ ವಿವೇಚನಾಶಕ್ತಿಯೂ ಯುಕ್ತಿಸಮುಚಿತವಾದ ಅರ್ಥಗ್ರಹಣಶಕ್ತಿಯೂ ಬೆಳೆದರೆ ಅದೇ ಎಲ್ಲದಕ್ಕಿಂತಲೂ ದೊಡ್ಡ ಲಾಭ. ವಿಚಾರಶೀಲನಿಗೆ ಜೀವನದ ಬಗೆಗೆ ಒಂದು ಸಾವಧಾನತೆಯೂ ಒಂದು ಸಮತೋಲವೃತ್ತಿಯೂ ಉಂಟಾಗಿ ಅವನ ವಿಚಾರಧಾರೆಯಲ್ಲಿ ಒಂದು ಬಗೆಯ ತಲಸ್ಪರ್ಶಿತ್ವವೂ ಅವನ ಪದಾರ್ಥಪರಿಜ್ಞಾನದಲ್ಲಿ ಒಂದು ಸಕಲಗ್ರಾಹಿತೆಯೂ ಸಿದ್ಧವಾಗುತ್ತವೆ. ಹೇಗೆಯೇ ಆಗಲಿ, ತತ್ವಶಾಸ್ತ್ರದ ಪ್ರಯೋಜನವು ನೇರವಾದುದಲ್ಲ, ಪ್ರಕಾರಾಂತರದಿಂದ ಸಾಧಿತವಾದುದೆಂದು ಹೇಳಿದಂತೆಯೇ ಆಗುತ್ತದೆ. ತತ್ವಶಾಸ್ತ್ರವು ಪರಮಾರ್ಥ ಸತ್ಯವನ್ನು ನಮಗೆ ತಿಳಿಸುವುದಿಲ್ಲ. ಅಂಧಶ್ರದ್ಧೆ, ದುರಹಂಕಾರ, ವಿಚಾರಶೂನ್ಯ ಕಲ್ಪನೆ ಮುಂತಾದ ದೋಷಗಳನ್ನು ಮಾತ್ರ ನಿವಾರಣೆ ಮಾಡುತ್ತದೆ. ಈ ದೃಷ್ಟಿಯಿಂದ ಮನೋವಿಕಾಸಕ ಶಿಕ್ಷಣದಲ್ಲಿ ತತ್ವಶಾಸ್ತ್ರಕ್ಕೆ ಒಂದು ಉತ್ಕೃಷ್ಟ ಸ್ಥಾನವಿರುವುದೆನ್ನಲಡ್ಡಿಯಿಲ್ಲ. ತತ್ವಾನ್ವೇಷಿಯು ಯಾವ ವಿಶಿಷ್ಟ ಸಮಸ್ಯೆಯನ್ನೂ ನಿಸ್ಸಂದಿಗ್ಧವಾಗಿ ಬಿಡಿಸುವುದಿಲ್ಲ; ಎಲ್ಲರೂ ಕಾಣದಂತಹ ಹೊಸ ವಸ್ತುವಾವುದನ್ನೂ ಕಾಣುವುದೂ ಇಲ್ಲ. ಎಲ್ಲರೂ ನೋಡುವುದನ್ನೇ ಅವನು ನೋಡಿದರೂ ಎಲ್ಲರಂತೆ ಅವನು ನೋಡುವುದಿಲ್ಲ. ಸಾಧಾರಣ ಮನುಷ್ಯನಿಗೆ ನಿರ್ವಿವಾದಬುದ್ಧಿಯಿರುವ ಕಡೆಗಳಲ್ಲಿಯೂ ತತ್ವಾನ್ವೇಷಿಗೆ ಸಂಶಯಗಳೂ ವಿತರ್ಕಗಳೂ ಅನೇಕವಾಗಿರುತ್ತವೆ. ಸಾಮಾನ್ಯ ಮನುಷ್ಯನು ಎಲ್ಲಿ ಪಂಡಿತನೋ ತತ್ವಚಿಂತಕನು ಅಲ್ಲಿ ಸಂಶಯಪಿಶಾಚಗ್ರಸ್ತ.


## ಪರಮಾರ್ಥ ಜ್ಞಾನವೇ ಭಾರತೀಯ ತತ್ವಶಾಸ್ತ್ರದ ಅದಿಗಲ್ಲು

ಮೇಲೆ ಹೇಳಿದಂತೆ ಅರ್ಥಮಾಡಿಕೊಳ್ಳುವುದಾದರೆ, ತತ್ವಶಾಸ್ತ್ರದಿಂದ ಜೀವನಕ್ಕೆ ಹೊಸ ಮಾರ್ಗದರ್ಶನವಾದೀತೆಂದಾಗಲಿ ಅಥವಾ ಜೀವನದ ಪುರುಷಾರ್ಥಗಳಲ್ಲಿ ಏನಾದರೂ ವ್ಯತ್ಯಾಸಗಳಾಗಬಹುದೆಂದಾಗಲಿ ನಿರೀಕ್ಷಿಸುವುದೇ ಅಯುಕ್ತ. ಭಾರತದಲ್ಲಿ ಮಾತ್ರ ತತ್ವಶಾಸ್ತ್ರವನ್ನು ಈ ರೀತಿ ಅರ್ಥಮಾಡುವುದಿಲ್ಲ. ತತ್ವಶಾಸ್ತ್ರವು ಬುದ್ಧಿವಿಶ್ರಾಂತವೆಂದಾಗಲಿ ಇಲ್ಲವೆ ಭಾವನಾವಿಕಲ್ಪವೆಂದಾಗಲಿ ಎಂದಿಗೂ ತಿಳಿಯುವುದಿಲ್ಲ. ತತ್ವಗಳ ಕಾಲ್ಪನಿಕವೃತ್ತಿಯನ್ನು ಹುಡುಕುತ್ತ ಹೊರಡುವದು ನಿರರ್ಥಕವೆಂದೇ ನಮ್ಮವರ ನಂಬುಗೆ. ಅಂತಹ ಪ್ರಯತ್ನಗಳು ತ್ರಿಕಾಲಾಬಾಧಿತವಾದ ಸತ್ಯವನ್ನು ದೊರಕಿಸಲಾರವು. ಪರಮಾರ್ಥತತ್ವದ ಸಮ್ಯಗ್ಬೋಧ ಅಥವಾ ಸರ್ವ ವಸ್ತುಗಳ ಅಂತಸ್ತತ್ವವಾದ ಏಕಮೇವಾದ್ವಿತೀಯ ಸತ್ಯದ ಸಾಕ್ಷಾತ್ಕಾರ—ಇದುವೆ ತತ್ವವಿವೇಚಕನ ಗುರಿ. "ತತ್—ತ್ವ" ಎಂದರೆ ಪರಮಾರ್ಥವಸ್ತುವಿನ ಜ್ಞಾನ ಅಥವಾ ಸಾಕ್ಷಾತ್ಕಾರ ಎಂದೇ ಭಾರತೀಯ ತತ್ವಶಾಸ್ತ್ರದಲ್ಲಿ ಅರ್ಥಮಾಡಿಕೊಳ್ಳಬೇಕು. ತರ್ಕಕ್ಕೆ ಇಲ್ಲಿ ಅನ್ಯೂನವಾದ ಪ್ರಾಧಾನ್ಯವಿಲ್ಲ. ಅದು ತತ್ವಾನ್ವೇಷಣೆಗೆ ಸಾಧಕವಾದ ಅಂಗಮಾತ್ರವಾಗಿ ಉಳಿಯುತ್ತದೆ. ಲಕ್ಷ್ಯವು ತತ್ವಸಾಕ್ಷಾತ್ಕಾರ, ಅನುಭವಮಾತ್ರವೇದ್ಯ; ಅದು ತರ್ಕಾತೀತವಾದರೂ ತರ್ಕೋಪಾರೂಢವೂ ಹೌದು. ಬುದ್ಧಿಜನ್ಯ ವಿಕಲ್ಪಗಳನ್ನು ಬುದ್ಧಿಯೇ ಪರಿಹರಿಸಬಲ್ಲುದಾದರೂ ಆ ಪರಿಹಾರಗಳು ಸತ್ಯವೇ ಅಲ್ಲವೇ ಎಂಬ ನಿರ್ಣಯವಾಗಬೇಕಾದರೆ ಪ್ರತ್ಯಕ್ಷಾನುಭವವಿಲ್ಲದೆ ಸಾಧ್ಯವಿಲ್ಲ. ಸಾಕ್ಷಾದನುಭವವೇ ಜ್ಞಾನದ ಸತ್ಯತೆಯನ್ನು ಸಂಶಯಗಳಿಂದ ಮುಕ್ತಮಾಡುವ ಒರೆಗಲ್ಲು. ಅಂತೆಯೇ ತತ್ವಶಾಸ್ತ್ರದಲ್ಲಿ ಸತ್ಯಸಾಕ್ಷಾತ್ಕಾರಕ್ಕೆ, ಅಪರೋಕ್ಷಾನುಭೂತಿಗೆ, ತರ್ಕಕ್ಕಿಂತಲೂ ಹೆಚ್ಚಿನ ಮಹತ್ವ.

ಜಗತ್ತಿನ ಸಕಲ ವಸ್ತುಗಳಲ್ಲಿಯೂ ಅನುಸ್ಯೂತವಾದ ಒಂದು ಐಕ್ಯವಿದೆಯೆನ್ನುವುದು ಒಂದು ಬರಿಯ ಊಹೆಯಲ್ಲ. ನಮಗೆ ಬಾಹ್ಯವಾದ ಮತ್ತು ದೂರವಾದ ಯಾವದೋ ಸೂಕ್ಷ್ಮ ಧರ್ಮವಿದೆಯೆಂದು ನಾವು ಹೇಳುವುದಿಲ್ಲ. ಆ ಸೂಕ್ಷ್ಮ ಧರ್ಮವು ಸರ್ವ ಪ್ರತ್ಯಕ್ಷವಾದ ಆತ್ಮವೇ. ಅದುದರಿಂದಲೇ ತತ್ವಚಿಂತನೆಯೆಂದರೆ ನಮ್ಮಲ್ಲಿ ಆತ್ಮಚಿಂತನೆಯೆಂದೇ ಅರ್ಥವಾಗುತ್ತದೆ. ತತ್ವಶಾಸ್ತ್ರವೆಂದರೆ ಅಧ್ಯಾತ್ಮವಿದ್ಯೆಯೆಂದೇ ನಾವು ಬಗೆಯುತ್ತೇವೆ. ಆತ್ಮವಸ್ತುವು ಅಜ್ಞೇಯವಾದ ಯಾವದೋ ಒಂದು ವಿಚಿತ್ರ ರಹಸ್ಯವಲ್ಲ; ನಮಗೆ ಎಂದೂ ಅತಿದೂರವಾದಂತೆ ಅದು ಮುಚ್ಚಿಹೋಗಿಯೂ ಇಲ್ಲ. ಅದೇ ಸತ್ಯಕ್ಕೆಲ್ಲಾ ಸತ್ಯವೆನಿಸಿದರೂ ಉಳಿದೆಲ್ಲ ಬಾಹ್ಯವಸ್ತುಗಳಿಗಿಂತಲೂ ಹೆಚ್ಚು ನಿಕಟವೂ ಅತ್ಯಂತ ಸನ್ನಿಹಿತವೂ ಆದ ಸಂಬಂಧದಿಂದ ನಮ್ಮಲ್ಲೇ ನೆಲೆಸಿರುವುದು. ಆತ್ಮದ ಪ್ರಕಾಶದಿಂದಲೇ ಬಾಹ್ಯಜಗತ್ತೆಲ್ಲ ನಮಗೆ ಗೋಚರವಾಗುವುದೆಂದಮೇಲೆ ಅದು ಸ್ವತಃ ಕತ್ತಲೆಯಲ್ಲಿರುವುದೆಂತು? ಪರಪ್ರಕಾಶಕವಾದುದು ಸ್ವಪ್ರಕಾಶವೂ ಆಗಿಯೇ ಇರುವದಲ್ಲವೆ? ಇದೇ ಶುದ್ಧ ಚೈತನ್ಯದ ಸ್ವಲಕ್ಷಣ. ಆತ್ಮಸ್ವರೂಪವನ್ನರಿತರೆ ಜಗತ್ತಿನ ರಹಸ್ಯವನ್ನು ಭೇದಿಸಿದಂತೆಯೇ. ಆತ್ಮಜ್ಯೋತಿಯ ಅಪರೋಕ್ಷಾನುಭೂತಿಯುಳ್ಳವನೇ ತತ್ವಜ್ಞಾನಿ. ಒಂದನ್ನರಿಯುವುದರಿಂದಲೇ ಎಲ್ಲದರ ಪೂರ್ಣ ಜ್ಞಾನವನ್ನು ಸಂಪಾದಿಸುವ ಶಕ್ತಿಯುಳ್ಳವನೇ ತತ್ವಜ್ಞಾನಿ. ದಾರಿಗಾಣದೆ ಕತ್ತಲಲ್ಲಿ ತತ್ತರಿಸುವ ಕುರುಡನಲ್ಲ.

ಹೀಗೆ ಅರ್ಥಮಾಡಿಕೊಂಡರೆ ತತ್ವಜ್ಞಾನಕ್ಕೂ ಜೀವನಕ್ಕೂ ಎಷ್ಟು ಬೇಪಾಳದ ಸಂಬಂಧವಿದೆಯೆನ್ನುವುದು ತಾನೇ ಹೊರಬೀಳುವದು. ತತ್ವಜ್ಞಾನಕ್ಕೆ ಪರಪ್ರಯೋಜನಗಳ ಪ್ರಶ್ನೆಯೇ ಏಳುವುದಿಲ್ಲ. ಅದರ ಸ್ವಪ್ರಯೋಜನವೇ ಪರಪ್ರಯೋಜನ. ಪರಮಾರ್ಥಸತ್ಯದ ಸಾಕ್ಷಾತ್ಕಾರಕ್ಕಿಂತ ಹೆಚ್ಚಿನದು ಮತ್ತೆ ಯಾವದೂ ಇಲ್ಲವೇ ಇಲ್ಲ. ಈ ಸಾಕ್ಷಾತ್ಕಾರವೇ ಸರ್ವಶ್ರೇಷ್ಠ ಜೀವನ. ಬಾಹ್ಯವಾದ ಮಾನದಂಡಗಳು ಇದರ ಮಹತ್ವವನ್ನಳೆಯಲಾರವು. ಸಂಶಯ ವಿಕಲ್ಪಗಳಿರುವವರೆಗೂ ಸತ್ಯವು ದೂರದಲ್ಲೇ ಉಳಿಯುವುದು. ಅಂತರಾತ್ಮನ ಪ್ರತಿಭಾಸವು ಅನುಭವಗೋಚರವಾದೊಡನೆಯೆ ಸಂಶಯವಿಕಲ್ಪಗಳೆಲ್ಲ ಮಾಯವಾಗುವವು. ಆ ಸಮಕಾಲದಲ್ಲೇ ನಿತ್ಯಮುಕ್ತತಾಪ್ರತೀತಿಯೂ ನಿರತಿಶಯಾನಂದವೂ ಉಂಟಾಗುವವು. ಇದರಲ್ಲಿ ಮೋಸಹೋಗುವ ಭಯವಿಲ್ಲ. ಆತ್ಮವಂಚನೆಯನ್ನು ಯಾರೂ ಮಾಡಲಾರರು. ಮೋಕ್ಷವೇ ನಿಃಶ್ರೇಯಸ; ಅದೇ ಪರಮಪುರುಷಾರ್ಥ. ಜೀವನದಲ್ಲಿ ಮುಕ್ತಿಸಂಪತ್ತನ್ನು ಗಳಿಸುವವನೇ ತತ್ವಜ್ಞಾನಿ:

"ಶ್ರುತಿಗುರುಗಳುಪದೇಶದಿಂದಲಿ
ಮಥಿಸಿ ಕಣ್ಣೊಳು ತಾನೆ ತಿಳಿದತಿ
ಸತತಮನನಾಭ್ಯಾಸವಶದಿಂ ದೃಢತರವ
ಮಾಡಿ
ಅತಿಶಯದ ಜ್ಞಾನಾಪರೋಕ್ಷ-
ಸ್ಥಿತಿಯೆನಿಸುವನುಭವವದಾಗಲು
ಗತಿಯ ಪಡೆವರು ಯೋಗಸಹಜಾನಂದ
ಕಲನದಲಿ"



## ಗ್ರಹಗಳ ಮುನ್ನೋಟ

# ಜುಲೈ ೧೮ ರಿಂದ ೨೪ ರ ವರೆಗೆ

**ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ**

### ಮೇಷ

ತಮ್ಮ ಮತ್ತು ನಿಮ್ಮ ಹೆಂಡತಿಯ ಪ್ರಕೃತಿ ಸ್ವಾಗಿದ್ದರೂ ನಿಮ್ಮೊಳಗಿನ ಮನಸ್ತಾಪಗಳು ಪಾಪವಲ್ಲಿಲ್ಲ ನಿಮಗೆ ಮನಶ್ಯಾಂತಿ ಕೊಡ ದೆತು. ಮಕ್ಕಳಲ್ಲೊಬ್ಬರ ಅಭ್ಯಾಸದ [illegible] ತುಂಬ ಚಿಂತೆಯುಂಟಾಗ ಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಗೂ [illegible] ನೀವು ವೆಚ್ಚವೂ ಗಂಟುಬೀಳುತ್ತಿರುವದರಿಂದ ಆರ್ಥಿಕ ಸ್ಥಿತಿಯ ಮೇಲೆ ಬಹಳ ಕಣ್ಣ ಬೇಕಾಗುವದು. ಪಾದ ಸ್ಪರ್ಧೆಗಳಲ್ಲಿ ಜಯ ದೊರಕುವದು. ಭಿಟ್ಟಿಯಿಂದ ಇಲ್ಲ. ಪ್ರವಾಸಕ್ಕೆ ಅನ್ವಿಯಿಲ್ಲ. ಶತ್ರುಸ್ಯದ ಸ್ವರೂ ನಿಟ್ಟಿಗೆ. ಭರಣಿಗೆ ಉತ್ತಮ. ತಾ. ೧೯, ೨೦, ೨೧ ಅನುಕೂಲ.

### ವೃಷಭ

ನಿಮ್ಮ ಹೆಂಡತಿಯ ಪ್ರಕೃತಿ ಮತ್ತೆ ಮತ್ತೆ ಕೆಡುತ್ತ ಹೋಗುವದು ನಿಮಗೆ ಆತಂಕದ ಪ್ರಸಂಗ ಸುಖಗಳನ್ನು ಕೊಡಲಿಕ್ಕಿಲ್ಲ. ಉದ್ಯೋಗ ಪ್ರತಿಷ್ಠೆ ಮತ್ತು ಲಾಭ ತುಂಬ ಬರುವವು. ಕೊಡುಗೆಗಳು ತುಸು ಕಾಡಬಹುದು. ಪಾದ ಸ್ಪರ್ಧೆಗಳಲ್ಲಿ ಸ್ವಲ್ಪ ಹಿಂಜರಿಯುವ ಪ್ರಸಂಗ ಬರಬಹುದು. ಮಿತ್ರವರ್ಗದಲ್ಲೊಬ್ಬರು ಉನ್ನತಿ ಹೊಂದುವರು. ಪ್ರವಾಸ ಅಷ್ಟು ಹಿತಕರವಾಗದು. [illegible] ಕಾರ್ಯ ಸಾಧನೆಯಾಗಬಹುದು. [illegible] ಕಠಿಣ. ೨೦, ೨೨, ೨೩, ೨೪ ಅನುಕೂಲ.

### ಮಿಥುನ

ನಿಮ್ಮ ಪ್ರಕೃತಿ ಚೆನ್ನಾಗಿದ್ದರೂ ಹೆಂಡತಿಗೆ ಸ್ವಲ್ಪ ಕ್ಲೇಶಗಳಿರುವವು. ಉದ್ಯೋಗ ಪ್ರಗತಿ ಭಿಟ್ಟಿಯಿಂದ ಸಾಗಿದ್ದರೂ ಪ್ರತಿಷ್ಠೆ ಹಾಳಲಿಕ್ಕಿಲ್ಲ. ನಿಮ್ಮ ಪ್ರಾಮಾಣಿಕತೆ ಬಗ್ಗೆ ಲೋಕನಿಂದೆಯನ್ನೆದುರಿಸ ಬೇಕಾಗಿತು. ಪಾದ ಸ್ಪರ್ಧೆಗಳಲ್ಲಿ ಮೊದಲು [illegible] ಕೈಸೇರುವಂತೆ ಕಂಡರೂ ಮುಂದೆ [illegible] ಪ್ರವಾಸ ಸುಖಕರ, [illegible] ಅನುಕೂಲ, ಆದರೆ ಭಿಟ್ಟಿ [illegible] ಪ್ರತಿಕೂಲ. [illegible] ನಕ್ಷತ್ರಕ್ಕೆ [illegible] ಕಠಿಣ. ತಾ. ೧೮, ೧೯, ೨೩, ೨೪ [illegible]

### [illegible]

[illegible]

### [illegible]

[illegible] ಉದ್ಯೋಗದಲ್ಲಿ [illegible] ಪ್ರವಾಸಕ್ಕೆ [illegible] ಅನುಕೂಲ.

### [illegible]

[illegible] ಅನುಕೂಲ.

ನಿಮ್ಮ ಕೌಟುಂಬಿಕ ಸುಖ ಮುಕ್ತಾಗಬಹುದು. ಉದ್ಯೋಗದಲ್ಲಿ ಲಾಭ, ಪ್ರತಿಷ್ಠೆ ಚೆನ್ನಾಗಿರು ತ್ತದೆ. ತುಂಬ ವೆಚ್ಚವಾದರೂ ಉದ್ದೇಶ ಕೈಗೂಡುವದು. ಪಾದ ಸ್ಪರ್ಧೆಗಳಲ್ಲಿ ಜಯ ದೊರಕುವದು. ಆದರೆ ಅದಕ್ಕಾಗಿ ಅತಿಶಯೋಕ್ತಿ ವೆಚ್ಚ ಮಾಡುವಿರಿ. ಪ್ರವಾಸಾದಿ ಕಾರ್ಯಗಳು ಹಿತಕರ. ಹಸ್ತಾ ನಕ್ಷತ್ರಕ್ಕೆ ಒಳಿತು. ತಾ. ೨೧, ೨೨, ೨೩, ೨೪ ಅನುಕೂಲ.

### ತುಲಾ

ಪ್ರಕೃತಿ ಸೌಖ್ಯ. ಹೆಂಡತಿಯೊಡನೆ ಏಕ ವಾಕ್ಯ ಮಾತ್ರ ಕಠಿಣ. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಉತ್ತಮ. ಆದರೂ ಅನೇಕ ಸಂಗತಿಗಳು ನೀವು ಬಯಸಿದಂತೆ ನಡೆಯದ ಮೂಲಕ ಕಸಿಬಿಸಿಪಟ್ಟುಕೊಳ್ಳುವಿರಿ. ಪಾದ ಸ್ಪರ್ಧೆಗಳಲ್ಲಿ ನಿಮ್ಮ ಕೈ ಸೋಲಾಗುವದು. ಸ್ವಾತಿಗೆ ತೊಂದರೆ ಕಠಿಣ. ತಾ. ೧೮, ೧೯, ೨೩, ೨೪ ಅನುಕೂಲ.

### ವೃಶ್ಚಿಕ

ನಿಮ್ಮ ಸ್ವಂತ ಪ್ರಕೃತಿಯ ಕಡೆ ಒಳ್ಳೆ ಲಕ್ಷ್ಯವಿರಲಿ. ಉದ್ಯೋಗದಲ್ಲಿ ಪ್ರತಿಷ್ಠೆಗೂ ಲಾಭಕ್ಕೂ ಕೊರತೆಯಿಲ್ಲ. ನೋಟಾಗಿ ಅನಿರೀಕ್ಷಿತ ಲಾಭದ ಯೋಗವೂ ಉಂಟು. ಪಾದ ಸ್ಪರ್ಧೆಗಳಲ್ಲಿ ಎರಡು ಪಕ್ಷಗಳೂ ಇದ್ದಂತೆ ಇರುವವು. ಪ್ರವಾಸಪಾಗಲಿ ಪತ್ರವ್ಯವಹಾರವಾಗಲಿ ಅಷ್ಟು ಸಫಲವಾಗದು. ಆದರೆ ಭಿಟ್ಟಿಯಿಂದ ಕೆಲಸ ಸಾಧಿಸಬಹುದು. ಅನುರಾಧೆಯ ೧ ಮತ್ತು ೩ ಜ್ಯೇಷ್ಠದ ೧, ೩ ಮತ್ತು ೪ ನೆ ಚರಣಗಳಿಗೆ ತೊಂದರೆ ಕಠಿಣ. ತಾ. ೨೦, ೨೧, ೨೨ ಅನುಕೂಲ.

### ಧನು

ಹೆಂಡತಿಯೊಡನೆ ನಿಮಗಾಗುವ ಮತಭೇದಗಳನ್ನು ಬಗೆಹರಿಸಿಕೊಳ್ಳುವದೊಳಿತು. ಈ ವಾರ ನಿಮಗೆ ಸ್ವಾದರದಲ್ಲಿಯೂ ಅಷ್ಟು ಅನುಕೂಲ ಸಂಗತಿಗಳು ಜರಗಲಾರವು. ಉದ್ಯೋಗದಲ್ಲಿ ಪ್ರತಿಷ್ಠೆಗೂ ಲಾಭಕ್ಕೂ ಕೊರತೆಯಿಲ್ಲ. ಅಲ್ಪಸ್ವಲ್ಪ ಅನಿರೀಕ್ಷಿತ ಲಾಭವೂ ದೊರಕಬಹುದು. ಪಾದ ಸ್ಪರ್ಧೆಗಳಲ್ಲಿ ಹೇಳತಕ್ಕ ಪರಾಜಯವೂ ಇಲ್ಲ. ಪ್ರವಾಸಾದಿ ಕಾರ್ಯಗಳು ನಿರರ್ಥಕ. ಪೂರ್ವಾಷಾಢಕ್ಕೆ ತೊಂದರೆ ಕಠಿಣ. ತಾ. ೧೮, ೧೯, ೨೩, ೨೪ ಅನುಕೂಲ.

### ಮಕರ

ನಿಮ್ಮೆಲ್ಲರ ಪ್ರಕೃತಿಯು ಉತ್ತಮವು. ಆದರೆ ಉಳಿದ ವಿಚಾರಗಳಲ್ಲಿ ನಿಮ್ಮ ಸ್ಥಿತಿ ಈ ವಾರದಲ್ಲಿ ಅಷ್ಟು ಉತ್ಸಾಹಕ್ಕೆ ಎಡೆಕೊಡದು. [illegible] ಉದ್ಯೋಗದಲ್ಲಿ ಪ್ರತಿಷ್ಠೆ [illegible] ನಿಮ್ಮ [illegible] ಬೇಕು. ಆದರೆ ಸ್ವತಂತ್ರ [illegible] ನೌಕರಿಯಲ್ಲಿರುವವ [illegible] ಸ್ಪರ್ಧೆಗಳಲ್ಲಿ ಇಬ್ಬರೂ [illegible] ಪ್ರವಾಸವಾಗಲಿ ಪತ್ರವ್ಯವಹಾರವಾಗಲಿ ಫಲಕಾರಿಯಾಗದು. [illegible] ಶ್ರವಣಕ್ಕೆ ತೊಂದರೆ ಕಠಿಣ. ತಾ. ೨೧, ೨೨, ೨೩ ಅನುಕೂಲ.

### ಕುಂಭ

ನಿಮ್ಮ ಹೆಂಡತಿಯ ಪ್ರಕೃತಿಯ ಬಗ್ಗೆ ತುಂಬ ಕಾಳಜಿ ವಹಿಸಬೇಕಲ್ಲದೆ ನಡೆಸುವ ಪದ ಕಾಟಕ್ಕೂ ನೀವು ಸಿದ್ಧರಾಗಿರಬೇಕಾದೀತು. ಉದ್ಯೋಗದಲ್ಲಿ ಪ್ರತಿಷ್ಠೆ ಯೋಗ್ಯವಾಗಿದ್ದರೂ ಲಾಭ ತೀರ ಕಡಿಮೆ. ಪಾದ ಸ್ಪರ್ಧೆಗಳಲ್ಲಿ ಹಿಂದೇಟು. ಪ್ರವಾಸ ತೊಂದರೆ ಯುಕ್ತ. ಆದರೆ ಭಿಟ್ಟಿ ಪತ್ರವ್ಯವಹಾರಗಳಿಗೆ ಅಡ್ಡಿಯಿಲ್ಲ ಶತತಾರಕೆಗೆ ಅನುಕೂಲ ಕಾಲ. ತಾ ೨೪, ೧೯, ೨೨ ಲೇಸು.

### ಮೀನ

ನೀವೇ ಈ ವಾರದಲ್ಲಿ ಜೆಲ್ಲು ಕಡಿಮೆ ಆಗ್ರಹ ಸಿಡುಕನ್ನಬೇಕು. ವ್ಯಾಪಾರನ್ನ ಭೋಜನ ನೋಡಿಕೊಳ್ಳದೆ ಆದನ್ನು ಉಪ ಭೋಗಿಸಲಷ್ಟಾದ [illegible] ಸೌಖ್ಯವೂ [illegible]. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಚೆನ್ನಾಗಿದೆ. ಆದರೆ ವೆಚ್ಚವೂ ಹಾಗೆಯೇ ಇರುವದು. ಪಾದ ಸ್ಪರ್ಧೆಗಳಲ್ಲಿ ತುಂಬ ಯಶ. ಪ್ರವಾಸಕ್ಕೆ ಹೋಗಬೇಡಿರಿ. ಭಿಟ್ಟಿ ಪತ್ರವ್ಯವಹಾರವೇ ಸಾಕು. ಉತ್ತರಾ ಭಾದ್ರಪದ ೧ ಮತ್ತು ೩ ಹಾಗು ರೇವತಿಯ ೧, ೩ ಮತ್ತು ೪ ನೆ ಪಾದಗಳಿಗೆ ತುಂಬ ಹಿತ. ತಾ. ೧೮, ೧೯, ೨೦, ೨೧ ಅನುಕೂಲ.

# ಎರಡನೆಯ ಹಾದಿ

ಖಾಸಗಿ ಆಸ್ತಿ ಮತ್ತು ಆದಾಯಗಳಿಗೆ ಸಂಬಂಧಿಸಿದ ಧ್ಯೇಯವಾದಗಳನ್ನು ಕ್ಷಣಕಾಲ ಬದಿಗಿಟ್ಟರೆ, ನಮ್ಮ ನಾಡಿನಲ್ಲಿ ಎರಡು ವಿಚಾರ ಸರಣಿಗಳು ಉಳಿಯುತ್ತವೆ. ರಾಶಿರಾಶಿಯಾಗಿ ಯಂತ್ರಗಳಿಂದ ಸಾಮಾನು ತಯಾರಿಸುವದರಲ್ಲೇ ಭಾರತದ ಅಭಿವೃದ್ಧಿಯಿದೆ ಎನ್ನುವದು ಒಂದು ವಿಚಾರಸರಣಿಯಾದರೆ, ಹಳ್ಳಿಯ ಮತ್ತು ದೇಹಶ್ರಮದ ಉದ್ಯಮಗಳಲ್ಲೇ ಅದಿದೆಯೆನ್ನುವುದು ಇನ್ನೊಂದು ಸರಣಿ. ಬಂಡವಾಳಗಾರ ಸೋಶಲಿಸ್ಟರ ಮತ್ತು ಕಮ್ಯೂನಿಸ್ಟರ ಶ್ರದ್ಧೆಯಿರುವದು ನಿಶ್ಚಿತವಾಗಿ ಮೊದಲನೆಯದರಲ್ಲೇ-ರಚನಾತ್ಮಕ ಕಾರ್ಯಕರ್ತರದಾದರೋ ಎರಡನೆಯದರಲ್ಲಿ. ಎಲ್ಲ ವರ್ಗಗಳ ಕಾಂಗ್ರೆಸ್ಸಿಗರು, ಮಧ್ಯವರ್ಗದವರು ಮತ್ತು ಹಳ್ಳಿಗರು ಸಾಮಾನ್ಯವಾಗಿ ಎರಡು ಶ್ರದ್ಧೆಗಳ ನಡುವೆ ಅತ್ತಷ್ಟು ಇತ್ತಷ್ಟು ಹಂಚಿ ಹೋಗಿದ್ದಾರೆ. ಉದ್ಯಮವಾದವೇ ಇಂದು ಇಡೀ ಜಗತ್ತಿನ ರೂಢಿಯಲ್ಲಿರುವದು. ಅಲ್ಲದೆ ಅದು ಸಾಧಿಸಿದ ಮತ್ತು ಸಾಧಿಸುತ್ತಿರುವ ಪ್ರಗತಿಯ ವೇಗ ಮತ್ತು ಪರಿಮಾಣಗಳು ಬಹಳ ಹೆಚ್ಚಾಗಿರುವ ಕಾರಣ ಹಳ್ಳಿಯ ಮತ್ತು ಕೈಕೆಲಸದ ಉದ್ಯಮಗಳನ್ನು ಎಷ್ಟೇ ಪ್ರಯತ್ನಪಟ್ಟರೂ ಅದನ್ನೆದುರಿಸಿ ನಿಲ್ಲುವಂತೆ ಮಾಡಲು ಸಾಧ್ಯವಾಗದು. ಇದಲ್ಲದೆ, ಅದು ಒದಗಿಸಿಕೊಟ್ಟ ಸುಖ ಸಾಧನಗಳು ಸನ್ಯಾಸಿಯನ್ನೂ ಮರುಳುಗೊಳಿಸುವಂಥವಿವೆ. ಆದರೆ ಉದ್ಯಮವಾದದಲ್ಲಿ ಶೀಘ್ರಗತಿಯ ವಾಹನ ಮತ್ತು ಸಂಪರ್ಕ ಸೌಕರ್ಯಗಳು; ಗಣಿ ಉತ್ಪಾದನಸಾಧನ ಮತ್ತು ಅಂತಾರಾಷ್ಟ್ರೀಯ ವ್ಯಾಪಾರ ಇವುಗಳ ನಿಯಂತ್ರಣ; ಹಣಕಾಸಿನ ಗೊಂದಲ ಇತ್ಯಾದಿಗಳು ಸೇರಿಕೊಂಡಿವೆ. ಇವುಗಳಿಂದ ಸೈನ್ಯ ಆಯುಧ ಸಾಮಗ್ರಿಗಳು ಮತ್ತು ಪದೇ ಪದೇ ಯುದ್ಧಗಳು (ಪ್ರಕಟವಿರಲಿ ಪ್ರಚ್ಛನ್ನವಿರಲಿ) ಇವಕ್ಕೆ ಅವಕಾಶ ಉಂಟಾಗುತ್ತದೆ ಮತ್ತು ಅಂತ್ಯದಲ್ಲಿ ಫ್ಯಾಸಿಜಂ ಅಥವಾ ಕಮ್ಯೂನಿಜಂ, ಮನುಷ್ಯನ ವ್ಯಕ್ತಿತ್ವದ ದಮನ ಮತ್ತು ಕೇಂದ್ರೀಕರಣ ಆ ಮೂಲಕ ಫಲಿಸುತ್ತದೆ.

ಜನರಿಗೆ ಈ ಚಿತ್ರ ಕಣ್ಣಿಗೆದುರಾದಾಗ ಮತ್ತು ಮೂರನೆಯ ಮಹಾಯುದ್ಧದ ಬೆದರಿಕೆ ಹಿಡಿದಾಗ, ಬಹಳ ಗಾಬರಿಯಾಗುತ್ತದೆ. ಮತ್ತು ವಿಜಯಶಾಲಿಗಳಾದ ಸೇನಾಪತಿಗಳಿಂದ ಹಿಡಿದು ಸಾಮಾನ್ಯ ಸರಳ ಮನುಷ್ಯರ ವರೆಗೆ ಎಲ್ಲರ ಬಾಯಲ್ಲೂ ಕಡೆಯದಾಗಿ "ಗಾಂಧೀ ಮಾರ್ಗದಿಂದಲೇ ಮಾನವನ ದುಃಖವಿಮೋಚನೆ" ಎಂಬ ಒಪ್ಪಿಗೆಯ ಮಾತು ಹೊರಬೀಳುತ್ತದೆ. ಆದುದರಿಂದ ಗ್ರಾಮೋದ್ಯಮದ ಕಾರ್ಯಕ್ರಮಕ್ಕೂ ಸ್ವಲ್ಪ ಸ್ಥಾನ ಕೊಡಬೇಕೆಂಬ ಒಂದು ಆಶೆಯಿದೆ. ಆದರೆ ಈ ಆಶೆ ದುರ್ಬಲವಾಗಿದೆ; ಅದಕ್ಕಿಂತ ದೊಡ್ಡ ಆಶೆಯೆಂದರೆ, ಭಯಂಕರ ಪರಿಣಾಮಗಳಿಗೆಡೆಗೊಡದಂತೆ ಉದ್ಯಮವಾದವನ್ನು ಜಯಪ್ರದವಾಗಿ ಅನುಸರಿಸುವ ಮಾರ್ಗವನ್ನು ಹುಡುಕುವದೇ ಆಗಿದೆ.

ಕಾಂಗ್ರೆಸ್ ಸರಕಾರಗಳ ಧೋರಣ ಈ ಯೆರಡರಲ್ಲಿ ಯಾವ ಮಾರ್ಗದಲ್ಲೇ ಆಗಲಿ ಹೀಗೆ ಶ್ರದ್ಧಾದೌರ್ಬಲ್ಯವನ್ನು ವ್ಯಕ್ತಪಡಿಸುತ್ತದೆ. ಇನ್ನೊಂದು ಬಗೆಯಿಂದ ಹೇಳುವುದಾದರೆ, ಎರಡು ಮಾರ್ಗಗಳಲ್ಲಿ ಒಂದು ವಿಧದ ಸಾಮರಸ್ಯವನ್ನು ಸಾಧಿಸುವ ಪ್ರಯತ್ನದಲ್ಲಿ ಅವರಿದ್ದಾರೆ. ಆ ಮಟ್ಟಿಗೆ ಅವರು ದೇಶದ ಸಾರ್ವಜನಿಕರ ಅಭಿಪ್ರಾಯವನ್ನು ಪ್ರಾಮಾಣಿಕವಾಗಿ ಪ್ರತಿನಿಧಿಸುತ್ತಾರೆ. ಏಕೆಂದರೆ, ವಿದ್ಯಾವಂತರು ಮತ್ತು ಮಧ್ಯವರ್ಗದವರಿಗಷ್ಟೇ ಅಲ್ಲ, ನಮ್ಮ ಕಾರ್ಯಕ್ರಮವು, ನಾವು "ಹಳ್ಳಿಗರು, ಸಾಮಾನ್ಯ ಜನರು" ಎಂದು ಕರೆಯುವ ಜನರಿಗೂ ರುಚಿಸುವದಿಲ್ಲ ಎಂಬುದನ್ನು ರಚನಾತ್ಮಕ ಕಾರ್ಯಕರ್ತರಾದ ನಾವು ಅರಿತುಕೊಳ್ಳಬೇಕಾಗಿದೆ. ಹಾಗೆ ಕೇಳಿದರೆ ರಚನಾತ್ಮಕ ಕಾರ್ಯ ಮಾಡಲು ಮುಂದೆಬಂದ ಈ ಹಲಕೆಲ ಮಂದಿಯಾದರೂ ಮಧ್ಯ ಮತ್ತು ವಿದ್ಯಾವಂತ ವರ್ಗದವರೇ; ಅಲ್ಲದೆ ಅದಕ್ಕೆ ಬೆಂಬಲವಿತ್ತುದಾದರೂ ಅವರೇ. ಹಣದಿಂದ ಉಂಟಾದ ಗಂಭೀರ ಸ್ಪರ್ಧೆಯ ದೆಸೆಯಿಂದ ಹಳ್ಳಿಗರಿಗೂ ಸಾಮಾನ್ಯರಿಗೂ ಗಾಂಧೀಯ ಆರ್ಥಿಕ ಕಾರ್ಯಕ್ರಮದಲ್ಲಿ ಶ್ರದ್ಧಾಪೂರ್ವಕವಾಗಿ ಆಸಕ್ತಿವಹಿಸಲು ಸಾಧ್ಯವಾಗದಾಗಿದೆ. ಈ ಉದ್ಯಮಗಳನ್ನು ಹಿಡಿದ ಕೆಲವೇ ನೂಲುಗಾರರು, ನೇಯ್ಗೆಗಾರರು ಮತ್ತು ಇತರ ಹಳ್ಳಿಯ ಕಸಬುದಾರರು ಹಾಗೆ ಮಾಡಿದ್ದು ಒಂದೇ ಹಣಗಳಿಸುವ ಬೇರೆಯ ಉದ್ಯೋಗವಿಲ್ಲೆಂದು; ಇಲ್ಲವೆ, ಹೆಚ್ಚಿಗೆ ಸಂಬಳವನ್ನು ಸರಕಾರ ಕೊಡುತ್ತದೆಯೆಂದು ಅಷ್ಟೆ.

ನಮ್ಮ ಹಲವು ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಒಕ್ಕಲುತನದ ಉದ್ಯೋಗಗಳಲ್ಲಿ ಮತ್ತು ಕೃತಕಧನಸಹಿತವಾದ ಉದ್ಯಮಗಳಲ್ಲಿ ಹೊಂದಿಕೆಯಿಲ್ಲದಿರುವುದೇ ಕಾರಣವಾಗಿದೆ. ಈಗ ಸಂಪೂರ್ಣವಾಗಿ ಸ್ಪಷ್ಟವಾಗಿರುವಂತೆ, ತನ್ನ ಆಹಾರದ ಅವಶ್ಯಕತೆಗಳಾದ ಕಾಳುಕಡಿಗಳನ್ನು ಮತ್ತು ಹಾಲನ್ನು ತನ್ನ ಜನಕ್ಕಾಗಿ ಉತ್ಪಾದಿಸಲಾರದ ರಾಷ್ಟ್ರವೇ ಅತ್ಯಂತ ಅರಕ್ಷಿತವಾದುದು. ಆದರೆ ಕಾಳು ಮತ್ತು ಹಾಲುಗಳ ಉತ್ಪಾದನಕ್ಕೆ ರೊಕ್ಕದ ಬೆಳೆಗಳಾದ ಹತ್ತಿ, ನೆಲಗಡಲೆ ಅಥವಾ ಹೊಗೆಸೊಪ್ಪುಗಳ ಬೆಳೆಗೆ ಬೇಕಾಗುವುದಕ್ಕಿಂತ ಹೆಚ್ಚು ಶ್ರಮ ಬೇಕಾಗುತ್ತದೆ. ಆದರೆ ಔದ್ಯಮಿಕ ಮತ್ತು ಧನಮೂಲ್ಯದ ಕಾರಣವು ತಕ್ಕಡಿಯನ್ನು ಮೇಲೆ ಕೆಳಗೆ ಮಾಡಿ ಬಿಡುತ್ತದೆ; ಆದರಿಂದ ಆಹಾರ ಧಾನ್ಯಗಳಿಗಿಂತ ರೊಕ್ಕದ ಬೆಳೆಗಳೇ ಹೆಚ್ಚು ಲಾಭದಾಯಕವೆನಿಸುತ್ತವೆ. ಅದೇ ಮೇರೆಗೆ ಉದ್ಯಮಗಳಲ್ಲಿ ಉತ್ಪಾದಕನಿಗೆ ವಿಲಾಸ ಸಾಮಗ್ರಿಗಳು ದಿನಬಳಕೆಯ ಸಾಮಾನುಗಳಿಗಿಂತ ಹೆಚ್ಚು ಲಾಭವನ್ನು ದೊರಕಿಸಿಕೊಡುತ್ತವೆ. ಒಕ್ಕಲಿಗರಿಗೆ ಹೆಚ್ಚು ಆಹಾರಧಾನ್ಯ ಮತ್ತು ಹಾಲುಗಳನ್ನು ಉತ್ಪಾದಿಸಲು ಬಿನ್ನವಿಸಿಕೊಳ್ಳಲಾಗಿದೆ; ಆದರೆ ಅವು ಹೆಚ್ಚು ಲಾಭಕರವಾಗುವಂಥ ಸನ್ನಿವೇಶವನ್ನು ಕಲ್ಪಿಸದಿದ್ದರೆ ಅಥವಾ ಹಣಕ್ಕಿಂತ ಉತ್ತಮವಾದ ಯಾವುದಾದರೊಂದನ್ನು ಬೆಲೆಯ ಮಾನದಂಡವನ್ನಾಗಿ ಮಾಡದಿದ್ದರೆ ಆ ಬಿನ್ನಹ ರಚನಾತ್ಮಕ ಕಾರ್ಯಕರ್ತರು ಗ್ರಾಮೋದ್ಯಮ ಸ್ವಾವಲಂಬನಗಳ ಬಗ್ಗೆ ಮಾಡಿಕೊಂಡ ಬಿನ್ನಹದಂತೆಯೇ ವ್ಯರ್ಥವಾಗುತ್ತದೆ.

ಈ ಹಣಕಾಸಿನ ಪದ್ಧತಿಯು ಆರ್ಥಿಕ ಬೆಲೆ ಮತ್ತು ಸಾಮಾಜಿಕ, ನೈತಿಕ ಬೆಲೆಗಳಲ್ಲಿ ವಿರೋಧವುಂಟಾಗಲು ಕಾರಣವಾಗಿದೆ. ಈ ಪ್ರಕಾರ ಸಾಮಾಜಿಕವಾಗಿ ಮತ್ತು ನೈತಿಕವಾಗಿ ಅಹಿತಬೆಲೆಯುಳ್ಳದ್ದಾದರೂ ಲಾಭ ಹೆಚ್ಚಿರುವ ಕಾರಣದಿಂದ ಸರಕಾರಗಳಷ್ಟೇ ಅಲ್ಲದೆ ಸಾಮಾಜಿಕ ಕಾರ್ಯಕರ್ತರು ಕೂಡ ಸಂಪೂರ್ಣ ಪಾನಪ್ರತಿಬಂಧವನ್ನು ಬಿಟ್ಟುಬಿಡುವ ಪ್ರಲೋಭನಕ್ಕೆ ಬಲಿಯಾಗಿದ್ದಾರೆ. ಜಗತ್ತು ಧನಪದ್ಧತಿಯಲ್ಲಿ ಸಿಕ್ಕಿಕೊಂಡು ಆರಿಲಲ್ಲಿ ಬಿದ್ದ ಆನೆಯಂತಾಗಿದೆ; ಕಾಲು ಕೀಳಲು ಪ್ರಯತ್ನಿಸಿದಷ್ಟೂ ಅದು ತಳಕ್ಕೇ ಇಳಿದು ಹೋಗುತ್ತದೆ. ಏನಾದರೊಂದು ಪವಾಡವಲ್ಲದೆ ಇನ್ನಾವುದೂ ಅದನ್ನು ಉಳಿಸಲಾರದೆಂದು ತೋರುತ್ತದೆ. ಯುದ್ಧ ಎಷ್ಟೋ ಸಲ ಅಂಥ ಇಂದ್ರಜಾಲವನ್ನು ಮಾಡುವಂತೆ ತೋರುತ್ತದೆ. ಅದು ಸಮೃದ್ಧಿಯನ್ನು ತರುವಂತೆ ಭಾಸವಾಗುತ್ತದೆ. ಸ್ವಲ್ಪ ಕಾಲದಲ್ಲೇ ಅದು ಸಾಲಗಳನ್ನೆಲ್ಲ ತೊಳೆದು ಇಲ್ಲದಂತೆಮಾಡಿ ಹೇರಳ ಹಣವನ್ನು ತಂದು ಸುರಿಯುವಂತೆ ಕಾಣುತ್ತದೆ. ಕೆಲ ಶತಮಾನಗಳ ವರೆಗೆ ಭಾರತ ನಿರಾಶೆ ಹುಟ್ಟಿಸುವಷ್ಟು ವಿನಾಶೋನ್ಮುಖ ಸ್ಥಿತಿಯಲ್ಲಿತ್ತು. ಈ ರಾಜ್ಯವನ್ನು ಬ್ರಿಟನ್ನಿನ ಸಾಲಗಾರ ಎಂದು ಕಾಣಿಸಲಾಗಿತ್ತು ಮತ್ತು ಪ್ರತಿಯೊಬ್ಬ ಒಕ್ಕಲಿಗನೂ ತಂತನ್ನ ಒಡೆಯನಿಗೆ ಅದೇ ರೀತಿಯಲ್ಲಿ ಸಾಲಗಾರನಾಗಿದ್ದನು. ಈ ಸಾಲಗಾರಿಕೆ ಎಂದೂ ಹೋಗದೆಂದು ಕೂಡ ಒಮ್ಮೆ ಎಣಿಸಲಾಗಿತ್ತು ಮತ್ತು ಹಣ ತಿರುಗಿ ಬರುವ ಪ್ರತ್ಯಾಶೆಯಾದರೂ ಬಹಳ ಇದ್ದಿಲ್ಲ. ಆದರೆ ಎರಡನೆಯ ಜಾಗತಿಕ ಯುದ್ಧವು ಈ ಪರಿಸ್ಥಿತಿಯನ್ನು ಬದಲಾಯಿಸಿಬಿಟ್ಟಿತು. ಆರೇ ವರ್ಷಗಳಲ್ಲಿ ಶತಮಾನಗಳಲ್ಲಿ ಸಾಧ್ಯವಾಗದ ಕಾರ್ಯವನ್ನು ಅದು ಮಾಡಿಬಿಟ್ಟಂತೆ ತೋರಿತು. ಸಾಲಗಾರ ರಾಜ್ಯ ಮತ್ತು ಚಿರಋಣಿಯಾದ ಒಕ್ಕಲಿಗ ಋಣಮುಕ್ತರಾದುದಲ್ಲದೆ ಹಣ ಉಳಿಸಲು ಕೂಡ ಶಕ್ತರಾದುದು ಕಂಡು ಬಂದಿತು; ಕೆಲಮಟ್ಟಿಗೆ (ಸ್ವಲ್ಪ ಕಡಿಮೆಯಾದರೂ) ಇದೇ ಪರಿಸ್ಥಿತಿಯನ್ನು ಒಂದನೆಯ ಜಾಗತಿಕ ಯುದ್ಧವೂ ಉಂಟುಮಾಡಿತ್ತು. ಆದರೆ ಯುದ್ಧ ಮುಗಿದ ಕೆಲವೇ ಕಾಲದಲ್ಲಿ [illegible] ಬಿತ್ತಿದ ಅದೇ [illegible] ಮಾಯಗಾರ ತಯಾರಿಸಿದ ಮಾಯಿಕ ಹಣ್ಣುಗಳಿಗಿಂತ ಹೆಚ್ಚೇನೂ ಉತ್ತಮವಲ್ಲ ಎಂದು ಅರಿಯುವಂತಾಯಿತು. ಎರಡು ಸಲವೂ ಹಣಕಾಸಿನ ಮಾಯೆ ಬಿಸಿಲುಗುದುರೆಯನ್ನು ಸೃಷ್ಟಿಸಿತು.

ಹಣಕಾಸಿನ ಚಲಾವಣೆ ಸಂಪೂರ್ಣವಾಗಿ ಇಲ್ಲವಾಗಿದ್ದರೆ ಇದು ಖಂಡಿತವಾಗಿಯೂ ಚೆನ್ನಾಗಿ ಸ್ಪಷ್ಟವಾಗುತ್ತಿತ್ತು. ಆರು ವರ್ಷಗಳ ವರೆಗೆ ನಡೆದಯುದ್ಧವು ಜನರನ್ನು ಕೊಂದಿತು, ಕಾರಖಾನೆಗಳನ್ನು ಹಾಳುಗೆಡಹಿತು, ಹಿಂದಿನ ಮತ್ತು ಇಂದಿನ ಆಹಾರದ ಅತ್ಯುತ್ತಮ ಶಿಲ್ಕನ್ನು ತಿಂದು ತೇಗಿತು; ಅದು [illegible] ವಿನಾಶಕ ಆಯುಧಗಳ ಸೃಷ್ಟಿ ಮಾಡಿದೆ. ಆಗ ದಿನವೂ [illegible] ಕೊಂಡು ಗತಂಗತ ಎಂಬಂತೆ ಕೋಟ್ಯವಧಿ ರೂಪಾಯಿ ಬೆಲೆಬಾಳುವ ಆಸ್ತಿಯನ್ನು ನಾಶ ಮಾಡಲಾಯಿತು. ಕಳೆದ ಯುದ್ಧದಲ್ಲಿ ಭಾರತ ಬೆಳೆದ ಮತ್ತು ಸಂಗ್ರಹಿಸಿದ ಎಲ್ಲವನ್ನೂ ತೆಗೆದುಕೊಂಡು ಹೋಗಲಾಯಿತು; ಅದಕ್ಕೆ ಬದಲಾಗಿ ಕಾಗದದ ನೋಟುಗಳ ರಾಶಿ ಮತ್ತು ಲೆಕ್ಕದ ಪುಸ್ತಕದಲ್ಲಿಯ ಪಾಕಿಬದಲಾವಣೆಗಳನ್ನು ದೇಶ ಪಡೆಯಿತು. ನಾವು ಆನಂದದಿಂದ ನಮ್ಮ ನೋಟುಗಳನ್ನು ಎಣಿಸಿದೆವು, ಪಾಕಿಬದಲಾವಣೆಗಳನ್ನು ಪರಿಶೀಲಿಸಿದೆವು ಮತ್ತು ನಾವು ಸಮೃದ್ಧರಾದೆವೆಂದು ತಿಳಿದೆವು. ಬಿಸಿಲಿನ ಈ ಕಾಲದಲ್ಲಿ ಬಿಸಿಲುಗುದುರೆ ಮಾಯವಾಗಿ ನಿರ್ಜಲವಾದ ತೀರದ ತೀರದ ಮರುಭೂಮಿ ನಮ್ಮೆದುರಿದೆಯೆಂಬುದು ನಮಗೆ ಗೊತ್ತಾಗಿದೆ.

ಆದರೆ ಅದರ ಭ್ರಾಂತಿಯಲ್ಲಿ ಮುಖಂಡರೂ ಬಂಡವಾಳಿಗರೂ ದೊಡ್ಡ ದೊಡ್ಡ ಔದ್ಯಮಿಕ ಮತ್ತು ಇತರ ಯೋಜನೆಗಳನ್ನು ಸಿದ್ಧಗೊಳಿಸಿ, ಜೀವನದ ಸರ್ವಸಾಧಾರಣ ಮಟ್ಟವನ್ನು ಆಗಲೇ ಅತಿ ಶ್ರೀಮಂತಿಕೆಯಿಂದ ಬದುಕುತ್ತ, ಸ್ವಾತಂತ್ರ್ಯ ಬರುವುದಕ್ಕೆ ಮುಂಚಿನ ಹತ್ತಾರು ವರ್ಷಗಳಲ್ಲಿ ಮತ್ತಷ್ಟು ಶ್ರೀಮಂತಿಕೆಯನ್ನು ಗಳಿಸಿಕೊಂಡ ಜನರ ಜೀವನದಲ್ಲಿ ಯಾವ ಕೊರತೆಯನ್ನೂ ತಂದೊಡ್ಡದೆ ಏರಿಸಲು ಸಾಧ್ಯವಾದೀತೆಂದು ಆಶಿಸಿದರು.

ಆದರೆ ಯಾವನಾದರೊಬ್ಬನಿಗೆ ಈ ಮಾತು ಮನದಟ್ಟಾದರೂ ಕೂಡ ದೇಶದ ಔದ್ಯಮಿಕ ಮತ್ತು ಹಣಕಾಸಿನ ರಚನೆಯಲ್ಲಿ ಮೂಲಭೂತ ಬದಲಾವಣೆಯನ್ನು ಮಾಡುವುದು ಖಂಡಿತವಾಗಿಯೂ ಅಸಾಧ್ಯ ಎಂದು ತೋರುವುದರಿಂದ ಕಡೆಯಪಕ್ಷ ನಾವು ಪುನಾರಚನೆಯ ಎರಡನೆಯ ಹಾದಿಯನ್ನಾದರೂ ಹಿಡಿಯೋಣ. ಮೊದಲನೆಯ ಜಾಗತಿಕ ಯುದ್ಧದ ಕಾಲದಲ್ಲಿ ಕುದುರೆ ಪಡೆ ಬಳಕೆಯಲ್ಲಿತ್ತು; ಆಗ ಯುದ್ಧದ ಕಚೇರಿಯವರಿಗೆ ಹಳ್ಳಿಯ ಕಮ್ಮಾರರು ಮಾಡಿಕೊಡುವ ಕುದುರೆ ಲಾಳಗಳ ಅವಶ್ಯಕತೆ ಉಂಟಾಯಿತು. ಕಾರಖಾನೆಗಳಿಗೆ ಬೇರೆಯ ಕೆಲಸವಿತ್ತು. ಕುದುರೆಲಾಳವನ್ನು ಕೈಯಿಂದ ಮಾಡುವುದು ಸುಲಭವಾಗಿರುವುದರಿಂದ ಅದರ ಬೆಲೆ ಹೆಚ್ಚಾದರೂ ಅದನ್ನು ಹಾಗೇ ಮಾಡಬೇಕೆಂದು ವಿಧಿಸಲಾಯಿತು. ಯುದ್ಧದಲ್ಲಿ ಜಯಸಂಪಾದಿಸುವುದರ ಮುಂದೆ ಹಣದ ಬೆಲೆ ಗೌಣವಾಯಿತು.

ನಾವೀಗ ಒಂದು ಮಹಾಯುದ್ಧದ ನಡುವೆ ಸಿಕ್ಕಿ ಬಿದ್ದಿದ್ದೇವೆ ಎಂಬ ದೃಷ್ಟಿಯಿಂದ ನಾವು ನಮ್ಮ ಆಹಾರಸಮಸ್ಯೆಯತ್ತ ನೋಡಬೇಕೆಂದು ಲಾರ್ಡ್ ಬಾಯ್ಡ್ ಓರರು ಸಲಹೆ ಮಾಡಿದ್ದಾರೆ. ಯುದ್ಧದ ದೃಷ್ಟಾಂತ ಕೇವಲ ಆಲಂಕಾರಿಕವಲ್ಲ, ನಾವು ನಿಜವಾಗಿಯೂ ಯುದ್ಧದ ನಡುವೆಯೇ ಇದ್ದೇವೆ: ಆ ಯುದ್ಧ ಹಸಿವು ಮತ್ತು ನಿರ್ಧನತೆಯ ವಿರುದ್ಧ ನಡೆದಿದೆ. ಯುದ್ಧದಲ್ಲಿ ಬೃಹತ್ಪರಿಮಾಣದ ಉತ್ಪಾದನ ಯೋಜನೆಗಳನ್ನೂ ದೊಡ್ಡ ಕಾಲುವೆಗಳನ್ನೂ ಮಾಡುವಂತೆಯೇ ಚಿಕ್ಕಗದ್ದೆಗಳು, ಬಾವಿಗಳು, ಕೆರೆಗಳು ಮುಂತಾದವುಗಳ ಯೋಜನೆಯನ್ನೂ ಮಾಡಬೇಕು. ಅಲ್ಲದೆ, ಆಹಾರ ಸಮಸ್ಯೆಯು ಹಳ್ಳಿಗಾಡಿನ ಉದ್ಯಮ ಮತ್ತು ಪಶುಬಲಗಳಿಗೆ ಸಂಬಂಧಿಸಿದೆ; ಪಶುಗಳೇ ಉತ್ಪಾದನಸಾಧನಗಳೂ ಹೌದು ವಾಹನಗಳೂ ಹೌದು. ನಾವು ರೈಲುಬರುವುದಕ್ಕೆ ಮುಂಚೆ ಇದ್ದ ವಾಹನ ಪದ್ಧತಿಯನ್ನು ಅಲಕ್ಷಿಸಿದ್ದೇವೆ. ಅದು ವಿಶಾಲವೂ ಜನಬಹುಲವೂ ಆದ ನಮ್ಮ ದೇಶಕ್ಕೆ ಅನಿವಾರ್ಯ. ಇವೆಲ್ಲವನ್ನೂ ಯುದ್ಧ ಪ್ರಯತ್ನದ ಎರಡನೆಯ ಸರಣಿ. ಎರಡನೆಯ ಹಾದಿಯೆಂದಾಕ್ಷಣ ಅದರ ಸ್ಥಾನ ಎರಡನೆಯದು ಎಂದಾಗದು; ಎರಡನೆಯದೆಂದರೆ ಒಂದನೆಯದಕ್ಕೆ ಪರ್ಯಾಯವೂ ಅಷ್ಟೇ ಪ್ರಮುಖವೂ ಆದರೆ ಸ್ವಲ್ಪ [illegible]

[illegible] ಜ್ಞಾನ ಇಲ್ಲದುದರಿಂದ ಅವನ್ನು [illegible] ಕಡಿಮೆಮಾಡಲಾಗದು. ಶ್ಯಾರ್ ಮತ್ತು ಡಿಪೋಸ್ [illegible] ಸರ್ಟಿಫಿಕೇಟುಗಳು ಹಳ್ಳಿಗರನ್ನು [illegible]ಸುವುದಿಲ್ಲ. ಒಕ್ಕಲಿಗರು ವ್ಯಾಪಾ[illegible] ಬಡ್ಡಿಯ, ವ್ಯವಹಾರದಲ್ಲಿ ಆಸಕ್ತಿ[illegible]ರಲ್ಲ. ಸಿಕ್ಕಿದರೆ ಅವರು [illegible]ದಿಂದ ಭೂಮಿ ಕಾಣಗಳನ್ನು [illegible] ದಾರಿದೋರಿದರೆ, ಮಾರಾಟ[illegible] ಖಾತ್ರಿ ಮಾಡಿಕೊಟ್ಟರೆ ಅವರು [illegible] ಸಣ್ಣ ಉದ್ಯಮಗಳನ್ನು [illegible]ದ್ದರು. ಈ ದಿಕ್ಕಿನಲ್ಲಿ ಸರಕಾರದ ಧೋರಣ[illegible] ಅವರಿಗೆ ಸಹಾಯಕವಾಗಿರಬೇಕು. [illegible] ಪದಾರ್ಥಗಳನ್ನು ಕಾರಖಾನೆಯಲ್ಲಿ ತಯಾರಾದವುಗಳೊಡನೆ ಗುಣದಲ್ಲಾಗಲಿ ಬೆಲೆಯಲ್ಲಾಗಲಿ ಹೋಲಿಸಲು ಸಾಧ್ಯವಿಲ್ಲ. ಸುಧಾರಣೆ ಮಾಡಬೇಕಾಗಿರುವ ಈ ಕಾಲದಲ್ಲಿ ರೇಲ್ವೆ, ಬಟ್ಟೆಗಿರಣಿ, ಸಕ್ಕರೆಕಾರಖಾನೆ ಮುಂತಾದವುಗಳಿಗೆ ಹೇಗೋ [illegible] ಅವಕ್ಕೂ ವಿದೇಶೀಯ ಸ್ಪರ್ಧೆಯನ್ನು ತಪ್ಪಿಸಿ ಪ್ರೋತ್ಸಾಹ ಕೊಡಬೇಕಾಗಿದೆ.

ಸರಕಾರವು ಪುನಾರಚನೆಯ ಎರಡನೆಯ ಸರಣಿಯಾಗಿ ನಗರಗಳಿಗೆ ಸರಿಸಮವಾಗಿ ಒಕ್ಕಲುತನ ಮತ್ತು ಉದ್ಯಮಗಳ ದೃಷ್ಟಿಯಿಂದ ಹಳ್ಳಿಗಳ ಸರ್ವೋದಯವನ್ನು ಗಮನಿಸಬೇಕು. [illegible] ಸುಲಭಲಭ್ಯವಾಗುವ ಅಪಾರ ಜನಬಲ ಪಶುಬಲಗಳನ್ನು ಅಲಕ್ಷಿಸಬಾರದು. [illegible] ಮಾತ್ರ ನಾವು [illegible] ಪಾರಾದೇವು.

ವರ್ಧಾ,
೫–೬–೪೯ ಕಿ. ಘ. ಮಶ್ರೂವಾಲಾ

## ಯುದ್ಧ ವಿರೋಧ

ಕ್ಲೀವಲಂಡಿನ ಮ್ಯಾಕ್ಸ್ ಸಾಂಡಿಸ್ [illegible] ಯುದ್ಧ ವಿರೋಧಿಗಳು. ಯುದ್ಧ[illegible] ಯೋಗಿಸಲಾಗುವ ತೆರಿಗೆಯನ್ನು ಅವರು [illegible]ಗಿಯೂ ಎಂದೂ ಕೊಟ್ಟವರಲ್ಲ. ಸರಕಾರದವರು ಅವರ ಸಂಬಳವನ್ನು ಜಪ್ತ ಮಾಡಿ ಕೆಲ ಸಲ ಆ ತೆರಿಗೆಯನ್ನು ವಸೂಲ ಮಾಡಿದ್ದುಂಟು. ಅಲ್ಲದೆ ಅವರು ಮುಂದೆಂದಾದರೂ [illegible] ಬಹುದಾದ ಆಸ್ತಿಯ ಮೇಲೆ ೨೦೦೦ [illegible] ತೆರದ ಹೊಣೆ ಇಟ್ಟಿರುವದುಂಟು.

ಮೊದಲನೇ ಮಹಾ ಯುದ್ಧದಲ್ಲಿಯೂ ಅವರು ಯುದ್ಧದ ಬಗ್ಗೆ ಇದೇ ಬಗೆಯ ಭಾವನೆಗಳನ್ನು ತಾಳಿದ್ದರು, ಮತ್ತು ಶಸ್ತ್ರಾಸ್ತ್ರಗಳನ್ನು ಧರಿಸಲು ನಿರಾಕರಿಸಿದ್ದಕ್ಕಾಗಿ [illegible]ರನ್ನು ಗುಂಡಿಕ್ಕಿ ಕೊಲ್ಲಬೇಕೆಂದೂ [illegible]ಲಾಗಿತ್ತು. ಆದರೆ ಆ ದೇಹಾಂತ ಶಿಕ್ಷೆಯ[illegible] ರದ್ದುಗೊಳಿಸಿ ೧೯೧೮ ರಲ್ಲಿ ಅವರ [illegible] ಮಾಡಲಾಯಿತು. ಅನಂತರ ಅವರಿಗೆ [illegible] ಹಿಂದಿನ ಸಂಬಳವನ್ನು ತೆಗೆದುಕೊ[illegible] ಕೇಳಿದರು. ಎರಡನೇ ಮಹಾ[illegible] ಪ್ರಾರಂಭವಾದಾಗಲವರು ೫೫ ವರ್ಷ[illegible]ದ್ದರು. ಆದರಿಂದ ಅವರನ್ನು ಸೈನ್ಯ[illegible] ಮಾಡಿಕೊಳ್ಳುವ ಸಂಭವವಿರಲಿಲ್ಲ, [illegible] ಅವರು [illegible] ಇದ್ದುದರಿಂದ [illegible] ದ್ದುಂಟು.

"ಸೈನ್ಯದಲ್ಲಿ ಭರತಿಯಾಗುವದರ[illegible] ಯುದ್ಧದಲ್ಲಿ ಸೇರಿ ಎರಡನೆಯವರ[illegible] ಮಾಡುವದನ್ನು ಲಕ್ಷಗಟ್ಟಲೆ ಜನರು ನಿರಾಕರಿ[illegible] ಮತ್ತು ತೆರಿಗೆಗಳನ್ನು ಕೊಡಲು ಒಪ್ಪದಿದ್ದ[illegible] ಸರಕಾರಗಳು ಬದಲಾವಣೆ ಹೊಂದಿ ಯು[illegible] ಭಯವಿಲ್ಲದೆ ಜನರು ಬಾಳಬಹುದು.
(ಸುದ್ದಿಗಾರನೊಬ್ಬನು ಕೇಳಿದ [illegible])

## ಹೆಣ್ಣುಮಕ್ಕಳಿಗಾಗಿ

# ಹಳ್ಳಿಗಾಡಿನ ಆಂಗ್ಲ ಸ್ತ್ರೀಯರು

ರಾಜಯೋಗ್ಯವಾದ ಸೌಧಗಳು ಇಂದಿನ ಇಂಗ್ಲೆಂಡಿನಲ್ಲಿ ಕಾಣಸಿಗವು. ದುಡ್ಡಿಲ್ಲದೆ ಇಲ್ಲವೆ ಕೆಲಸಗಾರರಿಲ್ಲದೆ ಅಂಥ ಮನೆಗಳ ಒಡೆಯರೀಗ ಅವುಗಳ ಯಾವುದಾದರೊಂದು ಭಾಗದಲ್ಲಿ ವಾಸ ಮಾಡಬೇಕಾಗಿದೆ; ಉಳಿದ ಭಾಗವನ್ನು ಮುಚ್ಚಬೇಕು, ಮಾರಬೇಕು, ಇಲ್ಲವೆ ಬಾಡಿಗೆಗೆ ಕೊಡಬೇಕು— ಹೀಗಾಗಿದೆ. ಅವುಗಳಲ್ಲಿ ಹಲವು ಅಸ್ತವ್ಯಸ್ತವಾಗಿವೆ. ಕೇಳುವವರಿಲ್ಲದೆ, ನೋಡಿಕೊಂಬವರಿಲ್ಲದೆ, ಹುಲ್ಲುಬೆಳೆದು ಸುತ್ತಿಕೊಂಡಿವೆ. ಅದರೂ ಆ ವಸತಿಗಳಿಗಿಂದು ಕುಟುಂಬಗಳು ನಾಜೂಕತೆಯಿಂದ ಬಂದು ನುಗ್ಗಿ ವಾಸ ಮಾಡಲು ಪ್ರಾರಂಭಿಸಿವೆ.

### ಸ್ತ್ರೀಯ ಹೊಣೆ

ಕುಟುಂಬಗಳಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೆ ಸ್ತ್ರೀಯೇ ಹೊಣೆ. ಆದುದರಿಂದ ಯುದ್ಧದಿಂದ ಹಿಂದಿರುಗಿದ, ಪುನಾರಚನೆಗಾಗಿ ದುಡಿಯುತ್ತಿರುವ, ಅನ್ನಾರ್ಜನ ಮಾಡುತ್ತಿರುವ ಗಂಡಸರ ಶ್ರಮನಿವಾರಣೆಗೆ, ಹೃಷ್ಟಪುಷ್ಟಿಗಳಿಗೆ ಬೇಕಾದ ಗೃಹವ್ಯವಸ್ಥೆಯನ್ನು ಅವಳು ಕಲ್ಪಿಸಿದಾಗ ಮಾತ್ರ ಅವಳ ಜೀವನಕ್ಕೆ ಒಂದು ಅರ್ಥವುಂಟಾಗುತ್ತದೆ, ಬೆಲೆ ಬರುತ್ತದೆ; ತನ್ನ ಸುಖದಲ್ಲೇ ಮಗ್ನಳಾದ ಸ್ತ್ರೀಯಿಂದ ಯಾವ ಸಮಾಜ ಸೇವೆಯೂ ಆಗದು, ಅದರ ಘಟಕವಾದ ಕುಟುಂಬ ಪೋಷಣೆ ಸಾಧ್ಯವಾಗದು ಎಂಬುದನ್ನು ಆಂಗ್ಲರ ಹಳ್ಳಿಗಾಡಿನ ಹೆಂಗಸರು ಈಗೀಗ ಅರಿತುಕೊಂಡು ಕಾರ್ಯಪ್ರವೃತ್ತರಾಗುತ್ತಿದ್ದಾರೆ.

ಕುಮಾರಿ ಪ್ರೆಸ್ಟ್‌ವಿಚ್ಚಳು ತನ್ನ ಮನೆಯಲ್ಲಿ ಅಟೇಚೆ ಮನೆಯ ಹೆಂಗಸರನ್ನು ಕರೆದು ಅವರವರ ಮನೆಗಳಲ್ಲಿ ಊಟೋಪಚಾರ, ಬಟ್ಟೆಬರೆ ಮತ್ತು ಇತರ ಸಾಧನ ಸಾಮಗ್ರಿಗಳನ್ನು ಸಜ್ಜು ಮಾಡಿರುವ ಯೋಗ್ಯ ಯೋಜನೆಗಳನ್ನು ಕೊಟ್ಟಳು. ಅವಳಂತೆಯೇ ಇಂದು ಅಲ್ಲಲ್ಲಿ ಸ್ತ್ರೀ ಸಂಘಗಳನ್ನು ಹಲವರು ಸಂಘಟಿಸಿ ಗೃಹಕಾರ್ಯಗಳಲ್ಲಿ ಕಲಾವೈದಗ್ಧ್ಯವನ್ನು ಪ್ರದರ್ಶಿಸಿ ತಪ್ಪ ಮತ್ತು ತಮ್ಮ ಪತಿ ಪುತ್ರಾದಿಗಳ ಯೋಗಕ್ಷೇಮ, ಸುಖ ಸಮಾಧಾನಗಳ ಅಭಿವೃದ್ಧಿಗೆ ತಕ್ಕ ಕಾರ್ಯಪದ್ಧತಿಯನ್ನು ಅಳವಡಿಸಿಕೊಳ್ಳಲು ನೆರವಾಗಿದ್ದಾರೆ. ಅಡಿಗೆ ಮಾಡುವುದು, ಸಾಮಾನುಗಳನ್ನು ಸೀಸೆಗಳಲ್ಲಿ ತುಂಬಿಡುವುದು, ವಸ್ತ್ರಗಳಿಗೆ ತೇಪೆ ಹಚ್ಚುವುದು, ಮನೆಯ ನೆಲ ಮತ್ತು ಗೋಡೆಗಳ ಕೊಳ್ಳ ಚೆಂಡೆಗಳನ್ನು ಹೆಚ್ಚಿಸುವುದು ಮೊದಲಾದ ಕೆಲಸಗಳಲ್ಲಿ ಕೌಶಲ್ಯವನ್ನು ತೋರಿಸುವಿಕೆಯನ್ನು ಹಳ್ಳಿಯ ಹೆಂಗಸರೀಗ ಕಲಿತು ಉತ್ತಮ ಗೃಹಿಣಿಯರಾಗುತ್ತಿದ್ದಾರೆ.

### ಪ್ರೆಸ್ಟ್‌ವಿಚ್ಚಳ ತ್ಯಾಗ

ಪ್ರೆಸ್ಟ್‌ವಿಚ್ಚಳು ತನ್ನ ಅಪ್ಪನ ಐಶ್ವರ್ಯದಲ್ಲಿ ಮುಳುಗಿರುವುದನ್ನು ಬಿಟ್ಟು 'ತಾ ಮುದ್ದೊ ನನ್ನ ಕೈಮುದ್ದೊ!' ಎಂಬ ಗಾದೆಯಂತೆ ಗೃಹಿಣಿಯರಿಗೆ ಗೃಹಿಣೀತ್ವದ ಪರಿಪೂರ್ಣತೆಯನ್ನು ಪಡೆಯಲು ಕಾರ್ಯಪರತೆಯನ್ನು ಆಚರಣೆಯ ಮೂಲಕ ಬೋಧಿಸಿದಂತೆ ಭಾರತದ್ದಾದರೂ ವಿದ್ಯಾವಂತ ಶ್ರೀಮಂತೆಯರು ತೋರಿಸಿಕೊಟ್ಟು ತಮ್ಮ ಜೀವನ ವ್ಯರ್ಥವಾಗುವುದನ್ನು ತಪ್ಪಿಸಿ ಸಾರ್ಥಕ ಪಡಿಸಿಕೊಳ್ಳಬಹುದು. ಅವಳು ರಚಿಸಿದ ಆಶ್ರಮವನ್ನು ಇಂದು ಯುದ್ಧದಲ್ಲಿ ಬ್ರಿಟನ್ನಿನ ರಕ್ಷಣೆಗಾಗಿ ಜೀವ ಸಲ್ಲಿಸಿದ ಬ್ರಿಷ್ಟೀ ಬಿಶಪ್ ಮತ್ತು ಅವನ ಹೆಂಡತಿ, ಜಮ್ಮೆಕದ ಒಬ್ಬ ಗುಮಾಸ್ತ, ಅಸ್ಟ್ರೇಲಿಯಾದ ಸುಂದರ ತರುಣ-ವೈಮಾನಿಕರು ಭಾರತದ ಉದ್ಯಮಿ ನೇತೃಗಳು, ನೈಜೀರಿಯದ ಒಬ್ಬ ನ್ಯಾಯಾಧೀಶ, ಅಮೇರಿಕದ ಕೆಲ ಸಭ್ಯರುಗಳು ಇವರೆಲ್ಲರೂ ತುಂಬ ಸಂತೋಷಪಟ್ಟರಂತೆ. ಅವರೆದುರು ಆಕೆ ಆಯಾ ಉದ್ಯೋಗಗಳು ತನ್ನ ಆಶ್ರಮಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಿ ಕೊಟ್ಟದ್ದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದಳು.

ವೈದೇಶಿಕರು ವೈಶಿಷ್ಟ್ಯಪೂರ್ವಕವಾಗಿ ಮಾಡಿದ ಯಾವಕಾರ್ಯದಿಂದಲೇ ಆಗಲಿ, ಕೆಲಸಗಾರರ ಮನಸ್ಸು ಸಂತುಷ್ಟವಾಗುತ್ತದೆ ಎಂಬುದು ಅನುಭವಸಿದ್ಧವಾದುದು. ಈಗ ಹಳ್ಳಿಯ ಹೆಂಗಸರು ತಾವು ರಚಿಸಿದ ಗೃಹದಲ್ಲಿ ಅತಿಥಿಗಳನ್ನು ಆದರಿಸಿದ್ದರಿಂದ ಉಂಟಾದ ಸೌಖ್ಯಕ್ಕಿಂತ ಹೆಚ್ಚಿನ ಮನಃಸಮಾಧಾನ ಬೇರೊಂದಿಲ್ಲವೆನ್ನುತ್ತಿದ್ದಾರೆ. ಅವರೀಗ ಬ್ರಿಟಿಷಿನ ಗಣಿ ಕೆಲಸಗಾರರು, ಬೆಲ್ಜಿಯಮ್ಮಿನಿಂದ ಬಂದ ಪ್ರತಿನಿಧಿಗಳು, ಫ್ರಾನ್ಸ್, ಹಾಲೆಂಡ್ ಮತ್ತು ಜರ್ಮನಿಗಳಿಂದ ಬಂದ ಜನರು ಇವರಿಗೆಲ್ಲ ಆತಿಥ್ಯ ಮಾಡಿ ಕೃತಾರ್ಥತೆಯ ನಗುಮೊಗದಿಂದ ನಲಿಯುವ ಪುಣ್ಯಕ್ಕೆ ಭಾಜನರಾಗಿದ್ದಾರೆ.

### ಪ್ರಗತಿಪರತೆ

ಈ ಚಳವಳಿಗೆ ಮೂಲಪುರುಷಳೆನಿಸಿದ ಮೇಲೆ ಹೇಳಿದ ಪ್ರೆಸ್ಟ್‌ವಿಚ್ಚಳು ಚಿಕ್ಕ ಆಕೃತಿಯ ಮೃದುಹಾಸ್ಯಪ್ರವೃತ್ತಿಯ ಒಬ್ಬ ಸಭ್ಯೆ. ಅವಳಿಗೆ ಅಹಂಕಾರವೆಂಬುದಿಲ್ಲವೇ ಇಲ್ಲ ಎಂದು ಮೇರಿ ಮೀಕಿಂಗ್ ಬರೆಯುತ್ತಾಳೆ. ಅವಳು ಕ್ರಾಂತಿಕಾರಿ. ಇನ್ನೊಬ್ಬರು ತಮ್ಮ ಕಾರ್ಯದಲ್ಲಿ, ನಡತೆಯಲ್ಲಿ ಇಂಥ ಬದಲಾವಣೆ ಮಾಡಿಕೊಳ್ಳಬೇಕೆಂಬ ಆಗ್ರಹ ಪಡದೆ ತನ್ನಲ್ಲೇ ಮೊದಲು ಅಂಥ ಇಷ್ಟವಾದ ಪರಿವರ್ತನವನ್ನು ಮಾಡಿಕೊಳ್ಳುವುದು ಅವಳ ಸ್ವಭಾವ ಎನ್ನುತ್ತಾಳೆ ಮೀಕಿಂಗಳು. ಎಲ್ಲ ಐಶ್ವರ್ಯವನ್ನು ತಾನು ಪರೋಪಕಾರಕ್ಕಾಗಿ ತ್ಯಾಗ ಮಾಡಿದ ಸಾತ್ವಿಕ ಆನಂದವೊಂದೇ ತನ್ನ ಸ್ವತ್ತೆಂದು ಅವಳ ಹೇಳಿಕೆ. ಅವಳೊಡನಿದ್ದ ನೂರಾರು ಹೆಣ್ಣು ಮಕ್ಕಳು ಅವಳ ಮಾರ್ಗದರ್ಶನದಿಂದ ಮನೆ ಮಠಗಳ ಬಗ್ಗೆ ಹೊಸ ಕಲ್ಪನೆಯನ್ನು ಪಡೆದು ತಮ್ಮ ಗೃಹವ್ಯವಸ್ಥೆಯನ್ನು ಸುಂದರಗೊಳಿಸುವುದು ಹೇಗೆಂಬುದನ್ನು ಅರಿತುಕೊಂಡು ಹೋಗುತ್ತಿದ್ದಾರೆಂದು ತಿಳಿಯುತ್ತದೆ. ಇದೀಗ ಬ್ರಿಟನ್ನಿನ ನೈತಿಕ ಪುನರುತ್ಥಾನದಲ್ಲಿ ಈ ಪ್ರಯತ್ನ ಒಂದು ನಿಶ್ಚಿತ ಘಟ್ಟವೆನಿಸಿದೆ. ಗಣಿ ಕೆಲಸಗಾರರ ಗೃಹಿಣಿಯರು ತಂತಮ್ಮ ಮನೆ ಮಾರುಗಳನ್ನು ಹಿತಕರವಾಗಿ ಇಟ್ಟುಕೊಳ್ಳಲು ಕಲಿತು ಯಶಸ್ವಿಗಳಾಗುತ್ತಿದ್ದಾರೆ. ಬ್ರಿಟನ್ನಿನ ಗೃಹಿಣಿಯರ ಈ ಔದಾರ್ಯವೇ (ಅಥವಾ ಕರ್ತವ್ಯಪರಾಯಣತೆಯೇ) ಅವರ ಹೃದಯದ ಸಾಫಲ್ಯವನ್ನು ಸಾರುತ್ತದೆ, ಪರಿಪೂರ್ಣತೆಯತ್ತ ಮುನ್ನಡೆಯುವುದನ್ನು ಸಂಕೇತಿಸುತ್ತದೆ.

— ಹಿರಿಯಕ್ಕ

# ಸ್ತ್ರೀಯರ ಪೋಲೀಸುಗಿರಿ

ಪೋಲೀಸರಾಗಲು ಸ್ತ್ರೀಯರಿಗೆ ಶಕ್ಯವಿದೆಯೋ ಇಲ್ಲವೋ, ಅದರ ಅವರಿಂದ ಪ್ರಯೋಜನವಿದೆಯೋ ಇಲ್ಲವೋ ಎಂಬುದನ್ನು ಚರ್ಚಿಸುವ ಗಂಡಸರನ್ನು ಕಂಡು ನಗದ ಬುದ್ಧಿವಂತೆ ಸಿಕ್ಕಲಾರಳು. ಆ ಗಂಡಸರಂತೆಯೇ, ಪೋಲೀಸರಾಗಲು ಬರುತ್ತದೆ; ಬಂದರೆ ಆಗ ನಾವೇನೂ ಗಂಡಸರಿಗೆ ಕಡಿಮೆಯಲ್ಲ ಎಂದು ತಿಳಿದ ಕೆಲಂಬ ಹೆಂಗಸರನ್ನು ನೋಡಿದರೆ ಅಳು ಬರುತ್ತದೆ. ಕೇವಲ ಪೋಲೀಸುಗಿರಿಯಿಂದಲೇ ಗಂಡಸರ ಮೇಲ್ಮೆ ಮೆರೆಯುವವರೇನು? ಅಥವಾ ಗಂಡಸರು ಹೆಂಗಸು ಮಾಡಿದ ಪ್ರತಿಯೊಂದು ಕೆಲಸವನ್ನೂ ಮಾಡಿ ಅವರಿಗಿಂತ ಮೇಲೆನಿಸಿದ್ದಾರೇನು? ಹಾಗೇ ಒಂದು ವೇಳೆ ಇದೆಯೆಂದು ಭಾವಿಸಿದರೂ ಮಾಡಲು ಬಾರದ್ದನ್ನು ಮಾಡಲು ಹೋಗುವುದರಲ್ಲಿ ಪರಾಕ್ರಮವೇನಿದೆ? ಮಾಡಿ ಜಯಿಸಿಕೊಂಬ ಶಕ್ತಿಯನ್ನು ಪ್ರದರ್ಶಿಸದೆ ಕೇವಲ ಹಿನ್ನೆಲೆಯಲ್ಲಿರುವುದು ಮಿಲಿಟರಿ ಕೆಲಸಕ್ಕೆ ಸೇರಿದ ಹೆಣ್ಣು ಮಕ್ಕಳು ಹಾಕಿಕೊಟ್ಟ ಹಾದಿ! ಎಂಥ ಗೌರವದ ಪದವಿಯನ್ನು ಬೇಕಾದರೂ ಸಂಪಾದಿಸಿರಬಹುದು; Fighting officor-ಸಾಕ್ಷಾತ್ ರಣರಂಗದಲ್ಲಿ ಯುದ್ಧನೇತೃವಾಗಿ ಕೈದನ್ನು ಹಿಡಿದುನಿಂತ ಯುವತಿಯರೆಷ್ಟು ಜನರಿದ್ದಾರೆ? ಅವರಿಗೇನಾದರೂ ಅವಕಾಶವಿಲ್ಲದಂತೆ ಮಾಡಲಾಗಿತ್ತೇ? ಇಲ್ಲ. ಅದರೂ ಅವರೇಕೆ ಆ ಪ್ರಾಣಪಣದ ಕೆಲಸಕ್ಕೆ ಕೈಹಾಕಿಲ್ಲ?

ಮಿಲಿಟರಿಯಲ್ಲಾದರೂ ಸ್ವಭಾವಸಹಜವಾದ ಯೋಗ್ಯತೆಗನುಗುಣವಾದ ಔಷಧದಾನ, ಪಥ್ಯೋಪಚಾರ ಚಿಲ್ಲರೆ ಕೆಲಸ, ಪರಿಚರಣ ಮುಂತಾದ ಶುಶ್ರೂಷಾ ಕಾರ್ಯಗಳನ್ನೇ ಹೆಚ್ಚಾಗಿ ಹೆಣ್ಣುಮಕ್ಕಳು ಮಾಡಿದ್ದು ನೊನ್ನಿನ ಯುದ್ಧದಲ್ಲಿ ಕಂಡುಬಂದಿದೆ. ಅದರಿಂದ ಅವರಿಗೇನಾದರೂ ಅವಮಾನವಾಯಿತೇ? ಸೀಜೋಪಂಬುದ್ಧಿಯುಳ್ಳದ ಯಾವ ಸ್ತ್ರೀಯೂ ಗಂಡಸು ಮಾಡಿದ ಕೆಲಸವೊಂದನ್ನು ಮಾಡದುದರಿಂದ ತಾನು ಕೀಳೆಂದು ಭಾವಿಸಳು. ಆತ ಒಂದರಲ್ಲಿ ತನ್ನ ಜಾಣ್ಮೆಯನ್ನು ಪ್ರದರ್ಶಿಸಿದರೆ ಈಕೆ ಮತ್ತೊಂದು ಕಾರ್ಯದಲ್ಲಿ ತನ್ನ ಕೌಶಲವನ್ನು ತೋರಿಸಿ ಆತನಂತೆಯೇ ಮೆಚ್ಚುಗೆಗೆ ಪಾತ್ರಳಾಗುತ್ತಾಳೆ. ಈ ಮಾರ್ಗವನ್ನು ಬಿಟ್ಟು ಕೆಲ ಪುರುಷರ ಪ್ರಚಾರಕ್ಕೆ ಬಲಿಬಿದ್ದು ಕಲಿತಹೆಂಗಸರು ತಮ್ಮ ನಿಸರ್ಗದತ್ತವಾದ ಶಾರೀರಿಕ ವೈಲಕ್ಷಣ್ಯವನ್ನು ನ್ಯೂನತೆಯೆಂದು ತಿಳಿದು ಅದನ್ನು ನಿವಾರಿಸುವ ಛಲ ಹಿಡಿದು ಆದಕೊಗ್ಗದ, ಆಗದ (ಎಲ್ಲ ಅಪಶ್ರೃಂಗಗಳನ್ನೂ ತರ್ಕಮಾಡಿದಾಗ ಇದು ಸಿದ್ಧವಾಗುತ್ತದೆ.) ಪೋಲೀಸುಗಿರಿಗೆ ಏಕೆ ಧಾವಿಸಬೇಕು? ಕೆಲವರು ಹೆಣ್ಣುಮಕ್ಕಳ ಹೆಣ್ತನದ ಮರ್ಯಾದೆಯನ್ನು ಕಾದು ಅವರ ಶರೀರವನ್ನು ಜಪ್ತಿಮಾಡಲು ಹೆಣ್ಣುಪೋಲೀಸರು ಅವಶ್ಯಕ ಎಂಬ ಕಾರಣ ತೋರಿಸುತ್ತಾರೆ. ಇದು ಸ್ತ್ರೀಯ ಪುರುಷಸಾಮ್ಯವಾದಕ್ಕೆ ಮೂಲಭೂತ ಕುಠಾರವಾಗಿದೆ. ಮೊದಲನೆಯದಾಗಿ ಸ್ತ್ರೀಪುರುಷರ ಲಿಂಗನಿಷ್ಠ ಮರ್ಯಾದೆಯಲ್ಲಿ ಪ್ರತ್ಯೇಕತೆಯನ್ನು ತಿಳಿಯುವುದು ಅರಲ್ಲಿಯ ತಾರತಮ್ಯ, ಮೇಲುಕೀಳುತನಗಳು ಇವುಗಳಿಗೆ ಎಡೆಗೊಡುವಂಥದು. ಅವರಿಬ್ಬರಲ್ಲಿಯ ಮನುಷ್ಯತನವನ್ನು ಗುರುತಿಸುವುದು, ಮರ್ಯಾದಿಸುವುದು-ಇದೇ ನ್ಯಾಯವಾದ, ನಿಷ್ಪಕ್ಷಪಾತವಾದ ನೀತಿ. ಅಪರಾಧಿಗಳಲ್ಲಿ ಅಥವಾ ನಿರಪರಾಧಿಗಳ ಲಿಂಗಭೇದದಿಂದ ಯಾವ ಮರ್ಯಾದೆ ಹೆಚ್ಚೀತು, ಯಾವುದು ಕಡಿಮೆಯಾದೀತು? ಮನುಷತ್ವದಿಂದ ಕೆಳಗಿಳಿದವರಲ್ಲಿ ಜಾತಿಭೇದ ಉಂಟೆ? ಮುಳ್ಳುಗಳ, ಕೊಳಕಿನ ನಿಂದ್ಯತೆಯಲ್ಲಿ ಹೇಗೆ ಭೇದಗ್ರಹಣ ಸಾಮಾನ್ಯವಾಗಿ ಅವಶ್ಯಕವೋ ಹಾಗೇ ಹೂವಿನ ಹಣ್ಣಿನ ಪುರಸ್ಕರಣೀಯತೆಯಲ್ಲಿ ಭೇದವೆಲ್ಲಿಂದ ಬಂದೀತು? ಆದುದರಿಂದ ಈ ನೆವಗಳೆಲ್ಲ ಕುಂಟು. ಒಂದುವೇಳೆ ಅಲ್ಪಸ್ವಲ್ಪ ಪ್ರಯೋಜನ ಸ್ತ್ರೀಪೋಲೀಸರಿಂದ ಕೆಲವೊಂದು ವಿಶಿಷ್ಟಸಂದರ್ಭಗಳಲ್ಲಿ ಆದರೆ ಆಗಲಿ; ಅಂಥ ಅಗತ್ಯವಿದ್ದಲ್ಲಿ ನೇಮಿಸಿಕೊಳ್ಳಲಿ, ಸಾಹಸಿಗಳು ಹೋಗಲಿ. ಅಷ್ಟು ಮಾತ್ರದಿಂದ ಪುರುಷಪೋಲೀಸರಷ್ಟೇ ಸ್ತ್ರೀಪೋಲೀಸರು ದೇಶಕಾಲಕಾರ್ಯಗಳ ದೃಷ್ಟಿಯಿಂದ ಸರ್ವತ್ರ ಸಮರ್ಥರು ಎಂಬುದು ನಿರ್ಣಯವಾಗದು. ಇಂಥ ಸಮಸ್ಯೆಗಳನ್ನು ತರುವುದು ಗಂಡಸರ ಹುಚ್ಚುತನ. ಹಲವಾರು, ಪತ್ರಿಕೆಗಳಲ್ಲಿ ಈ ವರೆಗೆ ಈ ವಿಷಯದ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಮಾಡಿದವರೆಲ್ಲ ಗಂಡಸರೇ ಆಗಿದ್ದಾರೆ; ಹೆಂಗಸರಾರೂ ಇದರ ಬಗ್ಗೆ ಬಾಯಿತೆರೆಯದುದಕ್ಕೆ ಏನು ಕಾರಣ? ಹೆಂಗಸರು ಬಾಯಿತೆರೆಯುವುದು ಯಾವಾಗಲು ಗಂಡಸರು ಪ್ರೋತ್ಸಾಹಕೊಟ್ಟಾಗ ಮಾತ್ರವೋ? ಅಥವಾ ಅವರು ಬಹಳ ಬುದ್ಧಿವಂತಿಕೆಯಿಂದ ಬಾಯಿ ಮುಚ್ಚಿಕೊಂಡಿರುವರೋ? "ಸ್ಥಿತಪ್ರಜ್ಞಸ್ಯ ಕಾಭಾಷಾ" "ಗುರೋಸ್ತು ಮೌನಂ ವ್ಯಾಖ್ಯಾನಂ" ಎಂಬ ದೊಡ್ಡತನವಿರುವ ನನ್ನ ಸೋದರಿಯರು ಧನ್ಯರು. ಹಾಗಲ್ಲದೆ "ವಿಭೂಷಣಂ ಮೌನಮಪಂಡಿತಾನಾಂ" ಎಂಬ ದಡ್ಡತನವಿರುವ ಮಹಿಳೆಯರಿಗೆ ದೂರದಿಂದ ನಮಸ್ಕಾರ!

—ಸುಭದ್ರೆ

## ಸಮಸ್ತ ಭಾರತ

### ಮುಂಬಯಿ

ಪ್ರಾಂತದಲ್ಲಿಯ ನಿರಕ್ಷರತೆಯನ್ನು ಹೋಗಲಾಡಿಸುವದಕ್ಕಾಗಿ ಮುಂಬಯಿ ಸರಕಾರದವರು ಮತ್ತೆ ೩೦ ಸಾವಿರ ಪ್ರಾಥಮಿಕ ಶಾಲೆಗಳನ್ನು ಹೊರಡಿಸಬೇಕೆಂದು ನಿರ್ಧರಿಸಿರುವರೆಂದು ಮುಖ್ಯಮಂತ್ರಿಗಳು ಒಂದು ಭಾಷಣದಲ್ಲಿ ಸಾರಿದರು.

ಮುಂಬಯಿ ಪ್ರಾಂತದಲ್ಲಿ ಸ್ತ್ರೀ ಗೃಹರಕ್ಷಕ ದಳವನ್ನು ಸಂಘಟಿಸಿದ್ದು ಅದರ ಪ್ರತಿಜ್ಞಾವಿಧಿಯು ಗೃಹಮಂತ್ರಿ ಶ್ರೀ ಮುರಾರಜಿಯವರ ಸಮಕ್ಷದಲ್ಲಿ ಜರುಗಿತು. ಸದ್ಯದಲ್ಲಿ ಈ ತಂಡದಲ್ಲಿ ೪೦ ಜನ ಮಹಿಳೆಯರಿರುವರು ಇದೀ ದೇಶದಲ್ಲಿಯೇ ಇದು ಮೊದಲನೆಯ ಸ್ತ್ರೀ ದಳವು.

ಮುಂಬಯಿಯಲ್ಲಿ ಶಾಲೆಗೆ ಬಾರಲಿಕ್ಕಾಗದ ೪೦ ಸಾವಿರ ಮಕ್ಕಳಿಗಾಗಿ ಒತ್ತಾಯ ಶಿಕ್ಷಣ ಪ್ರಸಾರ ಕಾರ್ಯವನ್ನು ಕೈಕೊಳ್ಳಲಾಗಿದೆ. ವಾರದಲ್ಲಿ ಎರಡು ಗಂಟೆಕಾಲ ೧೫ ವಿಶೇಷ ವರ್ಗಗಳನ್ನು ತೆರೆದು ಶಿಕ್ಷಣ ಕೊಡುವ ಏರ್ಪಾಟನ್ನು ಮಾಡಲಾಗಿದೆ.

ಹಿಂದುಸ್ತಾನದ ಪ್ರಸಿದ್ಧ ಗಾಯಕರಾಗಿರುವ ಪಂಡಿತ ಓಂಕಾರನಾಥರು ಸುರತದಲ್ಲಿ ವರುಣನಾಥನನ್ನು ಪ್ರಾರ್ಥಿಸುವದಕ್ಕಾಗಿ ಮೇಘಮಲ್ಹಾರ ರಾಗದಲ್ಲಿ ಹಾಡಿ ಸಂಗೀತಯಜ್ಞವನ್ನು ಮಾಡಿದರು. ಇದರಿಂದ ಆ ಭಾಗದಲ್ಲಿ ಮಳೆಬಿದ್ದಿದೆ.

ಇಂಡೋನೇಶಿಯಾದಿಂದ ಅಮೇರಿಕನ್ ಪತ್ರಿಕೋದ್ಯೋಗಿಗಳನ್ನು ಅಮೇರಿಕೆಗೆ ತಿರುಗಿ ಕರೆದುಕೊಂಡು ಹೊರಟಿದ್ದ ಕೆ. ಎಲ್. ಎಂ. ಕಾನ್‌ಸ್ಟೆಲೇಶನ್ ವಿಮಾನವು ೧೨ ನೇ ದಿನ ಸಾಂತಾಕ್ರೂಜ ವಿಮಾನಗೃಹದಿಂದ ೩ ಮೈಲುಗಳ ಮೇಲೆ ಘಾಟಕೋಪರ ಪರ್ವತದಲ್ಲಿ ಅಪ್ಪಳಿಸಿತು. ಅದರಲ್ಲಿಯ ಯಾವತ್ತೂ ೩೪ ಜನರು ಮರಣ ಹೊಂದಿರುವರು. ಈ ೩೪ ಜನರಲ್ಲಿ, ೧೩ ಜನರು ಅಮೇರಿಕೆಯ ಪತ್ರಿಕೋದ್ಯೋಗಿಗಳು ಮತ್ತು ೧೧ ಜನ ವೈಮಾನಿಕರು ಇರುವರು.

ಸಿರೋಹಿ ಸಂಸ್ಥಾನದ ಗಾದಿಗೆ ಮಹಾರಾಜ ಅಭಯಸಿಂಗ, ಮಹಾರಾಜಾ ತೇಜಸಿಂಗ (ಅಲ್ಪವಯ ಅಧಿಪತಿ) ಮತ್ತು ಲಕಪತರಾಮಸಿಂಗ ಹೀಗೆ ಮೂವರು ವಾರಸದಾರರು ಮುಂದೆ ಬಂದಿದ್ದಾರೆ. ಈ ವ್ಯಾಜ್ಯದ ವಿಚಾರಣೆಗಾಗಿ ಹಿಂದುಸ್ತಾನ ಸರಕಾರದವರು ನ್ಯಾಯಮೂರ್ತಿ ದಿವೇಟಿಯು ಇವರ ಅಧ್ಯಕ್ಷತೆಯಲ್ಲಿ ವಿಚಾರಣಾ ಮಂಡಲವನ್ನು ನೇಮಿಸಿರುವರು. ವಿಚಾರಣೆ ಯೀಗ ಪ್ರಾರಂಭವಾಗಿದೆ.

ಪುಣೆಯ ಜನವಾಣಿ ಎಂಬ ಮರಾಠಿ ಪತ್ರಿಕೆಯ ಸಂಪಾದಕ ಎಸ್. ಜಿ. ಗೋರೆಯವರಿಗೆ ಕೋರ್ಟಿನ ಮಾನಹಾನಿ ಮಾಡಿದರೆಂದು ಮುಂಬಯಿ ಹಾಯಕೋರ್ಟ ನ್ಯಾಯಾಧೀಶ ಬಾವಡೇಕರ ಮತ್ತು ಚೈನಾನಿಯವರು ಒಂದು ತಿಂಗಳು ಕಠಿನ ಶಿಕ್ಷೆ ಮತ್ತು ೧೦೦ ರೂ. ದಂಡ ವಿಧಿಸಿದರು. ಶ್ರೀ ರಾಮಪುರ ಮಹಾರಾಷ್ಟ್ರ ಸಕ್ಕರೆ ಗಿರಣಿಯ ಒಪರಸೀಯರರು ಮಾಡಿದ ಅರ್ಜಿಯ ವಿಚಾರಣೆಯಾಗಿ ಮೇಲಿನಂತೆ ಶಿಕ್ಷೆ ವಿಧಿಸಲಾಯಿತು.

ಇರಾಣ ಅಖಾತದಿಂದ ಮುಂಬಯಿಯಲ್ಲಿ ಇಳಿದ ಕೆಲವು ಪ್ರಯಾಣಿಕರಲ್ಲಿ ಸುಂಕದ ಅಧಿಕಾರಿಗಳಿಗೆ ೫೦ ಸಾವಿರ ರೂಪಾಯಿಗಳ ಬಂಗಾರ ದೊರೆತಿದೆ. ಪಾದರಕ್ಷೆ ಬೆಲ್ಟು ಮೊದಲಾದವುಗಳಲ್ಲಿ ಇದನ್ನು ಬಚ್ಚಿಡಲಾಗಿತ್ತಂತೆ. ಕಳೆದ ಆರು ತಿಂಗಳಲ್ಲಿ ಇಂತು ೪೦ ಲಕ್ಷ ರೂ. ಗಳ ಬಂಗಾರವನ್ನು ಜಪ್ತ ಮಾಡಲಾಗಿದೆ.

೧೮೭೨ ರಲ್ಲಿ ಮುಂಬಯಿ ಕೋಟೆಯಲ್ಲಿ ಇರಿಸಲಾಗಿದ್ದ ವಿಕ್ಟೋರಿಯಾ ಮಹಾರಾಣಿಯ ಮೂರ್ತಿಯನ್ನು ವಸ್ತುಪ್ರದರ್ಶನಾಲಯಕ್ಕೆ ಸಾಗಿಸಲಾಯಿತು.

ರಜಿಸ್ಟರ ಪದವೀಧರ ಮತದಾರ ಸಂಘದ ಪರವಾಗಿ ಮುಂಬಯಿ ವಿಶ್ವವಿದ್ಯಾಲಯದ ಸಿನೇಟಿನ ಸದಸ್ಯರೆಂದು ಡಾ. ಪಿ. ಎಸ್. ಪಟೇಲ, ಆರ್. ವಿ. ತ್ರಿವೇದಿ, ಡಾ. ಡಾ. ಸಾಡಾ. ನೇನೇ ಮತ್ತು ಪ್ರಿನ್ಸಿಪಾಲಕ್ಕೆ ಕೆ. ಜಿ. ಪಂಡಿತ ಇವರು ಆರಿಸಿ ಬಂದಿರುವರು.

### ಪೂರ್ವ ಪಂಜಾಬ

ಮಾಸ್ತರ ತಾರಾಸಿಂಗರನ್ನು ಬಂಧಮುಕ್ತ ಮಾಡಿರಿ ಎಂಬುದಾಗಿ ಚಳವಳಿ ನಡೆಸಿದ ಬಗ್ಗೆ ಸೆರೆಹಿಡಿಯಲ್ಪಟ್ಟ ಅಕಾಲಿಗಳನ್ನೆಲ್ಲ ಬಿಡುಗಡೆ ಮಾಡಲು ಸರಕಾರವು ನಿರ್ಧರಿಸಿದೆಯೆಂದು ಪೂರ್ವಪಂಜಾಬದ ಮುಖ್ಯ ಮಂತ್ರಿಗಳಾದ ಶ್ರೀ ಭೀಮಸೇನ ಸಾಚಾರರು ಒಂದು ಹೇಳಿಕೆಯ ಮೂಲಕ ಸಾರಿದ್ದಾರೆ.

### ಹೊಸದಿಲ್ಲಿ

ಹಿಂದುಸ್ತಾನ ಸರಕಾರದವರು ಆಗಷ್ಟ ೧೫ ರಿಂದ ಸೌರಾಷ್ಟ್ರದ ೧೨೦೦ ಮೈಲು ರೇಲ್ವೆಯನ್ನು ಅದರ ೧೦ ಕೋಟಿ ರೂಪಾಯಿ ಬಂಡವಲಿನೊಂದಿಗೆ ತಮ್ಮ ಕಡೆಗೆ ತೆಗೆದುಕೊಳ್ಳಲಿದ್ದಾರೆ. ಈ ರೇಲ್ವೆಯಲ್ಲಿ ೩೩೫೦ ವಾಗಿನುಗಳು ೨೦ ಇಂಜಿನುಗಳು ಇದ್ದು ಕಳೆದ ವರುಷ ಈ ರೇಲ್ವೆಯಿಂದ ೩.೩ ಕೋಟಿ ರೂಪಾಯಿ ನಿವ್ವಳ ಉತ್ಪನ್ನ ಬಂದಿರುವದು. ಸದ್ಯಕ್ಕೆ ಪ್ರತಿದಿನ ಸುಮಾರು ಒಂದು ಲಕ್ಷ ರೂಪಾಯಿ ಉತ್ಪನ್ನ ಬರುವದು.

ಇನ್ನು ಮೂರು ವರುಷಗಳಲ್ಲಿ ರೇಲ್ವೆ ಪ್ರವಾಸಿಕರ ಗಾಡಿಗಳನ್ನು ಈಗಿದ್ದುದಕ್ಕಿಂತ ಮೂರ್ಮಡಿ ಹೆಚ್ಚಿಸಲಾಗುವದು ಎಂದು ಹಿಂದುಸ್ತಾನ ಸರಕಾರದ ರೇಲ್ವೆ ಮತ್ತು ಸಾರಿಗೆ ಮಂತ್ರಿಗಳಾದ ಶ್ರೀ ಸಂತಾನಂ ಇವರು ಒಂದು ಭಾಷಣದಲ್ಲಿ ಹೇಳಿದರು. ಈ ಅವಧಿಯಲ್ಲಿ ಮೂರನೇ ವರ್ಗದ ಪ್ರವಾಸಿಕರ ತೊಂದರೆಗಳು ದೂರಾಗುವವೆಂದೂ ಅವರು ಅಶ್ವಾಸಿಸಿದರು.

ಪ್ರಸಿದ್ಧ ತತ್ತ್ವಜ್ಞಾನಿಗಳಾಗಿರುವ ಸರ್ ಸರ್ವಪಲ್ಲಿ ರಾಧಾಕೃಷ್ಣನ್‌ರು ರಶಿಯದ ರಾಯಭಾರಿಗಳೆಂದು ನೇಮಿಸಲ್ಪಟ್ಟಿರುವರು. ವಿಶ್ವವಿದ್ಯಾಲಯ ಸಮಿತಿಯ ವರದಿಯ ಕಾರ್ಯ ಕೊನೆಗಂಡ ಕೂಡಲೆ ತಾವು ರಶಿಯಕ್ಕೆ ಹೋಗುವದಾಗಿ ಅವರು ಹೇಳಿರುವರು.

ಹಿಂದುಸ್ತಾನದ ರಾಜಧಾನಿಯಾಗಿರುವ ದಿಲ್ಲಿಯನ್ನು ಬೇಗನೆ ಲೆಫ್ಟನೆಂಟ ಗವರ್ನರರ ಪ್ರಾಂತವನ್ನಾಗಿ ಮಾರ್ಪಡಿಸಲಾಗುವದೆಂದು ತಿಳಿಯುತ್ತದೆ. ಕಳೆದ ೩೭ ವರುಷಗಳಿಂದ ಈ ಪ್ರದೇಶವು ಕೇಂದ್ರ ಸರಕಾರದ ಆಡಳಿತಕ್ಕೊಳಪಟ್ಟಿತ್ತು. ಹಿರಿಯೋಲಗದ ಬರುವ ಅಧಿವೇಶನದಲ್ಲಿ ಈ ಬಗ್ಗೆ ಮಸೂದೆಯೊಂದು ಬರಲಿದೆ.

ರೂಪಾಯಿಯ ಮೌಲ್ಯಚ್ಛೇದನ ಬಗ್ಗೆ ಹಿಂದುಸ್ತಾನ ಸರಕಾರವು ಯಾವದೇ ಬಗೆಯ ವಿಚಾರ ಮಾಡಿಲ್ಲೆಂದೂ ತದ್ವಿರುದ್ಧವಾಗಿ ಅದಿತಾಗ ಕ್ರಮ ಕೈಕೊಳ್ಳುವದರಿಂದ ಭಾರತದ ಆರ್ಥಿಕ ಪರಿಸ್ಥಿತಿಗೆ ಗಂಡಾಂತರವುಂಟಾಗಬಹುದೆಂದೂ ದಿಲ್ಲಿಯಲ್ಲಿಯ ರಾಜಕೀಯ ವರ್ಗದವರು ಅಭಿಪ್ರಾಯ ಪಡುತ್ತಾರೆ.

ಪಡಭೂಮಿಗಳನ್ನು ಸಾಗುವಳಿ ಮಾಡುವಂತೆ ಪ್ರೋತ್ಸಾಹಿಸುವದಕ್ಕಾಗಿ ಪ್ರಾಂತೀಯ ಮತ್ತು ಸಂಸ್ಥಾನ ಸರಕಾರಗಳು ಕೆಲ ನಿರ್ದಿಷ್ಟ ಅವಧಿಯ ವರೆಗೆ ಭೂಕಂದಾಯವನ್ನು ಸೂಟ ಬಿಡುವ ಬಗ್ಗೆ ವಿಚಾರ ನಡೆಸಿರುವರೆಂದು ತಿಳಿಯುತ್ತದೆ. ಕೇಂದ್ರ ಸರಕಾರದ ಒಕ್ಕಲತನ ಶಾಖೆಯವರು ಈ ಸೂಚನೆಯನ್ನು ಕಳಿಸಿರುವರಂತೆ.

### ಪಶ್ಚಿಮ ಬಂಗಾಲ

ದಕ್ಷಿಣ ಕಲಕತ್ತಾ ಟ್ರಾಮ್ವೆ ನೌಕರರ ಸಂಪು ಕಳೆದ ೭ ನೇ ತಾರೀಕಿನಿಂದ ಪ್ರಾರಂಭವಾಗಿತ್ತು. ವ್ಯವಸ್ಥಾಪಕರು ಸಂಪುಗಾರರ ಬೇಡಿಕೆಗಳನ್ನು ಮನ್ನಿಸಿದ್ದರಿಂದ ಸಂಪು ಕೊನೆಗಂಡಿತು.

ಪಶ್ಚಿಮ ಬಂಗಾಲದ ತಾತ್ಪೂರ್ತಿಕ ಗೃಹಮಂತ್ರಿಗಳಾದ ಶ್ರೀ ಕಾಲಿಪಾದ ಮೂಕರ್ಜಿಯವರು ೧೦ ನೇ ತಾರೀಕು ಹೌರಾದಲ್ಲಿಯ ಕಾರ್ಯಕರ್ತರು ಏರ್ಪಡಿಸಿದ ಸಮಾರಂಭಕ್ಕೆ ಹೋದಾಗ ಕಮ್ಯುನಿಸ್ಟರು ಜಯಜಯಕಾರ ಮಾಡುತ್ತ ಬಂದು ಕೆಲವು ಬಾಂಬುಗಳನ್ನು ಒಗೆದರು. ರಾಷ್ಟ್ರಧ್ವಜವನ್ನೂ ಸುಟ್ಟರು. ಮಂತ್ರಿಗಳಿಗೆ ಅಪಾಯವಾಗಿಲ್ಲ- ಹಿಂದುಗಡೆ ಪೋಲೀಸರಿಗೆ ಹಲವು ಬಾಂಬು ಸಿಕ್ಕಿದ್ದು ಹಲವರನ್ನು ಬಂಧಿಸಲಾಗಿದೆ.

ಕಲಕತ್ತೆಯಲ್ಲಿ ಪ್ರತಿತಿಂಗಳು ಸರಾಸರಿ ೫೦೦ ರಂತೆ ಸಂಭವಿಸುವ ಕೊಲೆ ಸುಲಿಗೆ ದರೋಡೆಗಳಿಗೆ ಅಲ್ಲಿಯ ಸುಮಾರು ೨೦ ಸಾವಿರ ಜನ ದರೋಡೆಗಾರರ ಒಂದು ತಂಡವು ಕಾರಣವಿದೆಯೆಂದು ಡೆ. ಪೊ. ಇನಸ್ಪೆಕ್ಟರರು ಹೇಳಿದರು. ಈ ದರೋಡೆಗಾರರನ್ನು ಹತ್ತಿಕ್ಕಲು ಪೋಲೀಸ ಶಾಖೆಯವರು ಅಣಿಯಾಗಿದ್ದು ಸರಕಾರದವರಿಗೆ ಸಾರ್ವಜನಿಕರು ಎಲ್ಲ ಬಗೆಯ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಪಶ್ಚಿಮ ಬಂಗಾಲವನ್ನು ಕಮ್ಯುನಿಜಮ್ಮಿನಿಂದ ಉಳಿಸಿಕೊಳ್ಳಬೇಕಾಗಿದ್ದರೆ ಅಲ್ಲಿ ಪಕ್ಷಾತೀತವಾದ ರಾಷ್ಟ್ರೀಯ ಮಂತ್ರಿಮಂಡಲವು ರಚಿತವಾಗುವದು ಅಗತ್ಯವಾಗಿದೆಯೆಂದು ಬಂಗಾಲ ಪ್ರಾಂತಿಕ ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿಯು ಅಭಿಪ್ರಾಯಪಟ್ಟಿತು.

### ಮದ್ರಾಸ

ಮದ್ರಾಸ ಸರಕಾರದವರು ಕುರುಡ ಕಿವುಡ ಹಾಗು ಮೂಕ ಮಕ್ಕಳಿಗಾಗಿ ಈ ವರುಷ ಮೂರು ಹೊಸ ಶಾಲೆಗಳನ್ನು ತೆರೆಯುವದಕ್ಕೆ ಅನುಮತಿ ಕೊಟ್ಟಿದ್ದಾರೆ. ಅಲ್ಲದೆ ಮುಂದಿನ ವರುಷ ಮತ್ತೆರಡನ್ನು ತೆರೆಯಬೇಕೆಂದು ಮಾಡಿದ್ದಾರೆ. ಇದಕ್ಕೆ ಸರಾಸರಿ ೫೦ ಸಾವಿರ ರೂಪಾಯಿ ವೆಚ್ಚ ಬರಬಹುದೆಂದು ಅಂದಾಜು ಮಾಡಲಾಗಿದೆ.

ಮಾಹೆ ಮಹಾಜನ ಸಭೆಯ ಸ್ವಯಂಸೇವಕ ಪಥಕದ ಸದಸ್ಯರಾದ ಶ್ರೀ. ಪಿ. ದಾಮೋದರನ್‌ರನ್ನು ಫ್ರೆಂಚ ಭಾರತ ಪೋಲೀಸರು ೧೦ ನೇ ತಾರೀಕು ಬಂಧಿಸಿದರೆಂದೂ ಕಳೆದ ಅಕ್ಟೋಬರದಲ್ಲಿ ನಡೆದ ಗಲಭೆಯ ಸಂಬಂಧದಲ್ಲಿ ಇವರ ಬಂಧನವಾಗಿದೆಯೆಂದೂ ತಿಳಿಯುತ್ತದೆ.

ತಿರುವಾಂಕೂರು ಕೊಚ್ಚಿ ಸಂಸ್ಥಾನಗಳು ಸಂಯುಕ್ತ ಸಂಸ್ಥಾನವಾದನಂತರ ಮೊದಲನೆಯ ಸಲ ಒಕ್ಕೂಟ ಶಾಸನ ಸಭೆಯ ಅಧ್ಯಕ್ಷಸ್ಥಾನಕ್ಕೆ ಶ್ರೀ ಟಿ. ಎಂ. ವರ್ಗೀಸ ಇವರನ್ನು ಆರಿಸಲಾಯಿತು.

ಚಂದ್ರನಗರ ಕಾಂಗ್ರೆಸ ಕ್ರಿಯಾ ಸಮಿತಿಯು ಪಾಂಡಿಚೆರಿ ಕರಾಯಿಕಲ ಮತ್ತು ಮಾಹೆಗಳಲ್ಲಿಯ ಜನತೆಗೆ ಹಿಂದುಸ್ತಾನದಲ್ಲಿ ವಿಲೀನವಾಗುವದರ ಪರವಾಗಿ ಮತ ಕೊಟ್ಟು ಚಂದ್ರನಗರದ ಅನುಕರಣೀಯ ಆದರ್ಶವನ್ನು ಅನುಸರಿಸಬೇಕೆಂದು ವಿನ್ನವಿಸಿಕೊಂಡಿರುವರು- ಫ್ರೆಂಚ ಗುಲಾಮಗಿರಿಯಿಂದ ಮುಕ್ತವಾಗಲು ನಿರ್ಣಯಿಸಿ ಜಗತ್ತಿನಲ್ಲೆಲ್ಲ ಅಂತು ಸಾರಬೇಕೆಂದೂ ಕೇಳಿಕೊಳ್ಳಲಾಗಿದೆ.

ದ್ರವಿಡ ಕರಗದ ಮುಖಂಡರಾದ ಡಾ. ಈ ರಾಮಸ್ವಾಮಿ ನೈಕರರ ವಿವಾಹವು ಶ್ರೀಮತಿ ಮಣಿ ಅಮ್ಮಯ್ಯ ಇವರೊಡನೆ ನೊಂದಣಿ ಪದ್ಧತಿಯಿಂದ ಜರುಗಿತು. ನೈಕರರಿಗೀಗ ೭೦ ವರ್ಷ ವಯಸ್ಸು.

ವಿಷ್ಣುಪುರ ಎಂಬಲ್ಲಿ ಚಿಕ್ಕಮಕ್ಕಳು ಮನೋರಂಜನೆಯ ಸಲುವಾಗಿ ನಾಟಕ ಮಾಡುತಿರುವಾಗ ಗಲ್ಲಿಗೇರಿಸಲ್ಪಡುವವನ ಕುತ್ತಿಗೆಗೆ ಹಾಕಿದ ಹಗ್ಗವನ್ನು ಜೋರಿನಿಂದ ಬಿಗಿಯಲಾಗಿ ಆ ಪಾತ್ರವಹಿಸಿದ ಬಾಲಕನು ಆಗ ಮೃತ್ಯುಗೀಡಾದನು.

ದೇವಜೀಗುಡವದಲ್ಲಿಯ ಶ್ರೀ ರಾಮಕೋಟಿ ಮತ್ತು ವೆಂಕಟ ಸುಬ್ಬರಾವ ಈ ಇಬ್ಬರು ಕಾರ್ಯಕರ್ತರನ್ನು ಕಳೆದ [illegible]ನೆಯ ತಾರೀಕು ಮಧ್ಯಾಹ್ನ ಸುಮಾರು ೧೫೦ ಸಶಸ್ತ್ರ ಕಮ್ಯುನಿಸ್ಟರು ಮುತ್ತಿ ಕೊಲೆ ಮಾಡಿದರು. ಕೃಷ್ಣಾ ಜಿಲ್ಹೆಯ ಕಾಂಗ್ರೆಸ ಕಾರ್ಯಕರ್ತರು ಪಂಡಿತ ಜವಾಹರಲಾಲ ಮತ್ತು ಸರದಾರ ವಲ್ಲಭಭಾಯಿ ಪಟೇಲರಿಗೆ ಪತ್ರ ಬರೆದು ಕಮ್ಯುನಿಸ್ಟರ ಹಾವಳಿಯನ್ನು ನಿಲ್ಲಿಸಬೇಕೆಂದು ವಿನ್ನವಿಸಿಕೊಂಡಿರುವರು.

ಪೋಲೀಸರು ಗೋಳಿಬಾರು ಮಾಡಿದ ಸಂದರ್ಭಗಳಲ್ಲೆಲ್ಲ ಅದು ಉಚಿತವಾಗಿತ್ತೊ ಹೇಗೆ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದಕ್ಕಾಗಿ ಪ್ರಾಂತೀಯ ಸರಕಾರಗಳು ಸ್ವತಂತ್ರ ವಿಚಾರಣಾ ಮಂಡಳಗಳನ್ನು ನೇಮಿಸಬೇಕೆಂದು ರಾಷ್ಟ್ರಾಧ್ಯಕ್ಷ ಡಾ. ಪಟ್ಟಾಭಿಯವರು ಹೇಳುತ್ತಾರೆ.

ಮದ್ರಾಸ ಸಾರ್ವಜನಿಕ ಭದ್ರತಾ ಕಾನೂನಿನನ್ವಯ ಸ್ಥಾನಬದ್ಧತೆಯಲ್ಲಿರಿಸಲ್ಪಟ್ಟ ಶ್ರೀಮತಿ ಸೂರ್ಯವಂಶಿಯವರ ಪರವಾಗಿ ಮಾಡಿಕೊಂಡ ಹೇಬಿಯಸ್ ಕಾರ್ಪಸ ಅರ್ಜಿಯನ್ನು ಮದ್ರಾಸ ಹಾಯಕೋರ್ಟಿನವರು ಮನ್ನಿಸಿ ಶ್ರೀಮತಿ ಸೂರ್ಯವಂಶಿಯವರು ಸೆರೆಮನೆಗೆ ತೆಗೆದುದರಲ್ಲಿ ಅಕ್ರಮವೇನೂ ಇಲ್ಲ ಎಂದು ಅಭಿಪ್ರಾಯಪಟ್ಟು ಅವರ ಬಿಡುಗಡೆಯ ಹುಕುಮು ವಿಧಿಸಿರುವರು. ಶ್ರೀ. ವಿಮಲಾದೇವಿ ಮತ್ತು ಕಮಲಮ್ಮನವರ ಹೇಬಿಯಸ್ ಕಾರ್ಪಸ್ ಅರ್ಜಿಗಳನ್ನು ನ್ಯಾಯಾಧೀಶರು ತಳ್ಳಿ ಹಾಕಿದರು.

### ಬಿಹಾರ

ಇನ್ನು ಒಂದೆರಡು ತಿಂಗಳಲ್ಲಿ ವಿಮಾನ ಪ್ರವಾಸದ ದರಗಳನ್ನು ಒಂದನೇ ವರ್ಗದ ರೇಲ್ವೆ ಪ್ರವಾಸದ ದರಗಳ ಮಟ್ಟಕ್ಕೆ ತರಲಾಗುವದೆಂದು ಸಂಪರ್ಕ ಖಾತೆಯ ಮಂತ್ರಿಗಳಾದ ಶ್ರೀ. ರಫಿ ಅಹಮ್ಮದ ಕಿದ್ವಾಯಿಯವರು ಬಿಹಾರ [illegible] ಸಂಘದಲ್ಲಿ ಭಾಷಣ ಮಾಡುತ್ತ ಹೇಳಿದರು.

ಮದುವೆ ದಿಬ್ಬಣವನ್ನು ಕರೆದುಕೊಂಡು ಹೊರಟಿದ್ದ ಮೋಟರೊಂದು ಭಕ್ತಿಯಾರಪುರ ಹಳ್ಳಿಗಳ ನಡುವೆ ಒಂದು ಗಿಡಕ್ಕೆ ಹಾಯ್ದು ಕಂದಕದಲ್ಲಿ ಬಿದ್ದದ್ದರಿಂದ ಒಬ್ಬರು ತಕ್ಷಣ ಮರಣ ಹೊಂದಿದ್ದಲ್ಲದೆ ೬ ಜನರಿಗೆ ಗಾಯಗಳಾದವು. ಎದುರಿಗೆ ಬರುತ್ತಿದ್ದ ಮೋಟರನ್ನು ತಪ್ಪಿಸಲು ಪ್ರಯತ್ನಿಸುವಾಗ ಮೇಲೆ ಹೇಳಿದಂತೆ ಮೋಟರು ಅಪಘಾತಕ್ಕೆ ಗುರಿ ಆಯಿತು.

### ಸಾರನಾಥ

([illegible] ಮುಂದುವರಿದುದು)

ದಲ್ಲೇ ಧರ್ಮಕಸ್ತ್ರಿಪದ ಮೇಲು [illegible] ದೊಡ್ಡ ಸ್ತೂಪವು ಅನೇಕ [illegible] ಸಹಿತವಾಗಿ ಗಂಭೀರವಾಗಿ ನಿಂತಿದೆ.

#### ಬೌದ್ಧ ಮಂದಿರಗಳು

ಹಾಗೇ ರಸ್ತೆಯ ಗುಂಟ ಪಶ್ಚಿಮ ಕಡೆಗೆ [illegible]ಯನ್ನು ಕ್ರಮಿಸುವಷ್ಟರಲ್ಲಿ ನಿಮ್ಮ ಎದುರಿಗೆ ಬರುವ ಭವ್ಯವಾದ ಕಟ್ಟಡವು ಧರ್ಮಶಾಲೆ. ಅದರ ಮೇಲಿನ ಗಂಟೆಯ ಗುಮ್ಮಟಗಳನ್ನೂ ಅದರ ವಿಚಿತ್ರವಾದ ಶಿಖರಗಳನ್ನೂ ನೋಡಿದ ಕೂಡಲೆ, ನಾಲ್ಕು ಕ್ಷೇತ್ರಗಳನ್ನು ತಿರುಗಿದವರಿಗೆ ಕ್ಷಣವೂ ಬೇಡ ಅದು ಬಿರ್ಲಾವಿರಚಿತವೆಂದು ತಿಳಿಯಲು. ಭಾರತದ ಎಲ್ಲಾ ಪ್ರಸಿದ್ಧ ಕ್ಷೇತ್ರಗಳಲ್ಲಿಯಂತೆಯೇ ಇಲ್ಲಿಯೂ ತಮ್ಮ ಹೆಸರಿನಿಂದ ಒಂದು ಧರ್ಮಶಾಲೆಯನ್ನು ಕಟ್ಟಿಸಲು ಬಿರ್ಲಾ ಮರೆಯಲಿಲ್ಲ. ಈ ಧರ್ಮಶಾಲೆಯ ಎದುರಿಗೇ ಇದೆ ಹಿಂದೂ ಬೌದ್ಧ ಮಂದಿರ. ಉಳಿದ ಮಂದಿರಗಳಿಗಿಂತ ಇದು ಸುಂದರವಾಗಿದೆ. ಇದರಲ್ಲಿಯೇ ಭಗವಾನ್ ಬುದ್ಧನ ಪಲ್ಲು ಅಸ್ಥಿ ಮೊದಲಾದ ಕೆಲ ಅವಶೇಷಗಳಿವೆ. ಇಲ್ಲಿಯ ಬುದ್ಧನ ವಿಗ್ರಹವೂ ಅದಕ್ಕೂ ಹೆಚ್ಚಾಗಿ ಗೋಡೆಗಳ ಮೇಲೆ ಚಿತ್ರದಿಂದ ಬರೆದ ಬುದ್ಧನ ಜೀವನ ಚರಿತ್ರೆಯೂ ವಿಶೇಷವಾದವು. ಈ ಚಿತ್ರಗಳನ್ನು ಸನ್ ೧೯೩೨—೩೬ ರ ಅವಧಿಯಲ್ಲಿ ಜಪಾನಿ ಕಲೆಗಾರ ಕೋಸೆಟ್ಸು ನೋಸು (Kosetsu Nosu) ಎಂಬವನು ಬರೆದಿದ್ದಾನೆ. ಚಿತ್ರಗಳು ಮಾರ್ಮಿಕವಾಗಿಯೂ ಕಲಾಪೂರ್ಣವಾಗಿಯೂ ಇವೆ. ಮುಂದಿನ ಹೆಬ್ಬಾಗಿಲಲ್ಲಿ ಒಂದು ಜಪಾನಿ ಗಂಟೆಯನ್ನು ತೂಗು ಹಾಕಿದ್ದಾರೆ. ಅದನ್ನು ಬಾರಿಸಿದರೆ ಐದು ನಿಮಿಷಗಳ ವರೆಗೆ ಅದು ಧ್ವನಿಸೈಯುತ್ತದೆ.

ಇನ್ನುಳಿದುದು ಚೀನೀ ಮಂದಿರ. ಟೀಳಿನ ಮಂದಿರದಿಂದ ಹೊರಬಿದ್ದು ಎಡದಿಕ್ಕಿಗೆ ಕಣ್ಣನ್ನು ಹೊರಳಿಸಿದರೆ ತುಸು ದೂರದಲ್ಲಿಯೇ ಒಂದು ಮನೆ ಕಾಣುವದು. ಅದರ ಅರಿಸಿನ ಬಣ್ಣವೇ ಅದು ಚೀನೀ ಮಂದಿರವೆಂಬುದನ್ನು ಸ್ಪಷ್ಟಪಡಿಸಲು ಸಾಕು. ಇದನ್ನು ೧೯೩೯ ರಲ್ಲಿ ಲಿ ಚುನ್ ಸೇಂಗ ಎಂಬವನು ಕಟ್ಟಿಸಿದ. ಈ ಮಂದಿರವನ್ನು ಪ್ರವೇಶಿಸಿದ ಕೂಡಲೇ ಎಂಥ ಪಾಮರನ ಮನಸ್ಸಾದರೂ ಪವಿತ್ರ ಭಾವನೆಯಿಂದ ತುಂಬದೆ ಇರಲಾರದು. ಇಲ್ಲಿಯ ವಾತಾವರಣವೇ ಅಂತಹದು. ಶಾಂತ ಗಂಭೀರ— ಎಲ್ಲವೂ ಸಾದಾ. ಅಲಂಕಾರ ಕೃತ್ರಿಮತೆಗಳ ಗಂಧವೂ ಇಲ್ಲ. ವೇದಿಕೆಯ ಮೇಲೆ ನಿಂತ ಅರ್ಧ ಆಳೆತ್ತರದ ಅಮೃತ ಶಿಲೆಯ ಬುದ್ಧನ ವಿಗ್ರಹವು ಸುಂದರವಾಗಿ ಗಂಭೀರವಾಗಿಯೂ ಇದೆ. ಇದರ ಪೂಜಾವಿಧಿಗಳು ಚೀನೀ ಭಿಕ್ಷುಗಳಿಂದಲೇ ಆಗುತ್ತವೆ. ಮುಖ್ಯ ಪೂಜಾರಿ ಬಹಳ ಒಳ್ಳೆಯ ಮನುಷ್ಯ. ಅವನಿಗೆ ಹಿಂದಿಯಾಗಲಿ ಇಂಗ್ಲಿಷಾಗಲಿ ಬಾರದು. ನಿಮ್ಮ ಪ್ರಶ್ನೆಗಳಿಗೆ ಅವನು ಸನ್ನೆಯಿಂದಲೇ ಶಾಂತವಾಗಿ ಉತ್ತರ ಕೊಡುವನು.

ಇನ್ನು ಈ ಚಿಕ್ಕಹಳ್ಳಿಯಲ್ಲಿ ಉಳಿದುದೆಂದರೆ ಮಹಾಬೋಧಿ ಸಂಘದ ಚಿಕ್ಕ ವಾಚನಾಲಯ ಮತ್ತು ಒಂದು ಹೈಸ್ಕೂಲು. ಆದರೆ ಯಾತ್ರಿಕ ಇಲ್ಲವೆ ಪ್ರವಾಸಿಕರಿಗೆ ಇವನ್ನು ನೋಡುವ ಅಗತ್ಯವಾಗಲಿ ಮಹತ್ವವಾಗಲಿ ಇರುವದಿಲ್ಲ.

---

ಜಪಾನಿನ ಬಹಾದ್ಯ ಕೂಲಿಕಾರ ಸಂಘಗಳಲ್ಲಿ ಎಡಪಕ್ಷೀಯವಾದ ರಾಷ್ಟ್ರೀಯ ಸಾರಿಗೆ ಕೂಲಿಕಾರ ಸಂಘವು ಸಂಬಳ ಮುಂತಾದ ಬೇಡಿಕೆಗಳನ್ನು ಮಾಡಿ ಈಗಲೆ [illegible] ಬೇಕೆಂದು ಕೇಳಿರುವದರಿಂದ [illegible] ಕ್ಷೇತ್ರದಲ್ಲಿ ಬಿಕ್ಕಟ್ಟುಂಟಾಗುವಂತಿದೆ.

# ವೈಜ್ಞಾನಿಕ ಪರಿಭಾಷೆಯ ಬಗ್ಗೆ ಮುಂಬಯಿ ವಿಶ್ವವಿದ್ಯಾನಿಲಯದ ಗೊತ್ತುವಳಿ

"ಭಾರತದಲ್ಲಿ ವೈಜ್ಞಾನಿಕ ಪರಿಭಾಷೆ" ಎಂಬ ತಮ್ಮ ಪ್ರಬಂಧದ ಮೂಲಕ ನಮ್ಮ ಭಾಷೆಗಳ ಲ್ಲಿಯ ವೈಜ್ಞಾನಿಕ ಪರಿಭಾಷೆಯ ಬಗ್ಗೆ ಮುಂಬಯಿ ವಿಶ್ವವಿದ್ಯಾನಿಲಯವು ಸ್ವೀಕರಿಸಿದ ಗೊತ್ತುವಳಿಯನ್ನು ಜನತೆಯ ಇದಿರಿಟ್ಟು ಅದರ ಅರ್ಥವನ್ನು ತಿಳಿಸಿದ್ದಕ್ಕಾಗಿ ಶ್ರೀ ಪಿ. ಜಿ. ಶಾ ಅವರಿಗೆ ಕೃತಜ್ಞತೆಯನ್ನು ವ್ಯಕ್ತ ಪಡಿಸಬೇಕಾಗಿದೆ. ಆ ಪ್ರಬಂಧವು ೧೪-೩-೪೯ ರ "ಹರಿಜನ" ದಲ್ಲಿ ಪ್ರಕಟವಾಗಿದೆ. ಗೊತ್ತು ವಳಿಗೆ ಸಂಬಂಧಪಟ್ಟ ಭಾಗ ಈ ಕೆಳಗಿನಂತಿದೆ:

"ಎಲ್ಲ ಆಧುನಿಕ ಭಾರತೀಯ ಭಾಷೆಗಳಲ್ಲಿ ಮೆಟ್ರಿಕ್ಯುಲೇಶನ್ ವಿಜ್ಞಾನವಿಷಯಗಳಿಗೆ ಸರ್ವಸಾಧಾರಣವಾದ ವೈಜ್ಞಾನಿಕ ಪರಿಭಾಷೆ ಇರಬೇಕು ಮತ್ತು ತಮ್ಮ ದೊಡ್ಡ ಇಂಗ್ಲಿಷ್-ಇಂಡಿಯನ್ ಶಬ್ದಕೋಶದಲ್ಲಿ ಡಾ. ರಘು ವೀರರು ರಚಿಸಿದ ವಿಜ್ಞಾನ ಪರಿಭಾಷಾ ಪದ್ಧತಿಯನ್ನೇ ಬಳಕೆಗೆ ತರಬೇಕು."

ಪ್ರಸ್ತುತ ಗೊತ್ತುವಳಿಯು ನಾನು ವಿಶ್ವ ವಿದ್ಯಾನಿಲಯಕ್ಕೆ ಅದರ ಬಗ್ಗೆ ಬರೆದ ಕಾಗದದ ಪರಿಣಾಮದ ಅಸ್ತಿತ್ವಕ್ಕೆ ಬಂದದ್ದಾದರೂ ಆ ಬಗ್ಗೆ ವಿಶ್ವವಿದ್ಯಾನಿಲಯವು ನನಗೆ ಯಾವ ಸಮಾಚಾರವನ್ನೂ ತಿಳಿಸಲಿಲ್ಲ. ಶ್ರೀ ಪಿ. ಜಿ. ಶಾ ಅವರ ಪ್ರಬಂಧವನ್ನು ಓದುವ ವರೆಗೆ ನನಗೆ ಆ ಯಾವ ಸಂಗತಿಯೂ ತಿಳಿದಿರಲಿಲ್ಲ.

ಗುಜರಾತ್ ವಿದ್ಯಾಪೀಠವು "ವಿಜ್ಞಾನನೀ ಪರಿಭಾಷಾ" ಎಂಬೊಂದು ಪುಸ್ತಕವನ್ನು ಪ್ರಕಟಿಸಿದೆ. ಅದರ ಹೆಸರೇ ವಿಷಯಸೂಚಿಯಾಗಿದೆ. ಗ್ರಂಥಕ್ಕೆ ಆಧಾರಭೂತವಾದ ಅಂಶಗಳನ್ನು ಉಪೋದ್ಘಾತದಲ್ಲಿ ಕೊಡಲಾಗಿದೆ. ಹಾಗೆ ರಚಿಸಿದ ಪರಿಭಾಷೆಯನ್ನು ವಿಜ್ಞಾನದ ಉಪಾಧ್ಯಾಯರೂ ಪಠ್ಯಪುಸ್ತಕಕಾರರೂ ಸ್ವೀಕರಿಸಿದ್ದಾರೆ; ಅಲ್ಲದೆ, ಇದಿಗುಜರಾತಿನಲ್ಲೇ ಅದು ಒಟ್ಟಿನಲ್ಲಿ ಸ್ವಾಗತಿಸಲ್ಪಟ್ಟಿದೆ.

ಈ ಪ್ರತಿಕ್ರಿಯೆ ಮತ್ತು ಸಾರ್ವತ್ರಿಕ ಸ್ವೀಕಾರಗಳಿಂದ ಪ್ರೋತ್ಸಾಹ ಪಡೆದು ಅದರ ವಿಷಯವಾಗಿ ನಾನು ಮುಂಬಯಿ ವಿಶ್ವವಿದ್ಯಾನಿಲಯದ ರಜಿಸ್ಟ್ರಾರರಿಗೆ ಬರೆದೆ(೨೮-೩-೧೯೪೬); ಮತ್ತು ಅದನ್ನು ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಸ್ವೀಕರಿಸಬೇಕೆಂದೂ ಯುಕ್ತ ಅಧಿಕಾರಿಗಳಿಗೆ ನಾನು ಅದನ್ನಿಡಬೇಕೆಂದೂ ಕೇಳಿಕೊಂಡೆ. ನನಗೆ ತಿಳಿಸದಿದ್ದರೂ ಇದನ್ನು ಅವರು ಮಾಡಿರಬೇಕು.

ಗುಜರಾತಿ ಮತ್ತು ಇತರ ಭಾಷೆಗಳಲ್ಲಿರುವ ವೈಜ್ಞಾನಿಕ ಪರಿಭಾಷೆಯ ವಿಷಯದಲ್ಲಿ ಪಕ್ವ ವಿಚಾರ ಕಡಿಮೆಯಿದೆಯೆಂಬುದು ಗೊತ್ತುವಳಿಯಿಂದ ತಿಳಿದುಬರುವುದೆಂದು ಹೇಳಬೇಕಾಗಿದೆ. ಅದು ಅತ್ಯಂತ ಸಂಬಂಧಪಟ್ಟ ಮತ್ತು ಮೂಲಭೂತ ಅಂಶವಾದ ಪ್ರಾಥಮಿಕ, ಮಾಧ್ಯಮಿಕ ಅಥವಾ ಪ್ರೌಢ ವಿದ್ಯಾಭ್ಯಾಸದೆಯುಕ್ತಿ ಯುವವರ ಅಗತ್ಯಗಳನ್ನು ಗಣಿಸುವುದಿಲ್ಲ ಮತ್ತು ವಿಜ್ಞಾನದ ಪದ್ಧತಿಪೂರ್ಣ ಅಭ್ಯಾಸ ವಿಲ್ಲದೆ ವೈಜ್ಞಾನಿಕ ಪದಾರ್ಥಗಳ ಕೊಡು ಕೊಳುಗಳಲ್ಲಿ ನಿರತರಾದ ಅನೇಕ ವ್ಯಾಪಾರಿಗಳು, ಗಿರಾಕಿಗಳು ಅಥವಾ ಕಸಬುದಾರರನ್ನು ಅದು ಲೆಕ್ಕಿಸುವುದಿಲ್ಲ. ಇಂಗ್ಲಿಷ್ ಭಾಷೆಯಲ್ಲಿಯೂ ಅಭಿಜಾತ ಭಾಷೆಯಲ್ಲಿಯೂ ವಿಚಾರ ಮಾಡುವ ಮನುಷ್ಯರು ಆ ಗೊತ್ತುವಳಿಯಲ್ಲಿ ತಮ್ಮ ಲಕ್ಷ್ಯವನ್ನು ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೆ ಮಾತ್ರ ಕೇಂದ್ರೀಕರಿಸಿದ್ದಾರೆ. ಅದು ಸರಿಯಲ್ಲ. ಅವರೀಗ ತಮ್ಮ ವ್ಯವಹಾರದಲ್ಲಿ ಇಂಗ್ಲಿಷ್ ಭಾಷೆಯ ಮೂಲಕ ಸಾಗಿಸುತ್ತಿದ್ದಾರೆ. ಮಾಧ್ಯಮವನ್ನು [illegible] ಎಂದು ಅವರೀಗ [illegible] ಅವರು [illegible] ಭಾಷೆಯು [illegible] ಭಾರತಕ್ಕೆ ಸರ್ವಸಾಧಾರಣವಾದ [illegible] ಡಾ. ರಘುವೀರರಿಂದ [illegible]

[illegible]

ಗಾಂಧೀ. ಅವರ ಅಭಿಪ್ರಾಯವೂ, ಇದೇ [illegible]

ಪಾಠ, ಸ್ವತಃಸಿದ್ಧವಾದ ಗತಿಮಿತಿಗಳಿವೆ. ಸರ್ವತ್ರ ಸಾರೂಪ್ಯವಿರಬೇಕೆಂಬ ಅಪೇಕ್ಷೆಯ ಭರದಲ್ಲಿ ಈ ಗತಿಮಿತಿಗಳನ್ನು ಮರೆತುಬಿಡಲಾಗಿದೆ. ಕೆಲ ಮಾನಮಿತಿಗಳು ಇಂತಿವೆ:

ಮೊದಲು, ಭಾಷೆಯೆಂದರೆ ಒಂದು ಬಗೆಯ ವ್ಯಾಕರಣವಿಯಮದಂತೆ ಪರಸ್ಪರ ಅಂಟಿಕೊಂಡ ಶಬ್ದರಾಶಿಯಲ್ಲ, ಅದು ಒಂದು ಜನಾಂಗದ ಜೀವನ ಮತ್ತು ವಿಚಾರಗಳ ಪ್ರಕಾಶಕವಾಗಿದೆ. ಜನರ ಮನಸ್ಸು ಮತ್ತು ಆತ್ಮಗಳು ಅದರ ಮಾತಿನಲ್ಲಿ ರೂಪುವಡೆಯುತ್ತವೆ. ಎರಡನೆಯದಾಗಿ ಒಂದು ಜೀವದ್ಭಾಷೆಯೆಂದರೆ ಒಂದು ಇಡಿ ಜನಾಂಗದ ಒಟ್ಟು ಪ್ರಯತ್ನದ ಫಲವಲ್ಲದೆ, ಕೇವಲ ಒಂದು ಚಿಕ್ಕ ಗುಂಪು ಅಥವಾ ವರ್ಗದ ಪ್ರಯತ್ನದ ಫಲವಲ್ಲ. ಹಾಗೆ ಒಂದು ಚಿಕ್ಕ ಗುಂಪಿನದಾದರೆ ಅದು ಎಷ್ಟೇ ಉತ್ತಮವಾದುದಿದ್ದರೂ ಕಲಿತ ಕೆಲವರ ಖಟಾಟೋಪವಷ್ಟೇ ಆಗಬಹುದು. ಹಾಗೆ ಆದರೆ ಮಾತ್ರ ಜನರು ಸಂಸ್ಕೃತಿಹಾನಿಗೊಳಗಾಗುವರು, ಮುಂಬರಿಯದೆ, ಪ್ರಗತಿಹೊಂದದೆ ನಿಲ್ಲುವರು.

ಡಾ. ರಘುವೀರರಂತಹ ಮತ್ತು ಅವರಂತೆಯೇ ವಿಚಾರಮಾಡುವ ಪಂಡಿತರು ಈ ಸರಳ ಸಂಗತಿಯನ್ನು ಕಡೆಗಣಿಸುತ್ತಾರೆ. ಪರಿಭಾಷಾ ರಚನೆಯೆಂಬುದು ತತ್ವವಿಚಾರದವನ ಅಥವಾ ಭಾಷಾಶಾಸ್ತ್ರಕಾರನ ಕಚೇರಿಯಲ್ಲಿ ಮಾಡತಕ್ಕ ಕರ್ತವ್ಯ ಎಂದು ಅವರ ತಿಳುವಳಿಕೆ. ಅವರು ಯಾವುದಾದರೊಂದು ರೀತಿಯಿಂದ ಸಮಂಜಸವಾಗುವ ಪರಿಭಾಷಾಪದಗಳನ್ನು ಯೋಜಿಸುತ್ತಾರೆ; ಆದರೆ ಅವು ಪ್ರಾಥಮಿಕ ಸತ್ಯತೆಯ ನಿಕಷಕ್ಕೆ ನಿಲ್ಲುವ ಬಗೆಯಿಂದ ಯೋಜಿಸಿದವೆನಿಸಲಾರವು. ಅವರು ಸಾಮಾನ್ಯನ ಭಾಷೆಯ ಹಕ್ಕುಗಳನ್ನು ಬದಿಗಿಟ್ಟು ಅವನ ಜೀವದ್ಭಾಷೆಯ ಕ್ಷೇತ್ರದಲ್ಲಿ ವಿಲಕ್ಷಣವಾದ, ವಿಜಾತೀಯವಾದ ಪದಗಳನ್ನು ನೆಡಲು ಯತ್ನಿಸುತ್ತಾರೆ. ಉದಾಹರಣೆ ಕೊಡುವುದಾದರೆ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಉರ್ದುಗ್ರಂಥವನ್ನು ತೆಗೆದುಕೊಳ್ಳಬಹುದು.

ಮುಖ್ಯವಾಗಿ ಬುಡದಿಂದ ಪ್ರಾರಂಭಿಸಬೇಕೆಂಬುದನ್ನು ನಾವು ಗಮನಿಸಬೇಕು. ಇದು ಸ್ವಾಭಾವಿಕವೂ ಅವಶ್ಯಕವೂ ಆಗಿದೆ. ಅಂದರೆ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ವಿದ್ಯಾಭ್ಯಾಸದ ಅವಶ್ಯಕತೆಗಳಿಗೆ ಅಗ್ರಸ್ಥಾನ ಕೊಡಬೇಕು ಎಂದು. ಇದಕ್ಕಾಗಿ ಆಯ್ದುಕೊಂಬ ಪದಗಳು ವಿಶಿಷ್ಟ ಭಾಷೆಗೆ ವಿಶಿಷ್ಟವಾಗಿರಬೇಕು. ಬಹುಪರಿಚಯದ ಆಧಾರದ ಮೇಲೆ ಅವನ್ನು ಉಳಿಸಿಕೊಳ್ಳುವುದು ಮುಖ್ಯವಾದುದು; ಅದರಿಂದ ಸಾರ್ವಜನಿಕ ಮತ್ತು ಪ್ರಾಥಮಿಕ ಶಿಕ್ಷಣದ ಹಿತ ಸಂವರ್ಧನವಾಗುತ್ತದೆ. ಆದುದರಿಂದ ಈ ವಿಧದ ರಾಷ್ಟ್ರೀಯ ವಿದ್ಯಾಭ್ಯಾಸಕ್ಕೆ ಹಾನಿಯೊದ್ದದೆ ಸಂಪೂರ್ಣ ಸರ್ವಸಾಧಾರಣವಾದ ಅಖಿಲ ಭಾರತೀಯ ಪರಿಭಾಷಾಪದಗಳನ್ನು ರಚಿಸಲು ಸಾಧ್ಯವಿಲ್ಲ. ನಮ್ಮಲ್ಲಿಯ ಭಾಷೆಗಳಲ್ಲಿ ಮೈತ್ರಿ ಹೆಚ್ಚಿರುವುದರಿಂದ ಅವುಗಳಲ್ಲಿಯ ಬಹಳ ಶಬ್ದಗಳು ಸದೃಶ ಲಕ್ಷಣಗಳುಳ್ಳವಾಗಿರಬಹುದಾಗಿದೆ. ಅದು ನಿಜವಾಗಿಯೂ ಸ್ವಾಗತಾರ್ಹವಾಗಿದೆ. ಆದರೆ ನಾವು ಏಕರೂಪತೆಯನ್ನೊಂದು ಆರಾಧ್ಯವಿಗ್ರಹವನ್ನಾಗಿ ಸ್ವೀಕರಿಸಲಾರೆವು.

ಅಂತಾರಾಷ್ಟ್ರೀಯ ಪರಿಭಾಷಾಪದ್ಧತಿಯ ಹೆಸರನ್ನು ಹಿಡಿದು ಸಾಗಿದ ಕುಣಿವಾಟ ಬಹಳವಾಗಿದೆ. ಅದು ನಿಜವಾಗಿಯೂ ಯುರೋಪಿಯನ್ನರದು; ನಮ್ಮ ಪ್ರಸಂಗದಲ್ಲಿ ಅದು ಇಂಗ್ಲಿಷ್. ವಿವಿಧ ಯುರೋಪಿಯನ್ ಭಾಷೆಗಳಲ್ಲಿಯ ಪರಿಭಾಷೆಗಳು ಒಂದೇ ಆಗಿಲ್ಲವೆಂಬುವನ್ನು ಗಮನಿಸಬೇಕು. ಅವು ತಮ್ಮ ಲ್ಯಾಟಿನ್ ಜನ್ಮತ್ವದಿಂದ ಒಂದನ್ನೊಂದು ಹೋಲುತ್ತಿರಬಹುದು. ಆದರೂ ಅವು ನಮ್ಮ ಮಿತ್ರ ಭಾಷೆಗಳಾದ ಹಿಂದುಸ್ತಾನಿ, ಗುಜರಾತಿ, ಮರಾಠಿ ಮೊದಲಾದವುಗಳಲ್ಲಿರುವಂತೆ ವಿವರಗಳಲ್ಲಿ ಪರಸ್ಪರ ವ್ಯತ್ಯಸ್ತವಾಗಿವೆ. (ನಾನಿಲ್ಲಿ ಸಾಮಾನ್ಯವಾಗಿ ಸರ್ವಸಾಧಾರಣವಾಗಿರುವ ಚಿಹ್ನ, ಪ್ರತೀಕಾದಿಗಳನ್ನು ಹೇಳುತ್ತಿಲ್ಲ.) ವಿಜ್ಞಾನವು ಹೊಸ ವಿಷಯವಾಗಿರುವುದರಿಂದ ನಮ್ಮ ಎಲ್ಲ ಭಾಷೆಗಳೂ ಹೊರಗಿಂದ ಪದಗಳನ್ನು ಎರವು ತೆಗೆದುಕೊಳ್ಳಬೇಕಾಗಿದೆ. ಅದು ಸರಿ. ಅದರಿಂದ ನಮ್ಮ ಭಾಷೆಗಳು ಸಮೃದ್ಧವಾಗುತ್ತವೆ. ಆದರೆ ನಮ್ಮ ಭಾಷೆಗಳ ಆಂಗ ಮತ್ತು ಬಂಧಗಳನ್ನು ಅವು ಕೆಡಿಸದಿರುವಂತೆ ಎಚ್ಚರಿಕೆಯಿಂದ ಎರವು ತೆಗೆದುಕೊಳ್ಳಬೇಕು.

ಗುಜರಾತ್ ವಿದ್ಯಾಪೀಠ ಪ್ರಕಟಿಸಿದ ಪುಸ್ತಕದಲ್ಲಿ ಮೇಲಿನ ಎಲ್ಲ ಅಂಶಗಳಿಗೂ ಮನ್ನಣೆ ಯಿತ್ತು ಅಧಿಕಾರಿಗಳು ಅದನ್ನೆಲ್ಲ ನೋಡಿದಂತೆ ಕಾಣುವುದಿಲ್ಲ. ೧೯೪೦ ರ ಕೇಂದ್ರ ಶೈಕ್ಷಣಿಕ ಸೂಚನಾ ಸಮಿತಿ ನಿರ್ಣಯಿಸಿದ ನಿಗಮನಗಳನ್ನು ಅವರು ಕಂಡಂತೆ ತೋರುವುದಿಲ್ಲ. ಸಮಿತಿಯ ವರದಿಯಿಂದ ನಿಗಮನಗಳನ್ನು ನಾನೀಗ ಉದ್ಧರಿಸುತ್ತೇನೆ.

"ಆದುದರಿಂದ ಭಾರತೀಯ ವೈಜ್ಞಾನಿಕ ಪರಿಭಾಷೆ ಹೀಗಿರಬೇಕು—

"(೧) ಆಂಗ್ಲರೂಪದಲ್ಲಿರುವ ಅಂತಾರಾಷ್ಟ್ರೀಯ ಪರಿಭಾಷಾಪದ್ಧತಿಯನ್ನು ಇಡಿ ಭಾರತದಲ್ಲಿ ಬಳಸತಕ್ಕದ್ದು.

"(೨) ಹಿಂದುಸ್ತಾನಿ ಅಥವಾ ಆಯಾ ಪ್ರದೇಶದ ದ್ರಾವಿಡ ಭಾಷೆಗಳಿಂದ ತೆಗೆದುಕೊಂಡ ಪದಗಳನ್ನು ಸ್ವೀಕರಿಸತಕ್ಕದ್ದು; ಹಾಗೆ ಮಾಡುವಲ್ಲಿ ಸಂಸ್ಕೃತ, ಪರ್ಶಿಯನ್ ಅಥವಾ ಇತರ ಅಭಿಜಾತ್ಯಭಾಷೆಗಳ ಕಠಿನ ಪದಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಬಿಡಬೇಕು;

"(೩) ವಿಶಿಷ್ಟಭಾಷೆಗಳಿಗೆ ವಿಶಿಷ್ಟವಾಗಿರುವ ಕೆಲ ಪದಗಳನ್ನು ಅವುಗಳ ಸುಪರಿಚಯದ ದೆಸೆಯಿಂದ ಸಾರ್ವಜನಿಕ ಶಿಕ್ಷಣದ ದೃಷ್ಟಿಯಿಂದ ಉಳಿಸಿಕೊಳ್ಳಬೇಕಾಗಬಹುದು. ವಿದ್ಯಾಭ್ಯಾಸದ ಮೇಲಿನ ಅವಸ್ಥೆಗಳಲ್ಲಿ ಒಂದನೆಯ ಮತ್ತು ಎರಡನೆಯ ವರ್ಗದಲ್ಲಿರುವವುಗಳನ್ನು ಕ್ರಮೇಣ ಮೂರನೆಯ ವರ್ಗದವುಗಳ ಬದಲಾಗಿ ಬಳಸಬಹುದು."

ನನಗೆ ಗೊತ್ತಿದ್ದಮಟ್ಟಿಗೆ, ಈ ನಿಗಮನಗಳನ್ನು ಈ ವರೆಗೆ ಸ್ವೀಕರಿಸಲಾಗಿದೆ. ಮುಂಬಯಿ ವಿಶ್ವವಿದ್ಯಾನಿಲಯವು ಪುನಃ ಈ ಪ್ರಶ್ನೆಯನ್ನು ಪರಿಶೀಲಿಸಿ ಅವರು ತೆಗೆದುಕೊಂಡ ತಪ್ಪೂ ಹಾನಿಕರವೂ ಆದ ನಿರ್ಣಯವನ್ನು ತಿದ್ದುವುದು ಒಳ್ಳೆಯದು.

ಮಗನಭಾಯಿ ಪಿ. ದೇಸಾಯಿ

---

(೧೪ ನೆಯ ಪುಟದಿಂದ)

ಯುಳ್ಳವರನ್ನು ಅಧಿಕಾರಸ್ಥಾನದಲ್ಲಿ ನಿಲ್ಲಿಸಿ, ನಿರ್ದಿಷ್ಟ ಕಾಲದಲ್ಲಿ ಸಾಧಿಸಬೇಕಾದ ಗುರಿಯನ್ನು ಗೊತ್ತುಪಡಿಸಿಬಿಡುವದು. ಅವರು ಗುರಿಯನ್ನು ಮುಟ್ಟಲಾರದೆ ಹೋದರೆ ಈಗ ಮಾಡುವಂತೆ ಅವರನ್ನು ಮೇಲಿನ ಸ್ಥಾನಕ್ಕೆ ತೇರ್ಗಡೆ ಮಾಡದೆ ನೆಟ್ಟಗೆ "ಮನೆಗೆ ಕಳಿಸಿಬಿಡ"ಬೇಕು. ಗಂಡಾಂತರದ ಅವಸ್ಥೆಯನ್ನೆದುರಿಸಲು ಕಠೋರ ಕ್ರಮಗಳೇ ಬೇಕು.

ಕೆಲ ಸಮಯದ ನಂತರ, ಸಂಯುಕ್ತರಾಷ್ಟ್ರಸಂಘದ ಆಹಾರ ಮತ್ತು ಕೃಷಿ ಸಂಸ್ಥೆಯ ಡೈರೆಕ್ಟರ ಜನರಲ್ಲರಾಗಿ ಲಾರ್ಡ್ ಬಾಯ್ಡ ಓರರ ಉತ್ತರಾಧಿಕಾರಿಯಾದ ಶ್ರೀ ನಾರಿಸ್ ಡಾಡರು ಸ್ವಲ್ಪ ಕಡಿಮೆ ಆಶಾದಾಯಕವಾದ ದನಿಯೆತ್ತಿದರು. ಹತ್ತು ವರ್ಷಗಳ ಅವಧಿಯಲ್ಲಿ ನಾವು ಹೊರಗಿಂದ ತರಿಸಬೇಕಾದ ಆಹಾರದ ಪರಿಮಾಣ ೪೦ ಲಕ್ಷ ಟನ್ನಿನಿಂದ ೧೫ ಲಕ್ಷ ಟನ್ನಿಗಿಳಿಯುವಂತೆ ಪರಿಸ್ಥಿತಿಯನ್ನು ಸುಧಾರಿಸಬಹುದೆಂದು ಅವರ ನಂಬಿಕೆಯಾಗಿತ್ತು.

ಕಾಲದ್ದಕ್ಕೆ ನಮ್ಮ ದೊಡ್ಡ ಸಂಬಳದ, "ಆಧುನಿಕ, ವೈಜ್ಞಾನಿಕ ಮತ್ತು ಪ್ರಗತಿಪರ"ರೆನಿಸಿದ ಅರಾಮು ಕುರ್ಚಿಯ ತಂತ್ರಜ್ಞರಿಗೆ ಕೆಲ ಉಪದೇಶಗಳನ್ನು ಕೊಡುವ ದಿಟ್ಟತನವನ್ನು ಅವರು ತೋರಿಸಿದರು. ಕೃಷಿಯಲ್ಲಿ ಯಂತ್ರಪ್ರಯೋಗವನ್ನು ಅಡವಿ ಬೆಳೆದ ಭೂಮಿಯನ್ನು ಹೊಸದಾಗಿ ಕೃಷಿಗೆ ಅಣಿಗೊಳಿಸಲಿಕ್ಕೆ ಮಾತ್ರವೇ ವಿತಗೊಳಿಸಬೇಕೆಂದೂ ಭೂಮಿಯ ಸಾರ ಬಳಿದು ಹೋಗದಂತೆ ಅಂತಸ್ತುಗಳಾಗಿ ಹೊಲಗಳನ್ನು ರಚಿಸಬೇಕೆಂದೂ (terracing) ಕೃತಕ ಗೊಬ್ಬರಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಸುವ ಬದಲು ಸಾರಜನಕವಾಯುವನ್ನು ಕೊಡುವ ಮತ್ತು ನೀರುಹೀರುವ ಗುಣವುಳ್ಳ ಕ್ಲೋವರ ಹುಲ್ಲುಗಳ ಬೆಳೆಯನ್ನು ಪಯೋಗಿಸಬೇಕೆಂದೂ ಅವರು ಸೂಚಿಸಿದರು. ಈ ತತ್ವಗಳನ್ನನುಸರಿಸುವ, ಅಡವಿಗಳ ನಾಶವನ್ನು ಕಠೋರ ಮಿತಿಗೊಳಪಡಿಸುವ ಮೂಲಕ ಭೂಸಾರ ಹಾನಿಯನ್ನು ತಡೆಯುವ ಮತ್ತು ಗುಂಡಿ ಬಾವಿಗಳ ಮೂಲಕ ನೀರಾವರಿಯ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳುವ ಉಪಾಯಗಳಿಂದ ಮಾತ್ರವೇ ಭಾರತಕ್ಕೆ ಕೊನೆಗೆ ತನ್ನ ಆಹಾರ ಸಮಸ್ಯೆಯನ್ನು ಬಿಡಿಸುವ ಸಾಮರ್ಥ್ಯ ಬರಬಲ್ಲದೆಂದು ಅವರು ಧೈರ್ಯದಿಂದ ಹೇಳಿದರು.

"ಅನಾದಿಯಿಂದ ನಡೆದು ಬಂದ ಕೃಷಿ ಪದ್ಧತಿಗಳನ್ನು ತೊರೆದು ಪಾಶ್ಚಾತ್ಯ ರೀತಿಯ ವಿಶಾಲ ಕೃಷಿಯನ್ನು ಬಳಕೆಗೆ ತಂದು ಒಕ್ಕಲುತನದಲ್ಲಿ ಕ್ರಾಂತಿ ಹೂಡುವ" ಪ್ರಯತ್ನ ಮಾಡುವದು ಮರುಳೆಂದು ಕಂಡುಕೊಳ್ಳಲು ಅವರಿಗೆ ಅಡಹಿಡಿಯಲಿಲ್ಲ. ಉದ್ಯಮ ರೂಪದ

ಕೃಷಿಗೂ ಜೀವನವೃತ್ತಿರೂಪದ ಕೃಷಿಗೂ ಆಕಾಶ ಪಾತಾಳಗಳಷ್ಟು ಅಂತರವಿದೆ. ಅಮೇರಿಕೆಯಲ್ಲಿ ಕೃಷಿಯೂ ಮೋಟಾರು ಉದ್ದಿಮೆಯಂತೆ ಒಂದು ಕಾರಖಾನೆಯು. ಆದುದರಿಂದ ಅದರಲ್ಲಿ ಗಮನಿಸಬೇಕಾದ ತತ್ವಗಳೂ ಹೆಚ್ಚು ಕಡಿಮೆ ಕಾರಖಾನೆಯ ತತ್ವಗಳೇ. ಆದರೆ ಭಾರತದಲ್ಲಿ ಕೃಷಿಗೆ ಸಂಬಂಧಿಸಿದ ಇರವು ತೆರುವುಗಳು ಮೂಲತಃ ಭಿನ್ನವಾಗಿರುವದರಿಂದ ಬೇರೆಯ ತತ್ವಗಳನ್ನು ಅನುಸರಿಸಿ ಅವುಗಳನ್ನು ತಡವಬೇಕಾಗುವದು. ಉದಾಹರಣೆಗಾಗಿ ಒಂದು ಹೋಟೇಲಿನಲ್ಲಿ ಅಡಿಗೆ ಮಾಡುವಾಗ ಆಹಾರದ ಯೋಗ್ಯತೆಯನ್ನು ಅಲಕ್ಷಿಸಿಯಾದರೂ ಸರಕುಗಳ ಅಗ್ಗತನವನ್ನೇ ಗಮನಿಸುತ್ತಾರೆ; ಆದರೆ ಮನೆಯಲ್ಲಿ ತಾಯಿ ಮಕ್ಕಳಿಗಾಗಿ ಅಡಿಗೆ ಮಾಡುವಾಗ ಹಾಗೆ ಮಾಡುವದಿಲ್ಲ. ಮೊದಲನೆಯದರಲ್ಲಿ ಅಡುಗೆಯೊಂದು ಉದ್ದಿಮೆ, ಕಾರಖಾನೆಯ ಕೆಲಸ; ಎರಡನೆಯದರಲ್ಲಿ ಅದೊಂದು ಜೀವನವೃತ್ತಿ. ನಮ್ಮ ದೇಶದಲ್ಲಿ ಕೃಷಿಯ ಬಗ್ಗೆ ಕ್ರಮ ಕೈಕೊಳ್ಳುವಾಗ ಈ ಭೇದವನ್ನು ಮನಸಿನಲ್ಲಿಟ್ಟುಕೊಳ್ಳಬೇಕು. ಬಂಡವಳದ ಕೊರತೆಯೂ ಶ್ರಮಶಕ್ತಿಯ ಸಮೃದ್ಧಿಯೂ ಇರುವಲ್ಲಿ ಬಂಡವಳಗಾರ ತತ್ವಗಳನ್ನು ಆಯಾತ ಮಾಡಿಕೊಳ್ಳುವದರಿಂದ ಪ್ರಯೋಜನವಿಲ್ಲ.

—ಜೆ. ಸಿ. ಕುಮಾರಪ್ಪ

## ವ್ಯಾಪಾರಲೋಕ

### ಮುಂಬಯಿ ಶೇರಪೇಟೆ

ತಾ. ೩೦

| | |
|---|---|
| ಮುಂಬಯಿ ಡಾಯಿಂಗ್ | ೯೩೪-೧೨-೦ |
| ಕೋಹಿನೂರು | ೩೪೩-೪-೦ |
| ಸ್ವದೇಶಿ | ೨೫೭-೮-೦ |
| ಗೋಕಾಕ | ೨೨೮-೦-೦ |
| ಸೆಂಚುರಿ | ೨೦೬-೪-೦ |
| ಸಿಂಪ್ಲೆಕ್ಸ | ೧೭೩-೮-೦ |
| ಟಾಟಾ ಸ್ಟೀಲ ಡೆಫರ್ಡ | ೧೧೫೨-೮-೦ |
| ಇಂಡಿಯನ್ ಅಯರ್ನ | ೧೯-೫-೦ |
| ಅಸೋ. ಸಿಮೆಂಟ್ಸ | ೧೨೮-೪-೦ |
| ಸೆಂಟ್ರಲ ಬ್ಯಾಂಕ್ | ೭೫-೦-೦ |
| ಇಂಪೀರಿಯಲ್ ಬ್ಯಾಂಕ್(ಪೂರ್ಣ) | ೧೭೬೨-೮-೦ |

### ಚಿನ್ನ ಬೆಳ್ಳಿ

| | |
|---|---|
| ತಯಾರಿ ಚಿನ್ನ | ೧೧೫-೨-೦ |
| ವಾಯದಾ ,, | ೧೧೪-೬-೦ |
| ತಯಾರಿ ಬೆಳ್ಳಿ | ೧೮೧-೧೪-೦ |
| ವಾಯದೆ | ೧೮೨-೨-೦ |

### ಎಣ್ಣೆಕಾಳು

| | |
|---|---|
| ಶೇಂಗಾ | ೧೮೮-೧೨-೦ |
| ಅಗಸೆ (ತಯಾರಿ) | ೨೯.೧೨.೦ |
| ,, ಹೊಸ | ೨೯-೦-೦ |
| ಅಗಸೆ ಎಣ್ಣೆ | ೧೭-೦-೦ |

### ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮೀಟಿ ಹುಬ್ಬಳ್ಳಿ)

ತಾ. ೨೯

| | | |
|---|---|---|
| ಕುಸುಬಿ | (ಬ. ಮಣಕ್ಕೆ) ೧೪-೮ | ೦ ೧೪-೧೦-೦ |
| ಅಗಸಿ | (ಚೀಲಕ್ಕೆ) | ೪೦-೪೨ |
| ಔಡಲ | ,, | ೩೪-೩೬ |
| ಜ. ಹೆಸರು | ,, | ೪೬-೮-೦ |
| ಕರಿ ಎಳ್ಳು | ,, | ೬೪ |
| ಬಿಳಿ ಎಳ್ಳು | ,, | ೮೦-೯೩ |
| ಕಡಲೆ | ,, | ೫೨-೫೩ |
| ಜ. ತೊಗರಿ | ,, | ೨೬-೨೮ |
| ಹುರಳಿ | ,, | ೩೪-೩೫ |
| ಕೆಂ. ಅಲಸಂದಿ | ,, | ೫೧-೫೩ |
| ಬಿ. ಅಲಸಂದಿ | ,, | ೫೮-೬೦ |
| ಶೇಂಗಾ (ಹೇರು) | | ೫೦-೫೫ |
| ಶೇಂಗಾ ಕಾಳು | | ೮೮-೯೨ |

### ಸಾಂಗಲಿ ಪೇಟೆ

ತಾ. ೨೮

| | |
|---|---|
| ಅರಿಸಿಣ(ಹೇರು) | ೯೫-೧೦೯ |
| ಮೆಣಸಿನಕಾಯಿ(ಹೇರು) | ೧೪೦-೨೧೦ |
| ಶೇಂಗಾ(ಖಂಡಿ) | ೧೪೫ |
| ಬೆಲ್ಲ(ಹೇರು) | ೬೮-೭೩ |

### ಶಿವಮೊಗ್ಗೆ ಅಡಿಕೆ ಪೇಟೆ

ತಾ. ೨೯

| | |
|---|---|
| ದೇಶಾವರ ನಂ. ೧ (ಮಣಕ್ಕೆ) | ೩೦-೩೨ |
| ,, ೨ | ೨೭-೩೦ |
| ರಾಜಾ ಅಲವು | ೨೬-೨೮ |
| ತೊರಸಾಲು | ೨೩-೨೬ |
| ಬೆಟ್ಟವಂತಿ | ೧೭-೧೮ |
| ಬೆಟ್ಟೆ | ೧೪-೧೬ |
| ಸೀಗೆಕಾಯಿ | ೭-೮ |

Reg. No. B. 3148

LICENCE No 3
Licensed to Post without Prepayment

KARMAVEER 18-7-49

## ಕರ್ನಾಟಕದಲ್ಲಿ

### ಧಾರವಾಡ

ಇದೇ ತಿಂಗಳ ೧೧ ನೆಯ ತಾರೀಖು ಪ್ರಾಥಮಿಕ ಶಾಲೆ ೧೦ ಗಂಟೆಗೆ ಅಷ್ಟ್ಯಕ್ಷರದಲ್ಲಿ ಶ್ರೀ ... ಅಲ್ಪಸಭೆ ... ಸಾರ್ವಜನಿಕ ಸಭೆ ನೆರವೇರಿತು. ... ಮಾಡಬೇಕೆಂದು ಮುಂತಾದ ಅಧಿಕಾರಿಗಳು ಭಿನ್ನವಿಸಿದ್ದಾರೆ.

ಕಳೆದ ನಾಲ್ಕು ತಿಂಗಳುಗಳಿಂದ ಸಂಬಳ ವಿಲ್ಲದೆ ಧಾರವಾಡದಲ್ಲಿಯ ಪ್ರಾಥಮಿಕ ಶಾಲಾ ಶಿಕ್ಷಕರು ಬಳಲುತ್ತಿರುವರು. ಲೋಕಲ್ ಬೋರ್ಡಗಳಿಗೆ ಕೊಡುವದನ್ನು ಗ್ರ್ಯಾಂಟು ಕೊಟ್ಟರೆ ಶಾಲೆಗಳನ್ನು ನಡೆಸಿಕೊಂಡು ಹೋಗುವುದಾಗಿ ಮುನಿಸಿಪಾಲಿಟಿಯವರು ಸರಕಾರಕ್ಕೆ ಈ ಬಗ್ಗೆ ತಿಳಿಸಿದ್ದರಂತೆ. ಕಳೆದ ವರ್ಷ ಮುನಿಸಿಪಾಲಿಟಿಯ ಅಧ್ಯಕ್ಷ ಮೊದಲಾದ ವರನ್ನು ಕರೆಯಿಸಿಕೊಂಡು ವಿಚಾರವಿನಿಮಯ ಮಾಡಿದರು. ಸರಕಾರದವರು ಕೂಡಲೆ ಈ ಸಾಲವನ್ನು ... ಕಳಿಸಿಕೊಡಬೇಕೆಂದು ಕಲೆಕ್ಟರರು ಕೇಳಿಕೊಂಡಿರುವರಂತೆ.

ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಎಂ. ಎ. ಅಭ್ಯಾಸಕ್ಕೆ ಅವಕಾಶ ಮಾಡಿ ಕೊಡಲಾಗಿದೆ. ಕನ್ನಡದ ಪ್ರಾಧ್ಯಾಪಕರಾಗಿ ... ಈ ವರ್ಗಗಳನ್ನು ನಡೆಸಲು ಕೇಳಿಕೊಳ್ಳಲಾಗಿದೆ.

ಧಾರವಾಡ ನಗರ ಸಭೆಯ ಹೊಸ ಸದಸ್ಯರ ಸಭೆ ನೇರ ಚುನಾವಣೆ ಒಂದು ವರುಷಕ್ಕಾಗಿ ಶ್ರೀ ... ಅವರು ಅಧ್ಯಕ್ಷರಾಗಿಯೂ ಶ್ರೀ ... ಅವರು ಉಪಾಧ್ಯಕ್ಷ ರಾಗಿಯೂ ಆರಿಸಿ ಬಂದರು. ಅಧ್ಯಕ್ಷರ ಪಕ್ಷದಲ್ಲಿ ೨೦ ಸದಸ್ಯರು ವಿರೋಧಿ ಪಕ್ಷದಲ್ಲಿ ೧೬ ಸದಸ್ಯರು ಇರುವರು.

ಸರ್ವೋದಯ ಸಂಘದ ಮತ್ತು ಚರಖಾ ಸಂಘದ ಧುರೀಣರಾದ ಶ್ರೀ ಕೃಷ್ಣದಾಸ ಗಾಂಧಿ, ಮತ್ತು ಧೋತ್ರೆಯವರು ಹುಬ್ಬಳ್ಳಿಗೆ ಬಂದು ಅಲ್ಲಿಯ ಸಂಘಗಳ ಕಾರ್ಯಕರ್ತರೊಡನೆ ವಿಚಾರವಿನಿಮಯ ಮಾಡಿ ಹೋದರು.

### ಬೆಳಗಾವಿ

ಬೆಳಗಾವಿಯಲ್ಲಿಯ ವೇಶ್ಯೆಯೊಬ್ಬಳು ಹುಂಗ ನೂರಿನ ರಾಜಕುಮಾರಿ ಲೀಲಾದೇವಿಯೆಂದು ರಾಜಕುಮಾರಿಯನ್ನು ಪಡೆದ ಸುದ್ದಿಯೇಗ ಹೊರಬಿದ್ದಿದ್ದು ಅವಳೀಗ ಸೆರೆಮನೆಯಲ್ಲಿ ಇರು ವಳು. ಇವಳು ಜಾತಿಯಿಂದ ಮುಸಲ್ಮಾನ ಳಿದ್ದು ಬೆಳಗಾವಿಯಲ್ಲಿ ಒಬ್ಬ ಪೋಲೀಸನ ಹೆಂಡತಿಯಾಗಿದ್ದಳು. ಇವರಿಬ್ಬರ ಭಾವಚಿತ್ರವೂ ದೊರೆತಿದೆಯಂತೆ. ಕೊಂಡೂರ, ಸಾಂಗಲಿ, ಜಮಖಂಡಿ ಮೊದಲಾದ ರಾಜ ಮಹಾರಾಜ ರಿಂದಲೂ ನಾಗಪುರದ ಪ್ರಮುಖ ಕಾಂಗ್ರೆಸ್ಸಿಗ ರಿಂದಲೂ ಮರ್ಯಾದೆ ಹೊಂದಿ ಹಲವಡೆ ಗೌರವ ದಕ್ಷಿಣೆಯನ್ನು ಪಡೆದಿರುವಳಂತೆ. ಇವಳ ಲೀಲಾ ಜಾಲಗಳು ಇನ್ನೂ ಹೊರಬೀಳಲಿವೆ.

ಬೆಳಗಾವಿಯ ಇನಕಂಟ್ಯಾಕ್ಸ ಆಫೀಸರ ರಾಗಿದ್ದ ಶ್ರೀ ಕುಲಕರ್ಣಿಯವರನ್ನು ಸಸ್ಪೆಂಡ ಮಾಡಲಾಗಿದೆ.

ಬೆಳಗಾವಿಗೆ ಶ್ರೀ ಮೋಹಿತೆಯವರು ಹೊಸದಾಗಿ ಕಲೆಕ್ಟರರೆಂದು ನೇಮಕಹೊಂದಿ ಅಧಿಕಾರ ವಹಿಸಿಕೊಂಡಿರುವರು. ಈಗ ಕಲೆಕ್ಟ ರರಾಗಿದ್ದ ಶ್ರೀ ಜಾಧವ ಇವರಿಗೆ ಕಾರವಾರಕ್ಕೆ ವರ್ಗವಾಗಿದೆ.

ಸಾಂಗಲಿಯ ಹತ್ತಿರ ಸ್ಥಾಪಿತವಾದ ಮಹಾ ರಾಷ್ಟ್ರ ಟೆಕ್ನಿಕಲ್ ಎಜ್ಯುಕೇಶನ್ ಸೊಸಾ ಯಿಟಿಯ ನ್ಯೂ ಇಂಜನಿಯರಿಂಗ ಕಾಲೇಜಿನ ಸಂಕುಸ್ಥಾಪನೆಯ ಸಮಾರಂಭವು ೯ ನೇ ತಾರೀಕಿನ ದಿನ ಜರುಗಿತು. ಈ ಕಾಲೇಜಿಗೆ ಧನ ಸಂಗ್ರಹಗಳು ತಮ್ಮ ತಂದೆಯವರ ಸ್ಮರ ಣಾರ್ಥ ೨೫ ಸಾವಿರ ರೂಪಾಯಿ ಕಾಣಿಕೆ ಕೊಟ್ಟರು.

### ಕನ್ನಡ ಸಂಸ್ಥಾನ

ಗುಲಬುರ್ಗಾ ಜಿಲ್ಲೆಯ ... ಹೊಸ ... ತಾಲೂಕಿನ ... ಕೊಳ್ಳೆ ... ಪೋಲೀಸರು ಈ ಸಂಬಂಧ ದಲ್ಲಿ ಇಬ್ಬರು ಜನರನ್ನು ಬಂಧಿಸಿರುವರು. ಕೆಲ ಸಾಮಾನುಗಳೂ ಅವರಲ್ಲಿ ದೊರೆತಿವೆ.

### ದಕ್ಷಿಣ ಕನ್ನಡ

ಶ್ರೀ ಫಡಕೇಸ್ವಾಳ ಮುಂಜಯ್ಯ ಹೆಗ್ಡೆ ಯವರಿಗೆ ಕಾಣಿಕೆಕೊಡುವ ಸಂಭಾವನಾ ನಿಧಿ ... ಬಂದ ಲೇಖನಗಳ ವಿಮರ್ಶೆ ಮಾಡಲಾಯಿತು. ಒಟ್ಟು ೪೦೦ ಪುಟಗಳ ಗ್ರಂಥವಾಗುವದೆಂದೂ ವೆಚ್ಚ ಸು ೬೦೦೦ ಬರುವದೆಂದೂ ನಿಶ್ಚಯಿಸಲಾಯಿತು. ನವಂಬರದಲ್ಲಿ ಗ್ರಂಥವು ಸಮರ್ಪಿತವಾಗಬೇಕೆಂದೂ ನಿರ್ಧರಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಲಿರುವ ಮುಂದಿನ ಜಿಲ್ಲಾ ಬೋರ್ಡು ಚುನಾವಣೆಗೆ ಕಾಂಗ್ರೆಸ್ಸಿನ ಪಕ್ಷದಿಂದ ಹುರಿಯಾಳುಗಳಾಗಿ ನಿಲ್ಲಬಯಸುವವರು ಇದೇ ಜುಲಾಯಿ ತಿಂಗಳ ೩೦ ರೊಳಗಾಗಿ ರೂ. ೫೦ ರೊಂದಿಗೆ ಅರ್ಜಿ ಬರೆದುಕೊಳ್ಳಬೇಕೆಂದು ಕೋರಲಾಗಿದೆ.

ದ. ಕ. ಜಿಲ್ಲಾ ಅಸಿಸ್ಟಂಟ್ ಕಾಫಿ ಮಾರ್ಕೆ ಟಿಂಗ್ ಅಧಿಕಾರಿಗಳಾದ ಶ್ರೀ ಎಫ್. ಎಮ್. ಶಾಲ್ಯಾನಾರವರು ವರ್ಗಾಯಿಸಲ್ಪಟ್ಟ ನಿಮಿತ್ತ ವಾಗಿ ಅವರನ್ನು ದಕ್ಷಿಣ ಕನ್ನಡ ಜಿಲ್ಲಾ ವಾಣಿಜ್ಯ ಸಂಘದವರು ದಿನಾಂಕ ೯ ರಂದು ಸಂಜೆ ವಿದಾಯವಿತ್ತು ಬೀಳ್ಕೊಟ್ಟರು.

ಸಾಲಿಗ್ರಾಮದ ಶ್ರೀ ವಾಣಿವಿಲಾಸಿನೀ ಸಂಸ್ಕೃತ ಪಾಠಶಾಲೆಯ ೨೮ ನೆಯ ವರ್ಧಂತಿ ಸಮಾರಂಭವು ದಿನಾಂಕ ೪ ರಂದು ಸಂಜೆ ಉಡುಪಿಯ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ ರಾದ ಶ್ರೀ ಎಂ. ರಾಮಚಂದ್ರರಾಯರ ಅಧ್ಯ ಕ್ಷತೆಯಲ್ಲಿ ಜರುಗಿತು. ಸ್ವಾಗತ, ವರದಿವಾಚನ ಇತ್ಯಾದಿಗಳಾದ ಬಳಿಕ ಕೆಲ ಮಹನೀಯರಿಂದ ಸಂಸ್ಕೃತ ಅಭ್ಯಾಸದ ಕುರಿತು ಭಾಷಣಗಳಾ ದವು.

ಹಿಂದೆ ಪುತ್ತೂರದಲ್ಲಿ ಹೊರಡುತ್ತಿದ್ದ ಕರ್ನಾ ಟಕ ಕೇಸರಿಯ ಸಂಪಾದಕರೂ ಕವಿಗಳೂ ಸಾಹಿತ್ಯಜ್ಞರೂ ಆಗಿದ್ದ ರಾವ್ ಸಾಹೇಬ್ ಮುಂಜೇಶ್ವರ ಅನಂತರಾಯರು ದಿನಾಂಕ ೬೦ ರಂದು ತಮ್ಮ ೬೦ ನೇ ವಯಸ್ಸಿನಲ್ಲಿ ದೈವಾ ಧೀನರಾದರೆಂದು ತಿಳಿಸಲು ದುಃಖವಾಗುತ್ತದೆ. ಶ್ರೀಯುತರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸುತ್ತೇವೆ.

ಬಂಭಾಣದಲ್ಲಿ ಕಸ್ತೂರಬಾ ಸೇವಾ ಕೇಂದ್ರದ ಉದ್ಘಾಟನೆಯು ದಿನಾಂಕ ೬ರಂದು ಶ್ರೀಮತಿ ಲೀಲಾಬಾಯಿ ನಿಕಂಬರಿವಾ ಇವರ ಹಸ್ತದಿಂದಾಯಿತು. ಈ ಸಂದರ್ಭದಲ್ಲಿ ಕುಮಾರಿ ಮೀರ ಕುಪ್ಪಿಕ್ಕಾರ್ ಮತ್ತು ಬಿ. ಜಗನ್ನಾಥ ರೈಗಳು ಭಾಷಣವಿತ್ತರು. ಕೇಂದ್ರದ ಸೇವಿಕೆಯರಾಗಿ ಶ್ರೀಮತಿ ಸುನಂದಾ ಕಾಮತ ಮತ್ತು ಶೀಲಮ್ಮ ಶೆಟ್ಟಿಯವರ ನೇಮಕ ವಾಗಿದೆ.

### ವಿಜಾಪುರ

ವಿಜಾಪುರ ಜಿಲ್ಲಾ ಸ್ಕೂಲಬೋರ್ಡಿನ ಚುನಾವಣೆ ನಡೆದು ಒಟ್ಟಿಗಿರುವ ೧೫ ಸ್ಥಳ ಗಳಲ್ಲಿ ಕಾಂಗ್ರೆಸ್ಸಿಗೆ ೮ ಸ್ಥಳಗಳು ದೊರೆತಿವೆ. ಒಳ್ಳೆ ತುರುಸಿನ ಚುನಾವಣೆಯಾಯಿತು. ಜಿಲ್ಲಾ ಲೋಕಲ್ ಬೋರ್ಡಿನ ಉಪಾಧ್ಯಕ್ಷ ಶ್ರೀ ನಂಜ ಯ್ಯನಮಠ ಇವರು ರಾಜೀನಾಮೆ ಕೊಟ್ಟಿದ್ದು ಇನ್ನು ಹಲವು ಸದಸ್ಯರು ರಾಜೀನಾಮೆ ಕೊಡ ಲಿರುವರೆಂದು ತಿಳಿಯುತ್ತದೆ.

ವಿಜಾಪುರ ಜಿಲ್ಲೆಯಲ್ಲಿ ಕಳೆದ ವಾರ ಸರ್ವ ಸಾಧಾರಣ ಎಲ್ಲೆಡೆ ಮಳೆ ಬಿದ್ದ ಸುದ್ದಿ ಬಂದಿದೆ. ಬಿತ್ತನೆಯ ಕೆಲಸವು ಪ್ರಾರಂಭ ವಾಗಿದೆ.

### ಉತ್ತರ ಕನ್ನಡ

ಸರ್ವೋದಯ ಯೋಜನೆಯಂತೆ ಸಾಮಾ ಜಿಕ ಕಾರ್ಯಕರ್ತರಿಗೆ ಶಿಕ್ಷಣ ಕೊಡುವದಕ್ಕಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ, ಉತ್ತರ ಕನ್ನಡ ಜಿಲ್ಲಾ ಗ್ರಾಮ ಸಮಿತಿಯನ್ನು ಅಂಕೋಲೆಯಲ್ಲಿ ಸ್ಥಾಪಿಸಲಾಗುವದು. ಸರ್ವೋದಯ ಯೋಜ ನೆಯ ಜಿಲ್ಲಾ ಸಂಚಾಲಕ, ಶಿಬಿರದ ಆಚಾರ್ಯ ಮತ್ತು ಅಸಿಸ್ಟಂಟ ರಜಿಸ್ಟ್ರಾರ ಇವರ ಸಮಿತಿಗೆ ಈ ಶಿಬಿರದ ವ್ಯವಸ್ಥೆಯನ್ನು ಒಪ್ಪಿಸಲಾಗುವದು.

ಕಾರವಾರದ ಫೌಜದಾರರಾದ ಶ್ರೀ ಜೋಶಿ ಯವರು ೮ ನೇ ತಾರೀಖು ರಾತ್ರಿ ಸಂದನ ಗಟ್ಟಿ ಬಂದರದಲ್ಲಿ ದೋಣಿಯಲ್ಲಿ ಕಳ್ಳಸನ ದಿಂದ ಗೋವೆಯಿಂದ ಸೆರೆ ತರುತಿದ್ದ ಕಂಕರ ವಿಠ್ಠಲ ಪಡ್ತಿ ಇವರನ್ನು ಮುತ್ತಿ ಬಂಧಿಸಿ ಎಲ್ಲ ವನ್ನು ಜಪ್ತ ಮಾಡಿದರು.

ಉತ್ತಮ ತರಗತಿಯ ಕಿತ್ತಿ ಹಲ್ಲಿದ ಧಕ್ತದ ಬೀಜಗಳನ್ನು ಹೆಚ್ಚಿಸುವ ಹಾಗು ಹಂಚುವ ಯೋಜನೆಯೊಂದನ್ನು ಕಾರವಾರ ಜಿಲ್ಲೆಯಲ್ಲಿ ಕೈಕೊಳ್ಳಲು ಮುಂಬಯಿ ಸರಕಾರವು ನಿರ್ಧ ರಿಸಿದೆ. ಮೂರು ವರುಷಗಳಲ್ಲಿ ಈ ಯೋಜನೆ ಯನ್ನು ಜಿಲ್ಲೆಯಲ್ಲೆಲ್ಲ ಪ್ರಸಾರ ಮಾಡುವ ವಿಚಾರವಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಅಧಿಕ ಆಹಾರ ಬೆಳೆಯಬೇಕೆಂಬ ಚಳವಳಿ ಜೋರಿನಿಂದ ನಡೆ ದಿದೆ. ಈ ಉದ್ದೇಶದಿಂದ ೩೪೧ ಹಳ್ಳಿಯ ಹಾಗು ಗ್ರಾಮ ಆಹಾರೋತ್ಪಾದನ ಸಮಿತಿ ಗಳನ್ನು ಹದಿನೇಳು ವಿವಿಧೋದ್ದೇಶ ಸಂಘ ಗಳನ್ನು ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ತೆರೆದಿರುವರು. ಬಿತ್ತುವ ಬೀಜ ಮತ್ತು ಎಲುಬಿನ ಗೊಬ್ಬರ ಮುಂತಾದ್ದನ್ನು ಒದಗಿಸಿ ಕೊಡಲಾಗುವದು.

ಉತ್ತರ ಕನ್ನಡ ಜಿಲ್ಲೆಯೊಡನೆ ರೇಲ್ವೆ ಸಂಪರ್ಕ ಬೆಳೆಸುವದರ ಬಗ್ಗೆ ಗ್ರಾಮ ಸುಧಾ ರಣಾ ಮಂಡಲದವರು ಸರಕಾರಕ್ಕೆ ಸೂಚನೆ ಯೊಂದನ್ನು ಕಳಿಸಿದ್ದಾರೆ. ಅದರ ಮೇರೆಗೆ ಶಿರ್ಸಿ ಹಾವೇರಿ-ಶಿರ್ಸಿ- ತಾಳಗುಪ್ಪೆ-ಭಟಕಳ ಈ ಪ್ರಕಾರ ರೇಲ್ವೆಗಳನ್ನು ಜೋಡಿಸ ಬೇಕೆಂದೂ ಅವರು ಸೂಚಿಸಿದ್ದಾರೆ. ಅಲ್ಲದೆ ಭಟಕಳದಲ್ಲಿ ನಾಗರಿಕ ವಿಮಾನ ನಿಲ್ದಾಣ ವೊಂದನ್ನೂ ರಚಿಸಬೇಕೆಂದೂ ಸೂಚಿಸಲಾಗಿದೆ. ಸರಕಾರ ಮತ್ತು ಕಲೆಕ್ಟರರಲ್ಲಿ ಈ ಬಗ್ಗೆ ಪತ್ರ ವ್ಯವಹಾರ ನಡೆದಿದೆ.

## ವಸತಿ ಸಮಸ್ಯೆಯನ್ನು ಬಗೆಹರಿಸಿರಿ

### ಸರಕಾರಕ್ಕೆ ಮುಂಬಯಿ ವಿದ್ಯಾರ್ಥಿಗಳ ಬಿನ್ನಹ

ಮುಂಬಯಿ ಕನ್ನಡ ವಿದ್ಯಾರ್ಥಿ ಪರಿಷತ್ತಿನ ಪರವಾಗಿ ಕಳೆದ ತಿಂಗಳು ನಡೆದ ಕನ್ನಡ ವಿದ್ಯಾರ್ಥಿ ಸಮ್ಮೇಲನದಲ್ಲಿ ಸ್ವೀಕೃತವಾದ ಗೊತ್ತುವಳಿಗಳ ಮುಖ್ಯಾಂಶವಿಂತಿದೆ. ೫೦೦ ಜನ ಕನ್ನಡಿಗರು ಈ ಸಭೆಯಲ್ಲಿ ಸಮ್ಮಿಲಿತ ರಾಗಿದ್ದರು.

ಮುಂಬಯಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ದಿನ ದಿನಕ್ಕೆ ಹೆಚ್ಚುತ್ತ ಬಂದದ್ದರಿಂದ. ಭೋಜ ನಾಲಯಗಳಲ್ಲಿ ಬಹಳ ದಟ್ಟಣೆಯಾಗಹತ್ತಿದೆ. ಸ್ಥಳಾಭಾವದ ಮೂಲಕ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಹತ್ತಿದೆ. ಆದುದರಿಂದ ವಿದ್ಯಾರ್ಥಿಗಳ ಆರೋಗ್ಯ ಮತ್ತು ಹಿತದ ದೃಷ್ಟಿಯಿಂದ ವಿದ್ಯಾರ್ಥಿಗಳ ವಸತಿಯ ಈ ಸಮಸ್ಯೆಯನ್ನು ಬಿಡಿಸಬೇಕೆಂದು ಕೇಳಿಕೊಳ್ಳು ತ್ತದೆ. ಸಮಾಧಾನಕರ ವಸತಿಯ ಸೌಕರ್ಯ ವನ್ನು ಒದಗಿಸುವ ವರೆಗೆ ಮುಂಬಯಿಯಲ್ಲಿಯ ಕ್ರಿಕೆಟ ಕ್ಲಬ್ ಆಫ್ ಇಂಡಿಯಾದ ಹಿಂಬದಿ ಯಲ್ಲಿಯ ಕೆಲವು ಗುಡಿಸಲುಗಳನ್ನು ವಿದ್ಯಾರ್ಥಿ ಗಳ ವಸತಿಗಾಗಿ ಕೊಡಬೇಕೆಂದು ಕೇಳಿಕೊಳ್ಳ ಲಾಗಿದೆ.

ಕನ್ನಡದ ವಿಕಾಸಗಳುಳ್ಳ ಪತ್ರಗಳು ಬೇಗ ಆಯಾ ವಿಳಾಸದಾರರಿಗೆ ಮುಟ್ಟುವಂತೆ ವ್ಯವಸ್ಥೆ ಮಾಡಬೇಕು. ಕನ್ನಡದ ನಾಡಿನ ಪ್ರಗತಿಯಾಗ ಬೇಕಾದರೆ ಹರಿದು ಹಂಚಿಹೋದ ಕನ್ನಡ ನಾಡು ಒಂದಾಗುವಂತೆ ಯೋಜಿಸಬೇಕು. ಕಾಂಗ್ರೆಸ್ಸು ೨೨ ವರುಷಗಳಿಂದ ಕೊಡುತ್ತ ಬಂದ ಆಶ್ವಾಸನವನ್ನು ಕಾರ್ಯರೂಪದಲ್ಲಿ ತರ ಬೇಕು.

ಮುಂಬಯಿ ಮತ್ತು ಮದರಾಸ ಸರಕಾರ ಗಳ ಗಡಿಗಳಲ್ಲಿರುವ ಕನ್ನಡ ಜಿಲ್ಲೆಗಳಲ್ಲಿ ಕನ್ನಡ ಶಾಲೆಗಳನ್ನು ತೆರೆದು ಜನತೆಯನ್ನು ಸಾಕ್ಷರರ ನ್ನಾಗಿ ಮಾಡಬೇಕೆಂದು ಈ ಸಭೆ ಭಿನ್ನವಿಸಿ ಕೊಳ್ಳುತ್ತದೆ. ಕನ್ನಡ ಜಿಲ್ಲೆಗಳೇ ಆಗಿರುವ ನೀಲಗಿರಿ, ಕೊಳ್ಳೆಗಾಲ, ಬಳ್ಳಾರಿ ಹಾಗೂ ಅನಂತಪುರ ಮುಂತಾದ ಕಡೆ ಪ್ರಾಂತೀಯ ಸರಕಾರಗಳು ಕನ್ನಡಕ್ಕೆ ಪ್ರಾಧಾನ್ಯ ಕೊಡ ದಿರುವದು ಅಸಮಾಧಾನಕರವಾಗಿದ್ದು ಇದನ್ನು ಸುಧಾರಿಸಲು ಸರಕಾರದವರು ಕೂಡಲೆ ಯೋಗ್ಯ ಕಾರ್ಯ ಕೈಕೊಳ್ಳಬೇಕೆಂದು ಬಿನ್ನ ವಿಸಲಾಗುತ್ತದೆ.

ಕಾರ್ನಾಡು ಸದಾಶಿವರಾಯರು ಒಳ್ಳೆ ದೇಶಭಕ್ತರಾಗಿದ್ದು ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಆತ್ಮಾರ್ಪಣ ಮಾಡಿದ್ದು ಸರ್ವಶ್ರುತ. ಅವರ ಹೆಸರು ಚಿರಕಾಲ ಉಳಿಯುವಂತೆ ಮುಂಬಯಿ ಯಲ್ಲಿಯ ಒಂದು ಬೀದಿಗೆ ಕಾರ್ನಾಡು ಸದಾ ಶಿವರಾಯರ ರಸ್ತೆ ಎಂದು ನಾಮಕರಣ ಮಾಡ ಬೇಕೆಂದು ಬಿನ್ನವಿಸಿಕೊಳ್ಳಲಾಯಿತು. ಪ್ರಾಥ ವಿದ್ಯಾ ಪ್ರಸಾರವಾಗಬೇಕಾಗಿರುವ ಈ ಕಾಲ ದಲ್ಲಿ ಆ ಶಾಲೆಗಳ ಫೀಯನ್ನು ಏರಿಸುವದು ನ್ಯಾಯ್ಯವಲ್ಲವಾದ್ದರಿಂದ ಸರಕಾರದ ಈ ಪ್ರವೃತ್ತಿಯನ್ನು ಸಭೆಯು ಖಂಡಿಸುತ್ತದೆ ಎಂಬಾಶಯದ ಗೊತ್ತುವಳಿಗಳು ಸ್ವೀಕೃತ ವಾದವು.



ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಹ. ರಾ. ಪುರೋಹಿತರವರು ಮುದ್ರಿಸಿ ಪ್ರಕಟಿಸಿದರು.